
ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ

ಆರ್ ಎಸ್ ಜ್ಯೋತಿ



ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ—141

ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ

ಆರ್. ಎಸ್. ಜ್ಯೋತಿ

1985

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 065

ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ, (ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು, ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ: 1985, ಪ್ರತಿಗಳು 1000, ಪುಟಗಳು X +214, ಬೆಲೆ: ಸಾದಾ ಪ್ರತಿ ರೂ. 24/-, ಕ್ಯಾಲಿಕೊ ಪ್ರತಿ ರೂ. [illegible]

ಮುದ್ರಣ

ಅನುಗ್ರಹ ಪ್ರಿಂಟರ್ಸ್
ನಂ, 1/1, 6ನೇ ಮುಖ್ಯರಸ್ತೆ, ಶಿವನಹಳ್ಳಿ
ರಾಜಾಜಿನಗರ, ಬೆಂಗಳೂರು-560 010

ಕುಲಪತಿಗಳ ಹಾರೈಕೆ

ಕೇಂದ್ರ ಸರ್ಕಾರದಿಂದ ಪುರಸ್ಕೃತಗೊಂಡ ಯೋಜನೆಯ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಸಲುವಾಗಿ ಕನ್ನಡ ಅಧ್ಯಯನ ವಿಭಾಗ 1970 ರಲ್ಲಿ ಆರಂಭಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಕೃಷಿ ವಿಜ್ಞಾನಗಳಿಗೆ ಸಂಬಂಧಿಸಿದ ಬೇಸಾಯ ಶಾಸ್ತ್ರ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯಶಾಸ್ತ್ರ, ಹೈನುಗಾರಿಕೆ, ತೋಟಗಾರಿಕೆ, ಕೋಳಿಸಾಕಣೆ, ಅರಣ್ಯಶಾಸ್ತ್ರ, ಗೃಹವಿಜ್ಞಾನ, ಮತ್ಸ್ಯಶಾಸ್ತ್ರ, ಕೃಷಿ ಸಹಕಾರ, ಜೇನುಸಾಕಣೆ, ರೇಷ್ಮೆ ವ್ಯವಸಾಯ, ಮೂಲ ವಿಜ್ಞಾನ ಹಾಗೂ ಮಾನವಿಕಶಾಸ್ತ್ರಗಳಲ್ಲಿ ನೂರಾರು ಪುಸ್ತಕಗಳು ಪ್ರಕಟಗೊಂಡಿವೆ. ಹಲವಾರು ವಿಷಯಗಳ ಮೇಲಿನ ತಾಂತ್ರಿಕ ಶಬ್ದಕೋಶಗಳು ನಿರ್ಮಾಣವಾಗಿವೆ. ಈ ಪೈಕಿ ಈಗಾಗಲೇ ಕೆಲವು ಪುಸ್ತಕಗಳು ಪುನರ್‌ಮುದ್ರಣಗೊಂಡಿವೆ. ಮತ್ತೆ ಕೆಲವು ಪುಸ್ತಕಗಳು ಮುಗಿದಿದ್ದು, ಇವುಗಳಿಗಾಗಿ ಅಪಾರ ಬೇಡಿಕೆ ಉಂಟಾಗಿ ಪುನರ್ಮುದ್ರಣಗೊಳ್ಳಬೇಕಾಗಿದೆ. ಇದು ಈ ಪುಸ್ತಕಗಳಿಗಿರುವ ಜನಪ್ರಿಯತೆಗೆ ಸಾಕ್ಷಿ.

ಕೃಷಿ ವಿಜ್ಞಾನಗಳಲ್ಲಿ ಕೆಲವು ವಿಷಯದ ಮೇಲೆ ಹೆಚ್ಚಿನ ಪುಸ್ತಕಗಳು ಪ್ರಕಟಗೊಂಡಿದ್ದರೆ ಮತ್ತೆ ಕೆಲವು ವಿಷಯಗಳಲ್ಲಿ ಒಂದೋ ಎರಡೋ ಪುಸ್ತಕಗಳು ಮಾತ್ರ ಪ್ರಕಟಗೊಂಡಿವೆ. ಈ ದಿಶೆಯಲ್ಲಿ ಒಂದು ರೀತಿಯ ಸಮತೋಲನ ಕಾಯ್ದುಕೊಳ್ಳಬೇಕಲ್ಲದೆ ಇತ್ತೀಚೆಗೆ ಅತ್ಯಂತ ಮಹತ್ವಗಳಿಸುತ್ತಿರುವ ಹೈನುಗಾರಿಕೆ, ಕೋಳಿಸಾಕಣೆ ಹಾಗೂ ಮೀನುಗಾರಿಕೆ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗೆ ಆದ್ಯತೆ ನೀಡಿ ಉಪಯುಕ್ತತೆ ಕಂಡುಕೊಳ್ಳುವುದು ಅತ್ಯಗತ್ಯ.

ವಿಜ್ಞಾನ ಸಾಹಿತ್ಯ ಕನ್ನಡದಲ್ಲಿ ಬೆಳೆದು ಬರಬೇಕೆಂದು ನಡೆಯುತ್ತಿರುವ ಯತ್ನದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಈ ಕೊಡುಗೆ ಅಳಿಲು ಸೇವೆ. ಈ ಕೆಲಸ ಇದೀಗ ಮೈದುಂಬಿ ನಡೆಯುತ್ತಿದೆ. ಇದು ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ವಿಶಾಲವಾದ ಕೃಷಿ ವಿಜ್ಞಾನ ಪರಿಚಯ ಮಾಡಿಕೊಡಲು ಈಗ ಪ್ರಕಟಗೊಂಡಿರುವ ಪುಸ್ತಕಗಳು ಏತಕ್ಕೂ ಸಾಲದು. ಕೃಷಿ ವಿಜ್ಞಾನದ ಒಂದೊಂದು ಶಾಖೆಯಲ್ಲೂ ನೂರಾರು ಪುಸ್ತಕಗಳು ಪ್ರಕಟವಾಗಬೇಕು; ಎಲ್ಲ ಶಾಖೆಗಳ ಮೇಲೂ ತಾಂತ್ರಿಕ

ಶಬ್ದಗಳು ಮೂಡಿಬರಬೇಕು. ಈ ದೃಷ್ಟಿಯಿಂದ ನೋಡಿದಾಗ ನಿಜವಾದ ಭೂಮಿಕೆಯಿದ್ದು ಭದ್ರವಾದ ಬುನಾದಿ ಇದೀಗ ಸಿದ್ಧವಾಗಿದೆ. ಅದರ ಮೇಲೆ ಇನ್ನೂ ಕಟ್ಟಡ ನಿರ್ಮಾಣವಾಗಬೇಕು.

ಕೃಷಿ ವಿಶ್ವವಿದ್ಯಾನಿಲಯ ವ್ಯವಸಾಯ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ತರಗತಿ ಈಗಾಗಲೇ ಪ್ರಾರಂಭಗೊಂಡಿದ್ದು, ಕನ್ನಡದ ಬಗ್ಗೆ ಕಳಕಳಿಯುಳ್ಳ, ಆಸಕ್ತಿಯುಳ್ಳ ಅತ್ಯಂತ ಉತ್ಸಾಹಿ ವಿದ್ಯಾರ್ಥಿಗಳು ಈ ಪುಸ್ತಕಗಳ ಸದುಪಯೋಗ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಈಗ ಪ್ರಕಟವಾಗುತ್ತಿರುವ **ಪ್ರಾಚೀನ ಹಾಗೂ ಅರ್ವಾಚೀನ ದನಗಳ ಇತಿಹಾಸ** ಪುಸ್ತಕ ಎಲ್ಲ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಲೆಂದು ಆಶಿಸುತ್ತೇನೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಸ್. ವಿ. ಪಾಟೀಲ್
ಕುಲಪತಿಗಳು

ಸಂಪಾದಕರ ಮಾತು

ತುರುಕರು ಕರೆದರೆ ಉಣಲಹುದಯ್ಯ, ತುರುಕರು ಕರೆಯದ ಊರು ಹಾಳೂರು- ಎಂದು ಬಹು ಹಿಂದೆಯೇ ಸರ್ವಜ್ಞ ಹಾಡಿದ್ದಾನೆ. ಕೃಷಿ ಪ್ರಧಾನ ಭಾರತ ದೇಶದಲ್ಲಿ ಪಶುಪಾಲನೆಯೂ ಮುಖ್ಯ ವೃತ್ತಿಯಾಗಿತ್ತು. ಭಾರತವೇ ಅಲ್ಲದೆ ವಿಶ್ವಾದ್ಯಂತ ಹೈನದ ಉತ್ಪನ್ನಗಳಿಗೆ ದನಕರುಗಳು ಅನಿವಾರ್ಯವೆನಿಸಿವೆ. ಈ ಪುಸ್ತಕದಲ್ಲಿ ವಿವಿಧ ದನಗಳನ್ನು ಕುರಿತು ಪರಿಚಯಿಸಲಾಗಿದೆ. ಇದು 1979-80 ಹಾಗೂ 1980–81ನೇ ಸಾಲಿನಲ್ಲಿ ಕೃಷಿ ಗ್ರಂಥನಿರ್ಮಾಣ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನಗಳಿಸಿದ ಕೃತಿಯಾಗಿದೆ.

ಈ ಕೃತಿಯಲ್ಲಿ ಪ್ರಾಚೀನ ಭಾರತೀಯ ಗೋಸಂಸ್ಕೃತಿ, ಭಾರತದ ದನಗಳ ಚರಿತ್ರೆ, ಎಮ್ಮೆ ಜಾತಿಯ ದನಗಳು, ಯೂರೋಪ್ ದೇಶದ ದನಗಳ ಚರಿತ್ರೆ ಹಾಗೂ ಆಧುನಿಕ ಪಶುವೈದ್ಯ ಶಾಸ್ತ್ರದ ಪ್ರಗತಿ ಕುರಿತು ವಿವರಗಳಿವೆ. ಈ ಪುಸ್ತಕವನ್ನು ಪಂತ್ ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ಡೀನರಾಗಿದ್ದ ಡಾ|| ಕೆ. ಆರ್. ಆಲೂರ್‌ರವರು ತಾಂತ್ರಿಕವಾಗಿ ಪರಿಶೀಲಿಸಿದ್ದು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಚ್. ಕೆ. ನರಸಿಂಹೇಗೌಡ ಅವರು ಭಾಷಾಸಂಪಾದನೆ ಮಾಡಿದ್ದಾರೆ. ಬೆರಳಚ್ಚು ಸ್ವಚ್ಛಪ್ರತಿಯನ್ನು ಮುದ್ರಣಕ್ಕೆ ಸಿದ್ಧಪಡಿಸಿದವರು ಶ್ರೀ ಎಲ್.ಆರ್. ದೊಡ್ಡರಂಗಯ್ಯ ಕರಡೋದಿಕೆಯಲ್ಲಿ ಶ್ರೀ ಎಂ. ರಮೇಶ್ ಸಹಕರಿಸಿದ್ದಾರೆ. ಒಳಪುಟ ಹಾಗೂ ಮುಖಪುಟ ತಯಾರಿಸಿದವರು ಶ್ರೀ ಕೆ. ವಿಧ್ಯಾಧರಯ್ಯ. ಇವರುಗಳಿಗೆಲ್ಲ ಕೃತಜ್ಞತೆಗಳು.

ಈ ಪುಸ್ತಕವು ಪಶುವೈದ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ರೈತರು ಹಾಗೂ ಇತರ ಆಸಕ್ತರಿಗೆಲ್ಲ ಉಪಯುಕ್ತವಾಗುವುದೆಂದು ಆಶಿಸಲಾಗಿದೆ.

ಎಚ್. ಕೆ. ನರಸಿಂಹೇಗೌಡ
ಪ್ರಭಾರಿ ಕನ್ನಡ ಪ್ರಾಧ್ಯಾಪಕರು ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಕನ್ನಡ ಅಧ್ಯಯನ ವಿಭಾಗ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಪರಿವಿಡಿ

ಪ್ರಾಚೀನ ಹಾಗೂ ಅರ್ವಾಚೀನ
ದನಗಳ ಇತಿಹಾಸ

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
4.	16, 19, 22,	ಜೋವಿಡಿ	ಬೋವಿಡಿ
	26	ಗೋಭ್ಯೋಹವಿಃ	ಗೋಭ್ಯೋ
26.	13	ನಿ ಮ್ಮ	ನಿಮ್ಮ
	15	ನ ಮ್ಮ	ನಮ್ಮ
51.	3	ತಿಃಗ್ಗರುವ	ತಿರುಗುವ
63.	22	ಆದಿನಿಂದ	ಅಂದಿನಿಂದ
65.	18	ಹೋಗತ್ತಾ	ಹೋಗುತ್ತಾ
72.	21	ತಂಬವು	ನಿತಂಬವು
146.	16	2900	1900

ಅಧ್ಯಾಯ 1

ಪೀಠಿಕೆ

ನಮ್ಮ ದೇಶದ ದನಗಳ ಇತಿಹಾಸವನ್ನು ತಿಳಿಯಬೇಕಾದರೆ ಮೊದಲು ನಾವು ಆರ್ಯರ ಪುರಾತನ ಇತಿಹಾಸವನ್ನು ತಿಳಿಯುವುದು ಅವಶ್ಯ. ಆರ್ಯರ ಇತಿಹಾಸಕ್ಕೂ ನಮ್ಮ ದನಗಳ ಇತಿಹಾಸಕ್ಕೂ ಪರಸ್ಪರ ಸಂಬಂಧವಿದೆ.ನಮ್ಮಲ್ಲಿಯ ವಿವಿಧ ಜಾತಿಯ ದನಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಾರ್ಯದಲ್ಲಿ ಆರ್ಯರ ಪಾತ್ರ ಅತ್ಯಂತ ಹಿರಿದು. ಆರ್ಯರು ಇಂದಿನ ದನದ ತಳಿಗಳ ಕಾರಣಪುರುಷರು. ಆರ್ಯರ ಪುರಾತನ ಇತಿಹಾಸ ಇಂದಿನ ನಮ್ಮಲ್ಲಿಯ ದನಗಳ ಇತಿಹಾಸಕ್ಕೆ ದಾರಿದೀಪವಾಗಿದೆ.

ಆರ್ಯರು ಭಾರತಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ಸುಮಾರು 2000 ವರ್ಷಗಳ

ಹಿಂದೆಯೇ ಸಾಕಿದ್ದ ಕಾಂಕ್ರೇಜ, ಗೀರ್ ಮತ್ತು ಹಳ್ಳಿಕಾರ ಜಾತಿಯ ದನಗಳೇ ಭಾರತದ ಪುರಾತನ ಇತಿಹಾಸ ಪ್ರಸಿದ್ಧವಾದ ಮೂಲ ತಳಿಗಳು.

ಆರ್ಯರು ನಮ್ಮ ದೇಶಕ್ಕೆ ಬರುವ ಪೂರ್ವದಲ್ಲಿ ಮಧ್ಯ ಏಶಿಯಾದಲ್ಲಿದ್ದರೆಂದು ಇತಿಹಾಸದಲ್ಲಿ ಉಕ್ತವಾಗಿದೆ. ಡಾನ್ಯೂಬ್ ಮತ್ತು ಅಕ್ಸಸ್ ನದಿಗಳ ಮಧ್ಯ ಇರುವ ಪ್ರದೇಶವೇ ಆರ್ಯರ ತವರೂರು. ಈ ಪ್ರದೇಶ ಹುಲ್ಲುಗಾವಲುಗಳಿಂದ ಕೂಡಿದ ಪ್ರದೇಶವಾಗಿತ್ತು. ಈ ಹುಲ್ಲುಗಾವಲುಗಳನ್ನು **ಸ್ಟೇಪ್** ಎಂದು ಕರೆಯುತ್ತಾರೆ. ಈ ಸ್ಟೇಪ್‌ಗಳು ಹಂಗೇರಿಯಿಂದ ಹಿಡಿದು ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರದ ದಂಡೆಗಳ ಮೂಲಕ ಹಾದು ರಷ್ಯಾದ ಕಸರೇಸ್ಥಾನದವರೆಗೂ ಹಬ್ಬಿರುವ ವಿಶಾಲವಾದ ಹುಲ್ಲುಗಾವಲುಗಳಿಂದ ಕೂಡಿದ ಪ್ರದೇಶ. ಆರ್ಯರು ಈ ನಿಸರ್ಗ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ತಮ್ಮ ದನಗಳನ್ನು ಚೆನ್ನಾಗಿ ಮೇಯಿಸಿ, ಸಾಕಿ, ಬೆಳೆಸಿ ಸಂವರ್ಧನೆ ಮಾಡಿದ ಉತ್ತಮ ಪಶುಪಾಲಕರಾಗಿದ್ದರು.

ಆರ್ಯರ ಮುಖ್ಯ ಕಸಬು ಪಶುಪಾಲನೆ. ದನಗಳ ಹಿಂಡೇ ಅವರ ಸಂಪತ್ತು. ಯಾರ ಹತ್ತಿರ ಹೆಚ್ಚು ದನಗಳಿದ್ದವೋ ಅವನೇ ರಾಜ, ಅಧಿನಾಯಕ, ಸಮಾಜದ ಮುಖ್ಯಸ್ಥ. ಅಂದಿನ ಕಾಲದಲ್ಲಿ ಒಬ್ಬರ ಗೋವುಗಳನ್ನು ಮತ್ತೊಬ್ಬರು ಹಿಡಿದು ತಂದು ತಮ್ಮ ಹಿಂಡನ್ನು ಬೆಳೆಸುತ್ತಿದ್ದರು. ಈ ಗೋವುಗಳ ಹಿಂಡಿನ ಸಲುವಾಗಿಯೇ ಅವರಲ್ಲಿ ಆಗಾಗ್ಗೆ ಜಗಳ, ಹೊಡೆದಾಟ, ಯುದ್ಧಗಳೂ ಸಹ ಆಗುತ್ತಿದ್ದವು.

ಆರ್ಯರು ಪಶುಪಾಲನೆ, ಪೋಷಣೆ, ಸಂವರ್ಧನೆಗಳಲ್ಲಿ ಪರಿಣತಿಯನ್ನು ಪಡೆದಿದ್ದರು. ವಿಷ್ಣುಸೂಕ್ತದಲ್ಲಿ ಅವರ ಪಶುಪಾಲನೆಯ ಬಗ್ಗೆ ಈ ಮುಂದಿನಂತೆ ಹೇಳಲಾಗಿದೆ: ಎಲ್ಲಿ ಬಲಿಷ್ಟವಾದ ಕೊಂಬುಗಳನ್ನುಳ್ಳ ಚುರುಕಾದ ಗೋವುಗಳು ಇರುವವೋ ಅಲ್ಲಿ ಆಕಳುಗಳು ಮಧ್ಯದಲ್ಲಿ ಮಹಾಗತಿಯನ್ನುಳ್ಳ ಸ್ತೋತ್ರ ಪ್ರಿಯನಾದ ಮಹಾವಿಭೂತಿಯಾದ ವಿಷ್ಣುವಿನ ಪರಮ ಪದವು (ಪಾದಸ್ಥಾನವು, ವಾಸಸ್ಥಾನವು) ಪ್ರಕಾಶಿಸುತ್ತಿದೆ. ಇಂಥ ಗೋವುಗಳ ಮಧ್ಯದಲ್ಲಿಯೇ ಕೃಷ್ಣನು ಸದಾ ವಾಸಿಸುವುದಾಗಿ ವರ್ಣಿಸಲಾಗಿದೆ. ಇದಕ್ಕಾಗಿಯೇ ಶ್ರೀಕೃಷ್ಣನನ್ನು ಗೋಪಾಲಕೃಷ್ಣ ಎಂದು ಸಂಬೋಧಿಸಲಾಗಿದೆ. ಇದಕ್ಕಾಗಿಯೇ ಅಂದಿನ ಪಶುಪಾಲಕರನ್ನು ಗೊಲ್ಲರು, ದನಗಾಹಿಗಳು ಎಂದು ಕರೆಯುತ್ತಿದ್ದರು. ಅಂದಿನ ಕಾಲದಲ್ಲಿ ಪಶುಸಂಪತ್ತು ವಿಪುಲವಾಗಿತ್ತು. ಅಂದಿನ ಈ ಹೈನೋತ್ಪಾದನೆಯ ಮೂಲಪುರುಷ ಶ್ರೀಕೃಷ್ಣನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಆರ್ಯರು 3500 ವರ್ಷಗಳ ಹಿಂದೆ ಮಧ್ಯಏಷ್ಯಾದಿಂದ ವಲಸೆಬಂದರು.

ಮೊದಲು ಸಪ್ತಸಿಂಧೂ ಪ್ರದೇಶವಲ್ಲಿ ತಳವೂರಿದರು. ಋಗ್ವೇದದಲ್ಲಿ ಸಿಂಧೂ ಮತ್ತು ಗೋಮತಿ ನದಿಗಳ ಬಯಲು ಪ್ರದೇಶ ಬಹಳ ಫಲವತ್ತಾದ ಪ್ರದೇಶ; ಅಲ್ಲಿ ಉತ್ತಮ ದನಗಳ ಹಿಂಡು ನೆಲಸಿತ್ತವೆಂದು ಕಂಡುಬರುತ್ತದೆ. ಈ ಪ್ರದೇಶದಲ್ಲಿಯೇ ಆರ್ಯರು ಬಹಳ ಕಾಲದವರೆಗೆ ನೆಲೆಸಿದ್ದರು. ಆರ್ಯರು ತಾವು ಹೋದ ಕಡೆಗಳಲ್ಲೆಲ್ಲ ತಮ್ಮ ದನ, ನಡೆನುಡಿ ಸಂಸ್ಕೃತಿ, ನಾಗರೀಕತೆಗಳನ್ನು ತಮ್ಮ ಜೊತೆಯಲ್ಲಿಯೇ ತೆಗೆದುಕೊಂಡು ಹೋದರು. ಅದನ್ನು ತಾವು ಹೋದದ್ದೆಲ್ಲಾ ಬಿತ್ತರಿಸಿದರು. ಹೀಗೆ ಅವರು ತಮ್ಮ ಜೊತೆಯಲ್ಲಿ ಕೊಂಡೊಯ್ದ ದನಗಳೇ ನಮ್ಮ ದೇಶದ ಮೂಲ ತಳಿಯ ದನಗಳೆಂದು ಕೆಲವು ತಜ್ಞರ ಅಭಿಪ್ರಾಯ.

ಆರ್ಯರು ಭಾರತಕ್ಕೆ ಬಂದಾಗ ಯಾವ ತರಹದ ದನಗಳನ್ನು ತಂದರೆಂಬುದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅವರು ನಮ್ಮ ದೇಶಕ್ಕೆ ಬರುವ ಹೊತ್ತಿಗೆ ಅವರ ಹಿಂಡಿನಲ್ಲಿ ಬಣ್ಣ ಬಣ್ಣಗಳಿಂದ ಕೂಡಿದ ಹಂಡಬಂಡ ದನಗಳಿದ್ದವು ಎಂಬುದನ್ನು ನಾವು ಯೂರೋಪ್ ದೇಶದ ಅಂದಿನ ಚರಿತ್ರೆಯಿಂದ ತಿಳಿಯಬಹುದು. ಒಂದು ಕಾಲಕ್ಕೆ ರೋಮನ್ ಸಾಮ್ರಾಜ್ಯ ತಮ್ಮ ಪ್ರಭುತ್ವವನ್ನು ಯೂರೋಪಿನಲ್ಲೆಲ್ಲಾ ಹರಡಿತ್ತು. ಅಂದು ಇಟಲಿಯಲ್ಲಿಯ ಪೋ ನದಿಯ ಕೊಳ್ಳದ ಪ್ರದೇಶಗಳಾದ ಟಸ್‌ಕನಿ ಮತ್ತು ಲೊಂಬಾರ್ಡಿ ಎಂಬಲ್ಲಿ ಉತ್ತಮ ಜಾತಿಯ ದನಗಳಿದ್ದವೆಂಬುದು ರೋಮನ್ ಚರಿತ್ರೆಯಿಂದ ತಿಳಿದುಬರುತ್ತದೆ. ಈ ಲೊಂಬಾರ್ಡಿ ದನಗಳಲ್ಲಿ ಕೆಲವುಗಳ ಮೈಬಣ್ಣ ಹಳದಿಮಿಶ್ರಿತ ಊದಾ ಬಣ್ಣದಿಂದ ಕೂಡಿದ್ದರೆ ಮತ್ತೆ ಕೆಲವುಗಳ ಮೈಬಣ್ಣ ಪಿಂಗಲವರ್ಣದಿಂದ ಕೂಡಿತ್ತು ಹಾಗೂ ಅವುಗಳ ಹೊಟ್ಟೆಯ ತಳಭಾಗವು ಬಿಳುಪು ಬಣ್ಣದಿಂದ ಕೂಡಿದ್ದ ಈ ದನಗಳ ಮೈಬಣ್ಣ ಹಂಡಬಂಡವಾಗಿತ್ತೆಂಬುದು ರೋಮನ್ ಚರಿತ್ರೆಯಿಂದ ತಿಳಿದುಬರುತ್ತದೆ. ಈ ಪ್ರದೇಶದ ಲೊಂಬಾರ್ಡಿ ಮತ್ತು ಟಸ್‌ಕನಿ ದನಗಳು ಮತ್ತು ಆರ್ಯರ ದನಗಳು ಕೂಡಿ ಬೆಳೆಯುತ್ತಿದ್ದರಿಂದ ಆರ್ಯರ ದನಗಳಲ್ಲಿಯೂ ಸಹ ಈ ಬಣ್ಣ ಮೂಡಿ ಬಂದವು. ಇದರಿಂದಾಗಿ ಆರ್ಯರು ತಮ್ಮ ಜೊತೆಯಲ್ಲಿ ನಮ್ಮ ದೇಶಕ್ಕೆ ತಂದ ದನಗಳು ಹಂಡಬಂಡ ದನಗಳಾಗಿರಬೇಕು. ಇದೂ ಅಲ್ಲದೆ ಅಮರಕೋಶದಲ್ಲಿ 'ಶ್ಯಬಳೀ ಧವಳಾದಯಃ' ಎಂದು ಹೇಳಲಾಗಿದೆ. 'ಶ್ಯಬಳಿ' ಎಂದರೆ ಚುಕ್ಕೆಚುಕ್ಕೆಗಳಿಂದ ಕೂಡಿದ (ಚಿಂಚ) ದನ. 'ಧವಳ' ಎಂದರೆ ಬಿಳಿಯದು ಸಂದರ್ಭ: ವಸಿಷ್ಠರ ಆಕಳು ಕಾಮಧೇನುವಿನ ಮಗಳು; ಅದರ ಹೆಸರು ಶ್ಯಬಳಿ. ಆರ್ಯರ ಪೀಳಿಗೆಯ ಇಂದಿನ ದನಗಳು ದೊಡ್ಡವಾಗಿ ಎತ್ತರವಾಗಿ ಬೆಳ್ಳಗಿರುತ್ತವೆ. ಇವು ಭಾರತದ ಉತ್ತರ ಪ್ರದೇಶದಲ್ಲಿ ಕಂಡುಬರುತ್ತವೆ.

ಉತ್ತರದ ಹರಿಯಾನ, ಮೇವಡಿ ಹಾಗೂ ನರೋರಿ, ದಕ್ಷಿಣದಲ್ಲಿ ಗವೋಲೋ,

ಓಂಗೋಲ ಹಾಗೂ ಕೃಷ್ಣಾತೀರದ ದನ, ಬಜಾರ್ ಹಾಗೂ ಕೆರಿಫೆಡ್ ಇವುಗಳು ಆರ್ಯರ ಮೂಲ ದನಗಳಿಂದ ರೂಪಗೊಂಡಿರುವ ತಳಿಗಳು. ಆರ್ಯರು ನಮ್ಮ ದೇಶದಲ್ಲಿ ಹೇಗೆ ಹೇಗೆ ಹರಡಿಕೊಂಡರೋ ಎಲ್ಲೆಲ್ಲಿ ನೆಲೆಸಿದ್ದರೋ ಅಲ್ಲಲ್ಲಿ ಆರ್ಯರ ತಳಿಯ ದನಗಳು ಇಂದಿಗೂ ಹಬ್ಬಿಕೊಂಡಿರುವುದನ್ನು ಗುರುತಿಸಬಹುದು. ಈ ಎಲ್ಲ ವಿವಿಧ ತಳಿಗಳ ಚರಿತ್ರೆಯನ್ನು ಪುಸ್ತಕದಲ್ಲಿ ಸವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ.

ದನಗಳ ವಿಕಾಸ

ಆದಿಮಾನವ ಮೊಟ್ಟಮೊದಲು ಕಾಡು ಪ್ರಾಣಿಗಳ ಜೊತೆಯಲ್ಲಿ ಕಾಡಿನಲ್ಲಿ ಮರಗಳ ಪೊಟರೆ ಮತ್ತು ಗುಹೆಗಳಲ್ಲಿ ವಾಸವಾಗಿದ್ದ; ಪ್ರಾಣಿಗಳನ್ನು ಬೇಟೆಯಾಡಿ ಕೊಂದು, ತಿಂದು, ಜೀವಿಸುತ್ತಿದ್ದ. ಸಾಮಾಜಿಕ ಜೀವನವೆಂಬುದು ಅವನಿಗೆ ಗೊತ್ತಿರಲಿಲ್ಲ. ಕಾಲವು ಸರಿದಂತೆ ಕಾಡುಮಾನವ ನಗರಮಾನವನಾದ. ಪ್ರಾಚೀನ ವನ್ಯಜೀವನವು ಬದಲಾಗಿ, ಅನಾಗರೀಕನಾಗಿದ್ದ ಕಾಡುಮಾನವ ನಾಗರೀಕನಾದ. ಜೀವನದಲ್ಲಿ ಪ್ರಗತಿ ಸಾಧಿಸಿಕೊಂಡು, ಸಾಮಾಜಿಕ ಬುದ್ಧಿಜೀವಿಯಾಗಿ, ಸುಸಂಸ್ಕೃತನಾಗಿ, ವೈಜ್ಞಾನಿಕ ಪ್ರಜ್ಞಾವಂತನಾಗಿ ಜೀವನಪಥದಲ್ಲಿ ಬಹಳ ಮುಂದುವರಿದಿದ್ದಾನೆಂಬುದನ್ನು ಚರಿತ್ರೆಯಿಂದ ತಿಳಿಯಬಹುದು.

ಜೋವಿಡಿ ಕುಟುಂಬದ ಪ್ರಾಣಿಗಳು ಆದಿಮಾನವನಂತೆ ಇಂದಿನ ಸುಧಾರಿಸಿದ ಸಾಕುಪ್ರಾಣಿಗಳು ಸಹ ಒಂದು ಕಾಲಕ್ಕೆ ಕಾಡುಮೃಗಗಳಾಗಿ ಅಡವಿಯಲ್ಲಿದ್ದವು. ಇವುಗಳಲ್ಲಿ ಮೆಲುಕುಹಾಕುವ, ಕಾಲಿನಗೊರಸುಗಳು ಸೀಳಾಗಿರುವ ಮತ್ತು ಕೊಂಬುಗಳಿರುವ ಪ್ರಾಣಿಗಳನ್ನು ಜೋವಿಡಿ ಕುಟುಂಬದ ಪ್ರಾಣಿಗಳೆಂದು ವಿಂಗಡಿಸಲಾಗಿದೆ. ಕಾಡೆತ್ತು, ಗೌರ ಅಥವಾ ಹಿಂದೂಸ್ತಾನದ ಬೈಸನ್, ಕಡವೆ, ಕಾಡುಕೋಣ, ಕಾಡೆಮ್ಮೆ, ಕುರಿ, ಮೇಕೆ, ಯಾಕ್ ಇವೆಲ್ಲಾ ಒಂದೇ ಬಳಗಕ್ಕೆ ಸೇರಿದ ಜೋವಿಡಿ ಕುಟುಂಬದ ಪ್ರಾಣಿಗಳು.

ಆಂಟಿಲೋಪ್, ಚಿಟಾಲ್ (ಸಾರಂಗ), ಜಿಂಕೆ, ನೀಲಗಾಯಿ, ಚಿಂಕಾರ, ಹರಿಣ, ಸಾಂಬರ್, ನಾಲ್ಕು ಕೊಂಬಿನ ಆಂಟಿಲೋಪ್ ಮೊದಲಾದವುಗಳು ಜೋವಿಡಿ ಕುಟುಂಬಕ್ಕೆ ಸೇರಿದ ಪ್ರಾಣಿಗಳ ನಿಕಟ ಸಂಬಂಧವುಳ್ಳ ಬಳಗದ ಪ್ರಾಣಿಗಳು. ಇವು ಜೋವಿಡಿಯ ಸರ್ವಿಡಿ ಎಂಬ ಉಪ ಕುಟುಂಬಕ್ಕೆ ಸೇರಿವೆ.

ದನಗಳ ಹುಟ್ಟು ಪ್ರಾಣಿಗಳ ಶರೀರ ಅಂಗರಚನೆ ತಂದೆ ತಾಯಿಗಳ ಜೀವಕೋಶ ವಸ್ತುಗಳಿಂದ ಕೂಡಿರುತ್ತದೆ, ಈ

ರಚನೆಯು ಬಿಡಿಸಲು ಬಾರದಂತಹ ಆನುವಂಶಿಕ ಚರಿತ್ರೆಯನ್ನೊಳಗೊಂಡಿರುತ್ತದೆ. ಅವುಗಳ ಶರೀರರಚನೆಯಲ್ಲಿ ಎಣಿಸಲಾರದಷ್ಟು ಅವುಗಳ ಪೂರ್ವಜರ ಶರೀರದ ಸೂಕ್ಷ್ಮ ಸಾಮಗ್ರಿಗಳು ಹೆಣೆದುಕೊಂಡಿರುತ್ತವೆ. ಹೀಗಾಗಿ ತಂದೆತಾಯಿಗಳ ಗುಣಗಳು ಮತ್ತು ನ್ಯೂನತೆಗಳು ಅವುಗಳ ಮುಂದಿನ ಪೀಳಿಗೆಯಲ್ಲಿ ಬಿಡದೆ ಮುಂದುವರಿಯುತ್ತಾ ಹೋಗುತ್ತವೆ. ಕಾರಣ, ನಾವು ಅವುಗಳ ಹಿಂದಿನ ಆನುವಂಶಿಕ ಚರಿತ್ರೆಯನ್ನು ಅಲ್ಲಗಳೆಯುವಂತಿಲ್ಲ. ಮುಂದಿನ ಪೀಳಿಗೆಯ ಭವಿಷ್ಯವನ್ನು ತಿಳಿಯಲು ಅವುಗಳ ಈ ಹಿಂದಿನ ಆನುವಂಶಿಕ ಚರಿತ್ರೆಯೇ ಅಳತೆಗೋಲು. ಈ ಚರಿತ್ರೆಯ ಆಧಾರದ ಮೇಲೆ ಮುಂದೆ ಗೊತ್ತುಪಡಿಸಿದ ದನಗಳ ಅಭಿವೃದ್ಧಿಯ ಗುರಿ ಮುಟ್ಟಲು ಸಾಧ್ಯ. ಪ್ರತಿಯೊಂದು ಸಜೀವಿಯ ಶರೀರದಲ್ಲಿ ನಿರಂತರ ಕ್ರಿಯೆ ನಡೆದೇ ಇರುತ್ತದೆ. ಇದು ನಿಸರ್ಗ ನಿಯಮ. ಹೀಗೆ ಕೆಲಸದಲ್ಲಿ ನಿರತವಾಗಿರುವ ಅನೇಕ ಕೋಶಗಳು ಬಗೆ ಬಗೆಯ ರಚನಾಕೌಶಲ್ಯದಿಂದ ಉತ್ಪನ್ನವಾಗಿ ರೂಪಾಂತರ ಹೊಂದುತ್ತಿರುತ್ತವೆ. ಹೀಗೆ ರೂಪಾಂತರ ಹೊಂದಿದ ಅನೇಕ ಕೋಟ್ಯಾವಧಿ ಕೋಶಗಳಿಂದ ಒಂದೊಂದು ಪ್ರಾಣಿಯ, ವೃಕ್ಷದ, ಹುಟ್ಟು, ಬೆಳವಣಿಗೆಯಾಗಿದೆ ಎಂಬುದು ಪ್ರಾಣಿಗಳ ವಿಕಾಸದ ಸಿದ್ಧಾಂತ.

ದನಗಳು ಹೇಗೆ ವಿಕಾಸಗೊಂಡವು ಎಂಬ ವಿಷಯ ಇನ್ನೂ ಸರಿಯಾಗಿ ತಿಳಿಯದ ಒಂದು ರಹಸ್ಯವಾಗಿಯೇ ಉಳಿದಿದೆ. ಕಾಡು ದನಗಳು, ಆಂಟಿಲೋಪ್ ಸಾರಂಗ, ಕಡವೆ, ನೀಲಗಾಯಿ ಇವೆಲ್ಲಾ ಒಟ್ಟಾಗಿ ಕೂಡಿ, ಒಂದರೊಡನೊಂದು ಬೆರೆತುದರ ಪರಿಣಾಮವಾಗಿ ದನಗಳು ವಿಕಾಸಗೊಂಡಿರಬೇಕೆಂಬುದು ಕೆಲವರ ಅಭಿಪ್ರಾಯ. ಅವರು ಕೊಡುವ ಕಾರಣಗಳು ಈ ಕೆಳಗಿನಂತಿವೆ:

15 ದಶಲಕ್ಷ ವರ್ಷಗಳ ಹಳೆಯ ಅವಶೇಷ . ಅತಿ ಪ್ರಾಚೀನ ಕಾಲದ ಮತ್ತು ಅತಿ ದೊಡ್ಡ ಆಕಾರದ ಒಂದು ಕುರಿಯ ತಲೆಬುರುಡೆ ನಾರ್ ಫೋಕ್ ತೀರ ಪ್ರದೇಶದಲ್ಲಿಯ ಭೂಗರ್ಭದಲ್ಲಿ ಸಿಕ್ಕಿದೆ. ಇದು ಸುಮಾರು 25 ಲಕ್ಷ ವರ್ಷಗಳ ಹಿಂದಿನದಿರಬಹುದೆಂದು ಪ್ರಾಚ್ಯ ವಸ್ತು ಸಂಶೋಧನಾಧಿಕಾರಿಗಳು ಹೇಳುತ್ತಾರೆ. ಇದರ ಕೊಂಬುಗಳು ಬಹಳ ದೊಡ್ಡವಾಗಿ ಅತಿ ಉದ್ದವಾಗಿರುತ್ತವೆ. ಕ್ರಿ.ಶ. 1880ರಲ್ಲಿ ನ್ಯೂಟನ್ ಇದಕ್ಕೆ **ಓವಿಸ್ ಸಾವನಿ** ಎಂದು ಹೆಸರು ಕೊಟ್ಟಿರುತ್ತಾನೆಂದು ಎಂ. ಎಲ್. ರೈಡರ್ ತನ್ನ **ಜೂಆಲಜಿ ಆಫ್ ಶೀಪ್** ಪುಸ್ತಕದಲ್ಲಿ ಹೇಳಿರುತ್ತಾರೆ. ಡಾ. ಲಿಕೀ ಪೂರ್ವ ಆಫ್ರಿಕಾ ದೇಶದ ಭೂಗರ್ಭ ಉತ್ಖನನದಲ್ಲಿ ಕೆಲವು ಕುರಿಗಳ ಅವಶೇಷಗಳನ್ನು ಹುಡುಕಿ ತೆಗೆದಿದ್ದಾರೆ. ಇದರಲ್ಲಿ ಒಂದು ದೊಡ್ಡ ಕುರಿಯ ತಲೆಬುರುಡೆ ಕೊಂಬು

ಸಹಿತ ಸಿಕ್ಕಿರುತ್ತದೆ. ಈ ರೀತಿ ಸಿಕ್ಕಿದ ತಲೆಬುರುಡೆಯ ವ್ಯಾಸ 4 ಅಡಿಗಳಿಗಿಂತ ಹೆಚ್ಚಾಗಿದ್ದು, 12 ಅಡಿ ಉದ್ದವಿತ್ತೆಂದು ಹೇಳಲಾಗಿದೆ. ಇದರಿಂದ ಅಂದಿನ ಜಿಂಕೆ ಮತ್ತು ಕುರಿಗಳು ಎಷ್ಟು ಪುರಾತನವಾದವುಗಳು ಮತ್ತು ಬೃಹದಾಕಾರದವುಗಳಾಗಿದ್ದ ವೆಂಬುದನ್ನು ಊಹಿಸಬಹುದು.

ಆಂಟಿಲೋಪ್ ಆಂಟಿಲೋಪ್‌ಗಳು ಜಿಂಕೆಯ ಕುಟುಂಬಕ್ಕೆ ಸೇರಿದ್ದರೂ ಇದರಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ. ಅವುಗಳೆಂದರೆ: ಜಿಂಕೆಗಳಲ್ಲಿ ಕೋರೆಹಲ್ಲುಗಳಿವೆ. ಆಂಟಿಲೋಪ್‌ಗಳಲ್ಲಿ ಕೋರೆಹಲ್ಲುಗಳು ಕಂಡುಬಂದಿಲ್ಲ. ಆಂಟಿಲೋಪ್‌ದ ಕೋಡು ದನದ ಕೋಡಿನಂತೆ ಟೊಳ್ಳು; ಜಿಂಕೆಯ ಕೋಡುಗಳು ಟೊಳ್ಳಾಗಿರದೆ ಗಟ್ಟಿಯಾಗಿರುತ್ತವೆ. ಜಿಂಕೆಗಳ ಕೋಡುಗಳು ಆಗಾಗ್ಗೆ ಉದುರುತ್ತವೆ ಮತ್ತು ಹುಟ್ಟಿಕೊಳ್ಳುತ್ತವೆ ಮತ್ತು ಕವಲು ಕವಲಾಗಿರುತ್ತವೆ. ಆಂಟಿಲೋಪ್‌ಗಳ ಕೋಡು ದನದ ಕೋಡಿನಂತೆ ಉದ್ದವಾಗಿದ್ದು, ಟೊಳ್ಳಾಗಿದ್ದು, ಉದುರುವುದಿಲ್ಲ ಮತ್ತು ಕವಲು ಕವಲಾಗಿ ಒಡೆದಿರುವುದಿಲ್ಲವೆಂದು ಕೊಲಂಬಿಯ **ವೈಕಿಂಗ್ ಡಸ್ಕ್ ಎನ್‌ಸೈಕ್ಲೋಪಿಡಿಯಾದಲ್ಲಿ** ಉಲ್ಲೇಖಿಸಲಾಗಿದೆ. ಇದನ್ನು ಕೆ. ಎಸ್. ಧರ್ಮಕುಮಾರ ಸಿಂಹಜಿ ಸಹ ತನ್ನ **ಎ ಫೀಲ್ಡ್ ಗೈಡ್ ಟು ಬಿಗ್ ಗೇಮ್ ಸೆನ್ಸಸ್ ಇನ್‌ಇಂಡಿಯಾ** ಪುಸ್ತಕದಲ್ಲಿ ಸಮರ್ಥಿಸಿರುತ್ತಾನೆ. ಆಂಟಿಲೋಪ್ ಮತ್ತು ದನಗಳ ಅತೀ ಸಮೀಪದ ಹೋಲಿಕೆ ಹಾಗೂ ಸರಿಸಮಾನವಾದ ಲಕ್ಷಣಗಳಿಂದಾಗಿ ದನಗಳ ಮೂಲ ಪ್ರಾಣಿ ಆಂಟಿಲೋಪ್ ಆಗಿರಬಹುದೆಂಬ ಊಹೆಯನ್ನು ತಳ್ಳಿಹಾಕಲಾಗುವುದಿಲ್ಲ.

ನೀಲಗಾಯಿ ಸರ್ವಿಡಿ ಪ್ರಾಣಿಗಳಲ್ಲೆಲ್ಲಾ ಅತ್ಯಂತ ಸಮೀಪ ಹೋಲಿಕೆಯ **ನೀಲಗಾಯಿ** ದನಗಳ ವಿಕಾಸದ ಸರಪಳಿಯ ಒಂದು ಮುಖ್ಯ ಕೊಂಡಿ. ಧಾರವಾಡದಲ್ಲಿ ಮಾಳಮಡ್ಡಿಯಲ್ಲಿ ಎಮ್ಮೆ ಕೆರೆಯ ಹತ್ತಿರ ಇರುವ ಶ್ರೀ ಗಾಯತೊಂಡೆ ಅವರ ಬಂಗಲೆಯಲ್ಲಿ (ಈಗ ಇಲ್ಲಿ ಪಶುಪಾಲನಾ ಇಲಾಖೆಯ ಶಳಿ ಅಭಿವೃದ್ಧಿ ನಿರ್ದೇಶನಾಧಿಕಾರಿಗಳ ಕಛೇರಿ ಇದೆ) ಗೋಡೆಗೆ ಒಂದು ಪ್ರಾಣಿಯ ತಲೆಯನ್ನು ತಗಲುಹಾಕಿದೆ. ಇದನ್ನು ಗಾಯತೊಂಡೆ ಅವರು ದಾಂಡೇಲಿ ಕಾಡಿನಲ್ಲಿ ಶಿಕಾರಿ ಮಾಡಿ ತಂದದ್ದು. ಇದನ್ನು ನೀಲಗಾಯಿ ಯೆಂದು ಕರೆಯುತ್ತಾರೆ. ಇದರಲ್ಲಿ ನಾವು ಜಿಂಕೆಯ ಮತ್ತು ದನಗಳ ಲಕ್ಷಣಗಳು ಕೂಡಿರುವುದನ್ನು ಕಾಣಬಹುದು. ಇದರ ಕೋಡು ದನದ ಕೋಡಿನಂತಿದೆ. ಕಣ್ಣು ಮತ್ತು ಮುಖ ಜಿಂಕೆಯನ್ನು ಹೋಲುತ್ತದೆ. ಮೈ ಆಕಾರ ದನದಂತಿದೆ.

ಇದಕ್ಕೆ ದನಗಳಿಗಿರುವಂತೆ ಗಂಗೆದೊಗಲು ಇಲ್ಲ. ಕುತ್ತಿಗೆ, ಜಿಂಕೆಯ ಕುತ್ತಿಗೆಯನ್ನು ಹೋಲುತ್ತದೆ. ಇದು ಜಿಂಕೆ ಮತ್ತು ದನಗಳ ಮಧ್ಯಂತರಾವಸ್ಥೆಯ ಪ್ರಾಣಿ ಎಂದು ಹೇಳಬಹುದು. ಧರ್ಮಕುಮಾರಸಿಂಹ ಅವರು ಈ ನೀಲಗಾಯಿ ಕರುಗಳು ಆಕಳ ಕರುಗಳಂತಿರುತ್ತವೆ ಎಂದು ಬರೆದಿರುತ್ತಾರೆ. ಇದನ್ನೆಲ್ಲಾ ವಿಚಾರಮಾಡಿ ನೋಡಲಾಗಿ ಈ ನೀಲಗಾಯಿ ಮತ್ತು ಕಾಡು ದನಗಳು ಬೆರೆಯುತ್ತಿದ್ದುದರಿಂದ ದನಗಳು ವಿಕಾಸ ಗೊಂಡಿರಬಹುದು ಎಂದು ಊಹಿಸಲು ಆಸ್ಪದ ಮಾಡಿಕೊಟ್ಟಂತಾಗುತ್ತದೆ.

ರಾಯಬಾಗ ಪಾರ್ಕ್ ದನಗಳು ಬೆಳಗಾವಿ ಜಿಲ್ಲೆಯಲ್ಲಿರುವ ರಾಯಬಾಗ ತಾಲ್ಲೂಕು ಹಿಂದೆ ಕೊಲ್ಹಾಪುರದ ಸಂಸ್ಥಾನಕ್ಕೆ ಸೇರಿತ್ತು. ಆಗ ಕೊಲ್ಹಾಪುರದ ಛತ್ರಪತಿ ಶಾಹುಮಹಾರಾಜರು ರಾಯಬಾಗದಲ್ಲಿ ಬಹಳ ವಿಶಾಲವಾದ ಭೂಪ್ರದೇಶದಲ್ಲಿ ಗಿಡಬಳ್ಳಿಗಳನ್ನು ಬೆಳೆಸಿ ಒಂದು ಕೃತಕ ಅರಣ್ಯ ವನ್ನು ಬೆಳೆಸಿದ್ದರು. ಇದರಲ್ಲಿ ಹುಲ್ಲುಗಾವಲುಗಳೂ ಇದ್ದುದರಿಂದ ಈ ಭಾಗವನ್ನು ಮುಳ್ಳುತಂತಿ ಬೇಲಿಯಿಂದ ಸಂರಕ್ಷಿಸಿ ಅಲ್ಲಿ ದನದ ಹಿಂಡನ್ನು ಬಿಟ್ಟಿದ್ದರು. ಈ ದನಗಳು ಅರ್ಧಕಾಡು ಸ್ಥಿತಿಯಲ್ಲಿದ್ದವು. ಈ ಭಾಗವನ್ನು ರಾಜಾರಾಂ ಪಾರ್ಕ್, ಶಿವಾಜಿ ಪಾರ್ಕ್ ಮತ್ತು ಶಾಹು ಪಾರ್ಕ್ ಎಂದು ಮೂರು ಭಾಗವಾಗಿ ವಿಂಗಡಿಸಿ ದ್ದರು. ಇಲ್ಲಿ ದನಗಳ ಹಿಂಡಿನ ಜೊತೆಯಲ್ಲಿ ಮೊಲ, ಕಾಡು ಹಂದಿ ಹಾಗೂ ಜಿಂಕೆಗಳ ಹಿಂಡನ್ನು ಬಿಟ್ಟು ಬೆಳೆಸಿದ್ದರು. ವರ್ಷಕ್ಕೊಂದಾವರ್ತಿ ಮಳೆಗಾಲದಲ್ಲಿ ಕೊಲ್ಹಾಪುರ ದಿಂದ ರಾಯಬಾಗಿಗೆ ವಿಹಾರಾರ್ಥವಾಗಿ ಬಂದು ಈ ಪಾರ್ಕ್‌ಗಳಲ್ಲಿ ಬೇಟೆಯಾಡು ತ್ತಿದ್ದರು. ಅಂದಿನ ಕಾಲದಲ್ಲಿ ಈ ಪಾರ್ಕುಗಳಲ್ಲಿಯ ದನಗಳ ಹಿಂಡು ಮತ್ತು ಜಿಂಕೆಗಳ ಹಿಂಡು ಗುಂಪಾಗಿ ಕೂಡಿಕೊಂಡು ಒಂದರೊಡನೊಂದು ಬೆರೆತು ಸಹಜೀವನ ಸಾಗಿಸು ತ್ತಿದ್ದವು. ಇವರ ಪರಿಣಾಮದಿಂದ ಇವುಗಳ ಪೀಳಿಗೆಯಲ್ಲಿ ಉತ್ಪರಿವರ್ತನೆಯಾಗಿ ಕೆಲವು ಈ ಸಣ್ಣ ಕರುಗಳಲ್ಲಿ ಜಿಂಕೆಯ ಸಾಮಾನ್ಯ ಲಕ್ಷಣಗಳು ಕಂಡುಬಂದುವು ಎಂಬು ದಾಗಿ ಅಲ್ಲಿಯ ಸ್ಥಳೀಕ ಪ್ರತೀತಿಯಿದೆ. ಈ ಪರಂಪರೆಯ ಸಂಗತಿಯನ್ನು ಕಡೆಗಾಣಿಸಲು ಸಾಧ್ಯವಿಲ್ಲ. ಇದರಿಂದ ಜಿಂಕೆಯಿಂದ ದನಗಳು ವಿಕಾಸಗೊಂಡಿರಲಿಕ್ಕೆ ಸಾಕು ಎಂಬು ದಕ್ಕೆ ಹೆಚ್ಚಿನ ಬೆಂಬಲ ಸಿಕ್ಕಂತಾಗುತ್ತದೆ.

ಯೂರಾಕ್ಸ್ ಕಾಡುದನ ನಮ್ಮ ದೇಶದ ಮತ್ತು ಯೂರೋಪ್ ದೇಶದ ದನಗಳ ವಿಕಾಸ ಹೆಚ್ಚು ಕಡಮೆ ಒಂದೇ ರೀತಿ ಯದ್ದಾಗಿದೆಯೆಂದು ಹೇಳಬಹುದು. ಯೂರೋಪ್ ದೇಶದ ಇಂದಿನ ದನಗಳ ಪೂರ್ವಜ ಪ್ರಾಣಿಗಳು ಯೂರಾಕ್ಸ್ ಕಾಡು ದನಗಳು. ಈ ಯೂರಾಕ್ಸ್ ಕಾಡು

ದನಗಳೇ ಆಲ್ಲಿಯ ಮೂಲ ದನಗಳು ಎಂದು ಕೊಲಂಬಿಯ **ಪೈಕಿಂಗ್ ಡೆಸ್ಕ್ ಎನ್‌ಸೈಕ್ಲೋಪಿಡಿಯಾವಲ್ಲಿ** ಉಲ್ಲೇಖಿಸಲಾಗಿದೆ. ಈ ಯೂರಾಕ್ಸ್ ಅಡವಿ ದನಗಳು ಯೂರೋಪಿಯನ್ ಬೈಸನ್ ಮತ್ತು ಯಾಕ್ ದನಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಈ ಯೂರಾಕ್ಸ್ ಕಾಡುದನಗಳು ಅಡವಿ ಪ್ರಾಣಿಗಳೊಂದಿಗೆ ಕಾಡಿನಲ್ಲಿ ಅಲೆದಾಡುತ್ತಿದ್ದವು. ಇವು 7 ಅಡಿಗಳಷ್ಟು ಎತ್ತರವಾಗಿದ್ದವು; ಅವುಗಳ ಕೊಂಬು 3 ಅಡಿ ಉದ್ದವಿದ್ದು, ಸಣ್ಣ ಆನೆಯಂತೆ ಕಾಣುತ್ತಿದ್ದವೆಂದು ಜೂಲಿಯಸ್ ಸೀಸರ್ ಬರೆದಿರುತ್ತಾನೆ. ಇವುಗಳ ಮೈಬಣ್ಣ ಕಪ್ಪು ಅಥವಾ ಬೂದಿಮಿಶ್ರಿತ ಕಪ್ಪು. ಇಂದಿಗೂ ಸಹ ಇಂಗ್ಲೆಂಡಿನ **ಕೆಲವು** ಕಾಡಿನ ಭಾಗಗಳಲ್ಲಿ ಇಂಥಾ ಕಪ್ಪು ಬಣ್ಣದ ಪ್ರಾಣಿಗಳು ಕಂಡುಬರುತ್ತಿವೆಯೆಂದು ಹೇಳಲಾಗಿದೆ. ಈ ಯೂರಾಕ್ಸ್ ಕಾಡು ದನಗಳು ಅಲ್ಲಿಯ ಹಸಿರು ಇಲೆಂಡ್‌ಹಿರನ್, ಗ್ನೂ ಮತ್ತು ಕುಂಡಾದನಗಳು, ಚಿಲಂಗ್‌ಹ್ಯಾಮ್ ದನಗಳ ಸಂಗಡ ಬಹಳವಾಗಿ ಕೂಡಿ ಬೆಳೆಯುತ್ತಿದ್ದವು. ಸ್ಕಾಟ್ಲೆಂಡ್ ಹೈಲೆಂಡ್ ದನಗಳು, ಏನೋ ಎಂಬ ಜಿಂಕೆಯ (ಆಂಟಿಲೋಪ್) ಜಾತಿಯ ಪ್ರಾಣಿಗಳು, ಜಾವ, ಬಾಲಿ ದ್ವೀಪ, ಮಲಕ್ಕಾ ಮತ್ತು ಬೋರ್ನಿಯೋ ದನಗಳು, ಕಾಡೆಮ್ಮೆ, ಕಾಡುಕೋಣ, ಕಾಡು ಆಕಳು, ಚಮರಿ ಸೀಲಗಾಯಿ, ಗೌರ, ಬೆಂಟಿಂಗ್ ಈಲಂಡ್, ಗ್ನೊ, ಕುಂಡಾ ಮತ್ತು ಯೂರೋಪಿನ ಬೋಸ್ಪರಸ್ ಜಾತಿಯ ಪ್ರಾಣಿಗಳ ಮಿಶ್ರಣ ಸಂಯೋಗದಿಂದ ಹುಟ್ಟಿದ ದನಗಳೆಂದು ತಿಳಿದುಬರುತ್ತವೆ.

ಗೌರ (ಕಾಡುಕೋಣ) ಗೌರ್ ಅಥವಾ ಇಂಡಿಯನ್ ಬೈಸನ್ ನಮ್ಮಲ್ಲಿ ಬಹು ಪುರಾತನ ಕಾಡುದನ. ಇದು ಬಹುಮಟ್ಟಿಗೆ ಯೂರೋಪ್ ದೇಶದ ಯೂರಾಕ್ಸ್ ಕಾಡುದನವನ್ನು ಹೋಲುತ್ತದೆ. ಭದ್ರಾವತಿಯ ಕಾಗದ ಕಾರ್ಖಾನೆ ತಯಾರಿಸುವ ಬಿಳಿಯ ಕಾಗದದ ಮಧ್ಯದಲ್ಲಿ ಬೆಳಕಿಗೆ ಹಿಡಿದರೆ ಕಾಣುವ ಚಿತ್ರವೇ ಈ ಪ್ರಾಣಿ. ಈ ಕಾಗದವನ್ನು ಬೈಸನ್ ಬ್ರಾಂಡ್ ಕಾಗದವೆಂದು ಕರೆಯುತ್ತಾರೆ. ಮೈಸೂರಿನಿಂದ 80 ಕಿಲೋಮೀಟರ್ ದೂರದಲ್ಲಿರುವ ಬಂಡೀಪುರದ ಅಭಯಾರಣ್ಯದಲ್ಲಿ ಈ ಕಾಡುಕೋಣಗಳನ್ನು ನೋಡಬಹುದು. ಈ ಕಾಡುಕೋಣ ಜೋವಿಡಿ ಕುಲದ ಪ್ರಾಣಿಗಳ ಪೈಕಿ ಅತಿದೊಡ್ಡ ಪ್ರಾಣಿ. 4 ಅಡಿ ಎತ್ತರ (ಇಣಿಯ ಹಿಂದೆ) 9 ಅಡಿ ಉದ್ದವಿರುತ್ತದೆ. ಸುಮಾರು 800 ಕಿಲೋ ಭಾರವಿರುತ್ತದೆ. ಮೈಬಣ್ಣ ಕಂದು, ನಾಲ್ಕೂಕಾಲುಗಳ ಮೊಳಕಾಲು ಕೆಳಗೆ ಬಿಳಿಯ ಬಣ್ಣವಿದ್ದು ಬಿಳಿಯ ಕಾಲುಚೀಲ ಹಾಕಿದಂತೆ ಕಾಣುತ್ತದೆ. ಗೊರಸುಗಳು ಕಪ್ಪಾಗಿ ಗಟ್ಟಿಯಾಗಿರುತ್ತವೆ. ಕೊಂಬು ದಪ್ಪ, ನಯ, ಸ್ವಲ್ಪ ಹಸಿರು ಬಣ್ಣದಿಂದ ಕೂಡಿರುತ್ತದೆ; ತುದಿಯು ಚೂಪಾಗಿ ಕಪ್ಪಾಗಿರುತ್ತದೆ; ಚಂದ್ರಾಕಾರವಾಗಿರುತ್ತವೆ. ಹಣೆ ಉಬ್ಬಿಕೊಂಡು, ಚಪ್ಪಟೆಯಾಗಿ ತಳಿಗೆಯ ಆಕಾರದಂತಿರುತ್ತದೆ. ಹಣೆಯ ಬಣ್ಣ ಅರಿಸಿನ

ಹಾಗೂ ಪಾಕಿ ಇದು ಸಣ್ಣ ಆನೆಯಂತೆ ಕಾಣುತ್ತದೆ. ನೆತ್ತಿಯ ಮೇಲೆ ಗುಂಗುರು ಕೂದಲುಗಳು ಬೆಳೆದುಕೊಂಡಿರುತ್ತವೆ. ಇದಕ್ಕೆ ಇಣಿ (ಹಿಳಲು) ಇಲ್ಲ; ಆದರೆ ಬೆನ್ನಿನ ಮಧ್ಯೆ ಸ್ವಲ್ಪ ಉಬ್ಬು ಇರುತ್ತದೆ. ಇದು ಊರಿನ ದನಗಳೊಂದಿಗೆ ಬೆಳೆಯುತ್ತದೆ. ಆಸ್ಸಾಮ್‌ನಲ್ಲಿ ಗಿರಿ ಜನರು ಇದರ ಮಿಶ್ರಸಂತಾನವನ್ನು ಸಾಕುತ್ತಾರೆ. ಈ ಸಂತಾನಕ್ಕೆ ಮಿಥನ್ ಅಥವಾ ವ್ಯೆಥನ್ ಎಂದು ಕರೆಯುತ್ತಾರೆ. ಇದು ಭಾರಿ ದನ. ಈ ಕೋಣಗಳು ನಮ್ಮ ದೇಶದಲ್ಲಿ ಅನೇಕ ಕಾಡುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇದರ ಸ್ಟಾಂಪನ್ನು ಸಹ ಮುದ್ರಿಸಲಾಗಿದೆ. ಹಿಂದಿನ ಕಾಲದಲ್ಲಿ ಈ ಕಾಡು ದನಗಳು, ಕಾಡೆಮ್ಮೆ, ಕಾಡುಕೋಣ, ನೀಲಗಾಯಿ, ಆಂಟಿಲೋಪ್, ಸಾರಂಗ, ಕಡವೆ, ಬೆಂಟಿಂಗ್ ಮೊದಲಾದವು ಸರ್ವಿಡಿ ಕುಟುಂಬಕ್ಕೆ ಸೇರಿದ ಜಿಂಕೆಗಳ ಹಿಂಡಿನೊಂದಿಗೆ ಬೆರೆಯುತ್ತಿದ್ದವು ಮತ್ತು ಸಹಜೀವನ ಬಾಳ್ವೆ ನಡೆಸುತ್ತಿದ್ದವು. ಈ ಸಂಯೋಗದಿಂದ ಹುಟ್ಟಿಬಂದ ಪ್ರಾಣಿಗಳು ಇಂದು ಕಾಣುವ ನಮ್ಮ ದನಗಳು ಎಂದು ಹೇಳಬಹುದು.

ನಮ್ಮ ಹಿಂದಿನ ಪಶುಪಾಲಕರು ಈ ಕಾಡುದನಗಳನ್ನು ಬಹಳ ಪ್ರಯಾಸದಿಂದ ಹಿಡಿದು ಪಳಗಿಸಿ, ಸಾಧುಗೊಳಿಸಿ, ಬೆಳೆಸಿ ತಮಗೆ ಬೇಕಾದ ಗುಣವುಳ್ಳ ದನಗಳನ್ನು ಆರಿಸಿ ಸಂತಾನಾಭಿವೃದ್ಧಿಗೊಳಿಸಿಕೊಂಡು ಬಂದಿದ್ದಾರೆ. ಇದರ ಪರಿಣಾಮದ ಫಲವೇ ನಾವು ಇಂದು ನೋಡುತ್ತಿರುವ ಉತ್ತಮ ತಳಿಯ ದನಗಳು. ಇದನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಿ ನೋಡಿದರೆ ದನಗಳು ಆಂಟಿಲೋಪ್ (ಜಿಂಕೆ ಜಾತಿ) ವಂಶದವು ಎಂದು ಹೇಳಬಹುದು.

ಪಶುಪಾಲನೆ

ಭಾರತ ಕೃಷಿ ಪ್ರಧಾನವಾದ ದೇಶ; ಹಳ್ಳಿಗಳ ನಾಡು. ರೈತನೇ ದೇಶಕ್ಕೆ ಅನ್ನದಾತ. ನೂರಕ್ಕೆ 60ರಿಂದ 70ರಷ್ಟು ಜನರ ಜೀವನೋಪಾಯವು ಕೃಷಿಯನ್ನು ಅವಲಂಬಿಸಿದೆ. ನಮ್ಮಲ್ಲಿಯ ಬಹುಜನರ ಉತ್ಪಾದನೆಯ ಪ್ರಮುಖ ಉದ್ಯೋಗವೆಂದರೆ ಒಕ್ಕಲುತನ. ಭಾರತದ ಆರ್ಥಿಕ ಪ್ರಗತಿಗೆ ಒಕ್ಕಲುತನವೇ ನೆಲಗಟ್ಟು. ವ್ಯವಸಾಯದ ಪ್ರಗತಿಯೇ ಹಳ್ಳಿಗಳ ಪ್ರಗತಿ. ಹಳ್ಳಿಗಳ ಪ್ರಗತಿಯೇ ರಾಷ್ಟ್ರದ ಪ್ರಗತಿ. ಇದನ್ನೇ 'ಕೃಷಿತೋನಾಸ್ತಿ ದುರ್ಭಿಕ್ಷಂ' ಎಂದು ನಮ್ಮ ಪೂರ್ವಜರು ಹೇಳಿರುವುದು. ಅಂದಮೇಲೆ ಮೊಟ್ಟಮೊದಲು ಕೃಷಿ ಸುಧಾರಣೆಯಾಗಬೇಕು. ಕನ್ನಡ ಕವಿ ನಾರಣಪ್ಪ ತನ್ನ ಕುಮಾರವ್ಯಾಸ ಭಾರತದಲ್ಲಿ ಹೀಗೆ ಹಾಡಿದ್ದಾನೆ.

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ।
ಪಸರಿಸುವುದಾ ಕೃಷಿಯನುದ್ಯೋ।

ಗಿಸುವ ಜನವನು ಪಾಲಿಸುವುದು ಜನಪದದ ಜನದಿ॥
ವಸುವು ತೆರಳುವುದು ವಸುವಿನಿಂಸಾ।
ಧಿಸುವದಾವುದಸಾಧ್ಯವದರಿಂ।
ಕೃಷಿವಿಹೀನನ ದೇಶವದು ದುರ್ದೇಶಕೇಳೆಂದ॥

ಒಕ್ಕಲುತನವು ಉತ್ತಮ ರೀತಿಯಿಂದ ನಡೆಯಬೇಕಾದರೆ, ಜನರು ಆರೋಗ್ಯವಂತರಾಗಿ, ದೃಢಕಾಯರಾಗಿ ಇರಬೇಕಾದರೆ, ದನಗಳು ದುಡಿಯಲು ಗಟ್ಟಿಮುಟ್ಟಾಗಿರಬೇಕು ಹಾಗೂ ಹೆಚ್ಚೆಚ್ಚು ಹಾಲುಕೊಡುವವಾಗಿರಬೇಕು. ಉಳುಮೆ, ಬಿತ್ತಿಗೆ, ಹರಗುವಿಕೆ, ಎಡೆಕುಂಟೆ ಹೊಡೆಯುವಿಕೆ, ಕೃಷಿ ಉತ್ಪತ್ತಿ, ಸಾಗಣೆ, ಮೊದಲಾದ ಎಲ್ಲ ಕೆಲಸಗಳಿಗೆ ದನಗಳು ಬೇಕು. ಭಾರತದ ವ್ಯವಸಾಯಕ್ಕೆ ಆಕಳು ಮತ್ತು ಎತ್ತುಗಳು ಆಧಾರಭೂತವಾಗಿವೆ. ಅಧಿಕ ಆಹಾರೋತ್ಪಾದನೆಯ ಕಾರ್ಯದಲ್ಲಿ ವ್ಯವಸಾಯಕ್ಕೆ ಪ್ರಮುಖ ಅಂಗವಾದ ದನಗಳ ಪಾತ್ರ ಅತಿ ಮಹತ್ವದ್ದು ಮತ್ತು ಮುಖ್ಯವಾದದ್ದು.

ಹೈನ ಉದ್ಯೋಗ ಒಕ್ಕಲುತನದ ಉದ್ಯೋಗಕ್ಕೆ ಒಂದು ಸಹಾಯಕವಾದ ಮತ್ತು ಉಪಯುಕ್ತವಾದ ಉದ್ಯೋಗ. ಹಳ್ಳಿಗಳ ಆರ್ಥಿಕ ಪ್ರಗತಿ, ಕೃಷಿಉತ್ಪಾದನೆ ಹಾಗೂ ಅವುಗಳ ಮಾರಾಟದ ಮೇಲೆ ಅವಲಂಬಿಸಿದೆ. ಹಳ್ಳಿಗಳ ಆರ್ಥಿಕಸ್ಥಿತಿ ಸುಧಾರಣೆಯಾಗದ ಹೊರತು ರಾಷ್ಟ್ರದ ಅಭಿವೃದ್ಧಿಯಾಗಲಾರದು. ದೇಶದ ಏಳಿಗೆಯು ಹಳ್ಳಿಗಳ ಆರ್ಥಿಕ ಭದ್ರತೆಯ ಮೇಲೆ ನಿಂತಿದೆ. ಆದ್ದರಿಂದ ಆರ್ಥಿಕ ಪ್ರಗತಿಯಾಗಬೇಕಾದಲ್ಲಿ ವ್ಯವಸಾಯಕ್ಕೆ ಪೋಷಕವಾಗಿರುವ ಮತ್ತು ಹೆಚ್ಚು ನೆರವು ನೀಡಬಲ್ಲ ಉಪವಂಧೆಗಳು ಅರ್ಥಾತ್ ಸಣ್ಣ ಸಣ್ಣ ಗೃಹಕೈಗಾರಿಕೆಗಳು, ಗ್ರಾಮೋದ್ಯೋಗಗಳು ಹೆಚ್ಚು ಹೆಚ್ಚು ಸಂಖ್ಯೆಗಳಲ್ಲಿ ಹಳ್ಳಿಗಳಲ್ಲಿ ಬೆಳೆದು ಬರಬೇಕು. ಇಂಥ ಪೂರಕ ಉದ್ಯೋಗಗಳಲ್ಲಿ ಹೈನುಗಾರಿಕೆ ಹಾಗೂ ಉತ್ತಮ ಹೈನತಳಿ ದನಗಳ ಅಭಿವೃದ್ಧಿ ಬಹಳಮಟ್ಟಿಗೆ ಒಕ್ಕಲುತನಕ್ಕೆ ಸಹಾಯಕವಾದ ದಂಧೆ.

ಬೇಸಾಯದ ಜೊತೆಗೆ ಹೈನವೂ ಅಭಿವೃದ್ಧಿಯಾಗಬೇಕು. ಇವೆರಡೂ ಕೂಡಿ ನಡೆಯುವ ಉದ್ಯೋಗಪದ್ಧತಿಗೆ ಮಿಶ್ರ ಬೇಸಾಯ ಎನ್ನುವರು. ಹಸಿರು ಕ್ರಾಂತಿ, ಬಿಳಿಯ ಕ್ರಾಂತಿ ಒಂದಕ್ಕೊಂದು ಪೂರಕ ಮತ್ತು ಪೋಷಕ. ನಮ್ಮ ಹಳ್ಳಿಗಳಲ್ಲಿ ಒಕ್ಕಲುತನವೇ ಜೀವನೋಪಾಯದ ಮುಖ್ಯ ಉದ್ಯೋಗ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಸಿರು, ಬಿಳಿ ಕ್ರಾಂತಿಗಳು ಜೊತೆಗೂಡಿ ಸಂಭವಿಸಿದಾಗಲೇ ಹಳ್ಳಿಗಳ ಆರ್ಥಿಕ ಜೀವನಮಟ್ಟ ಉತ್ತಮವಾಗಿ ಸುಗಮವಾಗಿ ಸಾಗುವುದು. ಜನರ ಜೀವನ ಸಮರಸವಾಗುವುದು. ಜೀವನ ತುಂಬುಮಯ

ವಾಗುವುದು. ಗೋವು ತನ್ನ ಹಾಲಿನ ಜೊತೆಗೆ ತನ್ನ ಸಂತಾನವನ್ನು ರೈತನಿಗೆ ವರದಾನವಾಗಿ ಕೊಡುತ್ತದೆ. ಎತ್ತುಗಳೇ ರೈತನ ಜೀವನ ಸಂಗಾತಿಗಳು; ಅವನ ಸುಖದುಃಖಗಳಲ್ಲಿ ಸಮಭಾಗಿಗಳು. ನಮ್ಮ ದೇಶದಲ್ಲಿ ಗೋಪುತ್ರನಿಲ್ಲದೆ ಹೊಲ ಉಳುವಂತಿಲ್ಲ. ಹೊಲ ಉಳದೆ ಭೂಮಿ ಹದವಾಗುವುದಿಲ್ಲ, ಭೂಮಿ ಹದವಿಲ್ಲದೆ ಬೀಜ ಬಿತ್ತುವಂತಿಲ್ಲ. ಹೆಚ್ಚು ಬೆಳೆ ಬರಬೇಕಾದರೆ ಭೂಮಿಗೆ ಗೊಬ್ಬರ, ಗೋಮೂತ್ರ ಎಲ್ಲವನ್ನು ಕೊಡುವ ಈ ಆಕಳು ನಮ್ಮೆಲ್ಲರಿಗೂ ಗೋಮಾತೆ. ಭಾರತದ ಅಳಿವು ಉಳಿವುಗಳು ಆಕಳಿನ ಮೇಲೆ ನಿಂತಿದೆಯೆಂದರೆ ಅತಿಶಯೋಕ್ತಿಯಲ್ಲ.

ಹೈನ ಉದ್ಯೋಗ ರೈತನ ಮುಖ್ಯ ಉದ್ಯೋಗವಾದ ಒಕ್ಕಲತನಕ್ಕೆ ಪೂರಕವೇ ಹೊರತು ಮಾರಕವಲ್ಲ. ಈ ಉದ್ಯೋಗಕ್ಕೆ ಬೇರೆ ಕೈಗಾರಿಕಾ ಉದ್ಯೋಗಗಳಿಗೆ ಬೇಕಾಗುವಂತೆ ಅಧಿಕ ಬಂಡವಾಳ ಬೇಕಾಗಿಲ್ಲ. ಹೈನುಗಾರಿಕೆ ಉದ್ಯೋಗವನ್ನು ಹಳ್ಳಿಗಳಲ್ಲಿ ಪ್ರತಿಯೊಬ್ಬ ರೈತನು ಮನೆಯಲ್ಲಿ ಮಾಡಬಹುದಾದ್ದರಿಂದ ಬೇರೆ ಕೈಗಾರಿಕೆ ಉದ್ಯೋಗಗಳಿಗೆ ಬೇಕಾಗುವಂತೆ ಕಾರ್ಮಿಕರ ವಸತಿ ಸೌಕರ್ಯಗಳ ಪ್ರಶ್ನೆ ಮತ್ತು ಇನ್ನಿತರ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಕುಟುಂಬದ ಜನರೆಲ್ಲರು ಕೈಹಚ್ಚಿ ದುಡಿಯಲು ಸಾಧ್ಯ. ಹಾಲು ಮತ್ತು ಹಾಲಿನಿಂದ ತಯಾರಿಸಿದ ಪದಾರ್ಥಗಳು ದಿನನಿತ್ಯ ಉಪಯೋಗಕ್ಕೆ ಬೇಕಾದ ವಸ್ತುಗಳಾದುದರಿಂದ ಗ್ರಾಹಕರು ಸದಾ ಇದ್ದೇ ಇರುತ್ತಾರೆ. ಒಂದು ಅಥವಾ ಎರಡು ಜೋಡಿ ಎತ್ತುಗಳನ್ನು ಸಾಕಿಕೊಂಡಿರುವ ರೈತನಿಗೆ ಒಂದು ಅಥವಾ ಎರಡು ಆಕಳು ಅಥವಾ ಎಮ್ಮೆ ಸಾಕುವುದು ಕಷ್ಟವಲ್ಲ. ಇದಕ್ಕಾಗಿಯೇ ಪ್ರತ್ಯೇಕವಾದ ಹೆಚ್ಚಿನ ಖರ್ಚು ಬರುವುದಿಲ್ಲ. ಅಲ್ಲದೆ ದನಗಳನ್ನು ಸಾಕುವುದು ಸಲಹುವುದು, ಬೆಳೆಸುವುದು ನಮ್ಮ ರೈತನಿಗೆ ಬಹಳ ಹಿಂದಿನಿಂದ ಆನುವಂಶಿಕವಾಗಿ ಸಾಗಿಬಂದ ಅನುಭವದ ಕಲೆಯಾಗಿದೆ. ಹೊಲದಲ್ಲಿ ಬೆಳೆದ ಮೇವು, ದಂಟು, ಸೊಪ್ಪು, ಹೊಟ್ಟು, ಕಾಳು, ನುಚ್ಚು, ತವಡು ಮೊದಲಾದ ನಮಗೆ ಹೆಚ್ಚು ಉಪಯೋಗವಿಲ್ಲದ, ಪೋಲಾಗಿಹೋಗುವ ಕಚ್ಚಾವಸ್ತುಗಳನ್ನು ದನಗಳು ತಿಂದು ಅದನ್ನು ಹಾಲಾಗಿ ಪರಿವರ್ತಿಸಿ ನಮಗೆ ಬೇಕಾದ ಪರಿಪೂರ್ಣ ಆಹಾರಗಳಾದ ಹಾಲು, ಮೊಸರು, ಬೆಣ್ಣೆ, ತುಪ್ಪ ಪೂರೈಸುತ್ತವೆ. ಇದು ದನಗಳಿಂದ ಮಾನವ ಜನಾಂಗಕ್ಕೆ ಆಗುವ ದೊಡ್ಡ ಉಪಕಾರ. ಆಕಳು ತಿಂದ ಮೇವಿನಲ್ಲಿ ನೂರಕ್ಕೆ 45ರಷ್ಟನ್ನು ಜೀವನಾಧಾರಣೆಗೆ ಉಪಯೋಗಿಸಿಕೊಂಡು ಉಳಿದ 55ರಷ್ಟನ್ನು ಹಾಲಾಗಿ ಪರಿವರ್ತಿಸಿ ನಮಗೆ ಅದನ್ನು ಕೊಡುತ್ತದೆ. 'ಗಾವೋ ರಕ್ಷತಿ ರಕ್ಷತಃ' ಅಂದರೆ, ಆಕಳನ್ನು ನಾವು ಸಾಕಿದರೆ ಅದು ನಮ್ಮನ್ನು ಸಾಕುತ್ತದೆ.

ಪಶುಸಂಪತ್ತು ನಮ್ಮ ದೇಶದಲ್ಲಿ ಪಶುಸಂಪತ್ತು ವಿಪುಲವಾಗಿದೆ, ಆದರೂ ಪಶುಪಾಲನೆ ದೇಶದ ಆರ್ಥಿಕ ಸ್ಥಿತಿಗೆ ಅಷ್ಟು ಸಹಾಯಕವಾಗಿಲ್ಲ. ನಮ್ಮಲ್ಲಿ ಮೇವು ಕಡಿಮೆ, ದನ ಹೆಚ್ಚು. ನಮ್ಮಲ್ಲಿ ಗೊಬ್ಬರ ಕಡಿಮೆ. ಹಾಗಿದ್ದರೆ ಸೀಮೆ ಗೊಬ್ಬರ ತರಿಸಿ ಉಪಯೋಗಿಸಿ. ನಮ್ಮ ದನಗಳು ಬಲಹೀನವಾಗಿರುವುದರಿಂದ ಬೇಸಾಯ ಅಷ್ಟು ಸರಿಯಾಗಿ ಆಗುತ್ತಿಲ್ಲ. ಹಾಗಾದರೆ ಟ್ರ್ಯಾಕ್ಟರ್ ತಂದು ಹೊಲ ಸಾಗುವಳಿ ಮಾಡಿ. ಹೆಚ್ಚಿಗೆ ದನಗಳಿವೆ ಅವುಗಳನ್ನು ತಿನ್ನಿ, ಮಾಂಸವನ್ನು ತಿನ್ನಲು ಇಷ್ಟವಿಲ್ಲದವರು ಬಿಡಲಿ, ಉಳಿದವರಾದರೂ ತಿನ್ನಲಿ, ತಿನ್ನಲು ಇಷ್ಟವಿಲ್ಲದವರು ತಮ್ಮ ಹೆಚ್ಚಿನ ದನಗಳನ್ನು ಕಟುಕನಿಗೆ ಮಾರಿಬಿಡಲಿ, ಇದರಿಂದ ಬರಡು ದನಗಳನ್ನು ಸಾಕುವ ತೊಂದರೆ ತಪ್ಪುವುದು. ಕೆಲವು ದನಗಳನ್ನು ಕೊಂದು ಸಂಖ್ಯೆ ಕಡಿಮೆ ಮಾಡಿದಲ್ಲಿ ಉಳಿದ ದನಗಳಿಗೆ ಮೇವು ಹೆಚ್ಚಾಗಿ ಸಿಗುವುದು. ಇದು ಪಾಶ್ಚಿಮಾತ್ಯ ಪದ್ಧತಿಗಳಿಗೆ ಹಾಗೂ ನಾಗರೀಕತೆಗೆ ಮಾರುಹೋದವರು ಮಾಡುವ ಹಿತೋಪದೇಶ. ಇದಕ್ಕೆ ನಮ್ಮಲ್ಲಿಯ ಪಶುಪಾಲಕರು ಮತ್ತು ರೈತರು ಸರ್ವಥಾ ಒಪ್ಪರು. ರೈತರಿಗೆ ಗೋಹತ್ಯೆ ಮಹಾ ಪಾಪ, ಗೋಮಾಂಸ ತ್ಯಾಜ್ಯ. ಆಕಳು ಅವರಿಗೆ ಪೂಜ್ಯ ಪ್ರಾಣಿ. ಉಪವಾಸ ಒಣಗಿದರೂ ಚಿಂತೆಯಿಲ್ಲ, ಹಸುವನ್ನು ಕೊಲ್ಲಲು ಯಾವ ಕಾಲಕೂ ಸಿದ್ಧರಿಲ್ಲ. ಈ ಭಾವನೆ ಪರಂಪರಾಗತವಾಗಿ ಸಾಗಿಬಂದ ಮನೋಭೂಮಿಕೆಯಾಗಿದೆ. ಭಾರತವ ಪ್ರಾಚೀನ ಸಂಸ್ಕೃತಿ ಗೋರಸ್ ಸಂಸ್ಕೃತಿ. ಗೋರಕ್ಷಣೆ ನಮ್ಮ ಧರ್ಮದ ಮೂಲ. ಭಾರತದ ಗೋಪಾಲನೆಯ ಉದ್ದೇಶ ಆರ್ಥಿಕ ಸಂಪತ್ತಿನ ಜೊತೆಗೆ ಮುಖ್ಯವಾಗಿ ಧಾರ್ಮಿಕ ಭಾವನೆಯಿಂದ ಕೂಡಿದೆ. ನಮ್ಮಲ್ಲಿ ಗೋಪಾಲನೆ ಮತ್ತು ಸಂರಕ್ಷಣೆ ಕೇವಲ ಲೌಕಿಕ ಅಷ್ಟೇ ಅಲ್ಲ, ಅವಕ್ಕೆ ಪಾರಮಾರ್ಥಿಕ ಸಂಬಂಧವೂ ಕೂಡಿರುತ್ತದೆ. ಭಾರತೀಯರು ಪ್ರಪಂಚದಲ್ಲಿ ಬದುಕಿರುವಾಗಿನ ಸುಖಕ್ಕಿಂತ ಹೆಚ್ಚಾಗಿ ಮರಣಾನಂತರ ಸಿಗಬಹುದಾದ ಸ್ವರ್ಗಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಇದಕ್ಕೆ ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಪ್ರವೃತ್ತಿಯೇ ಕಾರಣ. ಒಂದು ವೇಳೆ ಹೈನೋತ್ಪಾದನೆ ಉದ್ಯೋಗ ನಮ್ಮಲ್ಲಿ ಆರ್ಥಿಕ ದೃಷ್ಟಿಯಲ್ಲಿ ಪ್ರಯೋಜನಕಾರಿಯಾಗದಿದ್ದರೂ ಸಹ ನಮಗೆ ಆಕಳು ಪೂಜ್ಯ ಗೋಮಾತೆಯಾಗಿಯೇ ಉಳಿಯುತ್ತದೆ. ಅದರ ಪೋಷಣೆ, ರಕ್ಷಣೆ ಮತ್ತು ಸೇವೆ ನಮ್ಮ ಧಾರ್ಮಿಕ ಕರ್ತವ್ಯಗಳಾಗಿವೆ.

ದುಡಿತದ ಶಕ್ತಿ ನಮ್ಮಲ್ಲಿಯ ದನಗಳ ದುಡಿಯುವ ಶಕ್ತಿ ಅಷ್ಟು ಸಮರ್ಪಕವಾಗಿರದಿದ್ದರೂ ಸಹ ಇದು ವ್ಯವಸಾಯಕ್ಕೆ ಬೇಕಾಗುವ ಒಟ್ಟು ಶಕ್ತಿಯಲ್ಲಿ ಗಣನೀಯ ಅಂಶಹೊಂದಿದೆ. ಈ ಶಕ್ತಿ

ಹೆಚ್ಚು ಬಂಡವಾಳವಿಲ್ಲದೆ ಉತ್ಪಾದಿತವಾಗುತ್ತಿದೆ. ಇಷ್ಟು ಶಕ್ತಿಯನ್ನು ಯಾಂತ್ರಿಕ ಶಕ್ತಿಯಿಂದ ಉಪಯೋಗಿಸುವುದಾದಲ್ಲಿ ಹಲವಾರು ಲಕ್ಷ ಟ್ರ್ಯಾಕ್ಟರ್‌ಗಳು ಬೇಕಾಗುತ್ತವೆ. ಇದಕ್ಕೆ ಅಪಾರ ಹಣ, ಅಧಿಕ ಬಂಡವಾಳ ಬೇಕಾಗುತ್ತದೆ. ಅಲ್ಲದೆ ಈ ಟ್ರ್ಯಾಕ್ಟರ್‌ಗಳಿಗೆ ಆಗಾಗ್ಗೆ ದುರಸ್ತಿಗಾಗಿ ಖರ್ಚು ಬೇರೆ. ಇವನ್ನು ನಡೆಸಲು ತಾಂತ್ರಿಕ ಜ್ಞಾನ ಬೇಕು. ನಮ್ಮಲ್ಲಿಯ ಸಣ್ಣ ಹಿಡುವಳಿಯ ಬಡ ರೈತನಿಗೆ ಇದನ್ನು ಕೊಳ್ಳಲು ಮತ್ತು ನಿಭಾಯಿಸಲು ಹೇಗೆ ಸಾಧ್ಯ? ಈ ಅಸಂಖ್ಯಾತ ಟ್ರ್ಯಾಕ್ಟರುಗಳಿಗೆ ಕೋಟಿಗಟ್ಟಲೆ ರೂಪಾಯಿಗಳ ಡೀಸೆಲ್ ಎಣ್ಣೆ ಬೇಕಾಗುತ್ತದೆ. ಹೆಚ್ಚಾಗಿ ಇದನ್ನು ಪರದೇಶಗಳಿಂದ ತರಿಸಬೇಕಾಗುತ್ತದೆ. ರಾಷ್ಟ್ರಕ್ಕೆ ನಮ್ಮ ದನಗಳ ದುಡಿಮೆಯಿಂದ ವರ್ಷಕ್ಕೆ ಹಲವಾರು ಸಹಸ್ರ ಕೋಟಿ ರೂಪಾಯಿಗಳಷ್ಟು ಉತ್ಪಾದನೆಯಿದೆ. ಒಂದು ಟ್ರ್ಯಾಕ್ಟರು ಹಳ್ಳಿಯ ಅನೇಕ ಜನರು ಮಾಡುವ ಬೇಸಾಯದ ಕೆಲಸವನ್ನು ಮಾಡುವುದರಿಂದ ರೈತರು, ಕೃಷಿಕಾರ್ಮಿಕರು, ಹೊಲದಲ್ಲಿ ಕೂಲಿ ಕಂಬಳ ಮಾಡಿಕೊಂಡು ಜೀವಿಸುವ ಕೂಲಿಕಾರರುಗಳಿಗೆ ಕೆಲಸವಿಲ್ಲದಂತಾಗುತ್ತದೆ.

ನಮ್ಮಲ್ಲಿಯ ಆಕಳುಗಳು ಬಹಳ ಕಡಿಮೆ ಹಾಲು ಹಿಂಡುತ್ತವೆ, ಅವುಗಳನ್ನೆಲ್ಲ ತೆಗೆದು ಬಿಡಬೇಕು ಎಂಬ ಒಂದು ಅಭಿಪ್ರಾಯ.

ಸಗಣಿ ಗೊಬ್ಬರ ಒಕ್ಕಲುತನಕ್ಕೆ ದನಕರುಗಳಿಂದ ಉಂಟಾಗುವ ಮತ್ತೊಂದು ದೊಡ್ಡ ಸಹಾಯವೆಂದರೆ ದನಗಳ ಸಗಣಿ ಗೊಬ್ಬರ. ಇಂದು ನಮ್ಮ ದೇಶದಲ್ಲಿ ನೂರಾರು ಕೋಟಿ ರೂಪಾಯಿಗಳು ದನಗಳ ಸಗಣಿ ಗೊಬ್ಬರದಿಂದ ಸಿಗುತ್ತವೆ.

ದನಗಳ ಸಗಣಿಯಿಂದ ಶಕ್ತಿಯ ಉತ್ಪಾದನೆಯನ್ನು ಪಡೆಯಬಹುದು. ಸಗಣಿಯಿಂದ ಅನಿಲ ಉತ್ಪನ್ನವಾಗುತ್ತದೆ. ಅನಿಲದಿಂದ ಅಡಿಗೆ ಹಾಗೂ ಬೆಳಕುಗಳಿಗೆ ವ್ಯವಸ್ಥೆ ಮಾಡಿಕೊಳ್ಳಬಹುದಾಗಿದೆ, ಸಾಕಷ್ಟು ಸಗಣಿ ಪೂರೈಕೆ ಇದ್ದಲ್ಲಿ ಯಂತ್ರಚಾಲನೆಗಾಗಿಯೂ ಶಕ್ತಿಯನ್ನು ಪಡೆಯಬಹುದು. ಅನಿಲ ಉತ್ಪಾದನೆಯ ನಂತರವೂ ಸಗಣಿಯಲ್ಲಿರುವ ಗೊಬ್ಬರದ ಸತ್ವ ನಾಶವಾಗುವುದಿಲ್ಲ.

ಇಂದು ಹಳ್ಳಿಗಳಲ್ಲಿ ಸ್ವತಂತ್ರವಾಗಿ ಯಾರ ಹಂಗೂ ಇಲ್ಲದೆ, ಲೋಕದ ಪರಿವೆಯೇ ಇಲ್ಲದೆ, 'ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು' ಎಂದು ನಂಬಿ ತನ್ನ ಹೊಲಮನೆಯ ಕೆಲಸವನ್ನು ಮಾಡಿಕೊಂಡು ಬದುಕು ಸಾಗಿಸುತ್ತಿರುವ ಬಡ ರೈತ ಮುಂದೆ ಈ ಯಾಂತ್ರಿಕ ಯುಗದಲ್ಲಿ ಹೆಜ್ಜೆ ಹೆಜ್ಜೆಗೂ ಪರಾಧೀನ

ನಾಗುತ್ತಿದ್ದಾನೆ. ಇದರಿಂದಾಗಿ ಗೊಬ್ಬರಕ್ಕೆ, ನೇಗಿಲಿಗೆ, ಹಾಲು, ತುಪ್ಪ, ಬೆಣ್ಣೆಗೆ ಆಹಾರಕ್ಕೆ ಎಲ್ಲಕ್ಕೂ ಬೇರೆಯವರಿಗೆ ಕೈಯೊಡ್ಡಬೇಕಾದೀತು.

ಭಾರತೀಯನು ಯಾವ ಒಂದು ಪವಿತ್ರ ಧಾರ್ಮಿಕ ದೃಷ್ಟಿಯಿಂದ ಆಕಳನ್ನು ಪಾಲನೆ ಮಾಡುತ್ತಾ ಬಂದಿದ್ದಾನೆಯೋ ಆ ಭಾವನೆ ಪ್ರಾಚೀನ ಕಾಲದಿಂದ ಅವನಲ್ಲಿ ರಕ್ತಗತವಾಗಿ ಪರಂಪರಾಗತವಾಗಿ ಸಾಗಿ ನಡೆದುಬಂದಿದೆ. ಇಂದು ಆಕಳು ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿದೆ. ಆಕಳ ಧಾರ್ಮಿಕ ಮಹತ್ವದ ಜೊತೆಗೆ ಲೌಕಿಕ ದೃಷ್ಟಿಯಿಂದಲೂ ಅವುಗಳ ಸರ್ವಾಂಗೀಣ ಅಭಿವೃದ್ಧಿ ತಾರಕ. ಪಶುಪಾಲನೆ, ಸಂರಕ್ಷಣೆ, ಸಂವರ್ಧನೆ, ಸುಧಾರಿಸಿದ ಆಧುನಿಕ ವೈಜ್ಞಾನಿಕ ಪದ್ಧತಿಯನ್ವಯ ಆಗಬೇಕು. ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಎರಡೂ ದೃಷ್ಟಿ ಸಮನ್ವಯಗೊಳಿಸಿ ದನಗಳನ್ನು ಅಭಿವೃದ್ಧಿಗೊಳಿಸಿದಲ್ಲಿ ಬಾಳು ಬಂಗಾರವಾಗುವುದು. ಜೀವನ ಸುಖಮಯವಾಗುವುದು.

ಅಧ್ಯಾಯ 2

ಪ್ರಾಚೀನ ಭಾರತೀಯ ಗೋ ಸಂಸ್ಕೃತಿ

ಪರಮಾತ್ಮನ ಸೃಷ್ಟಿಯಲ್ಲಿ ಆಕಳು ಒಂದು ಸಾಧುಪ್ರಾಣಿ. ಪರೋಪಕಾರಿ, ಪುಣ್ಯಜೀವಿ. ಗೋಮಾತೆಗೆ ನಮ್ಮ ಹಿಂದೂ ಧರ್ಮ ಸಂಸ್ಕೃತಿ ಯಲ್ಲಿ ಒಂದು ಪವಿತ್ರಪೂಜ್ಯ ಸ್ಥಾನವಿದೆ. ವಿಶ್ವವೇ ಆಕಳನ್ನು ಗೋಮಾತೆ ಎಂದು ಪರಿಗಣಿಸಿದೆ. ವೇದ, ಪುರಾಣಗಳು, ಧರ್ಮಗ್ರಂಥಗಳು ಮತ್ತು ಸಾಹಿತ್ಯ ಎಲ್ಲವೂ ಗೋಮಹಿಮೆಯನ್ನು ಸಾರಿ ಸಾರಿ ಹರಸುತ್ತವೆ. ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳು ಆಕಳಿಂದ ಸಿದ್ಧಿಯಾಗುತ್ತವೆಯೆಂದು ಶಾಸ್ತ್ರಗಳಲ್ಲಿ ಹೇಳಲಾ ಗಿದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವು ದಾದರೆ ಧಾರ್ಮಿಕ, ಆರ್ಥಿಕ, ಸಂಸಾರಿಕ ಮತ್ತು ಆಧ್ಯಾತ್ಮಿಕ, ಎಲ್ಲ ದೃಷ್ಟಿಯಿಂದ ಆಕಳು ನಮ್ಮ ನಿತ್ಯ ಜೀವನದಲ್ಲಿ ಉಪಯುಕ್ತ ವಸ್ತು, ಇದಿಲ್ಲದೆ

ಜೀವನವು ಸುಗಮವಾಗಿ ಸಾಗಲಾರದೆಂಬುದು ಅನುಭವದ ಮಾತು.

ಆಕಳಿಂದ ಮೋಕ್ಷ ಸಿದ್ಧಿ ಕಲ್ಪವೃಕ್ಷ, ಚಿಂತಾಮಣಿ ಮತ್ತು ಕಾಮಧೇನು ಈ ಮೂರು ನಮ್ಮ ಇಷ್ಟಾರ್ಥಗಳನ್ನು ಪೂರೈಸುವುವೆಂದು ಶಾಸ್ತ್ರದಲ್ಲಿ ಹೇಳಲಾಗಿದೆ. ಇವುಗಳಲ್ಲಿ ಕಾಮಧೇನುವಿನ ಮಹತ್ವ ಎಲ್ಲಕ್ಕಿಂತಲೂ ಹೆಚ್ಚಿನದಾಗಿರುತ್ತದೆ. ಕಲ್ಪವೃಕ್ಷ ಎಂಬುದು ಒಂದು ವೃಕ್ಷಕ್ಕೆ ಮಾತ್ರ ಸೀಮಿತವಾಗಿದೆ. ಎಲ್ಲ ವೃಕ್ಷಗಳು ಕಲ್ಪವೃಕ್ಷಗಳಾಗಲು ಸಾಧ್ಯವಿಲ್ಲ. ಇದೇ ಪ್ರಕಾರ ಎಲ್ಲ ತರಹದ ಮಾಣಿಕ್ಯಗಳು ಚಿಂತಾಮಣಿಯ ಗುಣವನ್ನು ಪಡೆಯಲಾರವು. ಆದರೆ **ಎಲ್ಲ ಗೋವುಗಳು ಕಾಮಧೇನುಗಳು.** ಇದಕ್ಕಾಗಿಯೇ **'ಧೇನೂನಾಮಸ್ಮಿ ಕಾಮಧುಕ್'** ಎಂದು ಹೇಳಲಾಗಿದೆ. ಅಂದರೆ, 'ಹಾಲು ಹಿಂಡುವ ಎಲ್ಲ ಆಕಳುಗಳಲ್ಲಿ ನಾನು ಕಾಮಧೇನುವಿನ ರೂಪದಲ್ಲಿ ಇದ್ದೇ ಇದ್ದೇನೆ' ಎಂದು ಅರ್ಥ. ಗೋಸಂತಾನವೇ ಕಾಮಧೇನುವಾಗಿದೆ. ಯಾವುದೇ ಆಕಳನ್ನಾಗಲಿ ಭಕ್ತಿ, ಪ್ರೇಮಪೂರ್ವಕವಾಗಿ ಶ್ರದ್ಧೆಯಿಂದ ಸೇವೆಮಾಡಿ, ಸಾಕಿ ಸಲುಹಿದಲ್ಲಿ ಅದು ನಮ್ಮ ಭಕ್ತಿಗನುಗುಣವಾಗಿ ನಮ್ಮ ಇಚ್ಛಿತಾರ್ಥಗಳನ್ನು ಪೂರೈಸಬಲ್ಲದು. ಉದಾಹರಣೆಗಾಗಿ, ರಾಜಾದಿಲೀಪನು ನಂದಿನಿ ಎಂಬ ಆಕಳ ಸೇವೆಯಿಂದ ತನ್ನ ಇಚ್ಛಿತಾರ್ಥವನ್ನು ಪೂರೈಸಿಕೊಂಡನೆಂಬುದು ಪುರಾಣ ಪ್ರಸಿದ್ಧವಿದೆ. ಇದನ್ನೇ ಮಹಾಕವಿ ಕಾಳಿದಾಸನು ತನ್ನ ರಘುವಂಶ ಕಾವ್ಯದಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ.

ಕಲ್ಪವೃಕ್ಷ, ಚಿಂತಾಮಣಿ ಇವು ಲೌಕಿಕ(ಭೌತಿಕ)ಇಷ್ಟಾರ್ಥಗಳನ್ನು ಪೂರೈಸಬಲ್ಲವು ಮತ್ತು ಇವುಗಳನ್ನು ಸಾಧಿಸುವುದು ಎಲ್ಲರಿಗೂ ಸುಲಭಸಾಧ್ಯವಲ್ಲ. ಇವು ಸುಲಭವಾಗಿ ಸಿಗುವ ವಸ್ತುಗಳೂ ಅಲ್ಲ. ಆದರೆ ಗೋಮಾತೆಯ ಸೇವೆಯನ್ನು ಮನೆಮನೆಗಳಲ್ಲಿ ಎಲ್ಲರೂ ಮಾಡಲು ಸುಲಭಸಾಧ್ಯವೆಂಬುದು ಸರ್ವವಿದಿತವಾದ ಮಾತು. ಅಲ್ಲದೆ ಗೋಮಾತೆಯ ಸೇವೆಯಿಂದ ಕೇವಲ ಲೌಕಿಕ ಇಚ್ಛಿತಾರ್ಥಗಳಲ್ಲದೆ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯಬಹುದೆಂಬುದು ಪಂಡಿತರ ವಿಚಾರ. ಮಹಾಭಾರತವಲ್ಲಿ **ಗಾವೋ ಯಜ್ಞಸ್ಯಹಿಫಲಂ ಗೋಕ್ಷುಯಜ್ಞಾಃ ಪ್ರತಿಷ್ಠಿತಃ** ಅರ್ಥಾತ್ ಆಕಳು ಯಜ್ಞದ ಫಲವನ್ನು ಕೊಡುತ್ತದೆ ಮತ್ತು ಆದು ಯಜ್ಞ ಪ್ರತಿಷ್ಠಿತವಿದೆಯೆಂದು ಹೇಳುವುದಲ್ಲದೆ•

ಗೋಭ್ಯೋ ಹವಿಃ ಪ್ರಜಾಯೇತ ಯಜ್ಞಸಿದ್ಧಿಸತೋನಿಶಂ।
ಯಜ್ಞಾತ್ ಭವತಿ ಪರ್ಜನ್ಯಃ ಪರ್ಜನ್ಯಾತ್ ಅನ್ನಸಂಭವ।
ಅನ್ನಾತ್ ಜೀವಂತಿ ಲೋಕೇ ಅಸ್ಮಿನ್ ಪಶುಪಕ್ಷಿ ನದಾದಾಯಃ।
ತತಃ ಸ್ವಾಸ್ಥ್ಯಬತಾಪೇತೋ ಮಾನವಃ ಕರ್ಮತತ್ಪರಃ।

ಧನಂ ಭೋಗಾಂಶ್ಚ ಪುಣ್ಯಾಂತ ಸಮುಪಾರ್ಜಯತ್ ಸದಾ।
ತೈಹಿಃ ಅಬ್ಯತ್ಯ ಹರಿಂ ಸಾಕ್ಷಾತ್ ಧ್ರುವಂ ಮೋಕ್ಷಮುಪಾರ್ಚ್ಯತಿ॥

ಎಂದು ಹೇಳಲಾಗಿದೆ. ಈ ಮಾತು ಸರ್ವಕಾಲಕ್ಕೂ ಸತ್ಯವಿದೆ. ಹವಿಸ್ಸನ್ನು ಯಜ್ಞಕ್ಕೆ ಆಹುತಿ ಕೊಟ್ಟಾಗ ಯಜ್ಞ ಸಿದ್ಧಿಯಾಗುತ್ತದೆ. ಆದರೆ, ಈ ಹವಿಸ್ಸು ಎಲ್ಲಿಂದ ಬರುತ್ತದೆ? ಇದನ್ನು ಆಕಳು ಮಾತ್ರ ಕೊಡಬಲ್ಲದ್ದಾಗಿದೆ. ಆಕಳ ಹವಿಸ್ಸಿನಿಂದ ಯಜ್ಞಸಿದ್ಧಿಯಾಗುತ್ತದೆ. ಯಜ್ಞವು ಆಕಳಿಗೆ ಏನು ಕೊಡುತ್ತದೆ? ಇದಕ್ಕೆ ಉತ್ತರವಾಗಿ ಗೀತೆಯಲ್ಲಿ ಹೀಗೆ ಹೇಳಲಾಗಿದೆ. **ಯಜ್ಞಾದ್ಭವತಿ ಪರ್ಜನ್ಯಃ;** ಯಜ್ಞದಿಂದ ಮಳೆಯಾಗುತ್ತದೆ. ಭೂದೇವಿ ಮಳೆಯಿಂದ ಸಂತುಷ್ಟಳಾಗಿ ಬೆಳೆಯನ್ನು ಕೊಡುತ್ತಾಳೆ. ಬೆಳೆಯುವ ಅನ್ನ, ಅನ್ನದಿಂದ ಸಕಲ ಪ್ರಾಣಿಗಳಿಗೂ ತೃಪ್ತಿ, ಸಂತುಷ್ಟಿ, ಶಾಂತಿ ದೊರೆಯುತ್ತದೆ. **'ಅನ್ನಾದ್ ಭವಂತಿ ಭೂತಾನಿ'** ಎಂದು ಮನುಸ್ಮೃತಿಯಲ್ಲಿ ಹೇಳಲಾಗಿದೆ. ಅಥರ್ವವೇದ (ಶೌನಿಕ ಸಂಹಿತೆ 9:7: 1:25) ದಲ್ಲಿ **'ಏತದ್ ವೈ ವಿಶ್ವರೂಪಂ ಸರ್ವ ರೂಪಮ್. ಗೋ ರೂಪಮ್'** ಎಂದು ಆಕಳಿಗೆ ಬ್ರಹ್ಮಾಂಡ ಸ್ವರೂಪವನ್ನೇ ಕೊಡಲಾಗಿದೆ, ಗೋಪೂಜೆ ಎಂದರೆ, ಕೇವಲ ಒಂದು ಆಕಳ ಪೂಜೆಯಲ್ಲ; ಅದು ಸಮಸ್ತ ಬ್ರಹ್ಮಾಂಡ ಪೂಜೆ ಎಂದು ಗೋಮಹಾತ್ಮೆಯನ್ನು ಹೇಳಲಾಗಿದೆ. ಇದಕ್ಕಾಗಿಯೇ ಆಕಳನ್ನು **'ಸರ್ವದೇವಮಯಿ'** ಎಂದು ಕರೆಯಲಾಗಿದೆ.

ಮಹಾಭಾರತದಲ್ಲಿ ಯಕ್ಷ, ಯುಧಿಷ್ಠಿರನಿಗೆ **'ಅಮೃತಂಕಿಮ್'** ಎಂದು ಪ್ರಶ್ನೆ ಮಾಡಿದಾಗ ಧರ್ಮರಾಜನು **'ಗವಾಮೃತಂ'**; ಆಕಳ ಹಾಲೇ ಅಮೃತ ಎಂದು ಒಂದೇ ಮಾತಿನಲ್ಲಿ ಗೋಮಹಿಮೆಯನ್ನು ಹೇಳಿರುತ್ತಾನೆ. ಕನ್ನಡ ಕವಿ ನಾರಣಪ್ಪ ತನ್ನ ಕುಮಾರವ್ಯಾಸ ಭಾರತದಲ್ಲಿ ಯಕ್ಷನು ಧರ್ಮರಾಯನಿಗೆ **'ಮರ್ತ್ಯರಿಗೆ ಮಾತೆಯುದಾರು'** ಎಂದು ಪ್ರಶ್ನಿಸಲು ಅದಕ್ಕೆ ಧರ್ಮರಾಯನು **'ಮಾತಾ ರೂಪುಗೋವುಗಳಿದು'** ಎಂದು ಗೋವೇ ತಾಯಿಗೆ ಸಮಾನ ಎಂದು ಹೇಳಿರುತ್ತಾನೆ. ಗೀತೆಯಲ್ಲಿಯೂ ಸಹ ಇದನ್ನೇ ಶ್ರೀಕೃಷ್ಣ ಪರಮಾತ್ಮನು **'ಗಾವೋವಿಶ್ವಸ್ಯ ಮಾತರಃ। ಮಾತರಃ ಸರ್ವಭೂತಾನಾಂ ಗಾವಃ ಸರ್ವ ಸುಖಪ್ರದಾಃ॥** ಆಕಳೇ ವಿಶ್ವಕ್ಕೆ ಮಾತೆಯ ಸಮಾನ, ಗೋಮಾತೆಯಿಂದಲೇ ಸರ್ವಸುಖ ಪ್ರಾಪ್ತಿ ಎಂದು ಆಕಳ ಮಹಿಮೆಯನ್ನು ಕೊಂಡಾಡಿದ್ದಾನೆ.

ಅಕ್ಬರಬಾದಶಹನು **'ಪುತ್ರರಲ್ಲಿ ಯಾರ ಪುತ್ರ ಶ್ರೇಷ್ಠ'** ಎಂದು ಕೇಳಿದನು. ಅದಕ್ಕೆ ಬೀರಬಲ್ಲನು **ಪುತ್ರರಲ್ಲಿ ಗೋಮಾತೆಯ ಪುತ್ರನೇ ಶ್ರೇಷ್ಠನು** ಎಂದು

ಹೇಳಿದನು. ಯಾಕೆಂದರೆ, ಅವನಿಲ್ಲದೆ ನಮ್ಮ ವ್ಯವಸಾಯ ಸಾಧ್ಯವಿಲ್ಲ, ಹೈನೋತ್ಪಾದನೆಗೆ ಅವನೇ ಮುಖ್ಯ ಕಾರಣನು. ನಮ್ಮ ಕೃಷಿ ಪ್ರಧಾನವಾದ ದೇಶವು ಉಚ್ಛ್ರಾಯ ಸ್ಥಿತಿಯಲ್ಲಿರಲು ವೃಷಭದೇವನೆ ಮುಖ್ಯ ಕಾರಣ. ಆದ್ದರಿಂದ ಈ ಗೋಪುತ್ರನೇ ಅತಿ ಶ್ರೇಷ್ಠಪುತ್ರನೆಂದು ಗೋಮಹಾತ್ಮೆಯನ್ನು ವರ್ಣಿಸಿರುತ್ತಾನೆ. ಹೀಗೆ ಸರ್ವ ವಿಧದಲ್ಲಿ ಆಕಳು ನಮ್ಮ ಜೀವನ ಸಂಗಾತಿಯಾಗಿ, ನಮ್ಮ ಜೀವನವು ಸುಖಮಯ ವಾಗುವಂತೆ ಮಾಡಿ ಪಾವನಳಾಗಿರುತ್ತಾಳೆ. ಪಾಶ್ಚಿಮಾತ್ಯರು ಸಹ ಗೋಮಹಿಮೆಯನ್ನು ಕಂಡುಕೊಂಡು, ಗೋವನ್ನು ಮಾನವ ಕುಲಕ್ಕೆ ತಾಯಿ ಸಮಾನ ಎಂದು ಹೇಳಿರುತ್ತಾರೆ.

ಗೋವು, ಹಿಂದೂ ಸಮಾಜ ಮತ್ತು ಧರ್ಮದ ಮೂಲ ಪ್ರಾಚೀನ ಭಾರತದ ವೇದಕಾಲದ ಋಷ್ಯಾಶ್ರಮಗಳು ದೊಡ್ಡ ವಿದ್ಯಾಪೀಠವಾಗಿದ್ದವು. ಋಷಿಗಳು ಬ್ರಹ್ಮಜ್ಞಾನಿಗಳು. ಆಶ್ರಮಗಳಲ್ಲಿ ಯಜ್ಞಯಾಗಾದಿ ಸತ್ಕರ್ಮಗಳನ್ನು ಮಾಡುತ್ತ, ವೇದಾಧ್ಯಯನ ನಡೆಸುತ್ತಿದ್ದರು. ವೇದಗಳು ಭಾರತದ ಜ್ಞಾನನಿಧಿಗಳು. ಋಷಿಗಳ ಆಶ್ರಮಗಳಿಗೆ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ನಾನಾ ದೇಶಗಳಿಂದ ಬರುತ್ತಿದ್ದರು. ಯಾಜ್ಞವಲ್ಕ್ಯಋಷಿಯ ಆಶ್ರಮದಲ್ಲಿ 1000 ವಿದ್ಯಾರ್ಥಿಗಳಿದ್ದರು. ಈ ಎಲ್ಲ ಆಶ್ರಮ ನಿವಾಸಿಗಳಿಗೆ ಊಟ, ವಸತಿ, ಉಪಚಾರ ಮತ್ತು ಎಲ್ಲ ವ್ಯವಸ್ಥೆಗಳನ್ನು ಆಶ್ರಮದಲ್ಲಿಯೇ ಪೂರೈಸಲಾಗುತ್ತಿತ್ತು. ಆಶ್ರಮಗಳು ವಿದ್ಯಾಧಾಮಗಳಾಗಿದ್ದವು. ಹೀಗಾಗಿ ಆಶ್ರಮ ನಿವಾಸಿಗಳಿಗೆ ಮತ್ತು ಯಜ್ಞಯಾಗಾದಿ ಕರ್ಮಗಳಿಗೆ ಹವ್ಯಕವ್ಯಾದಿಗಳಿಗೆ ಬೇಕಾಗುವ ಹಾಲು, ತುಪ್ಪ, ಬೆಣ್ಣೆ ಮತ್ತು ಮೊಸರಿಗಾಗಿ ಋಷಿಗಳ ಆಶ್ರಮದಲ್ಲಿ ದೊಡ್ಡ ದೊಡ್ಡ ಗೋಶಾಲೆಗಳಿದ್ದವು. ಗೌತಮ ಮುನಿಯ ಆಶ್ರಮದಲ್ಲಿ 1000 ಆಕಳ ಹಿಂಡಿನ ಗೋಶಾಲೆ ಇತ್ತು. ಇದೇ ಪ್ರಕಾರ ವಸಿಷ್ಠ, ಅತ್ರಿ, ಕಾಶ್ಯಪ, ಭಾರದ್ವಾಜರ ಆಶ್ರಮಗಳಲ್ಲಿ ದೊಡ್ಡ ಗೋಶಾಲೆಗಳಿದ್ದವು. ಆಯಾ ಗೋಶಾಲೆಯಲ್ಲಿದ್ದವರು ಆಯಾ ಗೋತ್ರಕ್ಕೆ ಸೇರಿದವರಾದರು. ಗೋತ್ರ ಮತ್ತು ಗೌಕ್ಷೇತಿ ಎಂಬ ಶಬ್ದಗಳ ಅರ್ಥ ಸಾಮುದಾಯಿಕ ದನಗಳ ದಡ್ಡಿ ಮತ್ತು ಸಾರ್ವಜನಿಕ ಗೋಮಾಳ ಎಂದು ಡಾ। ದಾಸ್ ಹೇಳಿರುತ್ತಾರೆ. ರಾಜಮಹಾರಾಜರು ಮತ್ತು ಶ್ರೀಮಂತರು ಈ ಗುರುಕುಲಗಳಿಗಾಗಿ ಆಕಳುಗಳ ಹಿಂಡನ್ನು ಮತ್ತು ಭೂಮಿಯನ್ನು ದಾನವಾಗಿ ಕೊಡುತ್ತಿದ್ದರು. ಈ ಗೋಶಾಲೆಗಳ ವಿಚಾರಣೆ, ದನಗಳನ್ನು ಕಾಯುವುದು, ಮೇಯಿಸುವುದು, ಕಟ್ಟುವುದು, ಹಾಲುಹಿಂಡುವುದೇ ಮೊದಲಾದ ಈ ಎಲ್ಲ ಕಾರ್ಯಗಳು ಆಶ್ರಮದ ಶಿಷ್ಯವರ್ಗದವರ ಒಂದು ಮುಖ್ಯ ಕರ್ತವ್ಯವಾಗಿತ್ತು. ಹೀಗಾಗಿ ಈ ಶಿಷ್ಯವೃಂದವು ಪಶುಪಾಲನೆ, ಸಂವರ್ಧನೆ ಮತ್ತು ಹೈನೋತ್ಪಾದನೆಯಲ್ಲಿ ಪರಿಣತೆಯನ್ನು ಪಡೆದಿತ್ತು.[7]

ಹಿಂದಿನ ಕಾಲದಲ್ಲಿ ನಳಂದ, ತಕ್ಷಶಿಲ, ವಲ್ಲಭಿ ವಿದ್ಯಾಲಯಗಳು ಪ್ರಖ್ಯಾತ ವಿದ್ಯಾಲಯಗಳಾಗಿದ್ದವು. ಈ ಮಹಾವಿದ್ಯಾಲಯಗಳಲ್ಲಿ ಪಶುವೈದ್ಯಕೀಯ ಶಾಸ್ತ್ರವನ್ನು ಹೇಳಿಕೊಡಲಾಗುತ್ತಿತ್ತು. ಸಾಲಿಹೋತ್ರಿ ಎಂಬುವನು ಪಶುಶಾಸ್ತ್ರದಲ್ಲಿ ನೈಪುಣ್ಯತೆಯನ್ನು ಪಡೆದಿದ್ದನು ಎಂದು ಹೇಳಲಾಗಿದೆ. ಅವನು ಬರೆದಿರುವ ಪಶುಶಾಸ್ತ್ರ ಪುಸ್ತಕ ಪ್ರಖ್ಯಾತವಾಗಿತ್ತು. ಕ್ಷಾನಕ್ ಎಂಬವನು ಅರಬ್ಬೀ ಭಾಷೆಯಲ್ಲಿ '**ಕಿತಾಬಲ್ ಬೈತರಹ–ಸಾವೋತ್ರಿ**' ಎಂಬ ಶಿರೋನಾಮೆಯಲ್ಲಿ ಬರೆದಿರುವ ಪಶುವಿಜ್ಞಾನ ಪುಸ್ತಕ ಸಾಲಿಹೋತ್ರಿ ಬರೆದ ಪುಸ್ತಕದ ಆಧಾರದ ಮೇಲೆ ಬರೆಯಲಾಗಿದೆ ಎಂದು ಹೇಳಲಾಗಿದೆ.

ನಿಸ್ವಾರ್ಥ ಗೋಸೇವೆಯೇ ಜ್ಞಾನ ಸಂಪಾದನೆಗೆ ಸಾಧನ? ಈ ಬಗ್ಗೆ ಛಂದೋಗ್ಯ ಉಪನಿಷತ್ತಿನಲ್ಲಿ ಗೋಸೇವೆಯಿಂದ ಸತ್ಯಕಾಮ ಜಾಬಾಲಕನಿಗೆ ಜ್ಞಾನಪ್ರಾಪ್ತಿಯಾಯಿತೆಂದು ಹೇಳಲಾಗಿದೆ, ಇದನ್ನು ಛಂದೋಗ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ. ಆ ಕಥೆ ಇಂತಿದೆ:

ಸತ್ಯಕಾಮ ಜಾಬಾಲಕನ ಜ್ಞಾನಜಿಜ್ಞಾಸೆಯನ್ನು ಪರೀಕ್ಷಿಸುವುದರ ಸಲುವಾಗಿ ಅವನ ಗುರುಗಳಾದ ಗೌತಮರು 400 ಬಡಕಲಾದ ಆಕಳುಗಳನ್ನು ಮತ್ತು ಒಂದು ಹೋರಿಯನ್ನು ಕೊಟ್ಟು ಈ 400 ಆಕಳುಗಳ ಹಿಂಡು ಎಂದಿಗೆ ಒಂದು ಸಾವಿರ ಆಕಳುಗಳ ಹಿಂಡು ಆಗುತ್ತದೆಯೋ ಅಂದು ಮರಳಿ ಆಶ್ರಮಕ್ಕೆ ಬರಬೇಕು; ಅಲ್ಲಿಯವರೆಗೆ ಹಿಂಡಿನೊಡನೆ ದೂರ ಪ್ರದೇಶದಲ್ಲಿರಬೇಕು ಎಂದು ಆಜ್ಞಾಪಿಸಿದರು. ಗುರುಗಳ ಅಪ್ಪಣೆಯ ಪ್ರಕಾರ ಸತ್ಯಕಾಮ ಜಾಬಾಲಕನು ಕೈಯಲ್ಲಿ ಒಂದು ಕೋಲು ಹೆಗಲ ಮೇಲೆ ಹಗ್ಗ ಮತ್ತು ಕಮಂಡಲವನ್ನು ಹಿಡಿದುಕೊಂಡು, 400 ಆಕಳುಗಳ ಹಿಂಡನ್ನು ಹೊಡೆದುಕೊಂಡು ಆಶ್ರಮದಿಂದ ಹೊರಬಿದ್ದನು. ದಾರಿ ನಡೆಯುತ್ತಾ ಅಲ್ಲಲ್ಲಿ ದನಗಳನ್ನು ಮೇಯಿಸುತ್ತಾ ನೀರು ಕುಡಿಸುತ್ತಾ ನಡೆದಿರುವಾಗ ದೂರದಲ್ಲಿ ವಿಶಾಲವಾದ ರಸಭರಿತವಾದ ಹಸಿರು ಹುಲ್ಲಿನಿಂದ ಮತ್ತು ತಿಳಿನೀರಿನ ಸರೋವರದಿಂದ ಕೂಡಿದ ಒಂದು ಮನೋಹರವಾದ ಪ್ರದೇಶವು ಕಾಣಿಸಿತು. ಸತ್ಯಕಾಮ ಜಾಬಾಲಕನು ಆನಂದಿತನಾಗಿ ದನಗಳ ಹಿಂಡಿನೊಂದಿಗೆ ಆ ಪ್ರದೇಶಕ್ಕೆ ಬಂದು ಅಲ್ಲಿಯೇ ಬೀಡುಬಿಟ್ಟು ನಿಂತನು. ಆ ಪ್ರದೇಶವು ಒಂದು ಸಣ್ಣ ಗುರುಕುಲ ಆಶ್ರಮದಂತೆ ಕಾಣುತ್ತಿತ್ತು. ಇಲ್ಲಿ ಪ್ರತಿದಿನ ಗೌತಮರ ಆಶ್ರಮದಲ್ಲಿ ನಡೆಯುತ್ತಿದ್ದಂತೆ ಬೆಳಿಗ್ಗೆ ವೇದಮಂತ್ರಗಳ ಪಠಣವನ್ನು ವಿಧಿಪೂರ್ವಕವಾಗಿ ನೆರವೇರಿಸುತ್ತಾ, ದನಗಳನ್ನು ಮೇಯಿಸುತ್ತಾ, ಕಾಲಕಾಲಕ್ಕೆ ನೀರು ಕುಡಿಸುತ್ತಾ ತನ್ನ ದಿನಚರ್ಯೆಯನ್ನು ಸಾಗಿಸಿದ್ದನು. ಋಷಿಗಳ ಪತ್ನಿಯು ದನಗಳನ್ನು ಯಾವ ಮಮತೆ ಮತ್ತು ಪ್ರೀತಿಯಿಂದ

ಸಾಕಿ ಸಲಹುತ್ತಿದ್ದಳೋ ಅದೇ ಮಮತೆ ಪ್ರೀತಿಯಿಂದ ಸತ್ಯಕಾಮ ಜಾಬಾಲಕನು ಅವುಗಳನ್ನು ಪಾಲನೆ ಮಾಡುತ್ತಿದ್ದನು. ಗುರುಗಳು ಕೊಟ್ಟ ಅಗ್ನಿಹೋತ್ರಿಯನ್ನು ರಾಕ್ಷಸರಿಂದ ರಕ್ಷಿಸುವುದು, ಆಕಳುಗಳನ್ನು ಕ್ರೂರ ಮೃಗಗಳಿಂದ ಕಾಪಾಡುವುದು, ಅವನ ನಿತ್ಯದ ಕೆಲಸಗಳಾಗಿದ್ದವು. ಈ ಪ್ರಕಾರ ಸತ್ಯಕಾಮ ಜಾಬಾಲಕನು ಗುರುವಿನ ಆಜ್ಞೆಯನ್ನು ಚಾಚೂ ತಪ್ಪದೆ ಪಾಲಿಸುತ್ತಾ ತನ್ನ ನಿತ್ಯಕರ್ಮಗಳಲ್ಲಿ ಯಾವ ಲೋಪವೂ ಬಾರದಂತೆ ಅತಿ ದಕ್ಷತೆಯಿಂದ ಪೂರೈಸುತ್ತಿದ್ದನು. ಹೀಗೆ ಎಷ್ಟೋ ವರ್ಷಗಳು ಕಳೆದುಹೋದವು. ಸತ್ಯಕಾಮನ ದೃಷ್ಟಿಯಲ್ಲಿ ಈ ಆಕಳುಗಳು ಕೇವಲ ನಾಲ್ಕು ಕಾಲುಗಳ ಮತ್ತು ನಾಲ್ಕು ಮೊಲೆಗಳ ಪಶುಗಳಾಗಿರಲಿಲ್ಲ. ಅವುಗಳಲ್ಲಿ ಇಡೀ ವೇದವನ್ನೇ ಅವನು ಕಾಣುತ್ತಿದ್ದನು. ಆಕಳುಗಳೊಂದಿಗೆ ಕೂಡಿ ಅವುಗಳ ಜೊತೆ ಆಟವಾಡುವುದು, ಮಾತನಾಡಿಸುವುದರಲ್ಲಿಯೇ ಅವನಿಗೆ ಆತ್ಮಸಂತೋಷವಾಗುತ್ತಿತ್ತು. ಈ ಆನಂದಸಾಗರದಲ್ಲಿ ತಲ್ಲೀನನಾಗಿ ತನ್ನನ್ನು ತಾನೇ ಮರೆತುಬಿಡುತ್ತಿದ್ದನು. ಹೀಗಿರುವಾಗ ಒಂದು ದಿವಸ ಸತ್ಯಕಾಮನಿಗೆ ಒಂದು ಎತ್ತಿನ ವಾಣಿ ಕೇಳಿಸಿತು. ಅದೇನೆಂದರೆ: 'ಎಲೈ ಸತ್ಯಕಾಮನೇ ನಮ್ಮನ್ನು ನಮ್ಮ ಆಚಾರ್ಯರ ಆಶ್ರಮಕ್ಕೆ ಕರೆದುಕೊಂಡು ಹೋಗು. ಈಗ ನೀನು ಜ್ಞಾನದ ಅಧಿಕಾರಿಯಾಗಿರುತ್ತಿ' ಎಂದು ಹೇಳಿ ಅವನಿಗೆ ಜ್ಞಾನೋಪದೇಶ ಮಾಡಿತು. ಈ ಪ್ರಕಾರ ಆಕಳ ಸೇವೆಯಿಂದ ಸತ್ಯಕಾಮನಿಗೆ ಜ್ಞಾನ ಪ್ರಾಪ್ತಿಯಾಯಿತು.

ಬೃಹದಾರಣ್ಯ ಹಾಗೂ ಛಾಂದೋಗ್ಯ ಉಪನಿಷತ್ತಿನಲ್ಲಿ ಮತ್ತೊಂದು ಕಥೆಯಲ್ಲಿ ಹೀಗೆ ಹೇಳಲಾಗಿದೆ : ವಿದೇಹ ರಾಜನಾದ ಜನಕಮಹಾರಾಜನು ತತ್ವಜ್ಞಾನಿಗಳ ಒಂದು ಬೃಹತ್ ಸಭೆಯನ್ನು ಕರೆದಿದ್ದನು. ಆ ಸಭೆಗೆ ಕುರು, ಪಾಂಚಾಲ ಮತ್ತು ಬೇರೆ ಬೇರೆ ಪ್ರದೇಶಗಳಿಂದ ವಿದ್ವಾಂಸರು ಬಂದಿದ್ದರು. ಇತಿಹಾಸದಲ್ಲಿಯೇ ಇದು ಮೊದಲನೆಯ ಸಭೆ ಎಂದು ಹೇಳಲಾಗಿದೆ. ಈ ಸಭೆಯಲ್ಲಿ ರಾಜನು ಶ್ರೇಷ್ಠನಾದ ಮಹಾತತ್ವಜ್ಞಾನಿಗೆ ಇಂದಿನ **ನೋಬಲ್** ಬಹುಮಾನಕ್ಕೆ ಸರಿಸಮಾನವಾದ ಪಾರಿತೋಷಕವನ್ನು ಕೊಡುವುದಾಗಿ ಘೋಷಿಸಿದನು. ಆಗ ಯಾಜ್ಞವಲ್ಕ್ಯ ಮುನಿಗಳು ಸಭೆಯಲ್ಲಿ ಎದ್ದು ಮುಂದೆ ಬಂದು ತಾವೇ ಶ್ರೇಷ್ಠ ವಿದ್ವಾಂಸರು, ಪಾರಿತೋಷಕವು ತಮಗೆ ಸಲ್ಲತಕ್ಕದೆಂದು ಹೇಳಿದರು. ಇದರ ಪ್ರತಿಭಟನಾರ್ಥವಾಗಿ ಬೇರೆ ಪಂಡಿತರು ಎದ್ದುನಿಂತರು. ಅವರಲ್ಲಿ ಶ್ರೇಷ್ಠ ವಿದುಷಿ ಬ್ರಹ್ಮವಾದಿನೀ ಗಾರ್ಗಿವಾಚತ್ನವಿಯೂ ಇದ್ದಳು. ಅವಳು ತುಂಬಿದ ಸಭೆಯಲ್ಲಿ ಯಾಜ್ಞವಲ್ಕ್ಯರ ಪಾಂಡಿತ್ಯಜ್ಞಾನದ ಪರೀಕ್ಷೆಯನ್ನು ಅತ್ಯಂತ ಮಾರ್ಮಿಕವಾದ ಮತ್ತು ಜಟಿಲವಾದ ಒಂದು ಪ್ರಶ್ನೆಯಿಂದ ನಿರ್ಧರಿಸುವಂತೆ ಮಾಡಿದಳು.

ಅದೇನೆಂದರೆ ಯಾಜ್ಞವಲ್ಕ್ಯಮುನಿ ಶ್ರೇಷ್ಠರೇ, ನೀವು ಯಾವ ಪ್ರಕಾರ ದೇವರನ್ನು ಕಾಣುತ್ತೀರೋ ಅದೇ ಪ್ರಕಾರ ನಾಯಿ ಮತ್ತು ಕುದುರೆಯನ್ನು ಕಾಣುವಿರಾ ಎಂದು ಕೇಳಿ ಯಾಜ್ಞವಲ್ಕ್ಯರ ದಯಾಗುಣ ಪ್ರದರ್ಶನಕ್ಕೆ ಅವಕಾಶಮಾಡಿಕೊಟ್ಟಳು. 'ದಯೆಯೇ ಧರ್ಮದ ಮೂಲ' 'ದಯೆ ಇಲ್ಲದ ಧರ್ಮಯಾವುದಯ್ಯಾ' ಎಂಬ ತತ್ವವನ್ನು ಪ್ರತಿಪಾದಿಸಿದಂತಾದುದರಿಂದ ಸಭೆಯು ಯಾಜ್ಞವಲ್ಕ್ಯರ ತತ್ವಜ್ಞಾನದ ಶ್ರೇಷ್ಠತೆಯನ್ನು ಮಾನ್ಯಮಾಡಿತು. ಜನಕಮಹಾರಾಜನು ತಾನು ಘೋಷಿಸಿದಂತೆ ಯಾಜ್ಞವಲ್ಕ್ಯರಿಗೆ ಪಾರಿತೋಷಕವನ್ನು ಕೊಟ್ಟು ಸನ್ಮಾನಿಸಿದನು. ಈ ಕಾಣಿಕೆಯಲ್ಲಿ ಸ್ವಲ್ಪಭಾಗವನ್ನು ಮಾತ್ರ ಹಣದ ರೂಪದಲ್ಲಿಯೂ, ಉಳಿದ ಹೆಚ್ಚಿನ ಭಾಗವನ್ನು ಒಂದು ಸಾವಿರ ಆಕಳುಗಳ ರೂಪದಲ್ಲಿಯೂ ಕೊಟ್ಟನು, ಇದನ್ನು ಕೊಡುವಾಗ ಪ್ರತಿಯೊಂದು ಆಕಳಿನ ಕೊಂಬಿನ ಮೇಲೆ 5 ಬಂಗಾರದ ಪಾದುಕೆಗಳ ಗುರುತುಗಳನ್ನಿಟ್ಟುಕೊಟ್ಟನು. ಈ ಪ್ರಕಾರ ಯಾಜ್ಞವಲ್ಕ್ಯರಿಗೆ 10000 ಸ್ವರ್ಣಖಂಡಗಳು ದೊರೆತವು. ಯಾಜ್ಞವಲ್ಕ್ಯ ಋಷಿಗಳು ತಮ್ಮ ಶಿಷ್ಯವೃಂದಕ್ಕೆ ಎಲ್ಲ ದನಗಳನ್ನು ಆಶ್ರಮಕ್ಕೆ ಹೊಡೆದುಕೊಂಡುಹೋಗಲು ತಿಳಿಸಿದರು. ಎಲ್ಲ ದನಗಳು ಆಶ್ರಮಕ್ಕೆ ಬಂದು ಮುಟ್ಟಿದವು. ಅಲ್ಲಿ ಅವುಗಳ ಪಾಲನೆ ಮತ್ತು ಸಂರಕ್ಷಣೆಯ ಸಲುವಾಗಿ ಎಲ್ಲ ಸಿದ್ಧತೆಗಳು ಪರಿಪೂರ್ಣವಾಗಿದ್ದವು.

ಇಂಥ ಗೋಶಾಲೆಗಳ ಜೊತೆಗೆ ಯೋಗ್ಯವಾದ ಸಾಕಷ್ಟು ಒಕ್ಕಲುತನಕ್ಕೆ ಬೇಕಾದ ಜಮೀನುಗಳ ಅವಶ್ಯಕತೆ ಈ ಋಷಿಗಳ ಆಶ್ರಮಕ್ಕೆ ಅಗತ್ಯವಾದದ್ದು ಎಂದು ತಿಳಿದೇ ಜನಕ ಮಹಾರಾಜನು ಪಾರಿತೋಷಕವನ್ನು ವಸ್ತುವಿನ ರೂಪದಲ್ಲಿ ಅಂದರೆ ದನಗಳ ಹಿಂಡನ್ನು ಕಾಣಿಕೆಯಾಗಿ ಕೊಟ್ಟಿದ್ದು. ಏಕೆಂದರೆ ಅಂದು ಪ್ರತಿಯೊಂದು ಗುರುಕುಲವು ತನ್ನ ಆಹಾರ ಹಾಗೂ ಸಂಚಾಲನೆಗಾಗಿ ಸಾಕಷ್ಟು ಜಮೀನು ಮತ್ತು ದನಗಳ ಹಿಂಡಿನ ಮೇಲೆಯೇ ಪೂರ್ಣವಾಗಿ ಅವಲಂಬಿಸಿದ್ದವು. ಅಂದಿನ ಕಾಲದಲ್ಲಿ ಗುರುಕುಲಗಳು ನಿರ್ವಹಿಸುವ ಕಾರ್ಯಗಳಲ್ಲಿ ಆಕಳುಗಳು ಬಹಳ ಮುಖ್ಯ ಪಾತ್ರ ವಹಿಸಿದ್ದವು. ಹೀಗೆ ಅಂದಿನ ಭೌತಿಕ ಮತ್ತು ಆಧ್ಯಾತ್ಮಿಕ ಕಲ್ಯಾಣಕ್ಕೆ ಆಕಳೇ ಮುಖ್ಯ ಸಾಧನವಾಗಿತ್ತು. ಈ ಪ್ರಕಾರ ದನಗಳು ಮತ್ತು ಜನರ ನಿಕಟಬಾಂಧವ್ಯ ಭಾರತದಲ್ಲಿ ಸಾವಿರಾರು ವರ್ಷಗಳಿಂದ ನಡೆದು ಬಂದಿದೆ. ದನಗಳು ಜನಗಳ ನಿತ್ಯಜೀವನದಲ್ಲಿ ಸಮರಸವಾಗಿ ಬೆರೆತಿವೆ. ಇಂದಿನ ಸಮಾಜದ ಉತ್ಪತ್ತಿ, ಬೆಳವಣಿಗೆ, ಸಾಮುದಾಯಿಕ ಜೀವನ, ಸಂಸ್ಕೃತಿ, ನಾಗರೀಕತೆಗಳಿಗೆ ಆಕಳೇ ಅಡಿಗಲ್ಲು.

ಗೋಸೇವೆಯಿಂದ ಪಾಪವಿಮುಕ್ತಿ [7]

ಗೋವಿಗೆ ಗ್ರಾಸ ಕೊಟ್ಟು ಅದನ್ನು ಕಾಪಾಡಿದಲ್ಲಿ ಸ್ವರ್ಗ ಪ್ರಾಪ್ತಿಯಾಗುತ್ತದೆ. ಯಾರ ಮನೆಯಲ್ಲಿ ಆಕಳು ದುಃಖಿತವಾಗಿರುತ್ತದೆಯೋ ಅಂಥ ಮನುಷ್ಯರಿಗೆ ನರಕವಾಸವಾಗುತ್ತದೆ. ಇದನ್ನು ಯದ್ಗೃಹೇ **ದುಃಖಿತಾಗಾವಃ ಸಯಾತಿ ನರಕಾನರಃ** ಎಂದು ಶಾಸ್ತ್ರದಲ್ಲಿ ಹೇಳಲಾಗಿದೆ. ಭೂಮಿಯೆಂಬ ಬಾಡಿಗೆ ಮನೆಗೆ ಬಂದದ್ದಕ್ಕೆ ಪ್ರತಿಯಾಗಿ ದೇವರಿಗೆ ನಾವು ಸಲ್ಲಿಸಬೇಕಾದ ಬಾಡಿಗೆಯೇ ಮೂಕಪ್ರಾಣಿಗಳ ಸೇವೆ. ಇದೇ ಹಿಂದೂ ಧರ್ಮದ ಸಂಸ್ಕೃತಿ. ಒಬ್ಬ ಮನುಷ್ಯನು ತನ್ನ ಜೀವನದ ಉದ್ದಕ್ಕೂ ಪಾಪವನ್ನು ಮಾಡಿದ್ದ. ಒಂದು ದಿವಸ ಅವನು ರಸ್ತೆಯಲ್ಲಿ ಹೋಗುತ್ತಿದ್ದಾಗ ರಸ್ತೆಯ ಪಕ್ಕದಲ್ಲಿ ಬಿದ್ದುಕೊಂಡು ನರಳುತ್ತಿದ್ದ ಆಕಳನ್ನು ನೋಡಿದ. ಆಕಳಿಗೆ ಒಂದು ದೊಡ್ಡ ಗಾಯವಾಗಿತ್ತು. ಆ ವ್ರಣದಲ್ಲಿ ಹುಳುಬಿದ್ದು ಕೊಳೆತು ಕೆಟ್ಟವಾಸನೆಯಿಂದ ಅದು ಸಾಯುವ ಸ್ಥಿತಿಯಲ್ಲಿತ್ತು. ಇದನ್ನು ಕಂಡು ಈ ಪಾಪಿ ಮನುಷ್ಯನಿಗೆ ಕನಿಕರ ಹುಟ್ಟಿ, ಗಾಯದಲ್ಲಿದ್ದ ಹುಳುಗಳನ್ನು ತನ್ನ ಬೆರಳುಗಳಿಂದ ಹಿಡಿದು ತೆಗೆದು ಹಾಕಿ, ಗಾಯವನ್ನು ಪ್ರತಿದಿನ ತೊಳೆದು, ಎಣ್ಣೆಹಚ್ಚಿ ಉಪಚಾರ ಮಾಡಿದ. ಕ್ರಮೇಣ ಹುಣ್ಣು ವಾಸಿಯಾಗಿ, ಆಕಳು ಎದ್ದು ತಿರುಗಾಡಲು ಪ್ರಾರಂಭಿಸಿತು. ಆಕಳಿಗೆ ಗಾಯ ವಾಸಿಯಾಯಿತು. ಈ ಪಾಪಿ ಮನುಷ್ಯ ಸತ್ತ ಮೇಲೆ ಯಮದೂತರು ಬಂದು ಇವನನ್ನು ಯಮಪುರಿಗೆ ಕೊಂಡುಹೋದರು. ಅಲ್ಲಿ ಅವನು ತನ್ನ ಪಾಪಕರ್ಮಗಳಿಗೆ ಪಶ್ಚಾತ್ತಾಪವಾಗಿ ಬಹಳ ದುಃಖದಿಂದ ಮತ್ತು ಹಸಿವಿನಿಂದ ನರಳುತ್ತಾ ಬಿದ್ದಿದ್ದ. ಯಮರಾಜನಿಗೆ ಇವನು ತನ್ನ ಜೀವನ ಪರ್ಯಂತ ಎಲ್ಲ ಪಾಪದ ಕೆಲಸಗಳನ್ನು ಮಾಡಿದ್ದು ಕಂಡುಬಂತು. ಆದರೆ ಆಕಳ ಹುಣ್ಣಿನಲ್ಲಿ ಬಿದ್ದ ಹುಳಗಳನ್ನು ತೆಗೆದು, ಗಾಯವನ್ನು ತೊಳೆದು ಅದಕ್ಕೆ ಎಣ್ಣೆಹಚ್ಚಿ ವಾಸಿಮಾಡಿ ಆ ಮೂಲಕ ಪ್ರಾಣಿಯ ವಿಷಯದಲ್ಲಿ ದಯಾಪರನಾಗಿದ್ದ ಒಂದೇ ಒಂದು ಸತ್ಕಾರ್ಯವೂ ತಿಳಿದುಬಂತು. ಈ ಮೂಕ ಪ್ರಾಣಿಗೆ ಮಾಡಿದ ಸತ್ಕಾರ್ಯಕ್ಕಾಗಿ ಯಮರಾಜನು ಸಂತುಷ್ಟನಾಗಿ ಅವನಿಗೆ ಹುಳು ತೆಗೆದ ಬೆರಳನ್ನು ಬಾಯಿಯಲ್ಲಿಟ್ಟುಕೊಂಡು ಚೀಪಲು ಹೇಳಿದ. ಯಮರಾಜನ ಆದೇಶದ ಪ್ರಕಾರ ಪಾಪಿಯು ತನ್ನ ಬಾಯಿಯಲ್ಲಿ ಬೆರಳನ್ನಿಟ್ಟುಕೊಂಡು ಚೀಪಲು ಪ್ರಾರಂಭಿಸಿದನು. ಕೂಡಲೇ ಆ ಬೆರಳಿನಿಂದ ರಸಭರಿತವಾದ ಹಾಲು ಧಾರಾಕಾರವಾಗಿ ಸುರಿಯಲು ಪ್ರಾರಂಭವಾಯಿತು. ಅದನ್ನು ಕುಡಿದು ಸಂತುಷ್ಟನಾಗಿ ಹಸಿವಿನಿಂದ ಮಾತ್ರವಲ್ಲದೆ ಎಲ್ಲ ಪಾಪಗಳಿಂದಲೂ ಮುಕ್ತನಾದನು.

'ಕಪಿಲ' ಆಕಳ ದರ್ಶನದಿಂದ ಶಾಪವಿಮೋಚನೆ ಪ್ರಾಚೀನ ಕಾಲದ ಮಾತು.ಸುಪ್ರಭ ಎಂಬ ರಾಜನಿದ್ದ. ಇವನಿಗೆ ಬೇಟೆಯಾಡುವುದರಲ್ಲಿ ಬಹಳ ಆಸಕ್ತಿ. ಒಂದು ದಿವಸ ಬೇಟೆಗಾಗಿ ಕಾಡಿಗೆ ಹೋಗಿದ್ದ. ದೂರದಲ್ಲಿ ಒಂದು ಜಿಂಕೆ ತನ್ನ ಮರಿಗೆ ಹಾಲು ಕುಡಿಸುತ್ತಾ ನಿಂತಿದ್ದು ಕಂಡುಬಂತು. ಕೂಡಲೇ ರಾಜನು ಬೇಟೆಯಾಡುವ ಆವೇಶದಲ್ಲಿ ಬಾಣದಿಂದ ಜಿಂಕೆಗೆ ಗುರಿ ಇಟ್ಟು ಹೊಡೆದನು. ಆ ಬಾಣವು ಜಿಂಕೆಗೆ ತಗುಲಿತು. ಸಾಯುವುದಕ್ಕೆ ಮುಂಚೆ ಆ ಜಿಂಕೆಯು 'ಎಲೈ ರಾಜನೇ ನೀನು ಮಹಾ ಪಾಪಕಾರ್ಯವನ್ನು ಮಾಡಿರುವೆ; ಇದು ಕ್ಷಾತ್ರ ಧರ್ಮವಲ್ಲ. ನಾನು ಮರಿಯೊಂದಿಗೆ ಸಾಯುತ್ತೇನೆ. ನೀನು ಅಧರ್ಮದಿಂದ ನನ್ನನ್ನು ನಾಶಮಾಡಿರುವ ಕಾರಣ ಕ್ರೂರ ಸಿಂಹನಾಗಿ ಹುಟ್ಟು' ಎಂದು ಶಾಪಕೊಟ್ಟಿತು. ಆಗ ರಾಜನು ತನ್ನ ಈ ದುಡುಕಿನ ಕಾರ್ಯಕ್ಕೆ ಪಶ್ಚಾತ್ತಾಪಪಟ್ಟು, ಜಿಂಕೆಯ ಹತ್ತಿರ ಹೋಗಿ ಕೈಮುಗಿದು ತನ್ನನ್ನು ಶಾಪದಿಂದ ವಿಮೋಚನೆ ಮಾಡಲು ಪ್ರಾರ್ಥಿಸಿದನು. ದಯಾಮಯಿಯಾದ ಆ ಜಿಂಕೆಯು 'ನಿನಗೆ ಕಪಿಲ ಎಂಬ ಆಕಳು ಭೇಟಿಯಾಗುವುದು. ಆಗ ನಿನಗೂ ಅದಕ್ಕೂ ಮಾತುಕಥೆ ನಡೆಯುವುದು. ಆಗ ನಿನಗೆ ಶಾಪ ವಿಮೋಚನೆಯಾಗುವುದು' ಎಂದು ಹೇಳಿ ಪ್ರಾಣ ಬಿಟ್ಟಿತು.

ಕೂಡಲೇ ರಾಜನು ಒಂದು ಕ್ರೂರಸಿಂಹದ ರೂಪ ಧರಿಸಿದನು. ಆಗ ರಾಜನು ಕ್ರೂರಸಿಂಹನಾಗಿ ಎಲ್ಲ ಪ್ರಾಣಿಗಳಿಗೆ ತೊಂದರೆ ಕೊಡುತ್ತ ಕಾಡಿನಲ್ಲಿ ವಾಸವಾಗಿದ್ದನು. ಒಂದು ದಿವಸ ಅಡವಿಗೆ ಮೇಯಲು ಹೋಗಿದ್ದ ಆಕಳ ಹಿಂಡಿನಿಂದ ಒಂದು ಕಪಿಲ ಎಂಬ ಆಕಳು ತಪ್ಪಿಸಿಕೊಂಡು ಕಾಡಿನಲ್ಲಿ ಒಂಟಿಯಾಗಿ ಬಂದಿತ್ತು. ಅದನ್ನು ಕಂಡು ಈ ಸಿಂಹವು ಬಂದು ಅಡ್ಡಗಟ್ಟಿ ನಿಲ್ಲಿಸಿ 'ಈಗ ನಿನ್ನನ್ನು ಕೊಂದು ತಿನ್ನುತ್ತೇನೆ' ಎಂದು ಹೇಳಿತು. ಅದಕ್ಕೆ ಆ ಕಪಿಲ ಆಕಳು ಸಿಂಹನಿಗೆ ಹೇಳಿತು 'ಮನೆಯಲ್ಲಿ ಕರುವನ್ನು ಬಿಟ್ಟು ಬಂದಿದ್ದೇನೆ. ಮನೆಗೆ ಹೋಗಿ ಕರುವಿಗೆ ಹಾಲುಣಿಸಿ ನಂತರ ಬರುತ್ತೇನೆ. ಆಮೇಲೆ ನೀನು ನನ್ನನ್ನು ಸಂತೋಷವಾಗಿ ತಿನ್ನಬಹುದು' ಎಂದು ಹೇಳಿತು. ಅದಕ್ಕೆ ಸಿಂಹವು ಒಪ್ಪಿ ಅದನ್ನು ಬಿಟ್ಟುಕೊಟ್ಟಿತು. ಕಪಿಲ ಹಸುವು ಮನೆಗೆ ತೆರಳಿ ಕರುವಿಗೆ ಹಾಲು ಕುಡಿಸಿ ಮತ್ತೆ ಕಾಡಿಗೆ ಹೋಗಲು ಸಿದ್ಧವಾಯಿತು. ಆಗ ಕರುವು ಬಹಳ ಶೋಕದಿಂದ ತಾಯಿಯ ಅಗಲುವಿಕೆಗಾಗಿ ಅಳಲು ಪ್ರಾರಂಭಿಸಿತು. ಅದಕ್ಕೆ ಕಪಿಲ ಆಕಳು ಹೇಳಿತು 'ಮಗುವೇ ನನಗಾಗಿ ಶೋಕಿಸದಿರು; ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಈ ದೇಹ ನಶ್ವರ; ಒಂದಲ್ಲ ಒಂದು ದಿವಸ ಇದು ನಾಶವಾಗಲೇಬೇಕು. ಈ ಸಂಸಾರದಲ್ಲಿ (ಪ್ರಪಂಚದಲ್ಲಿ) ನಮ್ಮ ಸಮಾಗಮ, ಕೂಡುವಿಕೆ, ಎಲ್ಲವೂ ಕ್ಷಣಕಾಲ. ಯಾತ್ರಿಕರು ಒಂದು ಮರದ ನೆರಳಿನಲ್ಲಿ ಒಂದು ದಿವಸ ಕೂಡಿದ್ದು ಮತ್ತೆ ಮರುದಿವಸ

ಎದ್ದು ಒಬ್ಬರನ್ನೊಬ್ಬರು ಅಗಲಿ, ತಮ್ಮ ತಮ್ಮ ದಿಕ್ಕಿಗೆ ಹೋಗುವಂತೆ, ನಾವು ಸಹಾ ಎಲ್ಲ ಬಂಧುಬಳಗ, ಹೊಲಮನೆ ಎಲ್ಲ ಬಿಟ್ಟು, ಹುಟ್ಟಿದಾಗ ಬಂದಂತೆ ಹೋಗಲೇ ಬೇಕು, ಇದು ಯಾರಿಗೂ ತಪ್ಪಿದ್ದಲ್ಲ. ಇದಕ್ಕೆ ಶೋಕ ಮಾಡಬಾರದು' ಎಂದು ಸಮಾಧಾನ ಹೇಳಿ ಪುನಃ ಕಾಡಿಗೆ ಬಂದು ಸಿಂಹನಿಗೆ ತನ್ನನ್ನು ಕೊಂದು ತಿನ್ನಲು ಹೇಳಿತು.

ಕಪಿಲ ಆಕಳಿನ ಸತ್ಯಕ್ಕೆ ಮೆಚ್ಚಿ ಸಿಂಹವು ಅದನ್ನು ಕೊಲ್ಲದೆ ಬಿಟ್ಟಿತು. ಕೂಡಲೇ ಸಿಂಹಕ್ಕೆ ಕಪಿಲ ಆಕಳ ನಿಜ ದರ್ಶನದಿಂದ ತನ್ನ ಹಿಂದಿನ ಶಾಪವಿಮೋಚನೆಯಾಗಿ ಮತ್ತೆ ಪೂರ್ವದ ರಾಜನ ನಿಜರೂಪ ಬಂದಿತು. ಆಗ ರಾಜನು ಹೇಳಿದ: 'ಎಲೈ ಗೋಮಾತಾ, ನಿನ್ನ ಕೃಪೆಯಿಂದ ನಾನು ಆ ಜಿಂಕೆಯ ಶಾಪದಿಂದ ಬಿಡುಗಡೆಯಾದೆ. ನಿನಗೆ ಪ್ರಿಯವಾದ ಸೇವೆಯನ್ನು ಹೇಗೆ ಸಲ್ಲಿಸಲಿ, ಬೇಗ ಹೇಳು ಎಂದು ಪ್ರಾರ್ಥಿಸಿದನು. ಅದಕ್ಕೆ ಕಪಿಲ ಆಕಳು 'ನೀನು ಶಾಪದಿಂದ ಮುಕ್ತನಾದೆ. ನಾನೂ ಸಹ ಆದರಿಂದ ಕೃತಕೃತ್ಯಳಾದೆ; ಈಗ ನನಗೆ ಬಹಳ ನೀರಡಿಕೆಯಾಗಿದೆ. ಬೇಗ ಎಲ್ಲಿಂದಲಾದರೂ ನೀರು ತಂದುಕೊಡು' ಎಂದು ಹೇಳಿತು. ಕೂಡಲೇ ರಾಜನು ತನ್ನ ಬಾಣ ಪ್ರಯೋಗದಿಂದ ಭೂಮಿಯನ್ನು ಸೀಳಿ ಅಲ್ಲಿ ಉತ್ತಮವಾದ ತಂಪಾದ ನೀರನ್ನು ಹೊರಡಿಸಿದನು. ಆಗ ಧರ್ಮನು ಪ್ರತ್ಯಕ್ಷನಾಗಿ 'ನಿನ್ನ ಸತ್ಯಕ್ಕೆ ಮೆಚ್ಚಿದೆನು. ತ್ರಿಲೋಕದಲ್ಲಿ ನಿನ್ನನ್ನು ಸರಿಗಟ್ಟುವವರು ಯಾರೂ ಇಲ್ಲ' ಎಂದು ಹೇಳಿ ಮಾಯವಾದನು. ನಂತರ ಕಪಿಲ ಆಕಳು ನೀರು ಕುಡಿದು ತೃಪ್ತಿ ಹೊಂದಿತು. ಅದಕ್ಕೆ ಸ್ವರ್ಗ ಲಭಿಸಿತು. **ಈ ತೀರ್ಥವೇ ಕಪಿಲ ತೀರ್ಥ**ವೆಂದು ಪ್ರಖ್ಯಾತವಾಯಿತು. ಇದು ಸ್ಕಾಂದ ಪುರಾಣದಲ್ಲಿ ಗೋಮಹಿಮೆಯ ಬಗೆಗಿನ ಉಲ್ಲೇಖ. 'ಆಕಳನ್ನು ರಕ್ಷಿಸಿದವನು ಧರ್ಮ, ಗುರುಹತ್ಯದ ಪಾಪದಿಂದ ಮುಕ್ತನಾಗುತ್ತಾನೆ ಮತ್ತು ಒಂದು ಗೋವಿನ ಪ್ರಾಣವನ್ನು ಉಳಿಸುವ ಸಂದರ್ಭದಲ್ಲಿ ಅಸತ್ಯವನ್ನು ಹೇಳಿದಾಗ್ಯೂ ಸಹ ಪಾಪ ಬರುವುದಿಲ್ಲ. ಏಕೆಂದರೆ ಅಸತ್ಯ ಹೇಳುವುದರಿಂದ ಆಗುವ ಪಾಪಕ್ಕಿಂತಲೂ ಆಕಳನ್ನು ಸಂರಕ್ಷಿಸಿದ ಪುಣ್ಯ ದೊಡ್ಡದು' ಎಂದು ಮನು ಹೇಳಿರುತ್ತಾನೆ.[8]

ನೋಯುತ್ತಿರುವ ಆಕಳನ್ನು ತಡೆದು ನಿಲ್ಲಿಸಿದಲ್ಲಿ ನರಕ ದರ್ಶನವಾಗುವುದು

ಹಿಂದಿನ ಕಾಲದ ಒಂದು ವಿಷಯ. ಜನಕಮಹಾ ರಾಜನು ತನ್ನ ಯೋಗ ಬಲದಿಂದ ಜಡ ಶರೀರವನ್ನು ತ್ಯಜಿಸಿ, ಸೂಕ್ಷ್ಮಜೀವ ತಾಳಿ ಒಂದು ಸುಂದರವಾದ ವಿಮಾನದಲ್ಲಿ ಕುಳಿತು ಸ್ವರ್ಗಲೋಕಕ್ಕೆ ಹೊರಟಿದ್ದ. ದಾರಿಯಲ್ಲಿ ವಿಮಾನವು ಯಮಪುರಿಯ ಪಟ್ಟಣದ ಹತ್ತಿರ ಹಾರಿ ಹೋಗುತ್ತಿದ್ದಾಗ, ನರಕವಾಸಿಗಳು ಆರ್ತ ಸ್ವರದಿಂದ 'ಪುಣ್ಯಾತ್ಮನಾದ ರಾಜನೇ

ನೀನು ಇಲ್ಲಿಂದ ಮುಂದೆ ಹೋಗಬೇಡ. ನಿನ್ನ ಶರೀರದ ಮೇಲೆ ಹಾದು ಬೀಸಿ ಬರುತ್ತಿರುವ ಗಾಳಿಯ ಸ್ಪರ್ಶದಿಂದ ನಮ್ಮ ಯಾತನೆಗಳು ಬಹಳ ಕಡಮೆಯಾದವು. ಕಾರಣ ನೀನು ಇಲ್ಲೇ ಇರು ಬಾ' ಎಂದು ಕೂಗುವುದು ಕೇಳಿಸಿತು. ಇದನ್ನು ಕೇಳಿ ದಯಾಮಯಿಯಾದ ಜನಕರಾಜನು ನಾನು ಇಲ್ಲೇ ಇರುವುದರಿಂದ ಇವರಿಗೆ ಸುಖವಾಗುವುದಾದರೆ, ನಾನೇಕೆ ಮುಂದೆ ಹೋಗಬೇಕು' ಎಂದು ಅಲ್ಲಿಯೇ ನಿಂತನು. ಅಷ್ಟರಲ್ಲಿ ಅಲ್ಲಿಗೆ ಯಮರಾಜನು ಬಂದು ಜನಕಮಹಾರಾಜನಿಗೆ 'ಇಲ್ಲಿರುವವರೆಲ್ಲ ಪಾಪ ಮಾಡಿದವರು; ಅವರವರ ಪಾಪ ಕರ್ಮಗಳಿಗನುಸಾರವಾಗಿ ಶಿಕ್ಷೆಯನ್ನು ಭೋಗಿಸುತ್ತಿದ್ದಾರೆ. ಭಗವಾನ್ ಮಹಾದಯಾಳು ವಿದ್ವಾನ್ ನೀನು ಈ ದಾರಿಯಲ್ಲಿ ಹಾದುಹೋಗುವುದರಿಂದ ನಿನ್ನ ಪುಣ್ಯ ದರ್ಶನದಿಂದ ಇವರ ಪಾಪಗಳು ಕಡಮೆಯಾಗಲೆಂದು ದೇವರು ನಿನ್ನನ್ನು ಈ ದಾರಿಯಲ್ಲಿ ಹಾದು ಹೋಗುವ ಹಾಗೆ ಪ್ರೇರಣೆ ಮಾಡಿದ್ದಾನೆ. ಈಗ ನಿನ್ನ ಪುಣ್ಯದ ಕೆಲಸವಾಯಿತು. ಇನ್ನು ಮುಂದೆ ನೀನು ಹೋಗಬಹುದು' ಎಂದು ತಿಳಿಸಿದನು. ಆಗ ಜನಕಮಹಾರಾಜನು 'ನಾನು ಪುಣ್ಯವಂತ, ಧಾರ್ಮಿಕ ಅಂದ ಮೇಲೆ ನನಗೇಕೆ ಈಗ ಪಾಪಿ ನರಕ ದರ್ಶನವಾಯಿತು' ಎಂದು ಕೇಳಿದನು. ಅದಕ್ಕೆ ಯಮರಾಜನು ಹೇಳಿದ 'ಜನಕಮಹಾರಾಜನೇ ನಿನ್ನ ಜೀವನ ಪುಣ್ಯದಿಂದ ತುಂಬಿದೆ. ಇದು ಸತ್ಯ; ಆದರೆ ನೀನು ತಿಳಿಯದೆ ಒಂದು ಸಣ್ಣ ತಪ್ಪು ಮಾಡಿದ್ದೀಯೆ. ಅದೇನೆಂದರೆ:

> ಏಕದಾತ್ರಚರಂತಿಗಾಂ ವಾಯಮಾನ ವೈಭವಾನ್।
> ತೇನ ಪಾಪವಿಪಾಕೇತನ ನಿರಯದ್ವಾರ ದರ್ಶನಮ್॥

ನೀನು ಮೇಯುತ್ತಿದ್ದ ಒಂದು ಆಕಳನ್ನು ತಿಳಿಯದೆ ಅದು ಮೇಯದಂತೆ ತಡೆದು ನಿಲ್ಲಿಸಿದ್ದೆ. ಆ ಪಾಪಕ್ಕಾಗಿ ನಿನಗೆ ಈಗ ನರಕದರ್ಶನವಾಯಿತು. ನೀನು ಆ ಪಾಪದಿಂದ ಈಗ ವಿಮುಕ್ತನಾಗಿರುವೆ. ಇನ್ನು ಮುಂದೆ ಸ್ವರ್ಗಕ್ಕೆ ಪ್ರಯಾಣ ಮಾಡು' ಎಂದು ಹೇಳಿದನು. ಜನಕಮಹಾರಾಜನು ಯಮರಾಜನಿಗೆ ನಮಸ್ಕರಿಸಿ ಅಲ್ಲಿಂದ ಮುಂದೆ ಸ್ವರ್ಗದತ್ತ ಪ್ರಯಾಣ ಮಾಡಿದನು.[9] ಕೇವಲ ಒಂದು ಮೇಯುತ್ತಿದ್ದ ಆಕಳನ್ನು ತಡೆದು ನಿಲ್ಲಿಸಿದ್ದಕ್ಕಾಗಿ ಈ ಪಾಪವೆಂದಮೇಲೆ ಆ ಮೂಕ ಪ್ರಾಣಿಗೆ ಇಂದು ಹೊಟ್ಟೆ ತುಂಬ ಆಹಾರ ಹಾಕದೆ, ಹಸಿವಿನಿಂದ, ನಿರ್ದಯದಿಂದ ಬಳಲಿಸುವುದು ಇನ್ನೆಷ್ಟು ಪಾಪ ಎಂಬುದನ್ನು ಧಾರ್ಮಿಕ ಪ್ರವೃತ್ತಿಯವರಾದ ಭಾರತೀಯರು ತಿಳಿಯಬೇಕಾಗಿದೆ.

ಆಕಳಿಂದ ಕಲಿಯಬೇಕಾದ ನೀತಿ ಒಂದು ದಿವಸ ಒಂದು ಹಂದಿ ರಾಜನನ್ನು ನೋಡಲು ಹೋಯಿತು. ಆಗ ರಾಜ ಗೋಪೂಜೆ ನಡೆಸುತಿದ್ದ. ಅದನ್ನು ಕಂಡು ಹಂದಿಯು ರಾಜನಿಗೆ 'ಓ ರಾಜನೇ ನೀನು

ಆಕಳನ್ನು ಪೂಜೆ ಮಾಡುತ್ತಿದ್ದಿಯೇ, ನನ್ನನ್ನು ಯಾವಾಗ ಪೂಜಿಸುತ್ತಿಯಾ? ಎಂದು ಕೇಳಿತು: ಅದಕ್ಕೆ ರಾಜನು ಸಿಟ್ಟಾಗಿ ಹಂದಿಗೆ ಇಲ್ಲಿಂದ ಹೊರಟು ಹೋಗು, ಇಲ್ಲವಾದರೆ ನಿನ್ನನ್ನು ಕೊಂದು ಹಾಕುತ್ತೇನೆ' ಎಂದು ಹೇಳಿದನು. ಇದನ್ನು ಕೇಳಿ ಹಂದಿಯು ರಾಜನಿಗೆ ಎಲೈ ರಾಜನೇ ನಿನಗೆ ನನ್ನ ಮಾಂಸ ಸೇರುತ್ತದೆ. ನಿನಗೆ ನಾನು ರುಚಿಕರ ಮಾಂಸ ಕೊಡುತ್ತೇನೆ. ಆದಾಗ್ಯೂ ನೀನು ನನ್ನನ್ನು ಪೂಜಿಸದೆ ಆಕಳನ್ನು ಪೂಜಿಸುತ್ತೀಯೆ, ಇದು ಹೀಗೇಕೆ? ಎಂದು ಕೇಳಿತು. ಅದಕ್ಕೆ ರಾಜನು ಎಲೈ ಮೂರ್ಖ ಹಂದಿಯೇ ನೀನು ಸತ್ತ ಮೇಲೆ ನನಗೆ ನಿನ್ನ ಮಾಂಸವನ್ನು ಪೂರೈಸುತ್ತೀಯೆ,ಆದರೆ; ಈ ಧಾರ್ಮಿಕ ಆಕಳು ತಾನು ಜೀವಂತವಿರುವಾಗಲೇ ದಿನ ಬೆಳಗ್ಗೆ, ಸಾಯಂಕಾಲ ಹಾಲು ಕೊಡುತ್ತದೆ. ಆದ್ದರಿಂದ, ಆಕಳು ನಿಃಸ್ವಾರ್ಥ ಮತ್ತು ದಾನದ ಪ್ರತೀಕ. ಅದಕ್ಕಾಗಿ ನಾನು ಆಕಳನ್ನು ಪೂಜಿಸುತ್ತೇನೆ ಎಂದು ಹೇಳಿದನು.

ನೀವು ಜೀವಂತವಿರುವಾಗಲೇ ದಾನವನ್ನು ಮಾಡಿ, ಉಯಿಲು ಬರೆದಿಟ್ಟು ಸಾಯಬೇಡಿ, ಏಕೆಂದರೆ ನೀವು ಸತ್ತಮೇಲೆ ನಿಮ್ಮ ಆಸ್ತಿಯು ಒಂದು ದಾನಸಂಸ್ಥೆಗೆ ಸೇರುತ್ತದೆ. ಇದು ನಿಮ್ಮ ಸ್ವಾರ್ಥ ಅಪೇಕ್ಷೆ, ಇದ್ದದ್ದನ್ನು ನೀವು ಉಪಯೋಗ ಮಾಡುವುದಿಲ್ಲ. ನೀವು ಮಾಡಬೇಕಾದದ್ದನ್ನು ಜೀವಂತವಿರುವಾಗಲೇ ಆಕಳಂತೆ ಮಾಡಿ ಕೃತಕೃತ್ಯರಾಗಿರಿ ಎಂಬುದೇ ಇದರ ಭಾವನೆ. ಇದೇ ನಮ್ಮ ಭಾರತದ ಸಂಸ್ಕೃತಿ, ಧಾರ್ಮಿಕ ಭಾವನೆ.

ಪ್ರಾಚೀನ ಕಾಲದ ಗೋ ಸಂಪತ್ತು ಪ್ರಾಚೀನ ಭಾರತದಲ್ಲಿ ಋಷಿಗಳು ರಾಜಮಹಾರಾಜರು ಮತ್ತು ಶ್ರೀಮಂತರು ದೊಡ್ಡ ದೊಡ್ಡ ಗೋಶಾಲೆಗಳನ್ನಿಟ್ಟಿದ್ದರು. ಅಂದಿನ ಕಾಲದಲ್ಲಿ ಗೋಧನವೇ ಅವರ ಸಂಪತ್ತಾಗಿತ್ತು. ಆಕಳುಗಳೇ ಅಂದಿನ ಸಂಪತ್ತಿನ ಅಳತೆಗೋಲಾಗಿದ್ದವು. 'ಯಾರ ಹತ್ತಿರ 9 ಲಕ್ಷ ಆಕಳು ಇವೆಯೋ ಅವರನ್ನು '**ನಂದ**' ಎಂದೂ 5 ಲಕ್ಷವಿದ್ದವನನು '**ಉಪನಂದ**' ಎಂದೂ 10 ಲಕ್ಷ ಇದ್ದವರನ್ನು '**ವೃಕ್ಷಭಾನು**' ಎಂದೂ ಒಂದ ಕೋಟಿ ಇದ್ದವರನ್ನು '**ನಂದರಾಜ**' ಎಂದೂ 25 ಲಕ್ಷ ಇದ್ದವರನ್ನು '**ವೃಕ್ಷಭಾನವರ**' ಎಂದೂ ಕರೆಯುತ್ತಿದ್ದರು.[10] ಇದರಿಂದ ಅಂದಿನ ಪಶು ಸಂಪತ್ತಿನ ವೈಭವನ್ನು ತಿಳಿಯಬಹುದು.

ಅಧಿಕ ಗೋ ಸಂಪತ್ತಿನ ಒಡೆಯನಾದ ಮತ್ತು ಶ್ರೀಕೃಷ್ಣನ ಸಾಕು ತಂದೆಯಾ ನಂದ ರಾಜನ ಹತ್ತಿರ 9 ಲಕ್ಷ ದನಗಳ ಹಿಂಡು ಇತ್ತೆಂದು ಹೇಳಲಾಗಿದೆ,

ಗೌತಮ ಸಿದ್ಧಾರ್ಥನ ಕಾಲದಲ್ಲಿ ಧನಂಜಯನೆಂಬ ಬಹು ದೊಡ್ಡ ಶ್ರೀಮ

ನಿದ್ದನು. ಅವನು ತನ್ನ ಮಗಳ ವರದಕ್ಷಿಣೆಯ ಸಲುವಾಗಿ 500 ವ್ಯಾಗನ್ ಬಂಗಾರದ ಸವರನ್ನುಗಳನ್ನು 500 ಗಾಡಿ ಬಂಗಾರ, ಬೆಳ್ಳಿ ಮತ್ತು ತಾಮ್ರದ ಪಾತ್ರೆಗಳನ್ನಲ್ಲದೆ ದಾನರೂಪವಾಗಿ (ವಂತಿಗೆಯಾಗಿ) ಆಕಳ ಹಿಂಡನ್ನು ಕೊಟ್ಟನು. ಈ ಹಿಂಡು 6 ಮೈಲು ಉದ್ದದಷ್ಟು 140 ಮೊಳ ಅಗಲದಷ್ಟಿತ್ತೆಂದು ಹೇಳಲಾಗಿದೆ.

ಶ್ರೀ ಮಹಾವೀರನ ಅನುಯಾಯಿಗಳಾದ-ರಾಜಗೃಹಯ ಮಹಾಶಾಲಕನ ಹತ್ತಿರ 80,000 ಹಿಂಡು ಆಕಳುಗಳು, ಕಾಶಿಯ ಚುಲನಪಿತನ ಹತ್ತಿರ 8 ಲಕ್ಷಾವಧಿಯಷ್ಟು ಹಿಂಡು ಆಕಳುಗಳು; ಚಂಪಾದ ಕಾಮದೇವ, ಕಾಶಿಯ ಸೂರದೇವ, ಕೆಂಪಲಿಯ ಕುಂಡಕೋಕಿಲ ಮತ್ತು ಅವಲಂಬಿಯಾದ ಚುಲಶಾಟಕ, ಈ ಪ್ರತಿಯೊಬ್ಬರ ಹತ್ತಿರ 60,000 ದನಗಳಿದ್ದವು. ವಾನಿಯಾಗ್ರಂಥ ಶ್ರವಸತಿಯುಂದನಿಪಿತ, ಮತ್ತು ಶಾಲಿನಿಪಿತ ಇವರ ಹತ್ತಿರ 40,000 ಆಕಳುಗಳು ಮತ್ತು ಶಾಕದಲ ಪುತ್ರ 10,000 ಆಕಳುಗಳು, ಮಹಾಶಾಕನ ಪತ್ನಿಯಾದ ರೇವತಿಗೆ 80,000 ಆಕಳು ವರದಕ್ಷಿಣೆಯಾಗಿ ಕೊಡಲ್ಪಟ್ಟವು ಎಂದು ಉಪಾಸಕದಾಸ ಸಂಗ ಸೂತ್ರದಿಂದ ತಿಳಿದು ಬರುತ್ತದೆ.

ಇಂದು ನಮಗೆ ಈ ಪಶುಸಂಪತ್ತಿನ ಅಂದಿನ ಅಂಕಿಸಂಖ್ಯೆಗಳು ಸಂಶಯಾತ್ಮಕವೆನಿಸಬಹುದು. ಆದರೆ ಇಂದು ಅಮೆರಿಕಾದಲ್ಲಿ ಕಿಶೋಲೋಮ್, ಕರ್ನಲ್



ಚಿತ್ರ 1: ಪ್ರಾಚೀನ ಕಾಲದ ಗೋ ಸಂಪತ್ತು

ಸ್ಲಾಟರ್, ಮಾರ್ಟಿನ್ ಚಿಲ್ಡರ್ಸ್, ಬರ್ತ್, ಬರ್ನಟ್ ಮೊದಲಾದವರು ಪ್ರತಿಯೊಬ್ಬರು 20,000 ಹೈನ ಆಕಳುಗಳ ಅಧಿಪತಿಗಳಾಗಿದ್ದಾರೆ ಎಂದು 'ಪಾಯಿನೀರ್ಸ್ ಆಫ್

1889'ರಲ್ಲಿ ಬರೆದಿದ್ದನ್ನು ನಾವು ಒಪ್ಪಿಕೊಂಡಲ್ಲಿ ಅಂದಿನ ನಮ್ಮಲ್ಲಿಯ ಅಧಿಕ ಪಶು ಅಂಕಿಸಂಖ್ಯೆಗಳನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಒಟ್ಟಿನ ಮೇಲೆ ಅಂದು ನಮ್ಮ ಭಾರತದಲ್ಲಿ ಪಶುಸಂಪತ್ತು ವಿಪುಲವಾಗಿತ್ತು ಎಂಬುದು ಸಂಶಯಾತೀತವೆನ್ನಲು ಅಡ್ಡಿಯಿಲ್ಲ.

ಮನು, ಶುಕ್ರ, ವಸಿಷ್ಠ ಇವರು ಪ್ರತಿಯೊಬ್ಬ ಮಗನಿಗೆ ಕನಿಷ್ಠ 10 ಆಕಳು ಗಳನ್ನಾದರೂ ಆಸ್ತಿಯನ್ನಾಗಿಡಬೇಕೆಂದು ಆಗಿನ ಕಾಲದ ನ್ಯಾಯ ಪುಸ್ತಕಗಳಲ್ಲಿ ಹೇಳಲಾಗಿದೆ.

ಮೌರ್ಯರ ಕಾಲದಲ್ಲಿ ಪಶುಪಾಲನೆ

ಸುಮಾರು 2300 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಪಶುಪಾಲನಾ ಪದ್ಧತಿ ಹೇಗೆ ಸಾಗಿತ್ತೆಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದು ಬರುತ್ತದೆ. ಅವನು ಬರೆದ ಈ ಅರ್ಥಶಾಸ್ತ್ರವು ರಾಜನೀತಿ ನೈಪುಣ್ಯಕ್ಕೆ, ಪಾಂಡಿತ್ಯಕ್ಕೆ ಮತ್ತು ಮೇಧಾಶಕ್ತಿಗೆ ಕಲಶಪ್ರಾಯವಾಗಿದೆ. ಕೌಟಿಲ್ಯನ ಈ ಅರ್ಥಶಾಸ್ತ್ರವು ರಾಜನೀತಿ ಪಂಡಿತರಿಗೆ ಮಾರ್ಗದರ್ಶಕವಾಗಿರುವುದಲ್ಲದೆ ಅದರಲ್ಲಿ ಕೆಲವು ಅಧ್ಯಾಯ ಗಳು ಪಶುಪಾಲನೆಯ ಬಗ್ಗೆ ಹೆಚ್ಚು ಬೆಳಕನ್ನು ನೀಡುವಂಥವುಗಳಾಗಿರುತ್ತವೆ.

ಗೋಧ್ಯಕ್ಷ

ಗೋವುಗಳ ಮೇಲ್ವಿಚಾರಕನಿಗೆ ಗೋಧ್ಯಕ್ಷನೆಂದು ಅಭಿದಾನ. ಕೆಳಗೆ ಕಾಣಿಸಿದಂತೆ ಅವನು ದನಗಳ ಹಿಂಡಿನ ಮೇಲ್ವಿಚಾರಣೆಯನ್ನು ಮಾಡುತ್ತಿದ್ದನು.

ಗೋಧ್ಯಕ್ಷನು ವೇತನೋಪಗ್ರಹ, ಕರಪತ್ರಿಕರ, ಭಗ್ನೋತ್ಸೃಷ್ಟಕ, ಭಾಗಾನು ಪ್ರವಿಷ್ಟಕ, ವ್ರಜಪರ್ಯಗ್ರ, ನಷ್ಟ, ವಿನಷ್ಟ ಮತ್ತು ಕ್ಷೀರ ಘೃತಸಂಜಾತ ಹೀಗೆ ಎಂಟು ತರಹದ ಉತ್ಪತ್ತಿ ಯನ್ನು ಸ್ವೀಕರಿಸಬೇಕು. ಈ ಪದ್ಧತಿಗಳ ವಿವರಗಳನ್ನು ಈ ಕೆಳಗೆ ವಿವರಿಸಲಾಗಿದೆ:

(1) **ವೇತನೋಪಗ್ರಹ :** ಗೋಗಾಯಿ, ಎಮ್ಮೆಕಾಯುವವ (ಮಹಿಷಪಾಲಕ), ಹಾಲು ಹಿಂಡುವವ, ಬೆಣ್ಣೆ ಕಡೆಯುವವ ಮತ್ತು ಕ್ರೂರ ಪ್ರಾಣಿಗಳಿಂದ ಕಾಯುವ ಬೇಟೆಗಾರ, ಇವರೆಲ್ಲರೂ ತಮ್ಮ ಕೆಲಸಗಳಿಗೆ ಪ್ರತಿಫಲವಾಗಿ ಕೆಲವು ಹಿಂಡುವ ದನಗಳನ್ನು ಪಡೆಯುತ್ತಿದ್ದರು. ಹಾಲಿನ ಆಸೆಯಿಂದ ಕರುಗಳಿಗೆ ಹಾಲು ಉಣಿಸದೇ ಕೊಲ್ಲುತ್ತಿದ್ದರು. ಇದಕ್ಕೆ ಬದಲಾಗಿ ಅವರಿಗೆ ಧನ, ಧಾನ್ಯ ರೂಪವಾಗಿ ಸಂಬಳ ಕೊಡುವ ವ್ಯವಸ್ಥೆ ಇದ್ದರೆ ಈ ದುರಂತ ತಪ್ಪಿಸಬಹುದಿತ್ತು. ಇಂಥ ಗೋವು

ಗಳ ಹಿಂಡಿಗೆ ಕೂಲಿಯಿಂದ ಕಾಯಲ್ಪಡುವ ದನಗಳ ಹಿಂಡು ಎಂಬ ಹೆಸರಿತ್ತು. ಇದೇ, 'ವೇತನೋಪಗ್ರಹ'.

(2) **ಕರಪ್ರತಿಕರ :** ಸಮ ವಯಸ್ಸಿನ ಆಕಳು, ಹಿಂಡುವ ದನ, ಗಬ್ಬದದನ, ಮಣಕ (ಕಡಸು) ಮತ್ತು ಕರು, ಇವುಗಳ ಒಂದೊಂದು ನೂರರ ಸಂಖ್ಯೆಯ ಹಿಂಡುಗಳನ್ನು ಒಬ್ಬ ಸಂರಕ್ಷಿಸಬೇಕು. ಈ ಕರಾರಿನಂತೆ ಸಾಕುವ ಪ್ರತಿಯೊಬ್ಬನು ಒಡೆಯನಿಗೆ ಪ್ರತಿವರ್ಷ 8 ವಾರ ತುಪ್ಪ (84ಕುತ್ತೆ ತುಪ್ಪ), ಒಂದೊಂದು ಬಾಲಕ್ಕೆ ಒಂದೊಂದು ಪಣ ಮತ್ತು ರಾಜಮುದ್ರೆಯಿಂದ ಕೂಡಿದ ಸತ್ತ ದನಗಳ ಚರ್ಮವನ್ನು ವಾರ್ಷಿಕ ತೆರಿಗೆಯಾಗಿ ಕೊಡಬೇಕು. ಇದು ನಿಶ್ಚಿತ ಹೈನವನ್ನು ಕೊಡುವ ಕರಾರಿನಂತೆ ಒಪ್ಪಿಸುವ ಪದ್ಧತಿ. ಇದಕ್ಕೆ 'ಕರಪ್ರತಿಕರ' ವೆಂದು ಹೆಸರು.

(3) **ಭಗ್ನೋತ್ಸೃಷ್ಟಕ :** ಅಂಗವಿಕಲವಾದ, ಬೇರೆಯವರಿಂದ ಸುಲಭವಾಗಿ ಹಿಂಡಲಾಗದ, ಕಾಲುಕಟ್ಟಿ ಕಷ್ಟದಿಂದ ಕರೆಯಬೇಕಾದ, ತಮ್ಮ ಕರುಗಳನ್ನೇ ಕೊಲ್ಲುವಂಥ ನೂರು ದನಗಳ ಹಿಂಡಿನ ಗುಂಪಿಗೆ 'ನಿರುಪಯುಕ್ತವಾದ ಮತ್ತು ಪರಿತ್ಯಕ್ತವಾದ ಹಿಂಡು' ಎಂದು ಕರೆಯಲಾಗುತ್ತಿತ್ತು. ಇಂಥ ಹಿಂಡಿನವರು ಹಿಂದೆ ಹೇಳಿದ ಘೃತಾದಿರಾಜಭಾಗದ ಅರ್ಧವನ್ನೋ ಅಥವಾ ಮೂರನೇ ಒಂದಂಶವನ್ನೋ ಯೋಗ್ಯವಾಗುವ ರೀತಿಯಲ್ಲಿ ರಾಜನಿಗೆ ಕೊಡಬೇಕು. ಇದಕ್ಕೆ 'ಭಗ್ನೋತ್ಸೃಷ್ಟಕ' ವೆಂದು ಹೆಸರು.

(4) **ಭಾಗಾನು ಪ್ರವಿಷ್ಟಕ :** ಕಳ್ಳಕಾಕರು ಅಥವಾ ಶತ್ರುಗಳು ತಮ್ಮ ದನಗಳನ್ನು ಅಪಹರಿಸುವರೆಂಬ ಭಯದಿಂದ ಹೆದರಿ ತಮ್ಮ ಆಕಳುಗಳ ಸಂರಕ್ಷಣೆಗಾಗಿ ರಾಜನ ಗೋಶಾಲೆಯಲ್ಲಿ ತಂದು ಬಿಟ್ಟು, ದನಗಳ ಪಾಲನೆ ಮಾಡಿದ್ದಕ್ಕೆ ಕೂಲಿಯ ರೂಪವಾಗಿ ಆ ಪಶುಗಳ ಮಾಲೀಕರು ರಾಜನಿಗೆ ಹತ್ತನೆಯ ಒಂದು ಭಾಗವನ್ನು ಕೊಡುವ ಪದ್ಧತಿಗೆ 'ಭಾಗಾನು ಪ್ರವಿಷ್ಟಕ' ವೆಂದು ಹೆಸರು.

(5) **ವ್ರಜಪರ್ಯಗ್ರ :** ಆದಿನ ಕಾಲವಲ್ಲಿ ದನಗಳನ್ನು ಈ ಕೆಳಗಿನಂತೆ ವರ್ಗೀಕರಿಸುತ್ತಿದ್ದರು: (1) ಹೋರಿಗಳು, (2) ಕರುಗಳು, (3) ಸಾಧು ದನಗಳು, (4) ದುಡಿತದ ದನಗಳು, (5)ಹೂಡುವುದಕ್ಕೆ ರೂಢಿಮಾಡಿದ ದನಗಳು, (6) ಬೀಜಕ್ಕಾಗಿಯೇ ಇಟ್ಟ ಹೋರಿಗಳು, (7) ಮಾಂಸಕ್ಕಾಗಿ ಕಾದಿಟ್ಟ ದನಗಳು, (8) ಎಮ್ಮೆಗಳು, (9) ಹೂಡುವ ಎಮ್ಮೆಗಳು, (10) ಮಣಕಗಳು, (11) ಆಕಳುಗಳು, (12) ಗಬ್ಬದ ದನಗಳು, (13) ಹಿಂಡುವ ದನಗಳು, (14) ಬರಡಾದ ದನ ಅಥವಾ ಎಮ್ಮೆಗಳು, (15) ಒಂದು ಅಥವಾ ಎರಡು ತಿಂಗಳು ವಯಸ್ಸಿನ ಕರುಗಳು ಮತ್ತು ಇದಕ್ಕಿಂತಲೂ ಸಣ್ಣ ವಯಸ್ಸಿನ ಕರುಗಳು.

ಈ ರೀತಿ ಮೊಲೆ ಕುಡಿಯುವ ಕರುಗಳಿಗೆ ಉಪಜೀವಿಗಳೆಂದು ಹೆಸರು. ಈ ಎಲ್ಲ ದನಗಳಿಗೆ, 2 ತಿಂಗಳ ಮೇಲಿನ ಕರುಗಳಿಗೂ ಅಲ್ಲದೆ ಬೇರೆಯವರ ಹಿಂಡಿನಿಂದ ಬಂದ 2 ತಿಂಗಳಿಂದ ಯಾರೂ ಕೇಳದ ಹಕ್ಕುದಾರರಿಲ್ಲದ ದನಗಳಿಗೂ ತಮ್ಮ ಗುರುತಾದ ರಾಜಮುದ್ರೆಯನ್ನು ಒತ್ತುತ್ತಿದ್ದರು. ತಪ್ತಮುದ್ರೆಯಿಂದ ಸ್ವಸ್ತಿಕಾದಿ ಚಿಹ್ನೆ ಮಾಡುವುದಕ್ಕೆ ಅಂಕನವೆಂದೂ, ಬಾಲದಲ್ಲಿ ಸಹಜವಾಗಿರುವ ಬಿಳಿ ಕಪ್ಪು ಮೊದಲಾದ ಬಣ್ಣಗಳಿಗೆ ಚಿಹ್ನೆಯೆಂದೂ, ಕಪ್ಪಾಗಿಯೋ ಬೆಳ್ಳಗಾಗಿಯೋ ಇರುವುದಕ್ಕೆ ವರ್ಣವೆಂದೂ ಕೊಂಬಿನಲ್ಲಿರುವ ವಿಶೇಷಕ್ಕೆ ಶೃಂಗಾಂತರವೆಂದೂ ಹೆಸರು. ಗೋಧ್ಯಕ್ಷನು ಈ ಎಲ್ಲ ಗುಣಗಳನ್ನೂ ಅಂದರೆ ಎತ್ತರ, ದಪ್ಪ, ಸ್ವಾಭಾವಿಕವಾದ ಗುರುತು (ಚಹರೆಪಟ್ಟಿ), ಬಣ್ಣ ಮತ್ತು ಕೋಡಿನಿಂದ ಕೋಡಿಗೆ ಇರುವ ಅಂತರ, ಕೋಡಿನ ಆಕಾರ ಇವುಗಳನ್ನೆಲ್ಲ ಪುಸ್ತಕದಲ್ಲಿ ಬರೆದು ಇಡುತ್ತಿದ್ದನು. ಈ ಪದ್ಧತಿಗೆ 'ವರ್ಗೀಕರಣ ಪದ್ಧತಿ' ಅಥವಾ 'ವ್ರಜಪರ್ಯಾಗ್ರ'ವೆಂದು ಹೆಸರು.

(6) **ನಷ್ಟ :** ಕಳ್ಳರಿಂದ ಅಪಹರಿಸಿಕೊಂಡು ಹೋದಲ್ಲಿ, ಬೇರೆಯವರ ವಶಕ್ಕೆ ಸಿಕ್ಕಿಬಿದ್ದಲ್ಲಿ ಅಥವಾ ಕಾಡಿನಲ್ಲಿ ಹಿಂಡಿನಿಂದ ತಪ್ಪಿಸಿಕೊಂಡು ಕಳೆದುಹೋದ ಬೀಡಾಡಿ ದನಗಳನ್ನು 'ಕಳೆದು ಹೋದ ದನಗಳು' ಎಂದು ನೊಂದಾಯಿಸ (ದಾಖಲೆ) ಲಾಗುತ್ತಿತ್ತು. ಇವುಗಳಿಗೆ ನಷ್ಟವೆಂದು ಹೆಸರು.

(7) **ವಿನಷ್ಟ :** ದನಗಳು ಕೆಸರಿನಲ್ಲಿ ಹೂತುಹೋದಾಗ, ಪ್ರಪಾತದಲ್ಲಿ ಸಿಕ್ಕಿಬಿದ್ದಾಗ, ರೋಗದಿಂದಾಗಲಿ ಅಥವಾ ಮುಪ್ಪಿನಿಂದಾಗಲಿ ಸತ್ತಾಗ, ನೀರಿನಲ್ಲಿಮುಳುಗಿ ಹೋದಾಗ, ಬಿರುಗಾಳಿಗೆ ಸಿಲುಕಿ ದೊಡ್ಡಮರಗಳು ದನಗಳ ಮೇಲೆ ಬಿದ್ದು ದನಗಳು ಸತ್ತಾಗ, ನದಿಯ ದಡ ಕುಸಿದು ದನ ಅದರ ಕೆಳಗೆ ಸಿಕ್ಕಿ ಹೂತು ಹೋದಾಗ, ದೊಣ್ಣೆ ಅಥವಾ ಕಲ್ಲಿನ ಹೊಡೆತದಿಂದ ಸತ್ತಾಗ, ಸಿಡಿಲು ಬಡಿದು ಸತ್ತಾಗ, ಹುಲಿಯಿಂದ ತಿನ್ನಲ್ಪಟ್ಟಾಗ, ನಾಗರಹಾವು ಕಡಿದು ಸತ್ತಾಗ ಅಥವಾ ಮೊಸಳೆಯಿಂದ ನೀರಿನಲ್ಲಿ ಎಳೆದುಕೊಂಡು ಹೋದಾಗ ಹಾಗೂ ಕಾಡುಕಿಚ್ಚಿನ ಮಧ್ಯದಲ್ಲಿ ಸಿಕ್ಕಿ ಸತ್ತ ದನಗಳಿಗೆ 'ಎಂದೂ ಮರಳಿ ದೊರೆಯಲಾಗದ ದನಗಳು' ಅಥವಾ 'ವಿನಷ್ಟ ದನಗಳು' ಎಂದು ಕರೆಯಲಾಗುತ್ತಿತ್ತು.

ಗೋಗಾಯಿ (ಗೋಪಾಲ) ಗಳು ಈ ಮೇಲೆ ಹೇಳಿದ ಗಂಡಾಂತರಗಳಿಂದ ದನಗಳನ್ನು ರಕ್ಷಿಸಲು ಸರ್ವಪ್ರಯತ್ನ ಮಾಡಬೇಕು. ಪಾಲಕನ ದೋಷದಿಂದ ವಿನಷ್ಟವಾದರೆ ಪಾಲಕನು ನಷ್ಟವನ್ನು ತುಂಬಿಸಿಕೊಡಬೇಕು. ಆಕಳುಗಳನ್ನು ಯಾರಾದರೂ ಗಾಯಗೊಳಿಸಿದಲ್ಲಿ ಅಥವಾ ಬೇರೆ ಯಾರಾದರೂ ಗಾಯಮಾಡಿ ನೋಯಿಸುವುದರಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಸಹಾಯ ಸಲ್ಲಿಸಿದಲ್ಲಿ, ದನಗಳನ್ನು ಕಳ್ಳತನ ಮಾಡಿದಲ್ಲಿ

ಅಥವಾ ಬೇರೆಯವರಿಗೆ ಕಳ್ಳತನ ಮಾಡಲು ಸಹಾಯ ಸಲ್ಲಿಸಿದ್ದಲ್ಲಿ ಅಂಥವರನ್ನು ಕೊಂದುಹಾಕಲಾಗುತ್ತಿತ್ತು.

ರಾಜಮುದ್ರೆ ಹಾಕಿರುವ ದನಗಳ ಬದಲು ಹಿಂಡಿನ ಬೇರೆ ದನಗಳನ್ನು ಅದರ ಸ್ಥಳದಲ್ಲಿ ಅದಲು ಬದಲು ಮಾಡಿದಲ್ಲಿ ಅಂಥವರಿಗೆ ದಂಡ ಹಾಗೂ ಶಿಕ್ಷೆ ವಿಧಿಸಲಾಗುತ್ತಿತ್ತು.

ಅಪಹರಿಸಿದ ದನಗಳನ್ನು ಕಳ್ಳರಿಂದ ಪುನಃ ವಶಪಡಿಸಿಕೊಂಡಲ್ಲಿ ಅಂಥವರಿಗೆ ಬಹುಮಾನ ಸಿಗುತ್ತಿತ್ತು. ಶತ್ರುಗಳ ಕೈಗೆ ದನಗಳು ಸಿಗದಂತೆ ಅವುಗಳನ್ನು ಪಾರು ಮಾಡಿ ರಕ್ಷಿಸಿದಲ್ಲಿ ಅಂಥವರಿಗೆ ದನದ ಅರ್ಧ ಬೆಲೆ ಕೊಡಲಾಗುತ್ತಿತ್ತು.

ಕಾಡಿನಲ್ಲಿ ದನಗಳಿಗಾಗಿಯೇ ಮೇಯಲು ಕಾದಿಟ್ಟ ಹುಲ್ಲುಗಾವಲುಗಳಲ್ಲಿ ಆಯಾ ಋತುಗಳನ್ನು ಅನುಸರಿಸಿ ಗೋಗಾಯಿಗಳು ತಮ್ಮ ದನಗಳ ಹಿಂಡನ್ನು ಬಿಟ್ಟು ಎಲ್ಲಿ ಹುಲ್ಲು ನೀರು ಸಮೃದ್ಧಿಯಾಗಿದೆ ಎಂದು ತಿಳಿದು, ವಿಭಾಗ ಮಾಡಿ ಮೇಯಿಸಬೇಕು. ಇಂಥ ಹುಲ್ಲುಗಾವಲುಗಳಿಂದ ಕಳ್ಳರನ್ನು, ಹುಲಿ ಮುಂತಾದ ಕಾಡು ಮೃಗಗಳನ್ನು ಬೇಟೆಗಾರರು ತಮ್ಮ ಬೇಟೆನಾಯಿಗಳ ಸಹಾಯದಿಂದ ಹೊಡೆದು ಓಡಿಸಿ ದನಗಳನ್ನು ರಕ್ಷಿಸುತ್ತಿದ್ದರು,

ಸರ್ಪ ಮತ್ತು ಹುಲಿ ಮೊದಲಾದ ಮೃಗಗಳನ್ನು ಹೆದರಿಸಲು ಮತ್ತು ತಮ್ಮ ದನಗಳು ದಟ್ಟಡವಿಯ ಮಧ್ಯದಲ್ಲಿ ಮೇಯುತ್ತಿರುವ ಸ್ಥಳವನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗಲು ದನಗಳ ಕೊರಳಿಗೆ ಲೋಹದ ಗಂಟೆಯನ್ನು ಕಟ್ಟಲಾಗುತ್ತಿತ್ತು.

ದನಗಳು ನೀರು ಕುಡಿಯುವ ನದಿ ಅಥವಾ ಸರೋವರದ ಜಾಗ ಹೆಚ್ಚು ಆಳವಿಲ್ಲದ ಕೆಸರಿನಿಂದಾಗಲೀ ಅಥವಾ ಮೊಸಳೆಗಳಿಂದಾಗಲೀ ಕೂಡಿರದೆ ಎಲ್ಲ ಕಡೆ ಸಮಪಾತಳಿಯಾಗಿಯೂ, ಅಗಲವಾಗಿಯೂ, ಸ್ವಚ್ಛವಾದ ತಿಳಿನೀರಿನಿಂದ ಕೂಡಿದ ಸುರಕ್ಷಿತವಾದ ಸ್ಥಳವೂ ಆಗಿರಬೇಕಿತ್ತು.

ಕಳ್ಳರು ದನಗಳನ್ನು ಕದ್ದೊಯ್ದಾಗ, ಹುಲಿ ಅಥವಾ ಹಾವು, ಮೊಸಳೆ ಮೊದಲಾದ ಕ್ರೂರ ಪ್ರಾಣಿಗಳಿಂದ ಅಥವಾ ಮುದಿಯಾಗಿ ಹಾನಿಗೀಡಾದಾಗ ತಕ್ಷಣವೇ ಇದನ್ನು ವರದಿಮಾಡಲು ತಪ್ಪಿದಲ್ಲಿ ಕಳೆದುಹೋದ ದನಗಳ ಬೆಲೆಯನ್ನು ಗೋಗಾಯಿಯು ತುಂಬಬೇಕಾಗಿತ್ತು.

ಸ್ವಾಭಾವಿಕವಾಗಿ ಮರಣ ಹೊಂದಿದ ದನಗಳ ಗುರುತಿಸಿದ ಚರ್ಮವನ್ನು

ಮುದ್ರೆಸಹಿತ ಒಪ್ಪಿಸಬೇಕು. ಕುರಿ ಅಥವಾ ಆಡು ಸತ್ತಲ್ಲಿ, ಬಾಲ ಸಮೇತ ಅದರ ಚರ್ಮ ಹಾಗೂ ಸಣ್ಣ ಕರುವಿದ್ದಲ್ಲಿ ಅದರ ಚರ್ಮ ಮಾತ್ರ ತಂದು ಮುಟ್ಟಿಸಬೇಕು. ಅಲ್ಲದೆ ಸತ್ತ ದನದ ಕೊಬ್ಬು, ಸ್ನಾಯು, ಹಲ್ಲು, ಗೊರಸು, ಕೊಂಬು, ಎಲುಬು ಗಳನ್ನು ತಂದು ಒಪ್ಪಿಸಬೇಕಾಗುತ್ತಿತ್ತು.

ಸತ್ತ ದನಗಳ ಮಾಂಸವನ್ನು ಗೋಗಾಯಿಗಳು ಮಾರಾಟಮಾಡಿಕೊಳ್ಳಬಹುದಿತ್ತು. ಮಜ್ಜಿಗೆಯನ್ನು ನಾಯಿ, ಹಂದಿಗಳನ್ನು ಸಾಕುವುದಕ್ಕೆ ಕೊಡಬೇಕಾಗಿತ್ತು. ಮಜ್ಜಿಗೆ ಸೇರಿಸಿದ ಹಾಲನ್ನು ಅಥವಾ ಒಣಗಿಸಿ ಗಟ್ಟಿ ಮಾಡಿದ ಮಜ್ಜಿಗೆಯನ್ನು ಸೇನೆಗೋಸ್ಕರ ತಂದುಕೊಡಬೇಕಾಗಿತ್ತು. ಹೆಚ್ಚಾಗಿ ಉಳಿದದ್ದನ್ನು ಒಂದು ಕಂಚಿನ ಪಾತ್ರೆಯಲ್ಲಿಟ್ಟು ತಮ್ಮ ಆಹಾರದಲ್ಲಿ ಉಪಯೋಗಿಸುತ್ತಿದ್ದರು.

ಯಾರಾದರೂ ತಮ್ಮ ಹಿಂಡಿನಲ್ಲಿ ಆಕಳುಗಳನ್ನು ಮಾರಾಟ ಮಾಡಿದಾಗ ಅವುಗಳ ಬೆಲೆಯ ನಾಲ್ಕನೆಯ ಒಂದು ಭಾಗವನ್ನು ರಾಜನಿಗೆ ಕೊಡಬೇಕಾಗಿತ್ತು.

ಮಳೆಗಾಲ, ಶರತ್ಕಾಲ ಮತ್ತು ಚಳಿಗಾಲದ ಪ್ರಾರಂಭದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಜೊತೆ ಆಕಳುಗಳ ಹಾಲು ಕರೆಯ (ಹಿಂಡ) ಬೇಕಾಗಿತ್ತು. ವಸಂತಕಾಲ ಮತ್ತು ಬೇಸಿಗೆಯಲ್ಲಿ ದಿನಕ್ಕೆ ಅಂದರೆ ಒಪ್ಪತ್ತು (ಒಂದು ಹೊತ್ತು) ಮಾತ್ರ ಹಾಲು ಕರೆಯಬೇಕಾಗಿತ್ತು. ಯಾರಾದರೂ ಈ ಕಾಲದಲ್ಲಿ ಆಕಳುಗಳನ್ನು ಎರಡು ಹೊತ್ತು ಕರೆದಲ್ಲಿ ಅಂಥವರ ಹೆಬ್ಬೆಟ್ಟನ್ನು ಕತ್ತರಿಸಿ ಹಾಕಲಾಗುತ್ತಿತ್ತು.

ಒಂದು ವೇಳೆ ಹಾಲು ಕರೆಯುವ ವೇಳೆಯನ್ನು ತಪ್ಪಿಸಿದ್ದಲ್ಲಿ ಅವನ ಪಾಲಿಗೆ ಕೊಡಬೇಕಾದ ಹಾಲು ಸಿಗುತ್ತಿರಲಿಲ್ಲ. ಅಂದರೆ ಆ ದಿನದ ಸಂಬಳ ಅವನಿಗೆ ದೊರೆಯುತ್ತಿರಲಿಲ್ಲ.

(8) **ಕ್ಷೀರಘೃತ ಸಂಜಾತ :** ಒಂದು 'ದ್ರೋಣ' ಆಕಳು ಹಾಲು ಕಡೆದಲ್ಲಿ ಒಂದು 'ಪ್ರಸ್ಥ' ಬೆಣ್ಣೆ ಬರುತ್ತಿತ್ತು. ಇದೇ ಪ್ರಮಾಣದಲ್ಲಿ ಎಮ್ಮೆಯ ಹಾಲು ಕಡೆದಲ್ಲಿ ಏಳನೇ ಒಂದು ಭಾಗದಷ್ಟು ಪ್ರಸ್ಥ ಬೆಣ್ಣೆಯು ಹೆಚ್ಚಾಗಿ ಬರುತ್ತಿತ್ತು. ಕ್ಷೀರಘೃತ ಸಂಜಾತನು ಈ ವಿಷಯಗಳ ಮೇಲ್ವಿಚಾರಕನಾಗಿದ್ದನು.

ಎಲ್ಲ ತರಹದ ಹಾಲನ್ನು ಕಡೆದು ಬೆಣ್ಣೆಯ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು. ಹಾಲು ಬೆಣ್ಣೆಗಳ ಹೆಚ್ಚುವಿಕೆ, ಗೊಬ್ಬರದ ಸ್ವರೂಪ, ಹುಲ್ಲು ನೀರುಗಳ ಯೋಗ್ಯತೆ ಮತ್ತು ಪ್ರಮಾಣವನ್ನು ಅವಲಂಬಿಸಿತ್ತು.

ಒಂದು ಹಿಂಡಿನ ಹೋರಿಯು ಬೇರೊಂದು ಹಿಂಡಿನ ಹೋರಿಯೊಡನೆ ಕಾದಾಟ ಮಾಡಿದಲ್ಲಿ ಹಿಂಡಿನ ಗೋಪಾಲಕನಿಗೆ ಶಿಕ್ಷೆ ವಿಧಿಸಲಾಗುತ್ತಿತ್ತು. ಒಂದು ವೇಳೆ ಆ ಕಾದಾಟದಲ್ಲಿ ಹೋರಿಗೆ ಗಾಯವಾದಲ್ಲಿ ಗೋಪಾಲಕನಿಗೆ ಉಗ್ರ ಶಿಕ್ಷೆಯಾಗುತ್ತಿತ್ತು.

ದನಗಳನ್ನು ಅವುಗಳ ವಯಸ್ಸು, ಬಣ್ಣಗಳ ಪ್ರಕಾರ ವಿಂಗಡಿಸಿ ಹತ್ತು ದನಗಳಿಗೆ ಒಂದೊಂದು ಗುಂಪಾಗಿ ಮಾಡಿ ಮೇಯಿಸಲಾಗುತ್ತಿತ್ತು.

ಗೊಲ್ಲರ ರಕ್ಷಣಾ ಶಕ್ತಿಗನುಗುಣವಾಗಿ ಗೋವುಗಳು ಮೇವಿಗಾಗಿ ಎಷ್ಟು ದೂರ ಹೋಗಲು ಶಕ್ತವಾಗಿರುವುವೋ ಅವಕ್ಕನುಗುಣವಾಗಿ ಗೋವನ್ನು ದೂರಕ್ಕೋ ಅಥವಾ ಹತ್ತಿರಕ್ಕೋ ಒಯ್ಯಲಾಗುತ್ತಿತ್ತು.

ಹೊಸದಾಗಿ ಮೂಗುದಾಣಹಾಕಿದ ಹೋರಿಗಳಿಗೆ, ಕುದುರೆಗಳಂತೆ ವೇಗವಾಗಿ ಓಡುವ ದನಗಳಿಗೆ ಮತ್ತು ಹೆಚ್ಚು ಭಾರ ಎಳೆಯುವ ದನಗಳಿಗೆ, ತಲಾ ಒಂದಕ್ಕೆ 2000 ಫಲಗಳಷ್ಟು ಹಸಿಹುಲ್ಲನ್ನೂ, ಇದರ ಎರಡರಷ್ಟು ಒಣ ಹುಲ್ಲನ್ನೂ, ಒಂದು ತೊಲದಷ್ಟು ಹಿಂಡಿಯನ್ನೂ, ಹತ್ತು ಅಧಕ ಅಕ್ಕಿಯ ನುಚ್ಚಿನಿಂದ ಕೂಡಿದ ತೌಡನ್ನೂ (ದಟ್ಟ ತೌಡು), ಐದು ಫಲ ಉಪ್ಪನ್ನೂ, ಒಂದು ಕುಡುಂಬದಷ್ಟು ಬೆಣ್ಣೆಯನ್ನೂ, ಮೂಗಿನ ಮೇಲೆ ಮತ್ತು ತಲೆಯ ಮೇಲೆ ಹಚ್ಚಿ ತಿಕ್ಕುವುದಕ್ಕಾಗಿ ಒಂದು ಪ್ರಸ್ಥ ಎಣ್ಣೆ ಅಥವಾ ತುಪ್ಪವನ್ನೂ, ನೂರು ಫಲ ಮಾಂಸವನ್ನೂ, ಒಂದು ಅಧಕ ಮೊಸರನ್ನೂ, ಒಂದು ದ್ರೋಣ ಪಕ್ವವಾದ ಉದ್ದನ್ನೂ, ಒಂದು ದ್ರೋಣ ಹಾಲನ್ನೂ ಆಹಾರವಾಗಿ ಕೊಡಬೇಕು. ಹಾಲಿಲ್ಲದಿದ್ದರೆ ಅರ್ಧ ಅಧಕ ಸುರೆ, ಹತ್ತು ಫಲ ಬೆಲ್ಲ, ಒಂದು ಫಲ ಶುಂಠಿ ಈ ಮೂರನ್ನೂ ಸೇರಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಲು ಕೊಡಬೇಕು ಎಂದು ನಿರ್ಧರಿಸಲಾಗಿತ್ತು.

ಈ ಮೇಲೆ ಕಾಣಿಸಿದ ಆಹಾರ ಪ್ರಮಾಣದಲ್ಲಿ ಕಾಲುಭಾಗದಷ್ಟು ಕಡಿಮೆಮಾಡಿ ಹೇಸರಕತ್ತೆಗಳಿಗೂ, ಆಕಳುಗಳಿಗೂ ಮತ್ತು ಕತ್ತೆಗಳಿಗೂ ಎರಡರಷ್ಟು ಹೆಚ್ಚು ಪ್ರಮಾಣದಲ್ಲಿ ಎಮ್ಮೆಗಳಿಗೂ ಮತ್ತು ಒಂಟೆಗಳಿಗೂ ಕೊಡಲಾಗುತ್ತಿತ್ತು.

ಎಲ್ಲ ದನಗಳಿಗೂ ಸಾಕಷ್ಟು ಮೇವು ಮತ್ತು ನೀರು ಪೂರೈಸಲಾಗುತ್ತಿತ್ತು. ಒಂದು ಹಿಂಡಿನಲ್ಲಿ ನೂರು ಪಶುಗಳಿರುತ್ತಿದ್ದವು. ಪ್ರತಿ ಹಿಂಡಿಗೆ ಕೆಲವು ಉತ್ತಮ ಹೋರಿಗಳು ಇರುತ್ತಿದ್ದವು. ಈ ಪ್ರಕಾರವಾಗಿ ದನಗಳ ಸಾಕಣೆಯ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ.

ಗೋಚರ ಭೂಮಿ (ಗೋಮಾಳ)

ಪ್ರಾಚೀನ ಕಾಲದಲ್ಲಿ ನಮ್ಮ ಪ್ರತಿಯೊಂದು ಗ್ರಾಮದಲ್ಲಿ ಸಾರ್ವಜನಿಕ ಹುಲ್ಲು ಗಾವಲುಗಳಿದ್ದವು. ನಿರ್ದಿಷ್ಟ ಭೂಭಾಗವನ್ನು ಗೋಗ್ರಾಸಕ್ಕಾಗಿಯೇ ಪ್ರತ್ಯೇಕವಾಗಿ ಇಡಬೇಕೆಂದು ಮನು ಮುನಿಯು ಶಾಸ್ತ್ರದಲ್ಲಿ ವಿಧಿಸಿದ್ದನು. ಅಂದಿನ ಕಾಲದಲ್ಲಿ ಸಾಕಷ್ಟು ವಿಶಾಲವಾದ ಹುಲ್ಲುಗಾವಲುಗಳ ಸೌಕರ್ಯ ಮತ್ತು ದನಗಳಿಗೆ ಹುಲ್ಲಿನ ಅಭಾವ ಎಂದೂ ಆಗುತ್ತಿರಲಿಲ್ಲ. ಈ ಗೋಚರ ಭೂಮಿಯನ್ನು ಕಾದಿರಿಸುವುದು ಒಂದು ಧರ್ಮ ಕಟ್ಟಳೆಯಾಗಿತ್ತು. ಅವುಗಳ ಸುವ್ಯವಸ್ಥೆಗಾಗಿ ಧರ್ಮನಿರ್ಬಂಧಗಳನ್ನು ಹಾಕಲಾಗಿತ್ತು. ಕೇವಲ ಆಕಳುಗಳು ಮೇಯುವುದರ ಸಲುವಾಗಿ, ಭೂಮಿಯನ್ನು (ಗೋಮಾಳಗಳನ್ನು) ರಾಜಮಹಾರಾಜರು, ಶ್ರೀಮಂತರು ಇಂಥಾ ಭೂಮಿಯನ್ನು ಬಿಡುತ್ತಿದ್ದರು. ಇಂದಿಗೂ ಕೆಲವು ರಾಜ್ಯಗಳಲ್ಲಿ ಮತ್ತು ಮಠಾಧೀಶರು ಆಕಳುಗಳು ಮೇಯುವುದರ ಸಲುವಾಗಿ ಭೂಮಿಯನ್ನು ಬಿಡುವ ಸಂಪ್ರದಾಯವನ್ನು ನಡೆಸಿ ಕೊಂಡು ಬಂದಿದ್ದಾರೆ.

ಈ ಗೋಚರ ಭೂಮಿಯನ್ನು ಯಾರು ಹಾಳುಗೆಡವುತ್ತಾರೋ ಅಂಥವರು ಸೂರ್ಯಚಂದ್ರರಿರುವವರೆಗೆ ನರಕವಾಸ್ತದಲ್ಲಿರುವರು ಎಂಬ ಘೋಷಣೆಯು ಆ ರಾಷ್ಟ್ರದ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ವಿಷಯವಾಗಿ ಪದ್ಮಪುರಾಣದ ಸೃಷ್ಟಿ ಕಾಂಡದಲ್ಲಿಯ ಹೇಳಿಕೆ ಈ ಕೆಳಗಿನಂತಿದೆ :

> ಗೋಪ್ರಚಾರಂ ಯಥಾಶಕ್ತಿಯೋ ವೈತ್ಯಜತಿ ಹೇತುನಾ ।
> ದಿನೇದಿನೇ ಬ್ರಹ್ಮಭೋಜ್ಯಂ ಪುಣ್ಯಂ ತಸ್ಯಶತಾಧಿಕವಾ್ ॥
> ತಸ್ಮಾತ್ ಗವಾಂ ಪ್ರಚಾರಂತು ಮುಕ್ತ್ವಾ ಸ್ವರ್ಗಾನ್ನ ಹೀಯತ್ಯೆ
> ಯಃ ಛಿನ್ನತಿ ದ್ರುಮಂ ಪುಣ್ಯಂ ಗೋಪ್ರಚಾರಂ ಛಿನತ್ಯಪಿ ॥
> ಸತ್ಯ ಏಕವಿಂಶ ಪುರುಷಾಃ ಪಚ್ಯಂತೇ ಕೌರವೇಷು ಚ ।
> ಗೋಚೌರಘ್ನಂ ಗ್ರಾಮಗೋಪಃ ಶಕ್ರೋಜ್ಞಾತ್ವಾತು ದಂಡಯೇತ್ ॥

ಯಾವ ಮನುಷ್ಯನು ಆಕಳುಗಳ ಸಲುವಾಗಿ ಗೋಚರ ಭೂಮಿಯನ್ನು ಬಿಡು ತ್ತಾನೋ ಅಂಥವರಿಗೆ ಪ್ರತಿದಿನವೂ ನೂರಕ್ಕಿಂತಲೂ ಹೆಚ್ಚು ಬ್ರಾಹ್ಮಣ ಭೋಜನ ಮಾಡಿಸಿದ ಪುಣ್ಯವು ಲಭಿಸುತ್ತದೆ. ಗೋಚರ ಭೂಮಿಯನ್ನು ಬಿಟ್ಟವರು ಸ್ವರ್ಗ ದಿಂದ ಚ್ಯುತರಾಗುವುದೇ ಇಲ್ಲ. ಯಾರು ಗೋಚರ ಭೂಮಿಗೆ ಹಾನಿಯನ್ನುಂಟು ಮಾಡುತ್ತಾರೋ ಮತ್ತು ಅದರಲ್ಲಿರುವ ವೃಕ್ಷಗಳನ್ನು ಕಡಿಯುತ್ತಾರೋ ಅಂಥವರ

ಇಪ್ಪತ್ತೊಂದು ಪೀಳಿಗೆಯ ಜನರು ನರಕವಾಸದಲ್ಲಿ ಹೊರಳಾಡುತ್ತಾರೆ. ಯಾವ ವ್ಯಕ್ತಿ ಮೇಯುವ ಕಾಲಕ್ಕೆ ಪೀಡೆಯನ್ನುಂಟುಮಾಡುತ್ತಾನೋ ಅಂಥ ವ್ಯಕ್ತಿಯನ್ನು ಸಮರ್ಥ ಗ್ರಾಮ ರಕ್ಷಕನು ದಂಡನ ಮಾಡಬೇಕು.

ಗೋಚರಭೂಮಿಯನ್ನು ಯಾರಾದರೂ ಆಕ್ರಮಣ ಮಾಡಿದಲ್ಲಿ ಅದು ಮಹಾ ಪಾಪ ಮತ್ತು ಹೀನ ಕೃತ್ಯವೆಂದು ಹೇಳಲಾಗಿದೆ. ಈ ವಿಷಯವಲ್ಲಿ ಗೋಭಕ್ತ ರತ್ನ ಸೇಟ್ ನಾರಾಯಣಜೀ ಪೋತದಾರ್ ಹೇಳಿದ ಮಾತು ಹೆಚ್ಚಿನ ಮಹತ್ವದ್ದಾಗಿದೆ: ಒಂದು ದಿವಸ ರತ್ಲಮ್ ಗೋಶಾಲೆಗೆ ಕಾಶಿನಿವಾಸಿ ಗೋರಕ್ಷಣದ ಮಹೋಪದೇಶವಾದ ಶ್ರೀ ಜಗತ್ ನಾರಾಯಣಜಿ ಮಹಾರಾಜರು ಸಂದರ್ಶನ ಕೊಟ್ಟ ಕಾಲಕ್ಕೆ ಗೋಚರ ಭೂಮಿಯ ಬಗ್ಗೆ ಮನುಷ್ಯನು ಎಂಥಾ ಹೀನ ಪಾಪಕಾರ್ಯವನ್ನು ಮಾಡುತ್ತಾನೆ ಎಂಬುದನ್ನು ಕೆಳಗಿನ ಶ್ಲೋಕದಲ್ಲಿ ಹೇಳಿದ್ದಾರೆ[7]:

> ನ್ಮೃತುಪಾಲೀತಃ ಚಾಂಡಾಲಿಕಾಕಮಾಂಸಂಸ್ವಚರ್ಮಣಾಭವಾದ್ ।
> ಗೋಚರಕ್ಷೋಣಿ ಕೃಷಿಕದ್ ದೃಷ್ಟಿ ಭೀತಿತಃ ॥

ಇದರ ತಾತ್ಪರ್ಯ ಇಂತಿದೆ: ಒಬ್ಬ ಚಾಂಡಾಲಿನಿ ಒಂದು ಗೋಚರ ಭೂಮಿಯ ಮೂಲೆಯಲ್ಲಿ ಬೆಂಕಿಯ ಮೇಲೆ ಮನುಷ್ಯನ ತಲೆಯ ಬುರುಡೆಯಲ್ಲಿ ಕಾಗೆಯ ಮಾಂಸವನ್ನು ಬೇಯಿಸುತ್ತಿದ್ದಳು. ಅವರ ಮೇಲೆ ನಾಯಿಯ ಚರ್ಮವನ್ನು ಮುಚ್ಚಿದ್ದಳು. ಇದನ್ನು ಕಂಡು ಒಬ್ಬ ಸಾಧುಪುರುಷನು ಅವಳನ್ನು 'ಇಂಥಾ ಅಶುದ್ಧವಾದ ಸಾಮಾನನ್ನು ಏಕೆ ಮುಚ್ಚಿಟ್ಟಿರುವಿ' ಎಂದು ಕೇಳಿದನು. ಅದಕ್ಕೆ ಅವಳು 'ಮಹಾರಾಜ–ಈ ಗೋಚರ ಭೂಮಿಯು ಸುತ್ತಲೂ ರೈತರ ಹೊಲಗಳಿಂದ ಸುತ್ತುವರಿಯಲ್ಪಟ್ಟಿದೆ. ಯಾವನಾದರೂ ಪಾಪಿ ರೈತ ಒಂದು ವೇಳೆ ದುರಾಶೆಯಿಂದ ಈ ಗೋಚರ ಭೂಮಿಯ ಭಾಗವನ್ನು ಅತಿಕ್ರಮಣ ಮಾಡಿ ತನ್ನ ಹೊಲಕ್ಕೆ ಸೇರಿಸಿಕೊಂಡಲ್ಲಿ ಅಂಥಾ ಮಹಾಪಾಪಿ ಮನುಷ್ಯನ ದೃಷ್ಟಿ ಇದರ ಮೇಲೆ ಬಿದ್ದಲ್ಲಿ ಆಗ ಈ ಆಹಾರವು ತಿನ್ನಲು ಅಯೋಗ್ಯವೆನಿಸುವುದು. ಆದಕ್ಕಾಗಿ ಅಂಥಾ ಪಾಪಿಗಳ ದೃಷ್ಟಿ ಬೀಳವಂತೆ ಮುಚ್ಚಿಟ್ಟಿರುತ್ತೇನೆ' ಎಂದು ಹೇಳಿದಳು. ಗೋಚರಭೂಮಿಯನ್ನು (ಗೋಮಾಳ) ಅತಿಕ್ರಮಣ ಮಾಡುವುದಾಗಲಿ ಅಥವಾ ನಷ್ಟಗೊಳಿಸುವುದಾಗಲಿ ಅದು ಮಹಾಪಾಪವೆಂಬುದಕ್ಕೆ ಇದು ಉತ್ತಮ ಉದಾಹರಣೆ.

ಗೋಚರ ಭೂಮಿ ಎಷ್ಟಿರಬೇಕು, ಹೇಗಿರಬೇಕು: ಎಂಬುದರ ಬಗ್ಗೆ ಮನು ಮುನಿಯು ಹೀಗೆ ಹೇಳಿರುತ್ತಾನೆ :

ಧನುಃಶತಂ ಪರೀಹಾರೋಗ್ರಾಮಸ್ಯಸ್ಯಾತ್ ಸಮಂತ ತಃ ।
ಶಮ್ಯಾಪಾತಾಸ್ತ್ರಯೋವಾಪಿ ತ್ರಿಗುಣೋನಗರಸ್ಯತು ।
ತತ್ರಾಪರಿವೃತಂ ಧಾನ್ಯಂ ವಿಹಿಂಸುಃ ಪಶವೋಯದಿ ।
ನತತ್ರಪ್ರಣಯೇತ್ ದಂಡಂ ನೃಪತಿಃ ಪಶುರಕ್ಷಿಣಾಂ ॥

ಊರು ಸುತ್ತಮುತ್ತಲು ನಾಲ್ಕು ಕಡೆಗಳಲ್ಲಿ ಒಂದು ನೂರು ಬಾಣದ ಅಳತೆಯಷ್ಟು, ನಾಲ್ಕುನೂರು ಮೊಳದಷ್ಟು ಅಥವಾ ಮೂರು ಬಾರಿ ಕಟ್ಟಿಗೆ ತುಂಡನ್ನು ಬೀಸಿ ಒಗೆದರೆ (ತೂರಿದರೆ) ಅದು ಎಷ್ಟು ದೂರ ಹೋಗಿ ಬೀಳುತ್ತದೆಯೋ ಅಲ್ಲಿಯವರೆಗಿನ ಭೂಮಿಯನ್ನು ಆಕಳುಗಳು ಮೇಯುವುದರ ಸಲುವಾಗಿ ಬಿಡಬೇಕು. ಹೀಗೆ ಬಿಟ್ಟಿರುವ ಭೂಮಿಯ ಮೇರೆಯಲ್ಲಿ ಭೂಮಿಯೊಳಗಿನ ದವಸಧಾನ್ಯಗಳನ್ನು ಗ್ರಾಮ ಪಶುಗಳು ನಷ್ಟಗೊಳಿಸಿದರೆ ರಾಜನು ಪಶುರಕ್ಷಕರನ್ನು ದಂಡಿಸಬಾರದು.

ಮಹರ್ಷಿಯಾಜ್ಞವಲ್ಕರು ಪಡುವ ಅಭಿಪ್ರಾಯ ಇಂತಿದೆ :-

ಧನುಃ ಶತಂ ಪರಿಣಾಹೋಗ್ರಾಮೇಃಕ್ಷೇತ್ರಾಂತರಂಭವೇತ್ ।
ದೇಶತೇ ಖರ್ವಟಸ್ಯಸ್ಯಾನ್ನಗರಸತತ್ವಃ ಶತವಗ್ ॥

ಊರಿನ ಸುತ್ತಲೂ ನಾಲ್ಕು ಕಡೆಗೆ ನೂರು ಧನುಷ್ಯದ ಅಳತೆಯಷ್ಟು, ಗುಡ್ಡದ ದರಿಯ ಭಾಗದಲ್ಲಿ ಎರಡುನೂರು ಧನುಷ್ಯದ ಅಳತೆಯಷ್ಟು ಭೂಮಿಯನ್ನು ಗೋವುಗಳು ಮೇಯುವುದಕ್ಕೆಂದು ಬಿಡಬೇಕು. ಈ ಗೋಚರ ಭೂಮಿಯು ಊರು ಮತ್ತು ನಗರದಿಂದ ದೂರವಿರಬೇಕು. ಈ ಭೂಮಿಯಲ್ಲಿಯ ದವಸಧಾನ್ಯಗಳು ಆ ಭೂಮಿಯಲ್ಲಿ ಎತ್ತರದ ದಿನ್ನೆಯ ಪ್ರದೇಶವು ಕಾಣಬಾರದಷ್ಟು ಎತ್ತರವಾಗಿಯೂ, ದಟ್ಟವಾಗಿಯೂ ಬೆಳೆದಿರಬೇಕು. ಅಲ್ಲದೆ ನಾಯಿ ಮತ್ತು ಹಂದಿಗಳು ಬೆಳೆಯ ಬಿರುಕಿನಲ್ಲಿ ಒಳನುಗ್ಗದಷ್ಟು ಬೆಳೆಯು ದಟ್ಟವಾಗಿಯೂ ಎತ್ತರವಾಗಿಯೂ ಇರತಕ್ಕದ್ದು ಎಂದು ಹೇಳಲಾಗಿದೆ. ಯಾರಾದರೂ ಗೋಚರ ಭೂಮಿಗೆ ಬೇಲಿಯನ್ನು ಹಾಕದಿದ್ದರೆ ಮತ್ತು ಅಂಥ ಹೊಲದಲ್ಲಿ ಪಶುಗಳು ಮೇಯಲು ಹೋದ ಪಕ್ಷದಲ್ಲಿ ರಾಜನು ಪಶುಪಾಲಕರಿಗೆ ದಂಡವನ್ನು ವಿಧಿಸತಕ್ಕದ್ದಲ್ಲ. ಬೇಲಿಹಾಕಿದ ಹೊಲದಲ್ಲಿ ಪಶುಗಳು ನುಗ್ಗಿದರೆ ಮಾತ್ರ ದಂಡ ಹೇರಬೇಕು. ಇದು ನಾರದ ಸ್ಮೃತಿಯಲ್ಲಿಯ ಉಲ್ಲೇಖ. ಈ ವಿಷಯವಲ್ಲಿ ಮನು ಮುನಿಯ ಅಭಿಪ್ರಾಯ ಹೀಗಿದೆ :

ಪಥಿಕ್ಷೇತ್ರೇಪರಿವೃತೋ ಗ್ರಾಮಂತಿಯೇಥವಾಪುನಃ ।
ಸಪಾಲಃ ಶತದಂಡಾ ಹ್ರೋವಿಪಾಲನ್ ವಾರಯೇತ್ ಪಶೂನ್ ॥

ದಾರಿಯಲ್ಲಿ ಬದಿಯ ಹೊಲದಲ್ಲಿ ಆಗಲಿ ಇಲ್ಲವೇ ಊರಿನ ಸಮೀಪದಲ್ಲಿರುವ ಬೇಲಿಹಾಕಿದ ಹೊಲದಲ್ಲಿ ನುಗ್ಗಿ ಹೋಗಿ ಮೇಯ್ದರೆ ರಾಜನು ಪಶು ಪಾಲಕನಿಗೆ ನೂರು ಹಣದ ದಂಡವನ್ನು ಕಟ್ಟಬೇಕು, ಆದರೆ ಪಶುಗಳಲ್ಲದೇ ಪಾಲಕನೇ ಸಿಕ್ಕಿದರೆ ಅವನನ್ನು ಊರಹೊರಗಟ್ಟಬೇಕು.

ಯಾಜ್ಞವಲ್ಕ್ಯಸ್ಮೃತಿಯಲ್ಲಿಯ ಅಭಿಪ್ರಾಯ ಹೀಗಿದೆ:

ಪಥಿಗ್ರಾಮವಿವೀತಾಂತೇಕ್ಷೇತ್ರೇದೋಷೋನವದ್ಯತೆ ।
ಅಕಾಯತಃ ಕಾಮ ಚಾರೇಚೌರವದ್ದಂಡಮರ್ಹತಿ ॥

ದಾರಿ, ಊರು ಮತ್ತು ಗೋಚರ ಭೂಮಿಯ ಹತ್ತಿರವಿರುವ ಹೊಲಗಳಲ್ಲಿ ಕಾಯುವವನಿಗೆ ಗೊತ್ತಾಗದಂತೆ ದನಗಳು ನಷ್ಟಗೊಳಿಸಿದರೆ, ಅದು ದೋಷವೆಂದು ಪರಿಗಣಿಸಲಾಗದು. ಪಶುಪಾಲಕರು ಬುದ್ಧಿ ಪೂರ್ವಕವಾಗಿ ದನಗಳನ್ನು ಮೇಯಿಸಿದ್ದಾದರೆ ಅವರನ್ನು ಕಳ್ಳರೆಂದೇ ಭಾವಿಸಿ ಅವರಿಗೆ ದಂಡ ವಿಧಿಸತಕ್ಕದ್ದು (ನಾರದಸ್ಮೃತಿ ಮತ್ತು ಇನ್ನಿತರ ಸ್ಮೃತಿ ಪುರಾಣಗಳಲ್ಲಿ ಇದೇ ಅರ್ಥ ಕೊಡುವ ಉಕ್ತಿಗಳು ದೊರೆಯುತ್ತವೆ).

ಇದರಿಂದ ನಾವು ಅಂದಿನ ಪ್ರಾಚೀನ ಕಾಲದ ಗೋಚರ ಭೂಮಿಯು ಹೇಗೆ ಕಾದಿರಿಸಲಾಗುತ್ತಿತ್ತು, ಮತ್ತು ಅವರಿಂದ ದನಗಳಿಗೆ ಹುಲ್ಲು ಪೂರೈಸಲಾಗುತ್ತಿತ್ತೆಂಬುದನ್ನು ತಿಳಿಯಬಹುದು.

ಪ್ರಾಚೀನ ಗೋಪಾಲನಾ (ಪಶುಪಾಲನೆ) ಪದ್ಧತಿ

ಒಂದು ಕಾಲಕ್ಕೆ ನಮ್ಮಲ್ಲಿಯ ಪಶುಪಾಲನಾ ಪದ್ಧತಿ ಶ್ರೇಷ್ಠಮಟ್ಟದ್ದಾಗಿತ್ತು. ಸಾವಿರಾರು ವರ್ಷಗಳ ಹಿಂದೆಯೇ ಅದು ಒಂದು ಕ್ರಮಬದ್ಧವಾದ ಶಾಸ್ತ್ರವೆನ್ನಿಸಿತ್ತು. ಈ ವಿದ್ಯೆಯಲ್ಲಿ ಪಾಂಡವ ಪುತ್ರ ನಕುಲನನ್ನು 'ಗವಾಶ್ವಚಿಕಿತ್ಸಾಶಾಸ್ತ್ರ ಪ್ರಣೇತಾ' ಎಂದು ಮಾನ್ಯ ಮಾಡಲಾಗಿದೆ. ಅವನು ಬರೆದ 'ನಕುಲ ಸಂಹಿತೆ' ಎಂಬ ಪುಸ್ತಕವು ಪಶು ವೈದ್ಯಕೀಯದ ಬಗ್ಗೆ ಒಂದು ಕೈಗನ್ನಡಿಯಂತಿದೆ. ಸಾಲಿಹೋತ್ರಿ ಎಂಬ ಪಶುಶಾಸ್ತ್ರವಿಶಾರದ ಪಂಡಿತ ಪಶುಶಾಸ್ತ್ರದಲ್ಲಿ ನೈಪುಣ್ಯತೆಯನ್ನು ಪಡೆದಿದ್ದ ಎಂದು ಹೇಳಲಾಗಿದೆ. 'ಶಾಲಿಹೋತ್ರಿ ಸಂಹಿತೆ' ಇದು ಅಶ್ವಚಿಕಿತ್ಸೆಯ ಮೇಲಿನ ಉತ್ತಮ ಗ್ರಂಥ. ಇದರ ವಿಷಯವಾಗಿ ಜಯದೇವನೂ ಸಹ ಒಂದು ಗ್ರಂಥವನ್ನು ಬರೆದಿದ್ದಾನೆ. ಈ ಗ್ರಂಥದ ಆಧಾರದ ಮೇಲೆ ಶ್ರೀಮಜ್ಜಾಯ ದತ್ತ ಸೂರಿ ಎಂಬುವರು 'ಅಶ್ವವೈದ್ಯಕಮ್' ಎಂಬ ಗ್ರಂಥ ಬರೆದಿದ್ದಾರೆ, ಪಾಲಕಾಪ್ಯ ಮುನಿಯು

'ಹಸ್ತ್ಯಾಯುರ್ವೇದ' ಪುಸ್ತಕವು ಪ್ರಸಿದ್ಧವಿರುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಧ್ಯಕ್ಷ ಪ್ರಚಾರವೆಂಬ ಎರಡನೆಯ ಅಧಿಕರಣದಲ್ಲಿ 'ಗೋಧ್ಯಕ್ಷ' ಎಂಬ 29ನೇಯ ಅಧ್ಯಾಯದಲ್ಲಿ ಪಶುಪಾಲನೆಯ ಬಗ್ಗೆ ಸವಿಸ್ತಾರವಾಗಿ ಕಾಣಿಸಲಾಗಿದೆ. ಶ್ರೀಮಚ್ಚಾವುಂಡರಾಯ ಎಂಬ ಜೈನ ಕವಿಯು 'ಲೋಕೋಪಕಾರಂ' ಎಂಬ ಪುಸ್ತಕದಲ್ಲಿ 'ಗೋವೈದ್ಯಂ' ಎಂಬ ಅಧ್ಯಾಯದಲ್ಲಿ ದನಗಳ ರೋಗಗಳು ಹಾಗೂ ಔಷಧೋಪಚಾರಗಳ ಬಗ್ಗೆ ಬರೆದಿದ್ದಾನೆ. ಇದು ಒಂದು ಉತ್ತಮ ಗ್ರಂಥವೆಂದು ಹೇಳಬಹುದು.

ಗೋಪಾಲನಾ ಪದ್ಧತಿ ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಗೋಪಾಲನೆಯಲ್ಲಿ ನೈಪುಣ್ಯತೆಯನ್ನು ಪಡೆದಿದ್ದರು. ಮಹಾಭಾರತ ಕಾವ್ಯದಿಂದ ಅಂದಿನ ಗೋಕಲೆ, ಗೋಶಾಸ್ತ್ರದ ಬಗ್ಗೆ ನಾವು ಹೆಚ್ಚು ವಿಷಯಗಳನ್ನು ತಿಳಿಯಬಹುದು. ಪಾಂಡವರು 12 ವರ್ಷ ವನವಾಸ ಮುಗಿಸಿ ಒಂದು ವರ್ಷ ಅಜ್ಞಾತವಾಸವನ್ನು ಕಳೆಯಲು, ಯಾರಿಗೂ ಗುರುತು ಸಿಗದಂತೆ ವೇಷ ಮತ್ತು ಹೆಸರು ಬದಲಾಯಿಸಿಕೊಂಡು ವಿರಾಟರಾಜನ ಆಸ್ಥಾನದಲ್ಲಿದ್ದರು. ಪಾಂಡವರಲ್ಲಿ ಕೊನೆಯವನಾದ ಸಹದೇವನು ತನ್ನ ಹೆಸರು ತಂತಿಪಾಲನೆಂದು, ಪಾಂಡವರು ವನವಾಸಕ್ಕೆ ಹೋಗುವುದಕ್ಕಿಂತ ಮುಂದೆ ಅವರ ಗೋಪಾಲನಾ ಅಧ್ಯಕ್ಷನಾಗಿದ್ದನೆಂದು ಮತ್ತು ಗೋಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದಿರುವುದಾಗಿ ಹೇಳಿಕೊಂಡು ವಿರಾಟರಾಯನಿಗೆ ಪಾಂಡವರ ಗೋವುಗಳ ಹಿಂಡಿನ ವರ್ಣನೆಯನ್ನು ಹೀಗೆ ವರ್ಣಿಸಿರುತ್ತಾನೆ: ಪಾಂಡವರಲ್ಲಿ ಹಿರಿಯನಾದ ಧರ್ಮರಾಯನ ಹತ್ತಿರ ಪ್ರತಿವರ್ಗದಲ್ಲಿ 8 ಲಕ್ಷ ಆಕಳುಗಳಿದ್ದವು. 10 ಸಾವಿರ ಹಾಗೂ 1 ಲಕ್ಷ ಮತ್ತು 2 ಲಕ್ಷ ಆಕಳುಗಳುಳ್ಳ ಹಲವು ವರ್ಗಗಳು ಇದ್ದವು. ಈ ಎಲ್ಲ ಆಕಳುಗಳ ಹಿಂಡಿನ ಗೋಶಾಲೆಯ ಅಧ್ಯಕ್ಷನು ನಾನಾಗಿದ್ದೆ. ನಾನು 40 ಹರದಾರಿ (12 ಮೈಲು) ಒಳಗಿರುವ ದನಗಳ ಭೂತ, ವರ್ತಮಾನ ಮತ್ತು ಭವಿಷ್ಯದ ಚರಿತ್ರೆಯನ್ನು ಹೇಳಬಲ್ಲೆ. ಮೊದಲು ಎಷ್ಟು ಇದ್ದವು, ಈಗ ಎಷ್ಟಿದೆ ಮುಂದೆ ಎಷ್ಟಾಗಬಹುದು ಎಂಬ ಎಲ್ಲ ವಿಷಯಗಳ ಬಗ್ಗೆ ನನಗೆ ಪೂರ್ಣಜ್ಞಾನವಿದೆ. ಉತ್ತಮ, ಮಧ್ಯಮ, ಅಧಮ ಜಾತಿಗಳಿಗೆ ಅನುಗುಣವಾಗಿ ಅವುಗಳನ್ನು ವಿಂಗಡಿಸುವ ವಿದ್ಯೆಯು ನನಗೆ ಚೆನ್ನಾಗಿ ತಿಳಿದಿರುವುದು. ಅವುಗಳ ಹಾಲು ಕರೆಯುವುದರಲ್ಲಿ ಸಹ ನಾನು ಕುಶಲನಾಗಿರುತ್ತೇನೆ. ಮದಿಸಿದ ಹೋರಿಯನ್ನಾಗಲಿ; ಹಸುಗಳನ್ನಾಗಲಿ ಪಳಗಿಸುವ ವಿಧಾನವೂ ನನಗೆ ಗೊತ್ತಿದೆ. ಹಸುಗಳನ್ನು ನೋಡಿದೊಡನೆ ಅವುಗಳ ಶುಭಲಕ್ಷಣಗಳನ್ನು ತಿಳಿಯಬಲ್ಲೆನು. ಅವುಗಳ ಚಲನವಲನಗಳಿಂದಲೂ ಸಹ ಶುಭಾಶುಭಯೋಗಗಳನ್ನು ತಿಳಿಯುತ್ತೇನೆ. ಎತ್ತುಗಳಲ್ಲಿಯೂ ಸಹ ಶುಭಲಕ್ಷಣಯುಕ್ತವಾದ ಎತ್ತುಗಳಿವೆ ಎಂಬುದನ್ನು ಕೇವಲ ಅವುಗಳ ಮುಖಚರ್ಯೆ, ಕೊಂಬುಗಳು, ಗಮನ, ಇತ್ಯಾದಿಗಳಿಂದ ಪ್ರತ್ಯೇಕಿಸಬಲ್ಲೆನು.

ಕ್ಷಿಪ್ರಂಚಗಾವೋ ಬಹುಲಾಭವನ್ತಿ
ನ ತಾಸುರೋಗ ಭವತೀಹ ಕಶ್ಚನ ।
ತೈಸ್ತೈರು ಪಾಯೈರ್ವಿದಿತಂಮಯೈತ-
ದೇತಾನಿ ಶಿಲ್ಪಾನಿಮಯಿಸ್ಥಿತಾನಿ

ಋಷಭಾಂಶ್ಚಾಪಿ ಜಾನಾಮಿ ರಾಜಾನ್ಪೂಜಿತ ಲಕ್ಷಣಾನ್ ।
ಯೇಷಾಂ ಮೂತ್ರಮುಪಾಘ್ರಾಯ ಅಪಿವನ್ಧ್ಯಾ ಪ್ರಸೂಯತೇ

'ನಾನು ಗೋಶಾಲೆಯ ಅಧ್ಯಕ್ಷನಾದರೆ ಬಹು ಬೇಗ ಗೋವುಗಳ ಸಂತತಿಯು ಬೆಳೆಯುತ್ತದೆ. ಗೋವುಗಳಿಗೆ ಯಾವ ವಿಧವಾದ ರೋಗವೂ ಬರುವುದಿಲ್ಲ. ಒಂದು ವೇಳೆ ರೋಗ ಬಂದರೂ ಅನೇಕ ವಿಧವಾದ ಉಪಾಯಗಳಿಂದ ರೋಗವನ್ನು ಪರಿಹರಿಸುತ್ತೇನೆ. ನಾನು ಇದ್ದಲ್ಲಿ ಗೋವುಗಳ ಆರೋಗ್ಯವು ಉತ್ತಮವಾಗಿದ್ದು, ಅವು ಸಮೃದ್ಧಿಯಾಗಿ ಹಾಲು ಹಿಂಡಬಲ್ಲವು. ಗೋ ಸಂಬಂಧವಾದ ಈ ಕಲೆಗಳು ನನಗೆ ಜನ್ಮತಃ ಬಂದಿವೆ. ಶುಭಲಕ್ಷಣಗಳನ್ನು ಹೊಂದಿರುವ ಹೋರಿಯ ಮೂತ್ರವನ್ನು ಕೇವಲ ಆಘ್ರಾಣಮಾಡುವುದರಿಂದಲೇ ಬಂಜೆಯ ಆಕಳು ಗರ್ಭಧಾರಣೆ ಮಾಡುತ್ತದೆಯೋ, ಬರಡು ಆಕಳೂ ಸಹ ಕರುಹಾಕುತ್ತದೆಯೋ ಹೇಗೆ ಎಂಬುದನ್ನು ಹೇಳುವಷ್ಟು ಗೋಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದಿರುತ್ತೇನೆ.' ॥ ಇದರಿಂದ ನಾವು ಅಂದಿನ ಗೋಪಾಲನಾ ಪದ್ಧತಿ ಯಾವ ಪ್ರಕಾರ ಉಚ್ಚಸ್ಥಿತಿಯಲ್ಲಿ ಸಾಗಿತ್ತು ಎಂಬುದನ್ನು ತಿಳಿಯಬಹುದು. ಇಂತಹ ಉತ್ಕೃಷ್ಟ ಜಾತಿಯ ಹೋರಿಯನ್ನು ನಾನು ಮುಖಲಕ್ಷಣದಿಂದಲೇ ತಿಳಿಯಬಲ್ಲವನಾಗಿದ್ದೇನೆ. ಈ ಮುಖ ಸಾಮುದ್ರಿಕಶಾಸ್ತ್ರ ನನಗೆ ವಂಶಾನುಗತಿಯಿಂದ ಕರತಲಾಮಲಕವಾಗಿದೆ. ಹಸುಗಳು ಸತ್ವಯುಕ್ತಗಳಾಗಿದ್ದು, ದೋಷರಹಿತವಾದ ಹಾಲನ್ನು ಹಿಂಡುವುವು ಮತ್ತು ಹೆಚ್ಚು ಸಂಖ್ಯೆಗಳಲ್ಲಿ ಕರುಗಳನ್ನೀಯುತ್ತವೆ. ಕಳ್ಳಕಾಕರ ಕ್ರೂರಪ್ರಾಣಿಗಳ ಭಯವೂ ಇರುವುದಿಲ್ಲ. ಹಸುಗಳು ಯಾವ ವಿಧವಾದ ಭಯ, ಭೀತಿ, ರೋಗಾದಿ ಉಪದ್ರವಗಳಿಲ್ಲದೆ ನನ್ನ ಮೇಲ್ವಿಚಾರಣೆಯಲ್ಲಿ ಸಂತಸದಿಂದ ಕೂಡಿರುತ್ತವೆ.

ಕೌರವನು ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಕಂಡುಹಿಡಿದು, ಗುರುತಿಸಿ ಮತ್ತೆ ಅವರನ್ನು ಪುನಃ ವನವಾಸಕ್ಕೆ ಕಳುಹಿಸಬೇಕೆಂಬ ಆಲೋಚನೆಯಲ್ಲಿದ್ದಾಗ, ಅವನು ಭೀಷ್ಮರನ್ನು ಪಾಂಡವರು ಎಲ್ಲಿ, ಹೇಗಿದ್ದಾರೆ ಎಂದು ತಿಳಿಯುವುದು ಹೇಗೆ ಎಂದು ಕೇಳಲಾಗಿ ಅದಕ್ಕೆ ಭೀಷ್ಮರು ಒಂದು ಸೂಚನೆ ಮಾಡುತ್ತಾರೆ. 'ಯಾವ ಪ್ರದೇಶದಲ್ಲಿ ವನಗಳ ಸಂಖ್ಯೆಯು ಸದಾ ಹೆಚ್ಚುತ್ತ ಹೋಗುವುದೋ, ಎಲ್ಲಿ ಹಿಂಡಿನಲ್ಲಿ ನೋಡುವುದಕ್ಕಾಗಿಯೂ ಸಹ ಒಂದು ಬಡಕಲಾದ, ದುರ್ಬಲವಾದ

ಹಾಗೂ ರೋಗಿ ದನ ಕಾಣಿಸಿಕೊಳ್ಳುವುದಿಲ್ಲವೋ, ಹಾಲು, ತುಪ್ಪ, ಬೆಣ್ಣೆ, ಮೊಸರು, ಹೈನೋತ್ಪಾದನೆ ಹೆಚ್ಚುತ್ತಾ ಹೋಗುವುದೋ ಆ ಪ್ರದೇಶದಲ್ಲಿ ಧರ್ಮರಾಯನು ಇದ್ದೇ ಇರಬೇಕು ಎಂದು ಸೂಚನೆ ಮಾಡುತ್ತಾನೆ.[12] ಇದು ಪಾಂಡವರ ಗೋಕಲೆ, ಗೋಶಾಸ್ತ್ರ ಮತ್ತು ಗೋವಿದ್ಯೆಗಳ ನಿಪುಣತೆಗೆ ಸಾಕ್ಷಿಯಾಗಿದೆ ಮತ್ತು ಅಂದಿನ ಗೋಪಾಲನಾ ಪದ್ಧತಿಯ ಶ್ರೇಷ್ಠತೆಗೆ ಕನ್ನಡಿಯಂತಿದೆ.

ಗೋ (ಆಕಳು) ಮಹಿಮೆ

ಭಾರತದ ಪ್ರಾಚೀನ ಸಾಂಸ್ಕೃತಿಕ ಇತಿಹಾಸದಲ್ಲಿ ಆಕಳಿಗೆ ಒಂದು ಪೂಜ್ಯ ಗೌರವ ಸ್ಥಾನವಿದೆ. ಜಗತ್ತಿನ ಕಲ್ಯಾಣಕ್ಕಾಗಿ ಆಕಳು ಅಪಾರವಾದ ಸೇವೆಯನ್ನು ಸಲ್ಲಿಸುತ್ತ ಬಂದಿದೆ. ಗೋಮಾತೆಯಿಂದ ಮಾನವನಿಗೆ ಆಗಿರುವಷ್ಟು ಉಪಕಾರ ಬೇರೆ ಯಾವ ಪ್ರಾಣಿಯಿಂದಲೂ ಆಗಿರುವುದಿಲ್ಲ. ಅದನ್ನೇ ಸರ್ವಜ್ಞಕವಿ 'ತುರುಕರಿಲ್ಲದ ಊರು ನರಕ ಭಾಜನವಕ್ಕು; ತುರುಕರೆದರೆ ಉಣಲುಂಟು ಜಗಕೆಲ್ಲ ತುರುಕರೇ ದೈವ ಸರ್ವಜ್ಞ' ಎಂದು ಆಕಳ ಮಹಿಮೆಯನ್ನು ಕೊಂಡಾಡಿದ್ದಾನೆ. ಹೀಗೆ ಕಾಮಧೇನು ಪರಿಪೂರ್ಣ ಆಹಾರವಾದ ಹಾಲನ್ನು ಕರೆದು, ತನ್ನ ಜನ್ಮವನ್ನು ಪಾವನ ಮಾಡಿದರೆ, ವೃಷಭರಾಜನು 'ಕಾಯಕವೇ ಕೈಲಾಸ' ವೆಂದು ದುಡಿತದ ರೂಪದಲ್ಲಿ ಮಾನವ ಸೇವೆಯೇ ಪೂಜೆಯೆಂದು ದುಡಿದು ತನ್ನ ಜನ್ಮ ಸಾರ್ಥಕತೆಯನ್ನು ಪಡೆದಿರುತ್ತಾನೆ. ಅಲ್ಲದೆ ಗೋವು ಹೆಚ್ಚು ಆಹಾರೋತ್ಪಾದನೆಗೆ ಅತಿ ಅವಶ್ಯಕವಾದ ಗೊಬ್ಬರವನ್ನು ಪೂರೈಸಿ ಭೂಮಿಯನ್ನು ಫಲವತ್ತಾಗಿ ಮಾಡುತ್ತದೆ. ಈ ಪ್ರಕಾರ ಗೋಮಾತೆ, ಭೂಮಾತೆ ಮತ್ತು ರೈತನ ಸಮನ್ವಯ ಜೀವನದ ಫಲವೇ ಶಾಂತಿ, ಸುಖ, ಸಮೃದ್ಧಿ ಮತ್ತು ಸಂಪತ್ತಿನ ತಳಹದಿಯಾಗಿದೆ. 'ಗೌಮಿಮಾತಾ' 'ವೃಷಭೋಪಿತಾಯಿ' ಎಂಬ ವ್ಯಾಖ್ಯೆಗಳೂ, ನಂದಿ, ಪಾರ್ವತಿ ಪರಮೇಶ್ವರ ವಾಹನವೆಂಬ ಸಂಕೇತ, ಎಲ್ಲ ಶಿವಾಲಯಗಳ ಮುಂದೆ ಬಸವಣ್ಣನ ಪ್ರತಿಮೆ, ಇವೇ ಮೊದಲಾದ ಸಂದರ್ಭಗಳು ಇದಕ್ಕೆ ಸಾಕ್ಷಿಯಾಗಿವೆ; ಆರ್ಯ ಎಂದರೆ ಗೋಪಾಲಕ ಎಂದರ್ಥ. ಶ್ರೀಕೃಷ್ಣನನ್ನು ಗೋಪಾಲಕ (ಗೊಲ್ಲ) ನೆಂದು ಕರೆಯಲಾಗಿದೆ. ಜನಕಮಹಾರಾಜ ಮತ್ತು ದಿಲೀಪ ಚಕ್ರವರ್ತಿ, ಇವರು ಕೃಷಿ ಮಾಡುತ್ತಿದ್ದರೆಂದೂ, ಗೋಪಾಲಕರೆಂದೂ ಹೇಳಲಾಗಿದೆ. ಆಗಿನ ಕಾಲದಲ್ಲಿ ಗೋಪದವಿ ಒಂದು ರಾಜ್ಯ ಪದವಿಗಿಂತ ಹೆಚ್ಚಿನದಾಗಿ ಪರಿಗಣಿಸಲ್ಪಡುತ್ತಿತ್ತು. ಒಮ್ಮೆ ಒಬ್ಬ ಬೆಸ್ತರವನು ಚ್ಯವನ ಋಷಿಯನ್ನು ಅಲ್ಲಗಳೆಯಲು ಆ ಋಷಿಯು ಅವನಿಗೆ ಶಾಪಕೊಟ್ಟನು. ಈ ಶಾಪವಿಮೋಚನೆಗಾಗಿ ನಹುಷ ಮಹಾರಾಜನು ತನಗೆ ಪ್ರಿಯವಾದ ರಾಜ್ಯ, ಒಡವೆ ವಸ್ತುಗಳನ್ನೆಲ್ಲ ತ್ಯಜಿಸಲು ಸಿದ್ಧನಾದರೂ

ಶಾಪ ವಿಮೋಚನೆಯಾಗಲಿಲ್ಲ. ಕೊನೆಗೆ ಕೇವಲ ಒಂದು ಗೋದಾನದಿಂದ ಶಾಪ ವಿಮೋಚನೆಯಾಯಿತು. ಇದರಿಂದ ಗೋಹತ್ಯೆ ಎಷ್ಟೆಂದು ತಿಳಿಯಬಹುದು.

ಬೌದ್ಧ ಮತ್ತು ಜೈನ ಮತಗಳಲ್ಲಿಯೂ ಸಹ ಗೋವಿಗೆ ಹೆಚ್ಚಿನ ಪ್ರಾಧಾನ್ಯ ಇದೆ. ಬೌದ್ಧ ಮತವನ್ನು ಅವಲಂಬಿಸಿದ್ದ ಬರ್ಮಾ ದೇಶದ ರಾಜರು ಬೌದ್ಧ ಮತದ ಪ್ರಭಾವಕ್ಕೊಳಗಾಗಿ ಪ್ರಾಣಿ ಹಿಂಸೆ ಮಹಾಪಾಪವೆಂದು ತಿಳಿದು ಅಲ್ಲಿಯ ಕೊಲೆಗಡುಕರಿಗೆ ಮರಣದಂಡನೆಯನ್ನು ವಿಧಿಸುತ್ತಿರಲಿಲ್ಲವಾದರೂ ಗೋಹತ್ಯೆ ಮಾಡಿದವರನ್ನು ಗಲ್ಲಿಗೇರಿಸುತ್ತಿದ್ದರಂತೆ. ಈ ಬರ್ಮಾ ದೇಶದ ನ್ಯಾಯ ಪದ್ಧತಿ ಗೋಮಾತೆಯ ರಕ್ಷಣೆಯ ಬಗ್ಗೆ ಹೆಚ್ಚು ಮಾರ್ಗದರ್ಶಕವಾಗಿದೆ.

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಗೋವುಗಳ ಬಗ್ಗೆ ಹೇಳಿರುವುದು ಗಮನಾರ್ಹವಾಗಿದೆ. 'ಶಿಲಪ್ಪದಿಕಾರಂ' ನಲ್ಲಿ ಚೋಳವಂಶದ ರಾಜನ ವರ್ಣನೆ ಬರುತ್ತದೆ. ಅವನು ಯುವರಾಜಾಧಿಶಕ್ತನಾದ ತನ್ನ ಮಗ ರಥದ ಕೆಳಗಡೆ ಒಂದು ಕರುವನ್ನು ಕೊಂದದ್ದರಿಂದ ಅವನನ್ನು ಮೃತ್ಯುವಿಗರ್ಪಿಸಿದನು. ಕರು ಸತ್ತನಂತರ ಕರುವಿನ ತಾಯಿಯು ದುಃಖದಿಂದ ರಾಜದ್ವಾರಕ್ಕೆ ಬಂದು ಹೊರಗಡೆಯ ನ್ಯಾಯದ ಗಂಟೆಯನ್ನು ಬಾರಿಸತೊಡಗಿತು. ಗಂಟೆಯ ಶಬ್ದ ಕೇಳಿ ರಾಜನು ಹೊರಗೆ ಬಂದು ಹಸುವು ಗಂಟೆ ಬಾರಿಸುವುದನ್ನು ನೋಡಿ, ಸಮಾಚಾರ ತಿಳಿಯಲು ಅಧಿಕಾರಿಗಳನ್ನು ಕಳುಹಿಸಿದನು. ರಾಜನಿಗೆ ತನ್ನ ಮಗನಿಂದ ಅದರ ಕರುವಿನ ಮೃತ್ಯುವಾಗಿದೆಯೆಂದು ತಿಳಿದು ಮಗನನ್ನು ಶೂಲಕ್ಕೇರಿಸಲು ಅಪ್ಪಣೆಮಾಡಿದನು. ಈ ಘಟನೆಯು ತಂಜಾವೂರು ಜಿಲ್ಲೆಯ ತಿರುವಾರೂರು ಮಂದಿರದಲ್ಲಿ ಒಂದು ಕಲ್ಲಿನಲ್ಲಿ ಮಾಡಿದ ರಥದಲ್ಲಿ ಕೆತ್ತಲ್ಪಟ್ಟಿದೆ. 19ನೇ ಶತಮಾನದ ಯೋಗಿರಾಮಲಿಂಗ ಸ್ವಾಮಿಗಳು ಈ ಘಟನೆಯ ಉಲ್ಲೇಖನ ಮಾಡಿದ್ದಾರೆ. ಮಣಿ ಮೇಖಲೈ ಎಂಬ ಪುಸ್ತಕದಲ್ಲಿ ಆ ವೃತ್ತಾಂತ ವರ್ಣನೆಯಿದೆ.

ಮೊಗಲ್ ಸಾಮ್ರಾಜ್ಯದಲ್ಲಿ ದನಗಳ ಸ್ಥಿತಿಯು ಉತ್ತಮವಾಗಿತ್ತು. ಅಕಬರ್ ಬಾದಶಹನ ಕಾಲದಲ್ಲಿ 'ಹಾಲು ಒಂದು ರೂಪಾಯಿಗೆ 60 ತೊಲಿ ಹಾಗೂ ತುಪ್ಪ 100 ತೊಲಿಗೆ ಮಾರಾಟವಾಗುತ್ತಿತ್ತು. ಎರಡು ಆಣೆಗೆ ಹೊಟ್ಟೆತುಂಬ ಒಂದು ಊಟ ಮಾಡಬಹುದಿತ್ತು' ಎಂದು ಐನೆ ಅಕ್ಬರಿ ಮತ್ತು ಸಾಮ್ರಾಟ ಅಕಬರ್ ಎಂಬ ಪುಸ್ತಕಗಳಲ್ಲಿ ಉಲ್ಲೇಖವಾಗಿದೆ.

ಇಂದಿಗೂ ಮಹಾರಾಷ್ಟ್ರದಲ್ಲಿ ಶಿವಾಜಿ ಮಹಾರಾಜನನ್ನು ಗೋಬ್ರಾಹ್ಮಣಹಿತ ರಕ್ಷಕನೆಂದು ಗೌರವಿಸುತ್ತಿದ್ದಾರೆ.

ಮೊಗಲರ ಕಾಲದಲ್ಲಿ ಭಾರತಕ್ಕೆ ಬಂದ ಯೂರೋಪ್ ಯಾತ್ರಿಕರು ಇಲ್ಲಿ

ತಾವು ಕಂಡ ಗೋಸಂಬಂಧ ವಿಚಾರಗಳನ್ನು ಕುರಿತು ಬರೆದಿದ್ದಾರೆ:

(1) ಪೀಟರಾ ಡಿಲಾವೆಲ್ (1623) ಎಂಬ ಇಟಲಿಯ ಯಾತ್ರಿಕನು ಈ ರೀತಿ ಬರೆದಿದ್ದಾನೆ; ಸೂರತ್‌ನಲ್ಲಿ ಸವಾರಿಗೋಸ್ಕರ ಎತ್ತಿನ ರಥಗಳಿವೆ. ಎತ್ತುಗಳು ಬಲಿಷ್ಠ ಮತ್ತು ಶ್ವೇತವರ್ಣದವು. ಅವುಗಳ ಇಣಿಯು ಒಂಟೆಯ ಡುಬ್ಬದಂತೆ ಇದೆ. ಅವು ಕುದುರೆಗಳಂತೆ ಓಡುತ್ತವೆ.

....ಖಂಬಾಯತದಲ್ಲಿ ದನಕರುಗಳನ್ನು ಕೊಲ್ಲುವುದನ್ನು ನಿಷೇಧಿಸಲಾಗಿತ್ತು. ಇಲ್ಲಿಯ ಹಿಂದೂಗಳು ಬಾದಷಹನಿಗೆ ಕಂದಾಯ ರೂಪದಲ್ಲಿ ಹೇರಳ ದುಡ್ಡನ್ನು ಕೊಟ್ಟು ಈ ಅಧಿಕಾರ ಪಡೆದಿದ್ದರು ಮತ್ತು ಯಾವ ಮುಸಲ್ಮಾನರಾದರೂ ಗೋಹತ್ಯೆ ಮಾಡಿದಲ್ಲಿ ಅವರಿಗೆ ಜೀವಾವಧಿ ಕಠಿಣ ಶಿಕ್ಷೆಯಾಗುತ್ತಿತ್ತು. ಗೋಮಾಂಸ ತಿನ್ನುವುದು ಸರ್ವರಿಗೂ ನಿಷೇಧವಾಗಿತ್ತು. ಹಸುವಿನ ಹಾಲಿನಿಂದ ಜನರು ವೃದ್ಧಿಸುತ್ತಾರೆ ಮತ್ತು ಎತ್ತುಗಳ ಪರಿಶ್ರಮದಿಂದ ಸರ್ವ ವ್ಯವಸಾಯವಾಗುತ್ತದೆ. ಆದ್ದರಿಂದ ಗೋಮಾಂಸ ತಿನ್ನುವುದು ಮಹಾಪಾಪವೆಂಬುದೇ ಸರಿ.[13]

....ಕರ್ನಾಟಕದ ಜನರು ಹಸುವಿನ ಸಗಣಿಯಿಂದ ಮನೆಯನ್ನು ಸಾರಿಸುತ್ತಾರೆ. ಶ್ರೀಮಂತರೂ ಇದೇ ರೀತಿ ಮಾಡುತ್ತಾರೆ. ಇಟಲಿ ತಲುಪಿದ ಮೇಲೆ ಇದನ್ನು ಪ್ರಚುರಪಡಿಸಲು ಇಚ್ಛಿಸುತ್ತೇನೆ.[14]

......ಖಂಬಾಯತದಲ್ಲಿ ಕುಂಟಾದ ಕಾಯಿಲೆ ಪಶುಗಳಿಗೆ ರಕ್ಷಣೆಗಾಗಿ ಮತ್ತು ಚಿಕಿತ್ಸೆಗಾಗಿ ಗೋಗೃಹವಿದೆ. ಇದರ ಖರ್ಚನ್ನು ಹಿಂದೂಗಳು ಬಹಳ ಶ್ರದ್ಧೆಯಿಂದ ನಡೆಸುತ್ತಾರೆ.

(2) ಫ್ರೆಂಚ್ ಯಾತ್ರಿಕ ಟವರ್ನಿರ್ (1641–68) ಹೇಳಿಕೆ ಇಂತಿದೆ: ದೂರದ ಯಾತ್ರೆಯು ಇಲ್ಲಿ ಎತ್ತಿನ ಗಾಡಿಯಿಂದಾಗಿತ್ತು. ಗೋಧಿ ಹಿಟ್ಟಿನ ರೊಟ್ಟಿಗಳನ್ನು ಎತ್ತುಗಳಿಗೆ ತಿನ್ನಿಸುತ್ತಿದ್ದರು. ಸಾಮಾನುಗಳನ್ನು ಹೆಚ್ಚಾಗಿ ಎತ್ತುಗಳ ಮೇಲೆ ಹೊರಿಸುತ್ತಿದ್ದರು. ವ್ಯಾಪಾರವೆಲ್ಲವೂ ಎತ್ತಿನ ಮೇಲೆ ಆಗುತ್ತಿತ್ತು. ಗೋಧಿ ಅಕ್ಕಿ, ಬೇಳೆ ಮುಂತಾದವನ್ನು ಹೊತ್ತಿರುವ ಹನ್ನೆರಡು ಸಾವಿರ ಎತ್ತುಗಳು ಒಟ್ಟಿಗೆ ಹೋಗುತ್ತಿದ್ದವು. ಎತ್ತುಗಳ ಮೇಲೆ ವರ್ತಕರಿಗೆ ವ.ಮತೆ. ಯಾರಿಗೆ ಮಕ್ಕಳಿಲ್ಲವೋ ಅವರು ಅವುಗಳನ್ನು ಮಕ್ಕಳೆಂದು ತಿಳಿಯುತ್ತಿದ್ದರು. ಅಲ್ಲದೆ, ಅಂದಿನ ಕಾಲದಲ್ಲಿ ಸೈನಿಕರಿಗೆ ಆಹಾರವಸ್ತುಗಳನ್ನು ಮತ್ತು ಯುದ್ಧಕ್ಕೆ ಬೇಕಾದ ಸಾಧನ ಸಾಮಗ್ರಿಗಳನ್ನು ಪೂರೈಸುವ ಮತ್ತು ಸಾಗಾಟ ಮಾಡುವ ಮಹತ್ವಪೂರ್ಣವಾದ ಕೆಲಸಗಳನ್ನು ಬಂಜಾರೆ ಜನರು ತಮ್ಮ ದನಗಳ ಹಿಂದಿನ ಸಹಾಯದಿಂದ ಮಾಡುತ್ತಿದ್ದರು. ಮೊದಲು ಈ

ಬಂಜಾರೆ ಜನರು ದಕ್ಷಿಣ ಭಾಗಕ್ಕೆ ಮೊದಲನೆಯ ಅಸಫ್‌ನಿಜಾಮ್ ಸಾಹೇಬರ ಜೊತೆಗೆ ಬಂದರು. ಆಗ ಅವರ ಸಂಗಡ 1,90, 000 ದನಗಳ ಹಿಂಡು ಇತ್ತು. ಈ ದನಗಳ ಬಲಾಬಲದ ಮೇಲೆ ಜಯಾಪಜಯಗಳು ಅವಲಂಬಿಸಿರುತ್ತಿದ್ದವು. ಕಾರಣ, ಸರ್ಕಾರ ಇವಕ್ಕೆ ಬಹಳ ಮಹತ್ವ ಕೊಡುತ್ತಿತ್ತು. ಒಮ್ಮೆ ದೇಶದಲ್ಲಿ ನೀರು ಮತ್ತು ಆಹಾರ ಬರಗಾಲ ಉಂಟಾಗಲು, ಆಗ ಅಸಫ್‌ನಿಜಾಮಸಾಹೇಬು 'ದನಗಳಿಗೆ ನೀರು ಸಿಗದಿದ್ದರೆ ಯುದ್ಧ ಸಿಪಾಯಿಗಳಿಗಾಗಿ ತುಂಬಿಟ್ಟಿದ್ದ ನೀರನ್ನು ದನಗಳಿಗೂ ಸಹ ಉಪಯೋಗಿಸಬೇಕು. ಮೇವು ಸಿಗದಿದ್ದರೆ ಸಿಪಾಯಿಗಳಿಗಾಗಿ ಹಾಕಿದ್ದ ಹುಲ್ಲಿನ ಗುಡಿಸಲು ಜೋಪಡಿಯಿಂದ ಹುಲ್ಲನ್ನು ತೆಗೆದು ದನಗಳಿಗೆ ಮೇಯಿಸಬೇಕು ಮತ್ತು ಸೈನಿಕ ಕುದುರೆಗಳು ಎಲ್ಲಿ ಮೇಯಲು ಹೋಗುತ್ತವೆಯೋ ಅಲ್ಲಿ ಈ ಬಂಜಾರೆ ಎತ್ತುಗಳನ್ನು ಸಹ ಮೇಯಿಸಬೇಕು' ಎಂದು ಆಜ್ಞೆ ಹೊರಡಿಸಿದ್ದನು. ಈ ಆಜ್ಞೆಯನ್ನು ಹೈದರಾಬಾದಿನ ನಿಜಾಮ ವಂಶದವರೆಲ್ಲರೂ ಚಾಚೂತಪ್ಪದೆ ಅನುಸರಿಸುತ್ತ ಬಂದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇದರಿಂದ ದನಗಳ ಮಹತ್ವವನ್ನು ತಿಳಿಯಬಹುದು.

(3) ವೆನಿಸ್ ಯಾತ್ರಿಕ ಮನೂಚಿ 1655–1717 ರವರೆಗೆ ಭಾರತದಲ್ಲಿದ್ದನು. ಔರಂಗಜೇಬ, ಶಿವಾಜಿ, ಸಂಭಾಜಿ, ಮೊದಲಾದವರ ಪರಿಚಯ ಅವನಿಗಿತ್ತು. ಮೊಗಲ ಬಾದಷಹಾನ ವಿಚಾರ ಬರೆಯುತ್ತಾ ಗೋಸಂಬಂಧವಾಗಿ ಅವನು ಹೀಗೆ ಬರೆದಿರುತ್ತಾನೆ.

'ಹಿಂದೂ ಜನರು ಗೋಮೂತ್ರ ಪ್ರಾಶನ ಮಾಡುತ್ತಾರೆ, ಸರ್ವಾಂಗಕ್ಕೆ ಲೇಪಿಸುವರು. ಸಾಹುಕಾರರು ಸಹ ಬೆಳಿಗ್ಗೆ ಎದ್ದು ಹಸುವಿನ ಬಾಲವನ್ನು ತಮ್ಮ ತಲೆಯ ಮೇಲಿಟ್ಟು, ಗೋಮೂತ್ರದಿಂದ ಪವಿತ್ರವಾದ ಸ್ಥಳದಲ್ಲಿ ಕುಳಿತು ಉಪಾಸನೆ ಮಾಡುತ್ತಾರೆ.'

ಟಿಪ್ಪು ಸುಲ್ತಾನನು 60,000 ಜೊತೆ ಎತ್ತುಗಳ ಬಂಜಾರ ದಳವನ್ನಿಟ್ಟಿದ್ದನು. 'ಆರ್ಮಿ ಆಫ್ ಇಂಡಿಯನ್ ಮೊಗಲ್ಸ್'ದ ಲೇಖಕನಾದ ಆರ್ಯಟನ್ 5000 ಎತ್ತುಗಳ ಸಮೂಹ ಹೋಗುತ್ತಿದ್ದುದನ್ನು ನೋಡಿದ್ದೇನೆಂದು ಹೇಳಿರುತ್ತಾನೆ.

ಮಹಾತ್ಮಗಾಂಧಿ ಅವರೂ ಸಹ ತಮ್ಮ ಅಸ್ಪೃಶ್ಯತಾ ನಿವಾರಣೆ ಎಂಬ ಲೇಖನದಲ್ಲಿ 'ನನ್ನ ಜೀವನದ ಎರಡು ಮುಖ್ಯ ಆಶಯಗಳೆಂದರೆ ಅಸ್ಪೃಶ್ಯತಾನಿವಾರಣೆ ಮತ್ತು ಗೋರಕ್ಷಣೆ. ಈ ಎರಡೂ ಕಾರ್ಯಗಳು ಎಂದು ಪೂರ್ಣವಾಗುವವೋ ಅಂದೇ ಸ್ವರಾಜ್ಯ ಮತ್ತು ಮೋಕ್ಷ' ಎಂದು ಹೇಳಿರುತ್ತಾರೆ.

ಹೀಗೆ ನಮ್ಮಲ್ಲಿ ದನಗಳ ಮತ್ತು ಜನಗಳ ಸಹಜೀವನ, ಸಾವಿರಾರು ವರ್ಷಗಳಿಂದ ಹಾಸು ಹೊಕ್ಕಾಗಿದೆ. ಜನ ಮತ್ತು ದನ ಸಮರಸವಾಗಿ ಬೆರೆತು ಬಾಳಿ, ಜೀವನ ಸಾಗುತ್ತಿದೆ. ಒಂದನ್ನು ಬಿಟ್ಟು ಇನ್ನೊಂದು ಬಾಳಲಾರದು. ಹಳ್ಳಿಗಳಲ್ಲಿ ರೈತನೊಂದಿಗೆ ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ದುಡಿದು ಉತ್ತಮ ಬೆಳೆ ಬೆಳೆಯಲು ಸಹಾಯವಾಗುತ್ತದೆ. 'ಸೇವೆಯೇ ಪೂಜೆ, ಕರ್ಮವೇ ಇಹಪರ ಸಾಧನ' ಇದೇ ಆಕಳಿನ ಜೀವನದ ಉದ್ದೇಶ. ಒಕ್ಕಲುತನಕ್ಕೆ ಆಕಳು ಮತ್ತು ಎತ್ತುಗಳು ಆಧಾರಭೂತವಾಗಿವೆ. ಬೆಳೆ ಕೈಗೆ ಬಂದಮೇಲೆ ಆಕಳು ರೈತನಿಗೆ 'ಎಲೆ ಮಾನವ, ನಿನ್ನ ಮಕ್ಕಳಿಗೆ ಹಾಲು ಕೊಡುವುದಲ್ಲದೆ, ನಿನ್ನ ಜೀವನಕ್ಕಾಗಿ ಬತ್ತ, ರಾಗಿ, ಜೋಳ, ಗೋಧಿ ಮತ್ತು ವಿವಿಧ ಕಾಳು ಧಾನ್ಯಗಳನ್ನು ಬೆಳೆದುಕೊಡುತ್ತೇನೆ. ಅವುಗಳನ್ನು ನೀನು ಉಪಯೋಗಮಾಡು. ಆದರೆ ನಾನು ಮಾಡಿದ ಸೇವೆಗಾಗಿ ಕೊಯ್ಲು ಮಾಡಿದ ನಂತರ ಉಳಿದ ಕಾಳುರಹಿತವಾದ, ನಿನಗೆ ಹೆಚ್ಚು ಉಪಯೋಗವಿಲ್ಲದ ಮೇವು, ಹೊಟ್ಟು, ಸೊಪ್ಪು, ಹುಲ್ಲು, ದಂಟು, ಶೇಂಗಾ ಹಿಂಡಿ ಕೊಡು; ನಾನು ಕಸತಿಂದು ಅಮೃತ ಸಮಾನವಾದ ಹಾಲು ಕೊಡುತ್ತೇನೆ, ಅಲ್ಲದೆ, ನಾನು ಸತ್ತ ಮೇಲೂ ಸಮರಾಯರ ಮೆತ್ತನೆ ಕಾಲಿಗೆ ಮುಳ್ಳು, ಕಲ್ಲು ಚುಚ್ಚದಂತೆ ಪಾದರಕ್ಷೆಯಾಗಿ ಜೀವನವನ್ನು ಮಾನವನ ಕಲ್ಯಾಣಕ್ಕಾಗಿ ಸೇವಿಸುತ್ತೇನೆ' ಎಂದು ಹೇಳುತ್ತದೆ. ಎಲ್ಲಿ ಹಾಲ ಇದೆಯೋ ಅಲ್ಲಿ ಬುದ್ಧಿ; ಎಲ್ಲಿ ಬುದ್ಧಿ ಇದೆಯೋ ಅಲ್ಲಿ ಜಯ; ಜಗತ್ತಿನಲ್ಲಿ ಹಾಲು ಕುಡಿಯದೆ ಯಾರೂ ದೊಡ್ಡವರಾಗಿ ಬೆಳೆದಿಲ್ಲವೆಂದು ಹೇಳಬಹುದು. ಯಾವ ಪ್ರತಿಫಲದ ಆಕಾಂಕ್ಷೆ ಇಲ್ಲದೆ ಮಾನವನ ಕಲ್ಯಾಣಕ್ಕಾಗಿ ಸೇವೆಸಲ್ಲಿಸುತ್ತಿರುವ ಜಗನ್ಮಾತೆಯಾದ ಕಾಮಧೇನುವಿಗಿಂತ ಬೇರೆ ಪರೋಪಕಾರಿ ಜೀವ ಇರಲಾರದು.

ಗೋವಿಗೆ ನಮ್ಮ ಧರ್ಮ ಮತ್ತು ಸಂಸ್ಕೃತಿಯಲ್ಲಿ ಎಂಥ ಪವಿತ್ರ ಪೂಜ್ಯಸ್ಥಾನವಿತ್ತು ಎಂಬುದನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದು.

> ಗಾಂ ದೃಷ್ಟ್ವಾಚ ನಮಸ್ಕೃತ್ಯ ಕೃತ್ವಾ ಚೈವ ಪ್ರದಕ್ಷಿಣಂ ।
> ಪ್ರದಕ್ಷಿಣ ಕೃತಾತೇನ ಸಪ್ತದ್ವೀಪಾ ವಸುಂಧರಾ ॥
> ಸರ್ವಕಾಮದುಘೇ ದೇವಿ ಸರ್ವತೀರ್ಥಾಭಿಷೇಚನೀ ।
> ಪಾವನೀ ಸುರಭಿ ಶ್ರೇಷ್ಠೇ ದೇವಿ ತುಭ್ಯಂ ನಮೋಸ್ತುತೇ ॥

ಹೋರಿಯ ವೀರ್ಯದ ಪ್ರಭಾವ

ಹೈನ ತಳಿಯ ದನಗಳ ಅಭಿವೃದ್ಧಿಯ ಕಾರ್ಯದಲ್ಲಿ ಹೋರಿಯ ವೀರ್ಯದ ಪಾತ್ರ ಪ್ರಧಾನವಾದದ್ದು. ಒಂದು ಹೋರಿ ಅರ್ಧ ಹಿಂಡಿಗೆ ಸಮಾನ. ಹೀಗೆ

ಹೋರಿಯ ಮಹತ್ವ ವೇದಕಾಲದಿಂದಲೂ ನಮ್ಮಲ್ಲಿಯ ಜನರಿಗೆ ತಿಳಿದಿತ್ತು. ವೇದದಲ್ಲಿ ಹೋರಿಯ ವೀರ್ಯದ ಮಹತ್ವವನ್ನು ಹೀಗೆ ವರ್ಣಿಸಲಾಗಿದೆ:

ಪಿತಾವತ್ಸಾನಾಂ ಪತಿರಘ್ನ್ಯಾನಾಮದೋಪಿತಾಮಹತಾಂ ಗರ್ಗರಾಣಾಂ।
ವತ್ಸೋಜರಾಯುಪ್ರತಿದುಕ್ಷೀಯೂಷ ಅಮಿಕ್ಷಾಘೃತಂ ತದ್ವಸ್ಯರೇತಃ॥

ಹೋರಿಯು ಅಮೃತದಂಥಾ ರುಚಿಯುಳ್ಳ ಹಾಲನ್ನು ಕೊಡುವ ಕರುಗಳ ತಂದೆ; ಗೋವುಗಳ ಗೋಪತಿ ಮತ್ತು ಹೈನ ತಳಿಯ ದನಗಳ ಹಿಂಡಿನ ನಾಯಕ. ಈ ಎಲ್ಲ ಉಚ್ಚ ಗುಣಗಳು ಹೋರಿಯ ವೀರ್ಯವನ್ನು ಅವಲಂಬಿಸಿರುತ್ತದೆ. ಆಕಳ ಹಾಲು, ಬೆಣ್ಣೆ, ತುಪ್ಪ, ಮೊಸರಿನಲ್ಲಿ ಉಂಟಾಗುವ ನ್ಯೂನಾಧಿಕಗಳು ಮತ್ತು ಮುಂದಿನ ಹೈನ ತಳಿಯ ಉತ್ತರೋತ್ತರ ಅಭಿವೃದ್ಧಿ, ಹೋರಿಯ ವೀರ್ಯದ ಗುಣವನ್ನು ಅವಲಂಬಿಸಿರುತ್ತದೆಯೆಂದು ಹೋರಿಯ ವೀರ್ಯದ ಪ್ರಭಾವವನ್ನು ವರ್ಣಿಸಲಾಗಿದೆ.

ಉಪೇದ ಮುಪಪರ್ಚನ ಮಾಸುಗೋಷೂಪಪೃಚ್ಯತಾ ।
ಉಪಋಷಭಸ್ಯ ರೇತತ್ ದೇವೇಂದ್ರ ತವವೀರ್ಯೇ ॥

ಅಂದರೆ, ಆಕಳ ಹಾಲು ಪರಿಪೂರ್ಣವಾದ ಆಹಾರ. ಇದರಲ್ಲಿ ಪರಿಪೂರ್ಣವಾದ ಮತ್ತು ಪುಷ್ಟಿಕಾರಕವಾದ ಆಹಾರ ವಸ್ತುಗಳು ಅಡಗಿರುತ್ತವೆ. ಇವೆಲ್ಲವೂ ಆಕಳು



ಚಿತ್ರ 2: ನಂದಿ

ಗಳಲ್ಲಿ ಪರಿಪೂರ್ಣವಾಗಿರಲಿ; ಇಂದ್ರನೆ, ನಿನ್ನ ಪರಾಕ್ರಮದಲ್ಲಿರುವಂತೆ ಹೋರಿಯ ವೀರ್ಯದಲ್ಲಿ ಇವೆಲ್ಲವೂ ಕೂಡಿರುತ್ತವೆ.

ಯುವನಾಮಿಂದ್ರಿಯೋಪೇತಂಶತೇನ ಸಹಯೂಥಪಮ್ ।
ಗವೇಂದ್ರ ಬ್ರಾಹ್ಮಣೇಂದ್ರಾಯ ಭೂರಿ ಶೃಂಗಮಲಂಕೃತಮ್ ॥

ಇಂದಿನ ಹೋರಿ ಕರುವು ಯೌವನಕ್ಕೆ ಬಂದ ಮೇಲೆ ಅದು ನೂರಾರು ಹಸುಗಳಿಗೆ ವೀರ್ಯವನ್ನು ಕೊಡುವಂತಹ ಯೂಥಪತಿ (ನಾಯಕ) ಯಾಗುವುದು. ಮುಂದೆ ವೀರ್ಯಶಕ್ತಿಸಂಪನ್ನನಾಗಿ ಇಂದ್ರಿಯೋಪೇತವೂ ಆಗುವುದು. ಅಂದರೆ, ಇಂದ್ರನ ಪರಾಕ್ರಮ ಶಕ್ತಿಗೆ ಸರಿಸಮಾನವಾದ ವೀರ್ಯಶಕ್ತಿ ಪಡೆದು ಗವೇಂದ್ರ ಹಾಗೂ ವೃಷಭೇಂದ್ರನಾಗುವುದು. ಇಂಥಾ ಹೋರಿಯನ್ನು ದಾನಪಡೆಯುವವನು ಇಂದ್ರನ ಶಕ್ತಿಗೆ ಸಮಾನನಾಗಿರಬೇಕು. ಅಂದರೆ, ಗೋತ್ರ ಪ್ರವರ್ತಕನಾಗುವ ಶಕ್ತಿಯುಳ್ಳವನಾಗಿರಬೇಕು. ಒಂದು ವೃಷಭದಾನ ನೂರು ಗೋದಾನಕ್ಕೆ ಸಮಾನ. ಶತಗೋವನ್ನು ಸ್ವೀಕರಿಸುವ ಶಕ್ತಿಯುಳ್ಳವನು ಮಾತ್ರ ಒಂದು ವೃಷಭದಾನವನ್ನು ಸ್ವೀಕರಿಸಬಹುದು ಎಂದು ಹೇಳಲಾಗಿದೆ. ಇದರಿಂದ ನಾವು ಒಟ್ಟಿನಲ್ಲಿ ಹೋರಿಗೆ ಅಂದಿನ ಕಾಲದಲ್ಲಿ ಎಷ್ಟು ಮಹತ್ವದ ಸ್ಥಾನವನ್ನು ಕೊಟ್ಟಿದ್ದರು ಎಂಬುದನ್ನು ತಿಳಿಯಬಹುದು: ಶ್ರೇಷ್ಠತಳಿಯ ಹೋರಿಯಿಂದ ಉತ್ತಮ ಹೈನ ತಳಿಯ ಆಕಳುಗಳ ಉತ್ಪಾದನೆ; ಉತ್ತಮ ಹೈನ ತಳಿಯ ದನಗಳಿಂದ ಹೆಚ್ಚು ಹಾಲಿನ ಉತ್ಪಾದನೆ; ಉತ್ತಮ ಹಾಲಿನಿಂದ ಬುದ್ಧಿವಂತ ಮತ್ತು ಆರೋಗ್ಯ ಪ್ರಜೆಗಳ ಉತ್ಪಾದನೆ; ಆರೋಗ್ಯ ಮತ್ತು ಬುದ್ಧಿವಂತ ಪ್ರಜೆಗಳಿಂದ ದೇಶದ ಕಲ್ಯಾಣವೆಂದು ವೇದದಲ್ಲಿ ಘೋಷಿಸಲ್ಪಟ್ಟಿದೆ. ವೇದವಲ್ಲಿ ಉತ್ತಮ ಹೋರಿಯನ್ನು ಸ್ವರೂಪದರ್ಶಕವಾಗಿ ವರ್ಣಿಸಲಾಗಿದೆ:

.... ವೃಷಭಃ ಪಿತಾಮೇ।
ಉನ್ನತಸ್ಕಂಧಃ ತತಾದ್ಯಾಸ್ಯತು ಲಾಂಗೂಲ ಭೂಷಣಃ॥
ಮಹಾಕಟಿತಟಸ್ಕಂಧೋ ವೈಡೂರ್ಯಮಣಿ ಲೋಚನಃ।
ಪ್ರವಾಲಗರ್ಭಶೃಂಗಾಗ್ರಃ ಸುದೀರ್ಘಬಹುವಾಲಧಿಃ॥
ನವಾಷ್ಟನಶಸಂಖ್ಯೈಸ್ತು ತೀಕ್ಷಾಗ್ರೈರ್ದಶನಃ ಶುಭೈಃ।
ಪೃಥುಕರ್ಣೋ ಮಹಾಸ್ಕಂಧಃ ಸೂಕ್ಷ್ಮರೋಮಚಯೋಪೇತ್॥
ಭೂಮೌಕರ್ಷತಿ ಲಾಂಗೂಲಂ ಪುನಶ್ಚ ಸ್ಥೂಲವಾಲಧಿಃ।

ವೃಷಭ ಆಕಳುಗಳ ತಂದೆ. ಉತ್ತಮವಾದ ಹೋರಿಯ ಲಕ್ಷಣಗಳು ಈ ರೀತಿಯಾಗಿರಬೇಕು: ಎತ್ತರವಾದ ಬಾಹುಭುಜ ಬಲಗಳಿಂದ ಕೂಡಿರಬೇಕು (ಹರವಾದ ಎದೆ), ಎತ್ತರವಾದ, ದಪ್ಪನಾದ, ಸುಂದರವಾದ ಇಣೆಯಿರಬೇಕು; ನೀಳಾದ ಬಾಲದಿಂದ ಭೂಷಿತವಾಗಿರಬೇಕು; ಅಗಲವಾದ ಬೆನ್ನಿನಿಂದ ಕೂಡಿರಬೇಕು; ವೈಢೂರ್ಯ

ದಂತೆ ಪ್ರಕಾಶಮಯವಾದ ಕಣ್ಣುಗಳಿರಬೇಕು; ಹವಳದಂತೆ ಕೆಂಪಾದ ಉದ್ದವಾದ ಕೋಡುಗಳಿಂದ ಕೂಡಿರಬೇಕು; ದಪ್ಪನಾದ ಕುತ್ತಿಗೆಯಿಂದ ಶೋಭಿಸಬೇಕು; 9,8,10 ಚೂಪಾದ ಹಲ್ಲುಗಳಿಂದ ಕೂಡಿರಬೇಕು; ದೊಡ್ಡದಾದ ಅಗಲವಾದ ಕಿವಿಗಳಿರಬೇಕು; ಮೃದುವಾದ ಚರ್ಮ, ರೇಶ್ಮೆಯಂತೆ ನಯವಾದ ಹೊಳೆಯುತ್ತಿರುವ ಕೂದಲುಗಳಿಂದ ಕೂಡಿರಬೇಕು; ನೆಲಕ್ಕೆ ಮುಟ್ಟುತ್ತಿರುವ ಉದ್ದವಾದ ಮತ್ತು ತುದಿಯಲ್ಲಿ ಗೊಂಡೆಯಂತೆ ಜೋತಾಡುತ್ತಿರುವ ಕೂದಲುಗಳ ಗುಚ್ಛದಿಂದ ಕೂಡಿರಬೇಕು, ಹೀಗೆ ವೃಷಭ ಸರ್ವಾಂಗ ಶುದ್ಧ ಶೋಭಿತನಾಗಿರಬೇಕು. ಇಂಥ ಶುಭ ಲಕ್ಷಣಗಳಿಂದ ಕೂಡಿದ ಹೋರಿಯ ರಕ್ತದಲ್ಲಿ ಉತ್ತಮ ಆನುವಂಶಿಕ ಗುಣಗಳು ಅಂತರ್ಗತವಾಗಿರುತ್ತವೆ.

ಇದೇ ರೀತಿ ನಮ್ಮ ಹಿಂದಿನ ಜಾನಪದ ಹಳ್ಳಿಯ ಸಾಹಿತ್ಯದಲ್ಲಿಯೂ ಸಹ ಉತ್ತಮ ದನಗಳ ಲಕ್ಷಣಗಳ ವರ್ಣನೆಯನ್ನು ನೋಡಬಹುದು:

ಉತ್ತಮ ಆಕಳ ವರ್ಣನೆ ಹಿಂದಿನ ಭಾಗವು ದೊಡ್ಡದಾಗಿರಬೇಕು; ಮುಂದಿನ ಭಾಗವು ಸಣ್ಣದಾಗಿರಬೇಕು; ತಲೆಯು ಸಣ್ಣದಾಗಿ ಮುಖವು ಸರಳವಾಗಿ, ಶಾಂತವಾಗಿ, ಕಣ್ಣು ತೇಜವಾಗಿರಬೇಕು; ಕೋಡುಗಳು ಸಣ್ಣ, ಮನೋಹರವಾಗಿ, ನೋಡಲು ತೆಳ್ಳನೆ ಕುತ್ತಿಗೆ ಇರಬೇಕು: ಬೆನ್ನು ಸರಳನಾಗಿ ಹೊಟ್ಟೆ ಸ್ಥೂಲವಾಗಿ ದೊಡ್ಡದಾಗಿ ಜೋತಾಡುತ್ತಿರಬೇಕು; ಕಾಲಿನ ನರಗಳು ಸ್ಪಷ್ಟ ಕಾಣಿಸುತ್ತ ಕಾಲು ಗಿಡ್ಡವಾಗಿ ಗಡುತರವಿರಬೇಕು; ಬಾಲ ನೇರಾಗಿ ಉದ್ದವಿದ್ದು ಕೆಚ್ಚಲು ದೊಡ್ಡದಾಗಿ ಮೊಲೆಗಳುದ್ದವಿದ್ದು ಸರಿಯಾಗಿರಬೇಕು; ಉತ್ಸಾಹ ಗುಣದಿಂದ ಸಮಾಧಾನವಿರಬೇಕು; ಸಿಟ್ಟಿನ, ಬೆದರುವ ಗುಣವಿರಬಾರದು; ಕಟ್ಟಿದನಂತರ ಮೂರು ತಿಂಗಳಾದಮೇಲೆ ಹಾಲು ಕರೆಯುವುದನ್ನು ನಿಲ್ಲಿಸಬೇಕು; ಒಟ್ಟಿನಲ್ಲಿ ಆರು ತಿಂಗಳು ಹಿಂಡಬೇಕು.

ಹೂಡುವ ಎತ್ತುಗಳ ಲಕ್ಷಣಗಳು ದೊಡ್ಡವಿದ್ದು ಅವು ಬೀಸಾಗಿರಬೇಕು; ಎದೆ ಹರವಿದ್ದು ಮುಂಭಾಗವು ತುಂಬಿರಬೇಕು; ಎರೆನಾಡಿನ ಕೆಲಸದ ದನಗಳ ಕಾಲು ಕಿರಿಯಾಗಿದ್ದು ಗಡುತರವಿರಬೇಕು; ಗುಡ್ಡಗಾಡು ಭೂಮಿಯ ಕೆಲಸದ ದನಗಳು ಗಿಡ್ಡಾಗಿ ಬಿರುಸಾಗಿ, ಖುರ ಬಿರುಸಾಗಿರಬೇಕು; ಮಳಲು ಭೂಮಿಯ ಕೆಲಸದ ದನಗಳು ಸರಳವಾಗಿ, ಗಟ್ಟಿಯಾಗಿ ಕೊಳಗ ಉದ್ದವಿರಬೇಕು; ಹೆಗಲು ಕುತ್ತಿಗೆ ಸಣ್ಣಗಿರಬೇಕು; ಎದೆ ಅಗಲವಾಗಿರಬೇಕು; ಹೂಡುವ ದನಗಳು ಸಿಟ್ಟಿನವಿರಬೇಕು; ಇಣಚಿತೋಬರಿ ಸಣ್ಣವಿರಬೇಕು.

ಹೋರಿಯ ಅಂಗಾಂಗಗಳ ರಚನೆ ಮತ್ತು ಮುಖಗಳ ಬಾಹ್ಯ ಲಕ್ಷಣಗಳು, ಅದರ ರಕ್ತದಲ್ಲಿ ಅಂತರ್ಗತವಾಗಿರುವ ಆನುವಂಶಿಕ ಗುಣಗಳನ್ನು ಪ್ರತಿಬಿಂಬಿಸುತ್ತವೆ. ಒಟ್ಟಿನಲ್ಲಿ ನಮ್ಮಲ್ಲಿಯ ಹಿಂದಿನ ಕಾಲದ ಪಶುಪಾಲಕರು ಹೋರಿಯ ವೀರ್ಯದ ಪ್ರಭಾವವನ್ನು ಮತ್ತು ಹೈನ ತಳಿಯ ಆಕಳುಗಳ ಲಕ್ಷಣಗಳು ಮತ್ತು ಅವು ಪಡೆದಿರುವ ಆನುವಂಶಿಕ ಗುಣಗಳನ್ನು, ಅವುಗಳ ಬಾಹ್ಯ ಶರೀರ ಅಂಗಾಂಗಗಳ ರಚನೆ ಮತ್ತು ಮುಖ ಲಕ್ಷಣ ನಿರೂಪಣೆಗಳಿಂದ ಕಂಡುಕೊಂಡು ಇಂಥ ಶುಭಲಕ್ಷಣಗಳಿಂದ ಕೂಡಿದ ಹೋರಿಯನ್ನು ಮುಂದಿನ ದನಗಳ ಸಂತಾನೋತ್ಪಾದನೆಗೆ ಉಪಯೋಗಿಸಿಕೊಂಡು ದನಗಳ ಸಂವರ್ಧನೆ ಮಾಡಿದ್ದರ ಫಲವಾಗಿ, ಅಮೃತಮಹಾಲ್, ಹಳ್ಳಿಕಾರ್, ಖಿಲಾರಿ, ಗೀರ, ಕಾಂಕ್ರೇಜ, ಸಿಂಧಿ, ಹರಿಯಾನ ಮೊದಲಾದ ಶ್ರೇಷ್ಠ ತರಗತಿಯ ದನಗಳನ್ನು ಇಂದು ನಾವು ನೋಡುತ್ತಿದ್ದೇವೆ. ಹೀಗೆ ಅಂತರ್ಗತವಾಗಿರುವ ಆನುವಂಶಿಕ ಗುಣಗಳನ್ನು ಬಾಹ್ಯಲಕ್ಷಣಗಳ ಹೊರನೋಟದಿಂದ ಗುರುತಿಸುವಷ್ಟು ಸೂಕ್ಷ್ಮದೃಷ್ಟಿ ಮತ್ತು ಆಳವಾದ ಅನುಭವವನ್ನು ಅಂದಿನ ಪಶುಪಾಲಕರು ಕಂಡುಕೊಂಡಿದ್ದರು. ಅಂದಿನ ಜಾಣ ಪಶುಪಾಲಕರು ಮುಖಸಾಮುದ್ರಿಕ ವಿದ್ಯೆಯಲ್ಲಿ ಪರಿಣತೆಯನ್ನು ಪಡೆದಿದ್ದರು. ಇಲ್ಲವಾದಲ್ಲಿ ಇಂದು ನಾವು ಶ್ರೇಷ್ಠ ತಳಿಯ ದನಗಳನ್ನು ಕಾಣುತ್ತಿರಲಿಲ್ಲ.

ಆಕಳು, ಹೋರಿ ಮತ್ತು ಎತ್ತುಗಳ ಶುಭಾಶುಭ ಲಕ್ಷಣಗಳು

ಆಕಳ ಲಕ್ಷಣಗಳು ವಾಯು ಪುರಾಣದಲ್ಲಿ ಮನು ಮತ್ತು ಮತ್ಸ್ಯ ಸಂವಾದದಲ್ಲಿ ಮತ್ಸ್ಯಭಗವಾನರು ಮನುವಿಗೆ ಈ ಪ್ರಕಾರ ಹೇಳುತ್ತಾರೆ[15]: ಆಕಳು ಸುಶೀಲ ಮತ್ತು ಸರಳವಾಗಿರಬೇಕು. ಅದರ ಯಾವ ಅಂಗವೂ ವಿಕೃತವಾಗಿರಬಾರದು, ದುರ್ಬಲವಾಗಿರಬಾರದು. ಅದು ಯಾವ ರೋಗದಿಂದಲೂ ಕೂಡಿರಬಾರದು. ಕರುವು ಜೀವಂತವಿರಬೇಕು, ಆಕಳ ಮೈಚರ್ಮ, ಖುರ (ಗೊರಸು)ಗಳು ಮತ್ತು ಕೋಡುಗಳು ಹೊಳೆಯುತ್ತಿರಬೇಕು. ಆಕಳು ಶಾಂತ ಗುಣದಿಂದ ಕೂಡಿ, ನೋಡುವುದಕ್ಕೆ ಸುಂದರವಾಗಿರಬೇಕು; ಆಕಾರದಲ್ಲಿ ಅತಿ ದೊಡ್ಡದಾಗಿ ಅಥವಾ ಬಹಳ ಸಣ್ಣದಾಗಿ ಇರದೆ ಸಮತೋಲವಾಗಿರಬೇಕು. ಅದು ಹೊಟ್ಟೆ ಸ್ವಭಾವದ್ದಾಗಿರಬಾರದು; ಅದರ ಹಿಂದಿನ ಭಾಗವು ದೊಡ್ಡದಾಗಿರಬೇಕು; (ಅಗಲವಾಗಿರಬೇಕು), ತುಟಿಗಳು ಮೃದುವಾಗಿ, ನುಣುಪಾಗಿ, ಮಾಸಲು ಕೆಂಪು ಬಣ್ಣದಿಂದ ಕೂಡಿರಬೇಕು; ಕುತ್ತಿಗೆಯು ಕೆಮ್ಮಣ್ಣಿನಂತಿರಬೇಕು; ನಾಲಿಗೆ ಕಪ್ಪು ಬಣ್ಣದ್ದಿರಬಾರದು; ಉದ್ದವಿರಬೇಕು; ಕಣ್ಣಿನ ಗುಡ್ಡೆಯು ಸುಂದರವಾಗಿ ಹಸಿಯಿಂದ ಕೂಡಿರಬೇಕು; ಆದರ ಕಣ್ಣುಗಳಿಂದ ನೀರು ಸೋರುತ್ತಿರಬಾರದು; ಖುರಗಳು,

ನುಣುಪಾಗಿ ಗಟ್ಟಿಯಾಗಿರಬೇಕು; ಕಣ್ಣುಗಳು ಜೇನುತುಪ್ಪದ ಬಣ್ಣದಂತೆ ಅಥವಾ ನೀರಿನ ಗುಳ್ಳೆಯಂತೆ ಅಥವಾ ನಸುಗೆಂಪಾಗಿ, ನುಣುಪಾಗಿರಬೇಕು; ಕಣ್ಣಿನಲ್ಲಿಯ ಗೊಂಬೆ ಕೆಂಪಾಗಿರಬೇಕು; ವಸಡುಗಳು ನೇರಳೆ ಹಣ್ಣಿನ ಬಣ್ಣದಂತೆ ನೀಲಿವರ್ಣದ್ದಾಗಿರಬೇಕು; ಎರಡೂ ಪಕ್ಕೆಗಳು ಹಾಗೂ ತೊಡೆಗಳು ಸುಂದರವಾಗಿರಬೇಕು; ಎದೆ, ಬೆನ್ನು, ತಲೆ, ಪಕ್ಕೆಲುಬು, ಕಿವಿಗಳು, ಕಣ್ಣುಗಳು ಹಾಗೂ ಹಣೆ ಅಗಲವಾಗಿರಬೇಕು; ಬಾಲ, ಗಂಗೆದೊಗಲು, ಎರಡು ತೊಡೆಗಳು, ಕುತ್ತಿಗೆ, ತಲೆ ಹಾಗೂ ನಾಲ್ಕು ಮೊಲೆಗಳು ಈ 10 ಅಂಗಗಳು ಉದ್ದವಾಗಿರಬೇಕು. ಈ ಎಲ್ಲ ಲಕ್ಷಣಗಳು ಯಾವ ಆಕಳಿನಲ್ಲಿ ಕೂಡಿರುತ್ತವೆಯೋ ಅಂಥಾ ಆಕಳು ಸುಲಕ್ಷಣವಾದ ಆಕಳು.

ಕಣ್ಣಿನಲ್ಲಿ ಸದಾ ನೀರು ಸೋರುತ್ತಿರುವ, ಪಿಚ್ಚಿನಿಂದ ತುಂಬಿರುವ, ಕಣ್ಣುಗಳು ಒಣಗಿರುವ ಕೋಡುಗಳು ಅಲುಗಾಡುತ್ತಿರುವ, ಕಿವಿಗಳು ಅಂಟಿಕೊಂಡಿರುವ, ಮಣ್ಣಿನ ಬಣ್ಣವಿರುವ, ಹಣೆ ಹಾಗೂ ಮುಖವು ಉದ್ದವಾಗಿರುವ, ಬೆನ್ನು ಬಾಗಿರುವ, ಕುತ್ತಿಗೆ ಸಣ್ಣದಾಗಿರುವ, ದೊಡ್ಡದಾಗಿರುವ, ನಾಲಿಗೆಯು ಕಪ್ಪಾಗಿರುವ, ಖುರಗಳು ಅಗಲವಾಗಿರುವ, ಶರೀರವು ದುರ್ಬಲವಾಗಿರುವ, ಆಕಳುಗಳು ಒಳ್ಳೆಯ ಆಕಳುಗಳಲ್ಲ ಎಂದು ಪರಾಶರ ಮುನಿಗಳು ಬೃಹದತ್ತನಿಗೆ ಹೇಳಿದ್ದಾರೆ.

ಹೋರಿಯ ಲಕ್ಷಣಗಳು ಹೋರಿಯ ಇಣೆ (ಹಿರಳು) ಮತ್ತು ಕುತ್ತಿಗೆ ದಪ್ಪನಾಗಿರಬೇಕು ಹಾಗೂ ಬಾಲ ನೀಳವಾಗಿ ಉದ್ದವಾಗಿ ರಬೇಕು; ಗಂಗೆದೊಗಲು ಉದ್ದವಾಗಿರಬೇಕು; ಸೊಂಟ ಅಗಲವಾಗಿರಬೇಕು; ಕಣ್ಣು ಗಳು ವೈಢೂರ್ಯದಂತೆ ಕಂಗೊಳಿಸುತ್ತಿರಬೇಕು. ಕೋಡುಗಳು ಉದ್ದವಾಗಿ, ತುದಿ ಗಳು ಮಾವಿನ ಹೊಸ ಚಿಗುರು ಎಲೆಯಂತೆ ನಸುಗೆಂಪಾಗಿರಬೇಕು; ಕೋಡುಗಳು ಹುಲಿಯ ಉಗುರಿನಂತೆ ಹೊಳೆಯುತ್ತಿರಬೇಕು; ಕಣ್ಣುಗಳು ಮಲ್ಲಿಗೆ ಹೂವಿನಂತೆ ಕಾಣುತ್ತಿರಬೇಕು. ಕೆಂಪು, ಕಪ್ಪು, ಹಳದಿ ಅಥವಾ ಗುಲಾಬಿ ಬಣ್ಣದ ಬೆನ್ನು, ತಾಮ್ರವರ್ಣದಿಂದ ಕೂಡಿರುವ, ಕಿವಿಗಳು ಉದ್ದವಾಗಿ ದೊಡ್ಡದಾಗಿರುವ, ಹೆಗಲು ಅಗಲವಾಗಿರುವ, ಹೊಟ್ಟೆಯ ಭಾಗವು ಬಿಳಿಯ ಬಣ್ಣದಿಂದ ಕೂಡಿ ಎರಡೂ ಮಗ್ಗಲು ಹಾಗೂ ಚಪ್ಪೆಯ ಭಾಗಗಳು ಕಪ್ಪು ಬಣ್ಣದಿಂದ ಕೂಡಿರುವ ಹೋರಿಯನ್ನು ಬ್ರಾಹ್ಮಣರಿಗಾಗಿ ಬಿಡುವುದು ಪ್ರಶಸ್ತವಾಗಿತ್ತು. ಕ್ಷತ್ರಿಯರಿಗಾಗಿ ಕೆಂಪು, ವೈಶ್ಯ ರಿಗಾಗಿ ಬಂಗಾರ (ಸುನೇರಿ), ಶೂದ್ರನಿಗಾಗಿ ಕಪ್ಪು ಬಣ್ಣದ ಹೋರಿಗಳನ್ನು ಬಿಡುವುದು ಪದ್ಧತಿಯಲ್ಲಿತ್ತು. ಕಪ್ಪು ಬಿಳಿ ಮಿಶ್ರಿತ ಹೋರಿ ಹಾಲಿಗಾಗಿ, ಕೆಂಪು ಬಣ್ಣದ ಹೋರಿ ಭಾರ ಎಳೆಯಲು, ಬಂಗಾರ ಬಣ್ಣದ ಹೋರಿ ದೂರ ಪ್ರಯಾಣಕ್ಕೆ ಮತ್ತು ಬೂದಿ ಬಣ್ಣದ ಹೋರಿ ಹೊಲ ಮನೆಯ ಕೆಲಸಕ್ಕೆ ಬಹಳ ಉಪಯುಕ್ತವಾಗಿತ್ತೆಂದು ನಂಬ

ಲಾಗಿತ್ತು. ಹುಬ್ಬಿನಂತೆ ಬಾಗಿ ಉದ್ದವಾಗಿರುವ ಕೋಡುಳ್ಳ ಹೋರಿ ಎಲ್ಲಕ್ಕಿಂತ ಮಿಗಿಲಾದುದು ಮತ್ತು ಎಲ್ಲ ಕಾಲಕ್ಕೂ ಸರ್ವಸಾಧಕವಾದದ್ದು ಎಂದು ಮಾನ್ಯ ಮಾಡಲಾಗಿತ್ತು. ನಾಲ್ಕು ಕಾಲುಗಳು ಬೆಕ್ಕಿನ ಬಣ್ಣದವುಗಳಾಗಿ, ಉಳಿದ ಶರೀರ ಭಾಗವು ಬಿಳಿಯ ಬಣ್ಣದ್ದಾಗಿ, ಕಣ್ಣುಗಳು ಮಣಿಗಳಂತೆ ಪ್ರಕಾಶಮಾನವಾಗಿರುವ, ಹೋರಿಯನ್ನು ಉತ್ತಮ ಹೋರಿ ಎಂದೂ ಪ್ರಶಂಸಿಸಲಾಗುತ್ತಿತ್ತು. ಹಳದಿ ಅಥವಾ ಗೌಜಿಗನ ಹಕ್ಕಿಯ ಬಣ್ಣಕ್ಕೆ ಸಮಾನವಾಗಿರುವ ನಾಲ್ಕು ಕಾಲುಗಳು ಅಥವಾ ಎರಡು ಕಾಲುಗಳು ಬಿಳಿಯ ಬಣ್ಣದ್ದಾಗಿರುವ ಹೋರಿಯನ್ನು 'ಕಟಕ' ಜಾತಿಯ ಹೋರಿ ಎಂದು ಕರೆಯಲಾಗುತ್ತಿತ್ತು. ಮುಖವು ಕಿವಿಗಳವರೆಗೆ ಬಿಳಿಯ ಬಣ್ಣದ್ದಾಗಿರುವ ಉಳಿದ ಶರೀರದ ಭಾಗವು ಕೆಂಪು ಬಣ್ಣದಿಂದ ಕೂಡಿರುವ ಹೋರಿಯನ್ನು 'ನಂದಿ ಮುಖ' ವೆಂದು ಕರೆಯುತ್ತಿದ್ದರು. ಹೋರಿಯ ಹೊಟ್ಟೆ ಮತ್ತು ಬೆನ್ನಿನ ಭಾಗವು ಬಿಳಿಯ ಬಣ್ಣವಾಗಿದ್ದರೆ ಅದನ್ನು 'ಸಮುದ್ರ' ವೆಂಬ ಸಂಕೇತದಿಂದ ಕರೆಯಲಾಗುತ್ತಿತ್ತು. ಇಂಥಾ ಹೋರಿಯನ್ನು ಸಾಕಿಕೊಂಡಿರುವವರ ವಂಶ ವೃದ್ಧಿಯಾಗುತ್ತಾ ಹೋಗುತ್ತಿತ್ತು. ಬಣ್ಣವು ಮಲ್ಲಿಕಾ ಕುಸುಮ ಅಥವಾ ಹಂಡಬಂಡ ಬಣ್ಣದಿಂದ ಕೂಡಿರುತ್ತಿದ್ದ ಹೋರಿಯನ್ನು 'ಧನ್ಯ' ಹೋರಿ ಎಂದು ಕರೆಯಲಾಗುತ್ತಿತ್ತು. ಬೆನ್ನಿನ ಮೇಲೆ ಕಮಲಾಕೃತಿಯಂತೆ ಮಚ್ಚೆ ಇರುವ ಹೋರಿಯನ್ನು 'ಭಾಗ್ಯವರ್ಧಕ' ಎಂದು ಮಾನ್ಯ ಮಾಡಲಾಗಿತ್ತು. ಇದಕ್ಕೆ ವ್ಯತಿರಿಕ್ತ ತುಟಿಯ ಒಳಭಾಗವು ಮತ್ತು ಮುಖವು ಕಪ್ಪು ಬಣ್ಣದಿಂದ ಕೂಡಿರುವ ಕಾಗೆ, ಹದ್ದಿನ ಅಥವಾ ಇಲಿಯ ಬಣ್ಣದಂತಿರುವ ಬೆಳವಣಿಗೆ ನಿಂತುಹೋಗಿರುವ, ಕಿವಿಗಳು ಕಿವುಡಾಗಿರುವ, ಹೆಜ್ಜೆಗಳು ಸರಿಯಾಗಿ ಸಮಾನವಾಗಿ ಬೀಳದಿರುವ, ಕಣ್ಣುಗುಡ್ಡೆಗಳು ತಿರುಗುತ್ತಿರುವ ಮತ್ತು ಕಟ್ಟಿದಾಗ ಹಾಸುಹೊಯ್ಯುವ (ಅತ್ತಿತ್ತ ಅಲುಗಾಡುವ)ಹೋರಿಯನ್ನು ಮನೆಯಲ್ಲಿ ಸಾಕಬಾರದು ಮತ್ತು ದನಕ್ಕೂ ಕೂಡ ಬಿಡಬಾರದೆಂಬ ನಂಬಿಕೆ ಇತ್ತು.

ಕೋಡುಗಳು ಸ್ವಸ್ತಿಕ ಆಕಾರದಂತಿರುವ, ಗುಟರು (ಶಬ್ದ) ಗುಡುಗಿನಂತೆ ಗಂಭೀರವಾಗಿರುವ, ಶರೀರದ ನಿಲುವು ಎತ್ತರವಾಗಿರುವ, ಮದಿಸಿದ ಆನೆಯ ನಡಿಗೆ ಹೊಂದಿರುವ, ಎದೆ ಅಗಲವಾಗಿರುವ, ವಿಶಾಲವಾಗಿ, ಬಲವಾಗಿ ಪರಾಕ್ರಮದಿಂದ ಕೂಡಿರುವ, ತಲೆ, ಕಿವಿ, ಹಣೆ, ಬಾಲ ಮತ್ತು ನಾಲ್ಕೂ ಕಾಲುಗಳು, ಕಣ್ಣುಗಳು ಹಾಗೂ ಎರಡೂ ಮಗ್ಗಲು (ಪಾರ್ಶ್ವ) ಕಪ್ಪು ಬಣ್ಣದಿಂದ ಕೂಡಿರುವ, ಉಳಿದ ಶರೀರ ಭಾಗವು ಬಿಳಿಯ ಬಣ್ಣದ್ದಾಗಿರುವ ಅಥವಾ ಕಪ್ಪಾಗಿರುವ ಹೋರಿಯನ್ನು 'ಸರ್ವಶ್ರೇಷ್ಠ' ಎಂದು ಮಾನ್ಯ ಮಾಡಲಾಗುತ್ತಿತ್ತು. ಮುಂದಿನ ಭಾಗವು ದೊಡ್ಡದಾಗಿರುವ, ಬಾಲವು ನೆಲಕ್ಕೆ ಮುಟ್ಟುತ್ತಿರುವ ಹೋರಿಯನ್ನು 'ನೀಲ ವೃಷಭ' ಎಂದು ಮಾನ್ಯ ಮಾಡಲಾಗುತ್ತಿತ್ತು. ಮೈಮೇಲೆ ಶಕ್ತಿಯ ಧ್ವಜದ ಆಕಾರದ ಚಿಹ್ನೆ ಇರುವ

ಹೋರಿಯನ್ನು 'ವಿಚಿತ್ರ ಸಿದ್ಧಿ' ಎಂದು ಮತ್ತು ಸದಾ ವಿಜಯವನ್ನು ದೊರಕಿಸುವುದೆಂದೂ ತಿಳಿಯಲಾಗುತ್ತಿತ್ತು. ನಿಲ್ಲಿಸಿದ ಕೂಡಲೇ ಬಲಗಡೆಗೆ ತಿರುಗುವ, ತಲೆ ಕುತ್ತಿಗೆ ಎತ್ತರವಾಗಿರುವ ಹೋರಿ 'ಧನ್ಯ' ವೆಂದೂ ಮತ್ತು ಅದು ಹಿಂಡನ್ನು ಹೆಚ್ಚಿಸಲು ಯೋಗ್ಯವಾದ ಮತ್ತು ಸಾಮರ್ಥ್ಯವುಳ್ಳ ಹೋರಿ ಎಂದು ತಿಳಿಯಲಾಗುತ್ತಿತ್ತು. ಕೊಂಬಿನ ತುದಿಗಳು ಹಾಗೂ ಕಣ್ಣುಗಳು ಕೆಂಪು ವರ್ಣದಿಂದ ಕೂಡಿದ್ದು, ಉಳಿದ ಶರೀರದ ಭಾಗವು ಬಿಳಿಯ ಬಣ್ಣದ್ದಾಗಿರುವ ಮತ್ತು ಅವುಗಳ ಖುರಗಳು, ನುಣುಪಾಗಿ ಕೆಂಪಗೆ ಗಜ್ಜರಿ ಬಣ್ಣದಂತೆ ಇರುವ ಹೋರಿಗಿಂತ ಮಿಗಿಲಾದ ಹೋರಿ ಬೇರೆ ಇರುವುದಿಲ್ಲವೆಂದು ತಿಳಿಯಬೇಕು. ಹೋರಿಯ ಕಾಲುಗಳು, ಮುಖ ಮತ್ತು ಬಾಲ ಬಿಳಿಯ ಬಣ್ಣದ್ದಾಗಿಯೂ, ಉಳಿದ ಶರೀರದ ಭಾಗವು ಅರಗಿನ ಬಣ್ಣದಂತೆಯೂ ಇರುವ ಹೋರಿಯನ್ನು 'ನೀಲ ವೃಷಭ' ಎಂದು ಕರೆಯುತ್ತಿದ್ದರು. ಇಂಥಾ ಹೋರಿಯನ್ನೇ 'ದೇವರ ಗೂಳಿ' ಎಂದು ಬಿಡಲಾಗುತ್ತಿತ್ತು. 'ಇಂಥಾ 'ನೀಲವೃಷಭ' ನಿಗೆ ವೃಕ್ಷೋತ್ಸರ್ಗ ಮಾಡಿದಲ್ಲಿ ಪಿತೃಗಳಿಗೆ ತೃಪ್ತಿಯಾಗುತ್ತಿತ್ತು. ಈ ಪ್ರಕಾರವಾದ ಲಕ್ಷಣಗಳಿಂದ ಕೂಡಿದ ಯುಕ್ತ ಹೋರಿಯು ಅದು ಮನೆಯಲ್ಲಿ ಹುಟ್ಟಿದ್ದಾಗಿರಲಿ ಅಥವಾ ಕೊಂಡದ್ದೇ ಇರಲಿ ಅದನ್ನು 'ದೇವರ ಗೂಳಿ' ಎಂದು ಬಿಟ್ಟಲ್ಲಿ ಅದರ ಒಡೆಯನಿಗೆ ಮೋಕ್ಷವು ನಿಶ್ಚಿತವಾಗಿ ದೊರೆಯುತ್ತಿತ್ತೆಂದು ನಂಬುಗೆ ಇತ್ತು.

ಶುಭ ಎತ್ತುಗಳು ತುಟಿಗಳು ಮೃದುವಾಗಿ ತಂಬಾಕದ ಬಣ್ಣದವು ಅಂದರೆ ನಸುಕೆಂಪಾಗಿರುವ, ಪಿರ್ರೆ (ನಿತಂಬ) ಗಳು ಕೃಶವಾಗಿ ತಂಬಾಕದಂತೆ ಕೆಂಪಾಗಿರುವ, ಕಿವಿಗಳು ತೆಳುವಾಗಿ ಸಣ್ಣದಾಗಿ ಎತ್ತರವಾಗಿರುವ, ಹೊಟ್ಟೆಯು ಸುಂದರವಾಗಿ, ಹಿಂಡಲಿ (ಹಿಮ್ಮಡಿ)ಗಳು ಎದ್ದು ನಿಂತಿರುವ, ಖುರಗಳು ತುಸು ನಸುಗೆಂಪಾಗಿ ಕೂಡಿರುವ ಎದೆ ಹರವಾಗಿ, ಇಣಿ ಎತ್ತರವಾಗಿರುವ, ಚರ್ಮವು ಹೊಳಪಿನದಾಗಿರುವ, ಕೂದಲುಗಳು ಮಿಂಚುತ್ತ ಸಣ್ಣದಾಗಿರುವ, ಕೋಡುಗಳು ಕೆಂಪಾಗಿ ತೆಳುವಾಗಿರುವ ಬಾಲವು ತೆಳುವಾಗಿ ಉದ್ದವಾಗಿರುವ, ಕಣ್ಣುಗೊಂಬೆಗಳು ಕೆಂಪಾಗಿರುವ, ನಡೆಯುತ್ತಿರುವಾಗ ಜೋರು ಜೋರಿನಿಂದ ಉಸಿರಾಡಿಸುವ, ಹೆಗಲು ಸಿಂಹದಂತೆ, ಗಂಗೆದೊಗಲು ತೆಳ್ಳಗೆ, ಸಣ್ಣಗೆ ಕುತ್ತಿಗೆಗೆ ಹತ್ತಿರುವಂಥ ಜಾತಿಯ ಎತ್ತುಗಳಿಗೆ 'ಸುಗತಿ' ಎಂದು ಕರೆಯುತ್ತಿದ್ದರು. ಅಂಥವು ಪೂಜೆಗೆ ಯೋಗ್ಯ ಹಾಗೂ ಪ್ರಶಸ್ತವಾಗಿದ್ದವು. ಎಡಗಡೆಗೆ ತಿರುಗಿರುವ ಚಕ್ರದ ಚಿಹ್ನೆ ಇರುವ ಬಲಭಾಗಕ್ಕೆ ದಕ್ಷಿಣಾರ್ಧ ಚಕ್ರ ಚಿಹ್ನೆ ಇರುವ ಶರೀರದ ಮೇಲೆ ಜಿಂಕೆಯಂಥ ಸುಳುವುಗಳು ಇರುವ ಬಲಗಡೆಗೆ ವೈಢೂರ್ಯ ಮಣಿ,ಮಲ್ಲಿಗೆ ಹೂವಿನ ಚಿಹ್ನೆ ಇರುವ ಕಣ್ಣುಗಳು ಹಾಗೂ ಶರೀರವು ಸ್ಥೂಲವಾಗಿರುವ, ಖುರಗಳು ಹೆಚ್ಚು ಅಗಲವಾಗಿರುವ

ಎತ್ತುಗಳು ಪ್ರಶಸ್ತವಾಗಿರುತ್ತಿದ್ದವು. ಅವು ಭಾರವನ್ನು ಹೊರುವುದರಲ್ಲಿ ಸಮರ್ಥವಾಗಿದ್ದವು. ಮೂಗಿನ ಸಿಂಬೆಯ ದಕ್ಷಿಣ ಭಾಗದಲ್ಲಿ ಬಿಳಿಯ ಬಣ್ಣವಿರುವ, ಉಳಿದ ಶರೀರ ಕಮಲ ಅಥವಾ ಅರಗಿನ ಬಣ್ಣದ್ದಾಗಿರುವ ಬಾಲವು ಸುಂದರವಾಗಿ, ನಡಿಗೆಯು ಕುದುರೆಯ ನಡಿಗೆಗೆ ಸಮನಾಗಿರುವ ಅಂಡಕೋಶವು ಬಹಳ ಉದ್ದವಾಗಿರದೆ ಹೊಟ್ಟೆ, ಸೊಂಟ ಮತ್ತು ಎದೆ ಕೆಳುವಾಗಿರುವ ಎತ್ತು ಭಾರವನು ಹೊರುವುದಕ್ಕೂ ಮತ್ತು ಬಹಳ ದೂರ ಪ್ರಯಾಣಕ್ಕೂ ಸಮರ್ಥವಾಗಿರುತ್ತಿತ್ತು ಮತ್ತು ವೇಗದಲ್ಲಿ ಬಹಳ ಚುರುಕಾಗಿರುತ್ತಿತ್ತು. ಬಿಳಿಯ ಬಣ್ಣದ ಕಣ್ಣುಗಳು, ಹಳದಿ ಅಥವಾ ಕೆಂಪು ಇರುವ ಕೋಡು. ತಾಮ್ರ ಬಣ್ಣದ್ದಿರುವ ಹಾಗೂ ಮುಖವು ಅಗಲವಾಗಿರುವ, ಎತ್ತನ್ನು 'ಹಂಸ' ಜಾತಿಯ ಎತ್ತು ಎಂದು ಕರೆಯಲಾಗುತ್ತಿತ್ತು. ಇದು ಶುಭದಾಯಕವಾಗಿತ್ತು ಹಾಗೂ ತನ್ನ ಹಿಂಡನ್ನು ಹೆಚ್ಚಿಸುವುದೆಂದು ನಂಬಲಾಗಿತ್ತು. ಬಾಲವು ನೆಲಕ್ಕೆ ಮುಟ್ಟುತ್ತಿದ್ದು ಸೊಂಟ (ನಡು) ತಾಮ್ರಬಣ್ಣದ್ದಿರುತ್ತಿದ್ದು ಮತ್ತು ಕಣ್ಣುಗಳು ಕೆಂಪು ವರ್ಣದ್ದಾಗಿರುವ, ಶರೀರದ ನಿಲುವು ಎತ್ತರವಾಗಿದ್ದು ಮತ್ತು ಹಂಡಬಂಡ ಬಣ್ಣದಿಂದ ಕೂಡಿದ್ದ ಎತ್ತು ತನ್ನ ಮಾಲೀಕ (ಒಡೆಯ) ಬೇಗ ಶ್ರೀಮಂತನಾಗುವಂತೆ ಮಾಡುತ್ತಿತ್ತೆಂಬ ನಂಬಿಕೆ ಇತ್ತು. ಒಂದು ಕಾಲು ಬಿಳಿಯ ಬಣ್ಣದ್ದಾಗಿದ್ದು ಉಳಿದ ಶರೀರವು ಬೇಕಾದ ಬಣ್ಣದ್ದಾಗಿದ್ದಲ್ಲಿ ಅಂಥ ಎತ್ತು ಸಹ ಶುಭಫಲದಾಯಕವಾದದ್ದು. ಸದಾಕಾಲ ಶುಭದಾಯಕ ಎತ್ತು ಸಿಗದಿದ್ದಲ್ಲಿ, ಶುಭಾಶುಭ ಎರಡೂ ಲಕ್ಷಣಗಳಿಂದ ಕೂಡಿದ ಎತ್ತುಗಳನ್ನು ತೆಗೆದುಕೊಳ್ಳುತ್ತಿದ್ದರು.

ಅಶುಭ ಎತ್ತುಗಳು ಎತ್ತಿನ ಅಂಡಕೋಶವು ಸ್ಥೂಲವಾಗಿ ಅತ್ಯಂತ ಉದ್ದವಾಗಿದ್ದರೆ, ಹಿಂದಿನ ಕಾಲುಗಳ ಹತ್ತಿರ ಇರುವ ಹೊಟ್ಟೆಯು ನರಗಳಿಂದ ತುಂಬಿದ್ದರೆ, ಎದೆಯು ತೆಳ್ಳಗಿದ್ದರೆ, ಕಿವಿಗಳು ನರಗಳಿಂದ ತುಂಬಿದ್ದರೆ, ಮೂರು ಕವಲುಗಳಾಗಿ ಮೂತ್ರ ವಿಸರ್ಜನೆ ಮಾಡುತ್ತಿದ್ದರೆ, ಕಣ್ಣುಗಳು ಗಂಡು ಬೆಕ್ಕಿನಂತೆ ಇದ್ದುದಾದರೆ, ಬಣ್ಣ ಬೂದಿಯದಾಗಿದ್ದು 'ಕರಟ' ಜಾತಿಯದ್ದಾಗಿದ್ದರೆ, ಅದು ಶುಭದಾಯಕವಾದ ಎತ್ತಲ್ಲ; ಆದರೆ ಬ್ರಾಹ್ಮಣರಿಗೆ ಮಾತ್ರ ಇದು ಒಳ್ಳೆಯ ಶುಭದಾಯಕವಾಗಿರುವುದು ಎಂದು ತಿಳಿಯಲಾಗಿತ್ತು: ತುಟಿಗಳು ದಪ್ಪವಾಗಿ ನಾಲಿಗೆ ಕಪ್ಪು ಬಣ್ಣದ್ದಾಗಿರುವ, ನಡೆಯುತ್ತಿರುವಾಗ ಜೋರು ಜೋರಾಗಿ ಶ್ವಾಸವನ್ನು ತೆಗೆದುಕೊಳ್ಳುವ ಎತ್ತು ತನ್ನ ಗುಂಪಿಗೆ ಬಹಳ ಘಾತಕವೆಂದು ತಿಳಿಯಲಾಗುತ್ತಿತ್ತು. ಹಣೆಯ ಎಲುಬು ಮತ್ತು ಕೋಡುಗಳು ಉದ್ದವಾಗಿರುವ, ಹೊಟ್ಟೆಯ ಬಣ್ಣವು ಬಿಳಿಯಾಗಿರುವ, ಉಳಿದ ಶರೀರದ ಭಾಗವು ಕೃಷ್ಣಸಾಗರದ ಪಕ್ಷಿಯಂತೆ ಇರುವ ಎತ್ತು ತನ್ನ ಗುಂಪನ್ನೇ ನಾಶಮಾಡುವಂಥದ್ದೆಂದು ಹೇಳಲಾಗು

ತ್ತಿತ್ತು. ಇಂಥಾ ಎತ್ತು ಮನೆಯಲ್ಲಿ ಹುಟ್ಟಿದರೂ ಸಹ ಅದನ್ನು ತ್ಯಾಗಮಾಡಿಬಿಡುವುದೇ ಬಹಳ ಒಳ್ಳೆಯದು. ಶರೀರದ ಮೇಲೆ ಕರಿಯ ಚುಕ್ಕೆಗಳಿರುವ ಮತ್ತು ಬಾವುಗ (ಗಂಡುಬೆಕ್ಕು) ದಂತಹ ಕಣ್ಣುಗಳು ಇರುವ ಎತ್ತು ದಾನದಲ್ಲಿ ಸಿಕ್ಕಿದರೂ ಸಹ ಬ್ರಾಹ್ಮಣರಿಗೆ ಅಶುಭವಾಗಿತ್ತು. ಎತ್ತು ರಂಟೆಗೆ ಅಥವಾ ಚಕ್ಕಡಿಗೆ ಹೂಡಿದಾಗ ನೊಗದಿಂದ ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವ ಮತ್ತು ಕೆಸರಿನಲ್ಲಿ ಸಿಕ್ಕಿಬಿದ್ದ ಎತ್ತಿನಂತೆ ಹೆಜ್ಜೆಹಾಕುವ ಕುತ್ತಿಗೆ ಸಣ್ಣದಾಗಿ, ತೆಳುವಾಗಿ, ಕಣ್ಣುಗಳು ಭಯಭೀತವಾಗಿರುವ, ಬಹಳ ಸಣ್ಣಗಾತ್ರದ ಎತ್ತುಗಳು ತಮ್ಮ ಬೆನ್ನಿನ ಮೇಲೆ ಭಾರವನ್ನು ಹೊತ್ತುಕೊಳ್ಳಲಾರವೆಂದು ತಿಳಿಯಲಾಗಿತ್ತು.

ಆಕಳಿನ ಸಂಕೇತದಿಂದ ಶುಭಾಶುಭ ಫಲ ತಿಳಿಯುವಿಕೆ

ಬೃಹತ್ ಸಂಹಿತೆಯ ಪ್ರಕಾರ ಆಕಳಿನ ಹಿಂಡು ಅತ್ಯಂತ ಬಡಕಲಾಗಿದ್ದಲ್ಲಿ ಅದು ರಾಜನಿಗೆ ಅಮಂಗಳವಾಗಿತ್ತು. ಭೂಮಿಯನ್ನು ಆಕಳು ಗೊರಸಿನಿಂದ ಕೆರೆಯುತ್ತಿದ್ದರೆ ಅದು ರೋಗಸೂಚಿತ. ಕಣ್ಣುಗಳಲ್ಲಿ ನೀರು ತುಂಬಿದ್ದರೆ ಮೃತ್ಯುವಿನ ಸೂಚಕ. ವಿನಾಕಾರಣವಾಗಿ ಬಾರಿಬಾರಿಗೂ ಒದರುತ್ತಿದ್ದರೆ ಅದು ಗೋಪಾಲಕರಿಗೆ ಕಳ್ಳಕಾಕರ ಭಯದ ಸೂಚನೆ. ರಾತ್ರಿ ವೇಳೆಯಲ್ಲಿ ಆಕಳು ವಿನಾಕಾರಣವಾಗಿ ಶಬ್ದ ಮಾಡಿದರೆ ಭಯದ ಸಂಭವ. ಆದರೆ ಅದೇ ಎತ್ತು ಶಬ್ದ ಮಾಡಿದರೆ ಮಂಗಳ. ಆಕಳುಗಳಿಗೆ ನೊಣಗಳು ಮತ್ತು ಸಣ್ಣ ನಾಯಿ ಕುನ್ನಿಗಳು ಬೆನ್ನು ಹತ್ತಿ ಕಾಡಿಸುತ್ತಿದ್ದಲ್ಲಿ ಅದು ಬೇಗನೆ ಮಳೆಯಾಗುವ ಲಕ್ಷಣವೆಂದು ತಿಳಿಯಲಾಗುತ್ತಿತ್ತು. ಆವು ಕಾಡಿನಿಂದ ಮನೆಗೆ ಓಡುತ್ತಾ ದನದ ಹಿಂಡು ಬರುವಾಗ ದನಗಳ ಜೊತೆಯಲ್ಲಿ ಸೇರಿಕೊಂಡು ಕೂಗುತ್ತಾ ಮನೆಯೊಳಗೆ ಪ್ರವೇಶ ಮಾಡಿದಲ್ಲಿ ದನಗಳ ಸಂಖ್ಯೆ ಹೆಚ್ಚುವುದೆಂದು ತಿಳಿಯಲಾಗುತ್ತಿತ್ತು.

ಅಧ್ಯಾಯ 3

ಭಾರತ ದೇಶದ ದನಗಳ ಚರಿತ್ರೆ

ಭಾರತದಲ್ಲಿ ಹಲವಾರು ಉತ್ತಮ ತಳಿಯ ದನಗಳಿವೆ. ಇವುಗಳಲ್ಲಿ ಕೆಲವು ಏಕೋದ್ದೇಶದ ದನಗಳಾಗಿದ್ದರೆ ಮತ್ತು ಕೆಲವು ದ್ವಂದ್ವೋದ್ದೇಶದ ದನಗಳಾಗಿವೆ. ಈ ದನಗಳ ಲಾಲನೆಪಾಲನೆ, ತಳಿ ಅಭಿವೃದ್ಧಿ ನಿರ್ವಹಣೆಗಳನ್ನು ಕಾಲಕಾಲಕ್ಕೆ ಆಡಳಿತ ನಡೆಸಿದ ಅರಸರು ಹಾಗೂ ಸಾರ್ವಜನಿಕರು ಹೆಚ್ಚು ಆಸಕ್ತಿಯಿಂದ ನಡೆಸಿದ್ದರ ಪರಿಣಾಮವಾಗಿ ಈ ದನಗಳ ತಳಿಗಳು ಶುದ್ಧ ಸ್ಥಿತಿಯಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಇವುಗಳ ಅಭಿವೃದ್ಧಿ ಇಂದು ವೈಜ್ಞಾನಿಕ ಭೂಮಿಕೆಯ ಮೇಲೆ ಮುಂದುವರಿಯ ಬೇಕಾಗಿದೆ.

ಆಕಳ ಜಾತಿ ದನಗಳು

(1) ಅಮೃತಮಹಾಲ್ ಮತ್ತು ಹಳ್ಳಿಕಾರ ತಳಿಗಳು

ಒಂದು ವಿಧದಲ್ಲಿ ಹಿಮಾಲಯದ ಮಹೋನ್ನತವಾದ ಗೌರಿಶಂಕರ ಶಿಖರ ತನ್ನ ಎತ್ತರಕ್ಕಾಗಿಯೂ ಮಹಾಭಾರತಗ್ರಂಥ ತನ್ನ ಗಾತ್ರ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಘನತೆಗಾಗಿಯೂ ಪ್ರಪಂಚದಲ್ಲಿ ಭಾರತಕ್ಕೆ ಪ್ರಥಮ ಸ್ಥಾನ ಗಳಿಸಿಕೊಟ್ಟಿದ್ದರೆ, ಇನ್ನೊಂದು ವಿಧದಲ್ಲಿ ಹಳ್ಳಿಕಾರ, ಅಮೃತ ಮಹಾಲ್ ಮತ್ತು ಖಿಲಾರಿ ಜಾತಿಯ ದನಗಳು ತಮ್ಮ ವೇಗ, ಚಪಲತೆ, ಚುರುಕು, ಹುಮ್ಮಸ್ಸು, ಸಹಿಷ್ಣುತೆ, ಸಿಟ್ಟು ಮೊದಲಾದ ಈ ಎಲ್ಲ ಗುಣಗಳಿಂದ ಬೇರೆ ದನಗಳ ಮೇಲೆ ತಮ್ಮದೇ ಆದ ಮೇಲ್ಮೆಯನ್ನು ಪಡೆದು ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿವೆ. ಇದೇ ಕರ್ನಾಟಕ ದನಗಳ ವೈಶಿಷ್ಟ್ಯ.

ಹಿಂದಿನ ಕಾಲದಲ್ಲಿ ಅರಸರು ಮತ್ತು ಪಾಳೆಗಾರರು ಈ ಜಾತಿಯ ದನಗಳನ್ನು ಮುಖ್ಯವಾಗಿ ಯುದ್ಧಗಳಲ್ಲಿ ಸಹಾಯಕವಾಗಿ ಉಪಯೋಗಿಸುತ್ತಿದ್ದರು, ಹೀಗಾಗಿ ಈ ದನಗಳಲ್ಲಿ ಮೇಲೆ ಹೇಳಿದ ಮುಖ್ಯ ಗುಣಗಳು ಒಡಮೂಡಿಬರುವಂತೆ ಸಂವರ್ಧನೆ ಮಾಡಿ ಹಿಂಡು ಬೆಳೆಸಿಕೊಳ್ಳಲಾಯಿತು. ಫ್ರೆಂಚ್ ಯಾತ್ರಿಕ ಟವರ್ನಿಯರ್ (1641–68) ಹೇಳಿಕೆ ಈ ವಿಷಯದಲ್ಲಿ ಇಂತಿದೆ: 'ದೂರದ ಯಾತ್ರೆಯು ಇಲ್ಲಿ ಎತ್ತಿನ ಗಾಡಿಗಳಿಂದ ಸಾಗುತ್ತಿತ್ತು. ಗೋಧಿ ಹಿಟ್ಟಿನ ರೊಟ್ಟಿಗಳನ್ನು ಎತ್ತುಗಳಿಗೆ ತಿನ್ನಿಸುತ್ತಿದ್ದರು, ಸಾಮಾನುಗಳ ಸಾಗಣೆ ಎತ್ತುಗಳಿಂದ ಆಗುತ್ತಿತ್ತು. ಗೋಧಿ, ಅಕ್ಕಿ, ಬೇಳೆ ಮುಂತಾದವುಗಳನ್ನು ಹೊತ್ತಿರುವ ಹತ್ತು ಹನ್ನೆರಡು ಸಾವಿರ ಎತ್ತುಗಳು ಒಟ್ಟಿಗೆ ಪ್ರಯಾಣ ಬೆಳೆಸುತ್ತಿದ್ದವು. ಎತ್ತುಗಳ ಮೇಲೆ ವರ್ತಕರಿಗೆ ಬಹಳ ಪ್ರೀತಿ. ಯಾರಿಗೆ ಮಕ್ಕಳು ಇಲ್ಲವೋ ಅವರು ಅವುಗಳನ್ನು ಮಕ್ಕಳು ಎಂದು ತಿಳಿಯುತ್ತಿದ್ದರು. ಅಲ್ಲದೆ ಅಂದಿನ ಕಾಲದಲ್ಲಿ ಸೈನಿಕರಿಗೆ ಆಹಾರ ವಸ್ತುಗಳನ್ನು ಮತ್ತು ಯುದ್ಧಕ್ಕೆ ಬೇಕಾದ ಸಾಧನ ಸಾಮಗ್ರಿಗಳನ್ನು ಪೂರೈಸುವ ಮತ್ತು ಸಾಗಾಟ ಮಾಡುವ ಮಹತ್ವಪೂರ್ಣವಾದ ಕೆಲಸಗಳನ್ನು ಬಂಜಾರೆ ಜನರು, ತಮ್ಮ ದನಗಳ ಹಿಂಡಿನ ಸಹಾಯದಿಂದ ಮಾಡುತ್ತಿದ್ದರು. ಮೊದಲು ಈ ಬಂಜಾರೆಗಳು ದಕ್ಷಿಣ ಭಾಗಕ್ಕೆ ಮೊದಲನೆಯ ಅಸಫ್ ನಿಜಾಮಸಾಹೇಬನ ಜೊತೆಗೆ ಬಂದರು. ಆಗ ಅವರ ಸಂಗಡ 1,90,000 ದನಗಳ ಹಿಂಡು ಇತ್ತು. ಈ ದನಗಳ ಬಲಾಬಲವ ಮೇಲೆ ಅಂದಿನ ಯುದ್ಧದ ಜಯಾಪಜಯಗಳು ಅವಲಂಬಿಸಿರುತ್ತಿದ್ದವು. ಕಾರಣ ಸರ್ಕಾರವು ಇದಕ್ಕೆ ಬಹಳ ಮಹತ್ವ ಕೊಡುತ್ತಿತ್ತು.

ಟೀಪು ಸುಲ್ತಾನನು 60,000 ಜೊತೆ ಎತ್ತುಗಳ ಬಂಜಾರ ದಳವನ್ನಿಟ್ಟಿದ್ದನು. 'ಆರ್ಮಿ ಆಫ್ ಇಂಡಿಯನ್ ಮೊಗಲ್ಸ್' ನ ಲೇಖಕನಾದ ಆರ್ಯಟನ್ 5000



ಚಿತ್ರ 3 (1): ಅಮೃತ ಮಹಲ್ ಹೋರಿ, ಚಿತ್ರ 3 (2): ಹಳ್ಳಿಕಾರ್ ಜಾತಿಯ ಹಸು

ಎತ್ತುಗಳ ಸಮೂಹ ಹೋಗುತ್ತಿದ್ದುದನ್ನು ನೋಡಿದೆನೆಂದು ಹೇಳಿರುತ್ತಾನೆ.

ಉತ್ತರ ಹಿಂದೂಸ್ಥಾನದ ಸಿಂಧೀ, ಹರಿಯಾನ, ಗೀರ, ಶಾಹಿವಾಲ್ ಮೊದಲಾದ ಜಾತಿಯ ದನಗಳು ಹೈನದನಗಳೆಂದು ಹೆಸರುವಾಸಿಯಾದರೆ, ಕರ್ನಾಟಕದ ಹಳ್ಳಿಕಾರ್, ಅಮೃತಮಹಾಲ್, ಖಿಲಾರಿ, ಗುಜ್ಜಮಾವು, ಬೆಟ್ಟದಪುರದ ದನಗಳು ಒಕ್ಕಲುತನಕ್ಕೆ (ಬೇಸಾಯಕ್ಕೆ) ಮತ್ತು ಚಕ್ಕಡಿ (ಗಾಡಿ) ಸಾರಿಗೆಯ ಕೆಲಸಗಳಿಗೆ ಪ್ರಖ್ಯಾತವಾಗಿವೆ. ಇದಕ್ಕಾಗಿಯೇ ಹಳ್ಳಿಗಳಲ್ಲಿ ನಮ್ಮಲ್ಲಿಯ ರೈತಜನರು ಹೆಚ್ಚಾಗಿ ಈ ದನಗಳನ್ನು ತಮ್ಮ ಹೊಲಮನೆಯ ಕೆಲಸಗಳಿಗಾಗಿ ಮತ್ತು ರಸ್ತೆ ಸಾರಿಗೆಯ ಉಪಯೋಗಕ್ಕಾಗಿ ಬಳಸುತ್ತಾರೆ ಮತ್ತು ಸಾಕುತ್ತಾರೆ.

ನಮ್ಮಲ್ಲಿ ಕೆಂಪುಮಸಾರೆ ಭೂಮಿ ಹೆಚ್ಚು. ಈ ಮಸಾರೆ ಭೂಮಿಯ ವಿಶೇಷ ಗುಣವೇನೆಂದರೆ ಇದು ನೀರನ್ನು ಬೇಗನೆ ಹಿಡಿದು ಕೊಳ್ಳುತ್ತದೆ ಮತ್ತು ಅಷ್ಟೇ ಬೇಗನೆ ಆರಿಹೋಗುತ್ತದೆ. ಹೀಗಾಗಿ ಜಮೀನು ಹಸಿ (ಹದ) ಇರುವಾಗಲೇ ಉಳಬೇಕು ಮತ್ತು ಬಿತ್ತಬೇಕು. ಸ್ವಲ್ಪ ತಡವಾದರೆ ಬಿತ್ತನೆ ಸರಿಯಾಗದೆ ಬೆಳೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಭೂಮಿಯಲ್ಲಿ ಹಸಿ ಇರುವಾಗಲೇ ಬಿತ್ತನೆ ಕೆಲಸವನ್ನು ತಡಮಾಡದೆ, ತೀವ್ರತೆಯಿಂದ ಅಲ್ಪಾವಧಿಯಲ್ಲಿ ಮುಗಿಸಬೇಕು. ಇದಕ್ಕೆ ಹಳ್ಳಿಕಾರ, ಅಮೃತಮಹಲ್, ಖಿಲಾರಿ ಜಾತಿಯ ದನಗಳೇ ಉತ್ತಮವಾದ ದನಗಳು. ಒಂದು ಸಾದಾ ಜವಾರಿ ಎತ್ತಿನ ಜೋಡಿ ದನಗಳು ದಿನದ 6 ಘಂಟೆಗಳ ದುಡಿತದಲ್ಲಿ ಸಾಧಾರಣವಾದ ಕಟ್ಟಿಗೆ ರೆಂಟೆ (ನೇಗಿಲಿನಿಂದ) $\frac{1}{3}$ ಅಂಶ ಎಕರೆ ಭೂಮಿಯನ್ನು ಉಳುವುವು. ನಾಲ್ಕು ಎಕರೆ ಭೂಮಿಯನ್ನು ಬಿತ್ತುವವು. ಹಳ್ಳಿಕಾರ, ಅಮೃತ ಮಹಲ್ ಮತ್ತು ಖಿಲಾರಿ ಜಾತಿಯ ದನಗಳು ಇದೇ ವೇಳೆಯಲ್ಲಿ ಕಬ್ಬಿಣದ ರೆಂಟೆಯಿಂದ $\frac{1}{2}$ ಭಾಗ ಎಕರೆ ಭೂಮಿಯನ್ನು ಉಳುವುವು ಮತ್ತು 8 ರಿಂದ 10 ಎಕರೆ ಭೂಮಿಯನ್ನು ಬಿತ್ತುವುವು. ಸಾದಾ ರಸ್ತೆ ಸಾರಿಗೆ ಕೆಲಸದಲ್ಲಿ ಒಂದು ಕಗ್ಗ (ಜವಾರಿ) ಜೊತೆ ಎತ್ತುಗಳು ಒಂದು ದಿವಸದಲ್ಲಿ 15 ರಿಂದ 20 ಮೈಲು ಪ್ರಯಾಣ ಮಾಡಬಲ್ಲವು. ಅದೇ ಹಳ್ಳಿಕಾರ, ಅಮೃತಮಹಲ್, ಖಿಲಾರಿ ಜಾತಿಯ ದನಗಳು 30 ಮೈಲು ಪ್ರಯಾಣ ಮಾಡುತ್ತವೆ. ಸ್ವಲ್ಪ ಕಾಲದಲ್ಲಿ ಹೆಚ್ಚು ಕೆಲಸವನ್ನು ಚುರುಕಿನಿಂದ, ತೀವ್ರವಾಗಿ ಮಾಡುವುದೇ ನಮ್ಮ ಕರ್ನಾಟಕ ದನಗಳ ವಿಶಿಷ್ಟ ಗುಣ.

ಪಶುಪಾಲನೆ, ಪೋಷಣೆ ಮತ್ತು ಸಂವರ್ಧನೆ ನಮ್ಮ ದೇಶದಲ್ಲಿ ಬಹು ಪ್ರಾಚೀನ ಕಾಲದಿಂದ ವಂಶಪರಂಪರೆಯಾಗಿ ಸಾಗಿಬಂದಿವೆ. ನಮ್ಮಲ್ಲಿಯ ದನಗಳ ಮತ್ತು ಜನಗಳ ಜೀವನ ಬಾಂಧವ್ಯ ಬಹಳ ಹಿಂದಿನ ಕಾಲದಿಂದ ನಿಕಟವಾಗಿ ಹೆಣೆದು ಕೊಂಡುಬಂದಿದೆ. ಒಂದನ್ನು ಬಿಟ್ಟು ಇನ್ನೊಂದು ಬಾಳಲಾರದು. ಆಕಳು ಅಳಿದರೆ

ಭಾರತ ಉಳಿಯಲಾರದು. ಪಶುಪಾಲನಾ ವೃತ್ತಿ ಪೂರ್ವಜರಿಗೆ ಹೊಸದೇನೂ ಅಲ್ಲ. ಈ ಜೋಪಾಸನೆ ಕಲೆ ನಮ್ಮ ಭಾರತದ ನಾಗರಿಕತೆಯಷ್ಟೇ ಪುರಾತನವಾದದ್ದು.

ಕರ್ನಾಟಕದ ಮೂಲ ನಿವಾಸಿಗಳಿಗೆ ದನಗಾರಿಕೆಯೇ ಮುಖ್ಯ ಜೀವನೋಪಾಯವಾಗಿತ್ತು. ಸಾಕು ದನಗಳ ಹಿಂಡೇ ಅವರ ಸಂಪತ್ತು. ದನಗಳೇ ಅವರ ಧನ. ಆದುದರಿಂದ ಮರಾಠಿಯಲ್ಲಿ ಇವರಿಗೆ 'ಧನಗರ' ಎಂದು ಹೆಸರು. ಅಂದಿನ ಕಾಲದಲ್ಲಿ ದನಗಾರರು ಅಲ್ಲಲ್ಲಿ ದನಗಳ ಹಿಂಡನ್ನು ದಡ್ಡಿ (ರೊಪ್ಪ)ಯಲ್ಲಿ ಕೂಡಿಟ್ಟು ದನಗಳೊಂದಿಗೆ ಬೀಡು ಬಿಡುತ್ತಿದ್ದರು. ಈ ದನಗಳ ಬೀಡಿಗೆ ಹಟ್ಟಿ ಎಂದು, ಜೋಪಾಸನೆಗಾರರಿಗೆ ಹಟ್ಟಿಕಾರರೆಂದು ಹೆಸರಾಯಿತು. ಇಂದಿಗೂ ಸಹ ನಮ್ಮಲ್ಲಿ 'ಕರುಹಟ್ಟಿ' ಮೊದಲಾದ ಶಬ್ದಗಳು ಬಳಕೆಯಲ್ಲಿವೆ. ಈ ಹಟ್ಟಿಕಾರರೇ ಕರ್ನಾಟಕದ ದನಗಳ ಮೂಲ ಪುರುಷರು. ಈ ಹಟ್ಟಿಕಾರ ದನಗಳಿಗೆ ಹಟ್ಟಿದನಗಳು ಅಥವಾ ಹಳ್ಳಿಕಾರ ದನಗಳೆಂದು ಹೆಸರು ಬಂದಿರಲು ಸಾಕು. ಹಟ್ಟಿಕಾರನೆಂದರೆ 'ಜೀವ ಧನಂಗಳು' ಸಾಕಿ ಬದುಕುವವನು ಎಂದು ಶಂ.ಬಾ.ಜೋಶಿಯವರು ತಮ್ಮ ಸಂಶೋಧನಾತ್ಮಕವಾದ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ನಮ್ಮ ಹಿಂದೂ ಸಂಸ್ಕೃತಿಯ ಧರ್ಮದಲ್ಲಿ ಗೋವಿಗೆ ಒಂದು ಪೂಜ್ಯ ಸ್ಥಾನವಿದೆ ಇಂದಿಗೂ ಸಹ ನಮ್ಮ ಹಳ್ಳಿಗಳಲ್ಲಿ ನಡೆಯುವ ಹಟ್ಟಿಯ ಹಬ್ಬ (ದೀಪಾವಳಿ) ನಾಡಹಬ್ಬ, ಹಟ್ಟಿಕಾರರ ಹಬ್ಬ. ಈ ಹಬ್ಬ ಗೋದ್ವಾದಶಿ (ವಸುದ್ವಾದಶಿ) ದಿನ ಪ್ರಾರಂಭವಾಗುತ್ತದೆ. ಅಶ್ವೀಜ ಬಹುಳ ದ್ವಾದಶಿಯ ದಿವಸ ಸಾಯಂಕಾಲದವರೆಗೆ ಉಪವಾಸವಿದ್ದು, ಆಕಳುಗಳು ಮನೆಗೆ ಬಂದ ಮೇಲೆ ಗೋಪೂಜೆ ಮಾಡಿ ಊಟ ಮಾಡುವ ಸಂಪ್ರದಾಯವುಂಟು. ಕಾರ್ತಿಕ ಶುದ್ಧ ಪ್ರತಿಪದದಂದು ರೈತರು ತಮ್ಮ ದನಗಳನ್ನು ಮೈ ತೊಳೆದು ಶೃಂಗರಿಸಿ, ಮೆರವಣಿಗೆ ತೆಗೆಯುತ್ತಾರೆ. ಹೀಗೆ ಈ ಹಟ್ಟಿಯ ಹಬ್ಬ (ದೀಪಾವಳಿ) ವನ್ನು ಸಂಭ್ರಮದಿಂದ ಆಚರಿಸದ ಹಳ್ಳಿಯೇ ಕರ್ನಾಟಕದಲ್ಲಿ ಇಲ್ಲವೆಂದು ಹೇಳಬಹುದು. ಈ ಸೊಬಗನ್ನು ನಾವು ನಮ್ಮ ಜಾನಪದ ಸಾಹಿತ್ಯದಲ್ಲಿಯೂ ನೋಡಬಹುದು. ಹಟ್ಟಿ ಹಬ್ಬದಲ್ಲಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಗುಂಪುಗೂಡಿಕೊಂಡು ಬಸವನ ಕೋಟೆಯ ಆಟವನ್ನು ಆಡುತ್ತಾರೆ. ಒಂದು ಬಸವಣ್ಣನ ಪ್ರತಿಮೆಯನ್ನು ಇಟ್ಟುಕೊಂಡು, ಅದಕ್ಕೆ ಹುಲ್ಲು ಹಾಕಿ, ನೀರು ಕುಡಿಸುವುದಕ್ಕೆಂದು ಕೋಲುಹಾಕುತ್ತಾ 'ಬಸವಕ್ಕ ಬಸವೆನ್ನಿರೇ ಬಸವನ ಪಾದಕೇ ಶರಣೆನ್ನಿರೇ। ಒಂದು ಸುತ್ತಿನ ಕೋಟೆ। ಅವರೊಳಗೊಂದು ಚೆಂದದ ಬಸವ'॥ ಎಂದು ಹಳ್ಳಿಹಾಡು ಹಾಡುತ್ತಾ ಆಟವಾಡುವ ಪರಿಪಾಠ ಇಂದಿಗೂ ಪ್ರಚಲಿತವಿದೆ. ಇದನ್ನು ಹಳ್ಳಿಗಳಲ್ಲಿ ನೋಡಬಹುದು. ಈ ಹಟ್ಟಿಕಾರರು ಕಾಲಕ್ರಮೇಣ ಕೆಲವು ಅನುಕೂಲವಾದ ಸ್ಥಳಗಳಲ್ಲಿ ನೆಲೆಯಾಗಿ ನಿಂತುಬಿಟ್ಟರು. ಹೀಗೆ ಅವು ಬೆಳೆದು ಮುಂದೆ ಊರುಗಳಾದವು.

ಈ ಪ್ರಕಾರ ಮೊದಲು ಕೇವಲ ದನಗಾರರಾಗಿದ್ದ ಹಟ್ಟಿಕಾರರು ಬರುಬರುತ್ತಾ ರೈತರಾದರು. ಹಳ್ಳಿಗಳು ಬೆಳೆದು ಊರಾದವು. ಹೀಗೆ ಮುಂದೆ ಅಲ್ಲಿ ಸಾಮೂಹಿಕ ಜೀವನ ಪ್ರಾರಂಭವಾಗಿ ಸಮಾಜ ರಚನೆಯಾಯಿತು. ಈ ಸಮಾಜ ಜೀವನದ ಏಳಿಗೆಗೆ ಆಕಳೇ ಅಡಿಗಲ್ಲು.

ಕಾಲಕ್ರಮೇಣ ಉತ್ತರ ಭಾರತದ ದನಗಾರರು ತಮ್ಮ ದನಗಳ ಹಿಂಡಿನೊಡನೆ ಸಂಚರಿಸುತ್ತಾ ಕೆಲವರು ದಕ್ಷಿಣಾಭಿಮುಖವಾಗಿ ಕೆಳಗೆ ಇಳಿದುಬಂದು ಮೈಸೂರು ದೇಶದಲ್ಲಿ ನೆಲಸಿರಲು ಸಾಕು ಎಂದು ಪ್ರಾಜ್ಞ ಸಂಶೋಧಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಹೀಗೆ ಮೈಸೂರು ದೇಶಕ್ಕೆ ಬಂದು ನೆಲಸಿದವರನ್ನು 'ಗೊಲ್ಲರು' ಎಂದು ಕರೆಯಲಾಯಿತು. ಮಹಾಭಾರತದಲ್ಲಿ ಶಿಶುಪಾಲ ಶ್ರೀ ಕೃಷ್ಣನನ್ನು 'ಗೊಲ್ಲ' ಎಂದು ಕರೆಯುವುದು ಇದಕ್ಕೆ ಒಂದು ನಿದರ್ಶನ. ಹಳೇ ಜಾನಪದ ಸಾಹಿತ್ಯದಲ್ಲಿ ಈ ಗೊಲ್ಲ ಶಬ್ದ ಬಂದಿರುತ್ತದೆ. ಉದಾಹರಣೆಗಾಗಿ 'ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟ ದೇಶದಿ ಇರುವ ಕಾಳಿಂಗನೆಂಬ ಗೊಲ್ಲನ ಪರಿಯ ನಾನೆಂತು ಪೇಳ್ವೆನು' ಈ ಪದ್ಯದಲ್ಲಿ ಗೊಲ್ಲ ಶಬ್ದವನ್ನು ನಾವು ನೋಡಬಹುದು. ಗೊಲ್ಲ ಎಂದರೆ ಗೋಗಾಯಿ, ದನಗಾರ ಎಂದು ಅರ್ಥ. ಉತ್ತರದ ಕಡೆಯಿಂದ ಬಂದ ದನಗಾರರು (ಗೊಲ್ಲರು) ತಮ್ಮ ದನಗಳ ಹಿಂಡನ್ನು ಕಟ್ಟಿಕೊಂಡು ಅವುಗಳ ಪಾಲನೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹುಲ್ಲುಗಾವಲು, ನೀರು ಮತ್ತು ಅನುಕೂಲ ಹವೆಯ ಸ್ಥಳಗಳನ್ನು ಹುಡುಕಿಕೊಂಡು ದನಗಳನ್ನು ಮೇಯಿಸುತ್ತಾ ತಿರುಗಾಡುತ್ತಿದ್ದರು. ಹೀಗೆ ತಿರುಗಾಡುವಾಗ ಯಾವ ದನಗಳು ಅನೇಕ ಅನಾನುಕೂಲ ಪರಿಸ್ಥಿತಿ, ಸನ್ನಿವೇಶಗಳಿಗೆ ಮತ್ತು ಕಠಿಣ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಶಕ್ತಿ ಸಾಮರ್ಥ್ಯವನ್ನು ಹೊಂದಿರುತ್ತಿದ್ದವೋ? ಅಂಥವು ಮಾತ್ರ ಬದುಕಿ ಬಾಳುತ್ತಿದ್ದವು. ಇದನ್ನೇ ಡಾರ್ವಿನ್ನನು 'ಬಲಿಷ್ಠರ ಉಳಿವು' ಎಂದು ಕರೆದನು. ಆವರಣಕ್ಕೂ ಜೀವನಕ್ಕೂ ನಿಕಟ ಸಂಬಂಧವುಂಟು. ಆವರಣಕ್ಕೆ ತಕ್ಕಂತೆ ಜೀವನ ಮಾರ್ಪಾಟು ಆಗುತ್ತದೆ. ಯಾವ ಪ್ರಾಣಿಗಳು ಈ ಪರಿಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯವಿಲ್ಲವೋ ಅಂಥವು ಸಾಯುತ್ತಿದ್ದವು. ಪ್ರಕೃತಿಯ ಈ ಕೈವಾಡವನ್ನು ಡಾರ್ವಿನ್ನನು 'ಪ್ರಕೃತಿಯ ಆಯ್ಕೆ' ಎಂದು ಹೇಳಿರುವನು. ಇಂಥಾ ಪರಿಸ್ಥಿತಿಗೆ ಹೊಂದಿಕೊಂಡು ಬಾಳಿದ ದನಗಳಲ್ಲಿ ಬೇನೆಯನ್ನು ತಡೆಯುವ ಶಕ್ತಿ, ಸೆಡವು ವರ್ಧಿಸಿತ್ತು. ಅಂದಿನ ಕಾಲದಲ್ಲಿ ಇಂದಿನಂತೆ ಬೇರೆ ಬೇರೆ ಭಾಗಗಳಿಗೆ ದೊಡ್ಡ ಮಾರ್ಗದ ಅನುಕೂಲತೆ ಮತ್ತು ಸಾಗಾಟಕ್ಕೆ ವಾಹನಗಳ ಸೌಕರ್ಯವಿಲ್ಲದ್ದರಿಂದ ಜನರಲ್ಲಿ ಇಂದಿನಂತೆ ಹೆಚ್ಚು ಬಳಕೆ ಇರಲಿಲ್ಲ. ಆಗಿನ ಕಾಲದಲ್ಲಿ ಸುರಕ್ಷತೆ, ಸುಭದ್ರತೆಯಿಲ್ಲದ್ದರಿಂದ ಆಯಾ ಜಾತಿಯ ದನಗಳು ತಮ್ಮ ತಮ್ಮ ಪ್ರದೇಶದಲ್ಲಿಯೇ ಶುದ್ಧವಾಗಿ

ಉಳಿದು ತಮ್ಮದೇ ಆದ ಒಂದು ವಿಶಿಷ್ಟ ಗುಣವನ್ನು ಸ್ಥಾಪಿಸಿಕೊಂಡವು. ಇವನ್ನು ನಾವು ಇಂದಿಗೂ ಸಹ ಆಯಾ ಸ್ಥಳಿಕ ಉತ್ತಮ ಜಾತಿಯ ದನಗಳಾದ ಸಿಂಧೀ, ಹರಿಯಾನ, ಹಳ್ಳಿಕಾರ, ಅಮೃತಮಹಲ್, ಗೀರ್, ಖಿಲಾರಿ, ಓಂಗೋಲ, ನೆಲ್ಲೂರು ಮೊದಲಾದ ಜಾತಿಯ ದನಗಳಲ್ಲಿ ಕಾಣುತ್ತಿದ್ದೇವೆ.

ಉತ್ತರ ಹಿಂದೂಸ್ತಾನದಿಂದ ಜೋಪಾಸನೆಗಾರರು (ದನಗಾರರು) ತಮ್ಮ ಜೊತೆಯಲ್ಲಿ ತಂದ ದನಗಳು ಮೈಸೂರು ದೇಶದ ಅಂದಿನ ಸ್ಥಳಿಕ ಹಳ್ಳಿಕಾರ (ಹಟ್ಟಿಕಾರ) ದನಗಳೊಂದಿಗೆ ಬೆರೆತುದುದರ ಪರಿಣಾಮವಾಗಿ ಉತ್ತಮ ಉಪ ಶಾಖೆಯ ದನಗಳು ಸಂವರ್ಧಿಸಿದವು. ಈ ದನಗಳ ಮೂಲ ಜೋಪಾಸನೆಗಾರರಾದ ಗೊಲ್ಲರ ಹೆಸರು ಈಗ ಇಲ್ಲಿ ಕೇಳಬಾರದಿದ್ದರೂ ಈ ಹಳ್ಳಿಕಾರ ಜಾತಿಯ ದನಗಳ ಹೆಸರು ಇವತ್ತಿಗೂ ಉಳಿದುಕೊಂಡು ಬಂದಿವೆ. ಮೂಲ ಹಳ್ಳಿಕಾರ ದನಗಳಿಂದ ಉತ್ಪನ್ನವಾದ ದನಗಳಲ್ಲಿ ಗುಜ್ಜಮಾವು ದನ, ಬೆಟ್ಟದಪುರದ ದನ, ಘಾಟಿ ಸುಬ್ರಹ್ಮಣ್ಯದ ದನ ಮೊದಲಾದವುಗಳು ಇಂದಿಗೂ ಜನಪ್ರಿಯವಾಗಿವೆ. ಹಳ್ಳಿಕಾರ ಜಾತಿಯ ದನಗಳನ್ನು ಮತ್ತು ದನಗಳ ಉಪಶಾಖೆಯ ದನಗಳನ್ನು ಇಂದಿಗೂ ಸಹ ಹಾಸನ, ಬೆಟ್ಟದಪುರ, ಪಿರಿಯಾಪಟ್ಟಣ, ಸಾಲಿಗ್ರಾಮ, ಅತ್ತಿಗುಪ್ಪೆ, ಕೃಷ್ಣರಾಜಪೇಟೆ, ಹುಣಸೂರು, ಕೃಷ್ಣರಾಜನಗರ, ಶ್ರೀರಂಗಪಟ್ಟಣ, ಮದ್ದೂರು, ಮಂಡ್ಯ, ನಾಗಮಂಗಲ, ಪಾಂಡವಪುರಗಳ ಭಾಗಗಳಲ್ಲಿ ಜಾತ್ರೆದಿನ ಬರುವವರೆವಿಗೂ ಕಾವೇರಿ ನದಿ, ನಾಲೆ ಏರಿಯನ್ನು ಹುಲ್ಲಿಗಾಗಿ ಹಣ ಕೊಟ್ಟು ಪಡೆಯುವರು. ಹುಲ್ಲು ಹಡ್ಲು, ಹುಲ್ಲು ಹಕ್ಕೆ, ಹುಲ್ಲು ಬದುಗಳನ್ನು ಇಷ್ಟು ದಿನ ಮೇಯಿಸಲು ಇಷ್ಟು ಎಂಬ ಗುತ್ತಿಗೆಗೆ ಶುಲ್ಕವನ್ನು ಹಣ ಅಥವಾ ಬತ್ತದ ರೂಪದಲ್ಲಿ ಕೊಡುವರು. ಚೆನ್ನಾಗಿ ಬೆಳೆದು, ಕಾಯಿಬಿಟ್ಟ ಹುರುಳಿ ಗಿಡಗಳನ್ನು ಹೊಲದ ಮೇಲೆ ಇರುವಾಗ ಕ್ರಯಕ್ಕೆ ಪಡೆಯುವರು. ಸೊಪ್ಪು, ಕಾಯಿ ಸಹಿತ ಅದನ್ನು ತಿನ್ನಿಸುವರು. ಇದಲ್ಲದೆ ಮೈ ತುಂಬಿಕೊಳ್ಳುವವರೆವಿಗೂ ಅವಕ್ಕೆ ಹುರುಳಿ, ಉಪ್ಪು, ಕಡ್ಲೆನುಚ್ಚಿನ ಸೇವನೆ, ಬೆಲ್ಲ, ತೆಂಗಿನಕಾಯಿ ತಿನಿಸು ಬೇರೆ.

ಮೈಗೆ ಬೆಲೆ ಬಾಳುವ ಗೌಸು (ಝೂಲ), ಕೊಂಬಿಗೆ ಬೆಳ್ಳಿಯ ಅಣಸು, ಚಿನ್ನದ ಅಣಸು, ಕಾಲಿಗೆ ಬೆಳ್ಳಿ ತೋಡ, ದೃಷ್ಟಿತಾಕದಿರಲೆಂದು ಕತ್ತಿಗೆ ಕರಿಹುರಿ. ಇದೇನು ಕಡಮೆ ವೈಭವವೇ !

ಬೆಟ್ಟದಪುರ, ಚುಂಚನಕಟ್ಟೆ, ಹೇಮಗಿರಿ, ಮುಡುಕತೊರೆ, ಘಾಟಿ ಸುಬ್ರಹ್ಮಣ್ಯ, ಹಾಸನ, ಹೊಳೆನರಸೀಪುರ, ಶಿವಮೊಗ್ಗ, ರಾಮನಾಥಪುರ, ಸಿದ್ದಗಂಗಾ, ಕ್ಯಾಮೇನಹಳ್ಳಿ ಇತ್ಯಾದಿ ಭಾಗದ ರೈತರು ಪಶುಪರಿಣತರು. ಇಲ್ಲಿಯ ಪಶುಪಾಲಕರಿಗೆ ಈ ದನಗಳ ಕುಲ, ವರಸೆ, ಸುಳಿ ಈ ಎಲ್ಲ ಅನುಭವ ವಂಶಪರಂಪರೆಯಾಗಿ ಸಾಗಿಬಂದಿದೆ.

ಕಾವೇರಿ ನದಿ ಜಲಾಯನ ಭಾಗವು ಈ ತಳಿಯ ದನಗಳ ತೌರೂರು. ಹೇಮಾಗಿರಿ, ಚುಂಚನಕಟ್ಟೆ, ಹಾಸನ, ರಾಮನಾಥಪುರ, ದೇವರಗುಡ್ಡ, ರಾಮಾಪುರ ಮೊದಲಾದ ಸ್ಥಳಗಳಲ್ಲಿ ನಡೆಯುವ ವಾರ್ಷಿಕ ದನದ ಜಾತ್ರೆಗಳಲ್ಲಿ ಅಧಿಕ ಸಂಖ್ಯೆಗಳಲ್ಲಿ ಈ ಹಳ್ಳಿಕಾರ ಜಾತಿಯ ದನಗಳನ್ನು ನೋಡಬಹುದು. ಅಮೃತಮಹಾಲ್ ದನಗಳಿಂದ ಉತ್ಪತ್ತಿಯಾದ ಉಪಶಾಖೆಯ ದನಗಳನ್ನು ತರೀಕೆರೆ, ಕಡೂರು, ಬೀರೂರು, ಅಜ್ಜಂಪುರ. ಹೊಳಲಕೆರೆ, ಅರಸಿಕೆರೆ, ಚಿತ್ರದುರ್ಗ, ಚಳ್ಳಕೆರೆ, ಹೊಸದುರ್ಗ ಇವುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೋಡಬಹುದು.

ಕಾಲವು ಸರಿದಂತೆ ಕರ್ನಾಟಕದಲ್ಲಿ ಸುಮಾರು 16ನೇ ಶತಮಾನದಲ್ಲಿ ವಿಜಯ ನಗರದ ಸಾಮ್ರಾಜ್ಯವು ಅತಿ ವೈಭವದಲ್ಲಿತ್ತು. ಸುಮಾರು ಕ್ರಿ. ಶ. 1572–1600ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಯಭಾರಿ ತಮ್ಮ ಆಡಳಿತೆಯ ಸುಭದ್ರತೆ, ಸುರಕ್ಷಣೆ ಮತ್ತು ಅನುಕೂಲಕ್ಕಾಗಿ ವಿಜಯನಗರದ ಕರುಹಟ್ಟಿಯಿಂದ ಕೆಲವು ಉತ್ತಮ ದನಗಳ ಹಿಂಡನ್ನು ತರಿಸಿಕೊಂಡನೆಂದೂ, ಈ ದನಗಳು ಮತ್ತು ಆಗ ಮೈಸೂರಲ್ಲಿಯ ಸ್ಥಳಿಕ ದನಗಳು ಸೇರಿ ಅವುಗಳಿಂದ ಉತ್ಪನ್ನವಾದ ಪೀಳಿಗೆಯೇ ಇಂದು ಲೋಕ ಪ್ರಸಿದ್ಧವಾದ 'ಅಮೃತಮಹಲ್' ದನಗಳೆಂದು ಮೈಸೂರು ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಅಮೃತಮಹಾಲ್ ದನಗಳು ಮೊದಲು ಕಾಡಾವಸ್ಥೆಯಲ್ಲಿದ್ದವು. ಈ ದನಗಳ ತಳಿಯನ್ನು ಕ್ರಮೇಣ ಸುಧಾರಿಸಿ, ಸಾಧು ಮಾಡಿ, ಸಂವರ್ಧನೆ ಮಾಡಿ ಬೆಳೆಸಿದ ಶ್ರೇಯಸ್ಸು, ಬಹಳಮಟ್ಟಿಗೆ ಮೈಸೂರು ಅರಸರಿಗೆ ಸಲ್ಲುತ್ತದೆ. ಕ್ರಿ. ಶ. 1617–1636ರ ವರೆಗೆ ರಾಜ್ಯವಾಳಿದ ಚಾಮರಾಜ ಒಡೆಯರವರು ಈ ಅಮೃತ ಮಹಲ್ ದನಗಳ ಅಭಿವೃದ್ಧಿಗೆ ಬಹಳ ಆಸಕ್ತಿ ಮತ್ತು ಶ್ರಮವಹಿಸಿದ್ದರು. 1672–1704ರಲ್ಲಿ ಚಿಕ್ಕದೇವರಾಜ ಒಡೆಯರವರ ಕಾಲದಲ್ಲಿ ಈ ದನಗಳ ಸುಧಾರಣೆ ಬಹು ಉನ್ನತಾವಸ್ಥೆಯನ್ನು ಮುಟ್ಟಿತ್ತೆನ್ನಬಹುದು. ಇವರ ಆಳ್ವಿಕೆಯಲ್ಲಿ ಈ ದನಗಳ ಹಿಂಡು 'ಬೆಣ್ಣೆ ಚಾವಡಿ' ಎಂಬ ಅಂಕಿತದಿಂದ ಸರಕಾರದ ಆಡಳಿತೆಗೆ ಒಳಪಟ್ಟಿತು. ಅಲ್ಲದೆ, ಅವುಗಳು ಮೇಯುವುದರ ಸಲುವಾಗಿ ಸಂಸ್ಥಾನದ ಅನೇಕ ಭಾಗಗಳಲ್ಲಿ ದೊಡ್ಡ ದೊಡ್ಡ ಹುಲ್ಲುಗಾವಲುಗಳು ಕಾದಿಡಲ್ಪಟ್ಟವು. ಹೀಗೆ ಕಾದಿಡಲಾದ ಹುಲ್ಲು ಗಾವಲುಗಳ ಸಂಖ್ಯೆ 240 ಎಂದೂ ಅವುಗಳ ವಿಸ್ತೀರ್ಣ 41,3539 ಎಕರೆ ಎಂದೂ ತಿಳಿಯಬರುತ್ತದೆ. ಈ ಹುಲ್ಲುಗಾವಲುಗಳು ಇಂದಿಗೂ ಸಹ 'ಅಮೃತಮಹಾಲ್' ಕಾವಲುಗಳೆಂದು ಸರ್ಕಾರದ ವಶದಲ್ಲಿವೆ. ಇವರ ಕಾಲದಲ್ಲಿ ಈ ಕಾವಲುಗಳಲ್ಲಿರುವ ದನಗಳಿಗೆ ಗುರುತಿಗಾಗಿ 'ಡಿ' 'ಇ' ಎಂದು ಮುದ್ರಿಸಲಾಯಿತು ಮತ್ತು ಈ ಕಾವಲುಗಳಲ್ಲಿ ಬೇರೆ ದನಗಳು ಬಾರದಂತೆ ಮತ್ತು ಹಿಂಡನ್ನು ಕಾಯುವುದಕ್ಕಾಗಿ ಕೆಲವು ಜನರನ್ನು ನೇಮಿಸಲಾಯಿತು. ಇವರನ್ನು ಸರ್ವೇಗಾರರು ಎಂದು ಕರೆಯ

ಲಾಯಿತು. ಈ ಪದ್ಧತಿ ಕೆಲವು ಕಡೆ ಇನ್ನೂ ಜಾರಿಯಲ್ಲಿ ಉಳಿದುಬಂದಿದೆ.

ಇವರ ನಂತರ ಹೈದರಾಲಿಯ ಕಾಲದಲ್ಲಿ ಅವನ ಹತ್ತಿರ 60,000ಕ್ಕೆ ಕಡಮೆ ಇಲ್ಲದಷ್ಟು ಎತ್ತುಗಳಿದ್ದವು ಎಂದು ಹೇಳಲಾಗಿದೆ. ಹೈದರಾಲಿಯು ಹೊಸದಾಗಿ ಗೆದ್ದ ತಿರುಚನಾಪಳ್ಳಿ ಮೊದಲಾದ ಸ್ಥಳಗಳಿಂದ ಉತ್ತಮ ದನಗಳನ್ನು ತಂದು ತನ್ನ ಹಿಂಡನ್ನು ಬಹುಮಟ್ಟಿಗೆ ಸುಧಾರಿಸಿದನು. ಈ ದನಗಳು ತಂಜಾವೂರಿನಲ್ಲಿ 'ಪೂರ್ಣಯ್ಯನ ದನ' ಗಳೆಂದು ಜನಪ್ರಿಯವಾಗಿವೆ.

ಹೈದರನ ನಂತರ ಅವನ ಮಗ ಟೀಪುಸುಲ್ತಾನನು ಹಾಗಲವಾಡಿ ಮೊದಲಾದ ಪಾಳೆಗಾರರನ್ನು ಗೆದ್ದು ಅವರಲ್ಲಿಯ ದನಗಳನ್ನು ತಂದು ತನ್ನ ಹಿಂಡಿನೊಡನೆ ಒಂದುಗೂಡಿಸಿ ತನ್ನ ಹಿಂಡನ್ನು ಹೆಚ್ಚಿಸಿದನು. 'ಬೆಣ್ಣೆ ಚಾವಡಿ' ಎಂಬ ಹೆಸರನ್ನು ಬದಲಾಯಿಸಿ 'ಅಮೃತ ಮಹಾಲ್' ಎಂದು ನಾಮಕರಣಮಾಡಿದನು. ಅಂದಿನಿಂದ ಇಂದಿನವರೆಗೆ ಈ ದನಗಳು ಈ ಹೆಸರಿನಿಂದಲೇ ಜನಪ್ರಿಯವಾಗಿ ಲೋಕಪ್ರಖ್ಯಾತಿ ಪಡೆದಿವೆ. ಟೀಪುಸುಲ್ತಾನನು ಈ ದನಗಳ ಆಡಳಿತೆಗಾಗಿ ಕೆಲವು ಕಾನೂನುಗಳನ್ನು ಮಾಡಿ ಈ ದನಗಳ ದಾಖಲೆಯನ್ನು ಇಡಿಸಿದನು ಮತ್ತು ವರ್ಷಕ್ಕೆ ಒಂದಾವರ್ತಿ ಅವುಗಳ ಪರೀಕ್ಷೆಯನ್ನು ಮಾಡುತ್ತಿದ್ದನು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಈ ಅಮೃತಮಹಲ್ ದನಗಳ ಇಲಾಖೆಯು ಸ್ಥಾಪಿಸಲ್ಪಟ್ಟಿತ್ತು. ಹೈದರಾಲಿಯ ಕಾಲದಲ್ಲಿ ಅಭಿವೃದ್ಧಿಹೊಂದಿ, ಟೀಪುವಿನ ಕಾಲದಲ್ಲಿ ಸರಿಯಾದ ಆಡಳಿತ ವ್ಯವಸ್ಥೆಯು ಏರ್ಪಟ್ಟಿತು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಶ್ರೀರಂಗಪಟ್ಟಣವು ಬ್ರಿಟೀಷರ ವಶವಾಗಲು ಬ್ರಿಟಿಷ್ ಸರ್ಕಾರದವರು ವರ್ಷಕ್ಕೆ ತಮಗೆ ಕೆಲವು ದನಗಳನ್ನು ಕೊಡುವ ಕರಾರಿನ ಮೇಲೆ ಈ ಅಮೃತಮಹಲ್ ಇಲಾಖೆಯನ್ನು ಮೈಸೂರು ಆಡಳಿತಕ್ಕೆ ಒಪ್ಪಿಸಿಕೊಟ್ಟರು. ಆದರೆ 13 ವರ್ಷಗಳ ನಂತರ ಕ್ರಿ. ಶ. 1813ರಲ್ಲಿ ಈ ಇಲಾಖೆಯ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕಾಗಿ ಮದರಾಸಿನ ಪ್ರಾಂತ್ಯದ ಕ್ಯಾಪ್ಟನ್ ಹಾರ್ವೇ ನೇಮಿಸಿದರು. ಪುನಃ 1840ರಲ್ಲಿ ಅದನ್ನು ಮೈಸೂರು ಕಮಿಷನರಿಗೆ ಬಿಟ್ಟುಕೊಟ್ಟರು. ಆದರೆ 1860ರಲ್ಲಿ ಬ್ರಿಟಿಷ್ ಕಮಿಶನರ್ ಸರ್ ಚಾರಲ್ಸ್ ಟ್ರೆವಿಲಾಸ್ ಈ ಹಿಂಡನ್ನು ಒಡೆದು ಮಾರಿದನು. ಹೀಗೆ ಮಾರಿದ ದನಗಳನ್ನು ಈಜಿಪ್ಟಿನ ರಾಜನಾದ ಪಾಷಾ ಕೊಂಡುಕೊಂಡು ತನ್ನ ದೇಶಕ್ಕೆ ತೆಗೆದುಕೊಂಡು ಹೋದನು. 1886ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರು ಮೈಸೂರಿನ ಉತ್ತಮವಾದ ದನಗಳನ್ನು ಆರಿಸಿ, ಕೂಡಿಸಿ, ಪುನಃ ಹಿಂಡನ್ನು ಸ್ಥಾಪಿಸಿದರು. ಪ್ರಪ್ರಥಮದಲ್ಲಿ ಈ ಹಿಂಡಿನಲ್ಲಿ ಮೂರು ಪ್ರತ್ಯೇಕ ಬಗೆಯ

ಅಂದರೆ ಹಳ್ಳಿಕಾರ, ಹಾಗಲವಾಡಿ, ಚಿತ್ರದುರ್ಗ ತಳಿಗಳು ಎಂದು ಕಾಣುತ್ತಿದ್ದವು. ಕ್ರಿ. ಶ. 1860ಕ್ಕೆ ಪೂರ್ವದಲ್ಲಿ ಈ ಹಿಂಡು ಹೈದರ, ಟೀಪು ಇವರ ಕೈವಶವಾದ ಮೇಲೆ ಮೂರು ಗುಂಪಿನಲ್ಲಿಯ ದನಗಳನ್ನು ಒಂದಕ್ಕೊಂದಕ್ಕೆ ಸಂಪರ್ಕವಿಲ್ಲದಂತೆ. ಜಾತಿ ಸಂಕರಣ ಮಾಡದೆ ಅವುಗಳನ್ನು ಮೇಲೆ ತಿಳಿಸಿದ ಮೂರು ಪ್ರತ್ಯೇಕ ಪಂಗಡಗಳಲ್ಲಿಯೇ ಇಟ್ಟು ಸಾಕಲಾಯಿತು. ಇದರಿಂದಾಗಿ ಈ ದನಗಳು ತಮ್ಮ ಗುಂಪಿನ ವೈಶಿಷ್ಟ್ಯತೆಯನ್ನು ಹಾಗೂ ಶುದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದವು. ಒಂದೊಂದು ಗುಂಪೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಇದ್ದವು. ಕ್ರಿ. ಶ. 1886ರಲ್ಲಿ ಮೈಸೂರಿನ ಬೇರೆಬೇರೆಯ ದನಗಳನ್ನು ಕೊಂಡು, ಹಿಂಡು ತಯಾರಿಸಿದ ಕಾಲಕ್ಕೆ ಈ ಮೂಲ ದನಗಳು ಹಿಂದಿನಿಂದ ಕಾಪಾಡಿಕೊಂಡು ಬಂದಿದ್ದ ತನ್ನತನವನ್ನು ಕಳೆದುಕೊಂಡವು. ಏಕೆಂದರೆ, ಹಿಂದಿನಿಂದ ಹಿಂಡು ಕಾಯುತ್ತಾ ಬಂದಿದ್ದ ಸೇರ್ವೆಗಾರರನ್ನೇ ಪುನಃ ಸೇರ್ವೆಗಾರರನ್ನಾಗಿ ಮಾಡುವುದಾಗಿ ವಚನಕೊಟ್ಟು ಈ ದನಗಳ ಹಿಂಡನ್ನು ಪುನಃ ಒಂದುಗೂಡಿಸಲು ತಿಳಿಸಲಾಯಿತು. ಆದರೆ ಈ ಸೇರ್ವೆಗಾರರು ಈ ಮೂರು ಪ್ರತ್ಯೇಕ ಪೂರ್ವ ಜಾತಿಯ ದನಗಳನ್ನು ಅಮೃತಮಹಾಲ್ ದನಗಳೊಂದಿಗೆ ಸ್ವೇಚ್ಛೆಯಾಗಿ ಬೆರೆಸಿದರಲ್ಲದೆ ತಮ್ಮ ಹತ್ತಿರವಿದ್ದ ಸ್ವಂತ ಗೋವುಗಳನ್ನು ಸೇರಿಸಿಬಿಟ್ಟರು. ಹೆಚ್ಚು ಸಂಖ್ಯೆಯಲ್ಲಿ ಮಹದೇಶ್ವರ ಬೆಟ್ಟದ ಹಸುಗಳು ಇವುಗಳಲ್ಲಿ ಸೇರಿಹೋದವೆಂದು ತಿಳಿಯಲಾಗಿದೆ. ಹೀಗಾಗಿ ಈ ಮಿಶ್ರತಳಿಯೇ ಬೆಳೆದು ಬರುತ್ತಿದೆಯೇ ಹೊರತು ಕ್ರಿ. ಶ. 1860ಕ್ಕೆ ಪೂರ್ವದಲ್ಲಿದ್ದ ಅಮೃತಮಹಲ್ ದನಗಳಷ್ಟು ಈ ದನಗಳು ಶುದ್ಧವಾದವುಗಳು ಎಂದು ಹೇಳಲು ಸಾಧ್ಯವಿಲ್ಲ. ಈ ಪ್ರಕಾರ ಸೇರಿಸಿದ 4000 ಆಕಳುಗಳನ್ನು ಮತ್ತು 100 ಹೋರಿಗಳನ್ನು 1870ರಲ್ಲಿ ಮದರಾಸ್ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಪುನಃ ಕ್ರಿ. ಶ. 1883ರಲ್ಲಿ ಮೈಸೂರ ಮಹಾರಾಜರಿಗೆ 2,25000 ರೂಪಾಯಿಗಳಿಗೆ ಮಾರಿದರು. ಅದಿನಿಂದ ಈ ದನಗಳು ಮೈಸೂರು ಸರ್ಕಾರದ ವಶದಲ್ಲಿ ಉಳಿದುಕೊಂಡವು. ಕ್ರಿ. ಶ. 1920ರಲ್ಲಿ ಈ ಅಮೃತಮಹಲ್ ಇಲಾಖೆಯನ್ನು ವ್ಯವಸಾಯ ಖಾತೆಯ ಡೈರೆಕ್ಟರ್‌ರವರ ಅಧಿಕಾರಕ್ಕೆ ಒಳಪಡಿಸಲಾಯಿತು. ಅನಂತರ ಕೆಲವು ವರ್ಷಗಳ ಮೇಲೆ ಈ ಅಮೃತಮಹಲ್ ಇಲಾಖೆಯನ್ನು ಕೃಷಿ ಖಾತೆಯಿಂದ ಬದಲಾಯಿಸಿದ್ದು ಪಶುಪಾಲನಾ ಇಲಾಖೆಯ ಡೈರೆಕ್ಟರವರ ಅಧಿಕಾರ ವ್ಯಾಪ್ತಿಯಲ್ಲಿ ಉಳಿದುಕೊಂಡಿದೆ. ಇವುಗಳ ಅಭಿವೃದ್ಧಿಗಾಗಿ ಪಶುಪಾಲನೆ ಇಲಾಖೆಯವರು ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅಜ್ಜಂಪುರ, ಹೆಬ್ಬಾಳ, ಹೆಸರಘಟ್ಟ, ಕೂಡಿಗೆ, ಕುರಿಕುಪ್ಪೆ, ಮುನಿರಾಬಾದ್, ಬಂಕಾಪುರ, ತೇಗೂರು ಮೊದಲಾದ ಸ್ಥಳಗಳಲ್ಲಿ ದನಗಳ ಕೇಂದ್ರಗಳನ್ನು ಸ್ಥಾಪಿಸಿ ಹೆಚ್ಚಿನ ಅಭಿವೃದ್ಧಿ ಮತ್ತು ಆಧುನಿಕ ವೈಜ್ಞಾನಿಕ ಸಂಶೋಧನೆಯ ಕಾರ್ಯಗಳನ್ನು ಮುಂದುವರಿಸಿರುತ್ತಾರೆ.

ಈ ಅಮೃತಮಹಾಲ್ ದನಗಳ ಶ್ರೇಷ್ಠತೆಯ ಬಗ್ಗೆ ಕೆಲವು ದಂಡನಾಯಕರ ಅಭಿಪ್ರಾಯಗಳು ಇಲ್ಲಿ ಅನುಚಿತವೆನಿಸಲಾರದು. ಮೈಸೂರು ಚರಿತ್ರೆಯಲ್ಲಿ ಹೈದರ್ ಮತ್ತು ಟೀಪುಸುಲ್ತಾನರ ಜಯಗಳಿಗೆ ಈ ಅಮೃತಮಹಲ್ ದನಗಳು ಬಹು ಮುಖ್ಯ ಸಾಧನಗಳಾಗಿದ್ದವು ಎಂದು ಹೇಳಲಾಗಿದೆ. ಅಂದಿನ ಯುದ್ಧಗಳಲ್ಲಿ ಇವುಗಳ ಚಲನ ವಲನಗಳನ್ನು ಇಂದಿನ ಪಾಕಿಸ್ತಾನದ ಯುದ್ಧಕಾಲಕ್ಕೆ ಭಾರತದ ಗೆಲುವಿಗೆ ಕಾರಣವಾದ 'ನ್ಯಾಟ್' ವಿಮಾನಗಳಿಗೆ ಹೋಲಿಸಬಹುದು. ಹೈದರಲಿಯು ಈ ದನಗಳ ಸಹಾಯದಿಂದ ಎರಡೂವರೆ ದಿವಸಗಳಲ್ಲಿ 100 ಮೈಲಿಗಳನ್ನು ನಡೆದು ಚಿದಂಬರಂ ಮುತ್ತಿಗೆಯನ್ನು ಬಿಡುಗಡೆ ಮಾಡಲು ಸಾಧ್ಯವಾಯಿತು. ಅಲ್ಲಿಂದ ಹಿಂದಿರುಗುವಾಗ ಈ ದನಗಳು ದೊಡ್ಡ ತೋಪಿನ ಗಾಡಿಗಳನ್ನು ಎಳೆದುಕೊಂಡು ದಿನಕ್ಕೆ 40 ಮೈಲುಗಳ ದೂರ ಪ್ರವಾಸ ಮಾಡಿ ಶತ್ರುಗಳಿಗೆ ಆಶ್ಚರ್ಯವನ್ನುಂಟುಮಾಡಿದವು. ಟೀಪ್ಪುಸುಲ್ತಾನನು ಬಿದನೂರನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಈ ದನಗಳು 63 ಮೈಲುಗಳ ಹಾದಿಯನ್ನು ಕೇವಲ 2 ದಿವಸಗಳಲ್ಲಿ ಜನರಲ್ ಮೆಡಾಸ್ ಮುಟ್ಟುವುದಕ್ಕಿಂತ ಮುಂಚಿತವಾಗಿ ಮುಟ್ಟಿ, ಜಯವನ್ನು ದೊರಕಿಸಿಕೊಟ್ಟಿರುತ್ತವೆ.

1818ರಲ್ಲಿ ಮೈಸೂರು ಕಮೀಶರೇಟರವರು ಈ ದನಗಳ ಬಗ್ಗೆ 'ಅವು ಚಪಲತೆಯುಳ್ಳವು ಮತ್ತು ಹುರುಪಿನ, ಸಿಟ್ಟಿನ ದನಗಳು; ಅರಬ್ಬೀ ದೇಶದ ಕುದುರೆಯು ಹೇಗೆ ಬೇರೆ ಜಾತಿಯ ಕುದುರೆಗಳ ಮೇಲೆ ತನ್ನದೇ ಆದ ಒಂದು ಶ್ರೇಷ್ಠತೆಯನ್ನು ಪಡೆದಿರುತ್ತದೆಯೋ ಹಾಗೆ ಈ ಅಮೃತಮಹಲ್ ದನಗಳು ಸಹ ಬೇರೆ ದನಗಳ ಮೇಲೆ ತಮ್ಮದೇ ಆದ ಒಂದು ಶ್ರೇಷ್ಠತೆಯನ್ನು ಸ್ಥಾಪಿಸಿರುತ್ತವೆ' ಎಂದು ಪ್ರಶಂಸಿಸಿದ್ದಾರೆ.

1842ರಲ್ಲಿ ಕ್ಯಾಪ್ಟನ್ ಡೇವಿಸನ್ ಅಫಘಾನಿಸ್ತಾನದಲ್ಲಿ ತಮ್ಮ ಪಡೆಗೆ ಸೇರಿಸಿದ್ದ ಅಮೃತಮಹಲ್ ದನಗಳ ಬಗ್ಗೆ ಹೀಗೆ ಹೇಳಿರುತ್ತಾರೆ: 'ಅಮೃತಮಹಲ್ ಎತ್ತುಗಳು ಟಿರಿಯಾ ಬೆಟ್ಟದಮೇಲಿನ ಕಣಿವೆ ದಾರಿಯಲ್ಲಿ ಇಳಿದು ಬರುವಾಗ 16 ತಾಸುಗಳು ಸತತ ನೊಗಕ್ಕೆ ಕಟ್ಟಿದ್ದಾಗ್ಯೂ ಸಹ ಸ್ವಲ್ಪವೂ ಆಯಾಸವಿಲ್ಲದೆ ಬೆಟ್ಟದಿಂದ ಕೆಳಗೆ ಇಳಿದು ಬಂದವು. ಮತ್ತೆ ಬೇರೆ ಯಾವ ಜಾತಿಯ ಎತ್ತುಗಳೂ ಇಷ್ಟು ಕಷ್ಟವನ್ನು ಇವುಗಳಂತೆ ಸಹಿಸಲಿಲ್ಲ'.

ಮೊದಲನೆಯ ಜಾಗತಿಕ ಯುದ್ಧದಲ್ಲಿ ಕ್ರಿ. ಶ. 1914–18ರಲ್ಲಿ ಭಾಗದಾದದ ದಂಡನಾಯಕರು ಮೆಸಪೊಟೋಮಿಯಾಕ್ಕೆ ಹೋದ ಅಮೃತಮಹಲ್ ದನಗಳ ಬಗ್ಗೆ 'ಈ ದನಗಳು ಒಂಟೆಗಿಂತ ವೇಗವಾಗಿ ನಡೆಯಬಲ್ಲವೆಂದೂ, ಇಕ್ಕಟ್ಟಾದ ಕಣಿವೆ ದಾರಿಗಳನ್ನು ಮತ್ತು ಸಣ್ಣ ಸಣ್ಣ ಸೇತುವೆಗಳನ್ನು ದಾಟುವಾಗ ತಮ್ಮ ಜಾಗರೂಕತೆಯನ್ನು

ಮತ್ತು ಜಾಣತನವನ್ನು ತೋರಿಸಿರುತ್ತವೆಂದೂ ಆಹಾರ ಅಭಾವವಿದ್ದಾಗ ಮತ್ತು ಪ್ರತಿಕೂಲ ಹವಾಮಾನಗಳಿದ್ದಾಗಲೂ ಸಹ ಅಳವಡಿಸಿಕೊಳ್ಳುವ ಒಂದು ವಿಶಿಷ್ಟತೆಯನ್ನು ಹೊಂದಿರುತ್ತವೆ' ಎಂದೂ ಉಲ್ಲೇಖಿಸಿರುತ್ತಾರೆ.

ಈ ದನಗಳ ಮುಖ್ಯ ಲಕ್ಷಣಗಳು ಇವು ತಮ್ಮ ನಿಲುವು, ಮೈಕಟ್ಟು, ಆಕಾರ, ಗಾತ್ರದಲ್ಲಿ ಹೆಚ್ಚು ದಪ್ಪ ಅಥವಾ ಅತಿ ತೆಳುವು ಇಲ್ಲದೇ ಸಮತೋಲವಾಗಿ, ಸ್ವಲ್ಪ ಹೆಚ್ಚು ಕಡಮೆ ಜೂಜಿನ ಕುದುರೆಯನ್ನು ಹೋಲುತ್ತವೆ ಎಂದು ಹೇಳಬಹುದು. ಬಣ್ಣದಲ್ಲಿ ಬಿಳಿಯು ಬಣ್ಣದಿಂದ ಕಪ್ಪುಮಿಶ್ರಿತ ಬೂದಿ ಬಣ್ಣದವರೆಗೆ ಕೂಡಿರುತ್ತವೆ. ಹೋರಿಗಳಲ್ಲಿ ಶರೀರದ ಮಧ್ಯ ಭಾಗವು ತಿಳಿಬಿಳಿಯ ಬಣ್ಣವಾಗಿದ್ದು, ಕುತ್ತಿಗೆ ಇಣಿ (ಹಿಳಲು) ಯ ಭಾಗ, ತೋಳು ಹಾಗೂ ಚಪ್ಪೆಯ ಭಾಗವು ಹೆಚ್ಚು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಹೋರಿಗಳಲ್ಲಿ ಇಣಿಯು ಚೆನ್ನಾಗಿ ಬೆಳೆದು ದಪ್ಪನಾಗಿರುತ್ತದೆ. ಕಪ್ಪುಮಿಶ್ರಿತ ಬೂದಿ ಬಣ್ಣದ ದನಗಳು ಹೆಚ್ಚು ಸೆಡವಿನ ದನಗಳೆಂದು ತಿಳಿದು ರೈತಜನರು ಹೆಚ್ಚಾಗಿ ಇಂಥ ದನಗಳನ್ನು ಹೊಲಮನೆಯ ಕೆಲಸಗಳಿಗಾಗಿ ಉಪಯೋಗಿಸುತ್ತಾರೆ. ದನಗಳ ಮೈ ಚರ್ಮವು ಮೃದುವಾಗಿ, ಕೂದಲುಗಳು ನಯವಾಗಿ ನುಣುಪಾಗಿರುತ್ತವೆ. ತಲೆಯ ಮೇಲು ಭಾಗದಲ್ಲಿ ಸ್ವಲ್ಪ ದಪ್ಪವಾಗಿ ಮುಖವು ಹೆಚ್ಚು ಅಗಲವಿಲ್ಲದೆ ಕೆಳಗೆ ಬರುಬರುತ್ತಾ ನೀಳವಾಗಿ, ಎಳಸಾಗಿ, ಸರಳವಾಗಿರುತ್ತದೆ. ಕೋಡುಗಳು ಬುಡದಲ್ಲಿ ಒಂದಕ್ಕೊಂದು ಅತಿ ಸಮೀಪದಲ್ಲಿ ಹುಟ್ಟಿಕೊಂಡು, ಮೇಲಕ್ಕೆ ಹೋಗುತ್ತಾ ಅಗಲವಾಗಿ ಸ್ವಲ್ಪ ಹಿಂದಕ್ಕೆ ಬಾಗಿ ಪುನಃ ಮುಂದಕ್ಕೆ ಬಾಗಿಕೊಂಡು, ಉದ್ದವಾಗಿ ಬರುಬರುತ್ತಾ ಗಾತ್ರದಲ್ಲಿ ಸಣ್ಣದಾಗುತ್ತಾ ತುದಿಯಲ್ಲಿ ಬಹಳ ಚೂಪಾಗಿರುತ್ತವೆ. ಮುಖವು ನೋಡಲು ಸುಂದರವಾಗಿ, ಮನೋಹರವಾಗಿ ಕಾಣಿಸುತ್ತದೆ. ಕಣ್ಣುಗಳು ಕಾಂತಿಯುಕ್ತವಾಗಿದ್ದು, ಜಿಂಕೆಯ ಕಣ್ಣುಗಳಂತಿರುತ್ತವೆ. ಕಿವಿಗಳು ಸಣ್ಣವಾಗಿ ತುದಿಯಲ್ಲಿ ಚೂಪಾಗಿರುತ್ತವೆ. ಇವುಗಳ ಒಳಭಾಗವು ತಿಳಿಹಳದಿ ಬಣ್ಣದಿಂದ ಕೂಡಿರುತ್ತದೆ. ಈ ದನಗಳಲ್ಲಿ ಗಂಗೆದೊಗಲು ಮತ್ತು ತೋಬರಿ ಬೇರೆ ಜಾತಿಯ ದನಗಳಿಗಿಂತ ಬಹಳ ಸಣ್ಣವಾಗಿರುತ್ತವೆ. ಕಾಲುಗಳು ಮತ್ತು ತೊಡೆಗಳು ಬಲವಾದ ಸ್ನಾಯುಗಳಿಂದ ತುಂಬಿಕೊಂಡಿರುತ್ತವೆ. ಗೊರಸುಗಳು ಬಿರುಸಾಗಿ, ಕಪ್ಪಾಗಿರುತ್ತವೆ. ಈ ದನಗಳು ಸುಮಾರು 52 ಅಂಗುಲ ಎತ್ತರವಿರುತ್ತವೆ. ಎದೆಯು ವಿಶಾಲವಾಗಿದ್ದು, 60 ರಿಂದ 70 ಅಂಗುಲ ಸುತ್ತಳತೆ ಇರುತ್ತದೆ. ಈ ದನಗಳಲ್ಲಿ ಒಂದು ಮುಖ್ಯ ಕೊರತೆಯೆಂದರೆ ಅವು ಹೆಚ್ಚು ಹಾಲು ಹಿಂಡುವುದಿಲ್ಲ.

ಅಮೃತಮಹಲ್ ಮತ್ತು ಹಳ್ಳಿಕಾರ್ ದನಗಳ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ:


ಅಮೃತ ಮಹಲ್	ಹಳ್ಳಿಕಾರ
1) ಆಕಾರದಲ್ಲಿ ಮೊಹೆಂಜೋದಾರ, ಹರಪ್ಪಗಳಲ್ಲಿ ಗೋಮುದ್ರಿಕೆಗಳ ಚಿತ್ರವನ್ನು ಬಹುಮಟ್ಟಿಗೆ ಹೋಲುತ್ತವೆ.	1) ನೋಡಲು ಇದರ ಅಂಗ ಸೌಂದರ್ಯವು ಬಹಳ ಮನೋಹರವಾಗಿ ಕಾಣುತ್ತದೆ. ಮುಖದ ಮೇಲೆ ಮತ್ತು ಕಣ್ಣುಗಳ ಹುಬ್ಬುಗಳ ಮೇಲೆ ಬಿಳಿಯ ಗೆರೆ (ಕಣ್ಣುಸೋಗೆ) ಮತ್ತು ಬಿಳಿಯ ಬಣ್ಣದಿಂದ ಕೂಡಿದ್ದು ಹೆಚ್ಚು ಆಕರ್ಷಿತವಾಗಿ ಕಾಣುವುದು.
2) ಮೈ ಬಣ್ಣ ಸಾಮಾನ್ಯವಾಗಿ ಬಿಳುಪು	2) ರೂಪಾಯಿ ಬಣ್ಣ (ಬೂದಿಮಿಶ್ರಬಿಳಿ)
3) ಕುತ್ತಿಗೆ ದಪ್ಪ	3) ಕುತ್ತಿಗೆ ತೆಳುವಾಗಿರುತ್ತದೆ. ನೀಳ
4) ಗಂಗೆದೊಗಲು ಮತ್ತು ತೋಬರಿ ಉದ್ದವಾಗಿರುತ್ತವೆ.	4) ಗಂಗೆದೊಗಲು ಮತ್ತು ತೋಬರಿ ಬಿಗಿಯಾಗಿ ಮೈಗೆ ಹತ್ತಿಕೊಂಡಿರುತ್ತದೆ.
5) ನೀಳವಾದ ಬಾಲ	5) ಬಾಲ ಅಷ್ಟು ಉದ್ದವಲ್ಲ.
6) ಮುಖ ದುಂಡಾಗಿದಪ್ಪವಾಗಿರುತ್ತದೆ.	6) ಮುಖವು ನೀಳವಾಗಿ ಎಳಸಾಗಿ, ಸರಳವಾಗಿರುತ್ತದೆ.
7) ಹಣೆಯು ಅಗಲವಾಗಿರುತ್ತದೆ.	7) ಹಣೆಯು ಉಬ್ಬಿಕೊಂಡು ಮಧ್ಯಭಾಗದಲ್ಲಿ ಸೀಳಾಗಿರುತ್ತದೆ. ಎರಡು ಕೊಂಬುಗಳ ಮಧ್ಯದಲ್ಲಿ ನಿಂಬೆಹಣ್ಣಿನ ಗಾತ್ರದಷ್ಟು ಉಬ್ಬಿಕೊಂಡಿರುತ್ತದೆ. ಇದಕ್ಕೆ ನಿಂಬೂರಿ ಎನ್ನುತ್ತಾರೆ.
8) ಕೈಕಾಲುಗಳು ಬಲವಾದ ಮತ್ತು ದಪ್ಪನಾದ ಗಿಡ್ಡಾದ ಎಲುಬುಗಳಿಂದ ಕೂಡಿರುತ್ತವೆ.	8) ತೆಳುವಾದ ಗಟ್ಟಿಯಾದ ಮತ್ತು ಎತ್ತರವಾದ ಕೈಕಾಲುಗಳು, ಹೊಟ್ಟೆ ನೀಳ.


9) ಇಣೆಯು ಬಹಳ ದಪ್ಪವಾಗಿರುತ್ತದೆ.	9) ಇಣೆ ಅಥವಾ ಹೆರಳು ಅಷ್ಟು ದಪ್ಪ ವಲ್ಲ (ಸಾಮಾನ್ಯ ಗಾತ್ರ). ಕೊಂಬು ಹುಟ್ಟಿದಾಗಲೇ ಸಣ್ಣಗೆ ತೆಳುವಾಗಿ ಈಚೆಗೆ ಹೊರಟು ಹಿಂದಕ್ಕೆ ಹೋಗಿ ಸ್ವಲ್ಪ ಬಾಗಿ ಎತ್ತರಕ್ಕೆ ಬೆಳೆಯುತ್ತದೆ. ಕೊಂಬಿನ, ಬುಡವು ಅಷ್ಟು ದಪ್ಪವಲ್ಲ. ಕೊಂಬಿನ ತುದಿ ಚೂಪು, ಗೊರಸು ಸಣ್ಣವು, ಗಟ್ಟಿ, ನಿಂತರೆ ಸಮತಲದಲ್ಲಿ ಪಗಡೆಕಾಯಿ ಇಟ್ಟಂತೆ.

(2) ಖಿಲಾರಿ

ಕರ್ನಾಟಕದಲ್ಲಿ ಹೆಸರುವಾಸಿಯಾದ ಮತ್ತು ಉತ್ತರ ಕರ್ನಾಟಕದಲ್ಲಿ ಚಿರಪರಿಚಿತವಾದ ಮತ್ತು ಜನ ಪ್ರಿಯವಾದ ದನಗಳೆಂದರೆ 'ಖಿಲಾರಿ' ಜಾತಿಯ ದನಗಳು. ಈ ಖಿಲಾರಿ ಜಾತಿಯ ದನಗಳು ಆಕಾರ, ಮೈಕಟ್ಟು, ಚಪಲತೆ, ಹುರುಪು,, ಕಷ್ಟಸಹಿಷ್ಣುತೆ ಮತ್ತು ಸಿಟ್ಟು ಈ ಗುಣಗಳಲ್ಲಿ ಅಮೃತಮಹಲ್ ದನಗಳಿಗೆ ಸರಿಹೋಲುತ್ತವೆ.

ಖಿಲಾರಿ ಜಾತಿಯ ದನಗಳ ಮೂಲಸ್ಥಾನ ಸಾತಪುಡ ಬೆಟ್ಟದ ಸುತ್ತಮುತ್ತಲಿನ ಹುಲ್ಲುಗಾವಲುಗಳಿಂದ ಕೂಡಿರುವ ಕಂದರ ಪ್ರದೇಶ, ಖಾನ ದೇಶದ ಉತ್ತರ ಭಾಗ ಹಾಗೂ ಇಂದೂರಿನ ಸುತ್ತಮುತ್ತಲಿನ ಭಾಗಗಳು. ಈ ಖಿಲಾರಿ ದನಗಳ ಹಿಂಡನ್ನು ಖಿಲಾರಿ, ಧನಗರ್ ಮತ್ತು ಬಂಜಾರಿಗಳೆಂದು ದನಗಾರರು ಈ ಪ್ರದೇಶಗಳಲ್ಲಿ ಸಾಕಿ ಬೆಳೆಸುತ್ತಾರೆ. ತಮ್ಮ ದನಗಳ ಹಿಂಡನ್ನು ಗುಡ್ಡಗಾಡು ಪ್ರದೇಶಗಳಲ್ಲಿ ಮೇಯಿಸು ವುದು, ಸಂವರ್ಧನೆ ಮಾಡಿ ಹಿಂಡು ಬೆಳೆಸುವುದು ಮತ್ತು ಹೋರಿ ಕರುಗಳನ್ನು ಮಾರಾಟ ಮಾಡುವುದನ್ನು ಖಿಲಾರಿ ದನಗಾರರು ತಮ್ಮ ಜೀವನದ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿರುತ್ತಾರೆ. ಧನಗರ್ ಮತ್ತು ಬಂಜಾರಿಗಳೆಂಬ ದನಗಾರರು ಅಲ್ಪ ಸ್ವಲ್ಪ ಜಮೀನು ಸಾಗುವಳಿ ಮಾಡಿಕೊಂಡು ತಮ್ಮ ಒಕ್ಕಲುತನದ ಉದ್ಯೋಗದ ಜೊತೆಗೆ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕಾಗಿ ಪೂರಕ ಉದ್ಯೋಗವೆಂದು ಈ ಖಿಲಾರಿ ದನಗಳ ಹಿಂಡನ್ನು ಸಾಕಿ ಬೆಳೆಸಿಕೊಂಡಿರುತ್ತಾರೆ. ಒಬ್ಬೊಬ್ಬ ಜೋಪಾಸನೆ ಗಾರನ ಹತ್ತಿರ 25 ರಿಂದ 200 ದನಗಳವರೆಗೆ ಹಿಂಡು ಇರುತ್ತದೆ. ಸಾಮಾನ್ಯವಾಗಿ 100 ದನಗಳ ಹಿಂಡಿನ ಗುಂಪನ್ನು ಇಬ್ಬರು ಕಾಯ್ದು ಮೇಯಿಸುತ್ತಾರೆ. ಉತ್ತಮ ತಳಿಗೆಯ ಉತ್ಪಾದನೆಗಾಗಿ ತಮ್ಮ ಆಕಳುಗಳಿಗೆ ಶ್ರೇಷ್ಠ ಕುಲದ ಉತ್ತಮ ಹೋರಿ ಗಳಿಂದ ಕಟ್ಟಿಸುವುದರಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿರುತ್ತಾರೆ, ಅದಕ್ಕಾಗಿ ತಮ್ಮ





ಚಿತ್ರ 4 : ಖಿಲಾರಿ ಹೋರಿ(ಮೇಲ್ಗಡೆ); ಖಿಲಾರಿ ಆಕಳು(ಕೆಳಗಡೆ)

ಹಿಂಡಿನಲ್ಲಿಯೇ ಬೀಜಕ್ಕಾಗಿ ಆರಿಸಿದ ಉತ್ತಮವಾದ ಹೋರಿಗಳನ್ನು ತಳಿ ಸಂವರ್ಧನೆಗಾಗಿ ಸಾಕಿ ಬಿಟ್ಟಿರುತ್ತಾರೆ. ಇವರು ಹೋರಿ ಕರುಗಳನ್ನು ಹೆಚ್ಚು ಪ್ರೀತಿಯಿಂದ ಜೋಪಾನ ಮಾಡುತ್ತಾರೆ. ಇವುಗಳಿಗೆ ಮೇವಿನ ಜೊತೆಗೆ ಸ್ವಲ್ಪ ಕಾಳಿನ ಮಿಶ್ರಣ ತಿಂಡಿಯನ್ನು ಕೊಟ್ಟು ಬೆಳೆಸುತ್ತಾರೆ. ಈ ಹೋರಿಕರುಗಳನ್ನು ಎರಡು ವರ್ಷಗಳ ಕರುಗಳಾದೊಡನೆ ಮಾರಿಬಿಡುತ್ತಾರೆ. ಆಕಳು ಮತ್ತು ಹೆಣ್ಣು ಕರುಗಳನ್ನು ಸಾಮಾನ್ಯವಾಗಿ ಮಾರುವುದಿಲ್ಲ. ಈ ಖಿಲಾರಿ ಜಾತಿಯ ದನಗಳ ಜೋಪಾಸನೆಗಾರರು ಉಳಿದ ಬೇರೆ ಜಾತಿಯ ದನಗಳ ಹಿಂಡಿನ ಜೋಪಾಸನೆಗಾರರಂತೆ ತಮ್ಮ ದನಗಳ ಹಿಂಡನ್ನು ಮೇಯಿಸುವುದರ ಸಲುವಾಗಿ ಬಹಳ ದೂರದ ಬೇರೆ ಪ್ರದೇಶಗಳಲ್ಲಿ ತಿರುಗಾಡುವುದಿಲ್ಲ. 'ತಪತಿ ಖಿಲಾರಿ' ಜಾತಿಯ ದನಗಳನ್ನು ಸಾಕುವ ಖಿಲಾರಿಗಳೆಂಬ ಜೋಪಾಸನೆಗಾರರು ತಮ್ಮ ಗುಡ್ಡಗಾಡು ಪ್ರದೇಶಗಳ ಹತ್ತಿರವೇ ಗುಡಿಸಲುಗಳನ್ನು ಹಾಕಿಕೊಂಡು ಅಲ್ಲಿಯೇ ವಾಸವಾಗಿರುತ್ತಾರೆ. ರಾತ್ರಿ ದನಗಳನ್ನು ಕೂಡಿ ಹಾಕುತ್ತಾರೆ. ಬೆಳಗಾದ ಕೂಡಲೇ ಮತ್ತೆ ಅವುಗಳನ್ನು ಮೇಯಲು ಹೊರಗೆ ಬಿಡುತ್ತಾರೆ. ಹುಲ್ಲು ಕಡಮೆಯಾದಂತೆ ಗುಡ್ಡಗಾಡುಗಳಲ್ಲಿ ಹುಲ್ಲನ್ನು ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದನಗಳನ್ನು ಅಟ್ಟಿಕೊಂಡು ಹೋಗಿ ಮೇಯಿಸುತ್ತಾ ತಿರುಗಾಡುವುದರಿಂದ ಈ ದನಗಳ ಕಾಲುಗಳು ಬಲವಾದ ಸ್ನಾಯುಗಳಿಂದ ಕೂಡಿರುತ್ತವೆ; ಗೊರಸುಗಳು ಕಬ್ಬಿಣದಂತೆ ಗಟ್ಟಿಯಾಗಿರುತ್ತವೆ. ಮೇ ತಿಂಗಳಿನಲ್ಲಿ ಹುಲ್ಲಿನ ಕೊರತೆ ತೀವ್ರವಿದ್ದಾಗ ಮಾತ್ರಾ ಆ ಕಾಲದಲ್ಲಿ ದನಗಳಿಗೆ ಒಂದು ಪೌಂಡಿನಷ್ಟು ಕಾಳಿನ ಮಿಶ್ರಣವನ್ನು ಕೊಡುತ್ತಾರೆ. ಇದರ ಜೊತೆಗೆ ಕಾವಲುಗಳಲ್ಲಿ ಬೆಳೆದಿರುವ ಅಂಜನ್, ಪೀಪರ್ ಮತ್ತು ಸೀಸಮ್ ಮರಗಳ ಹಸಿರು ಎಲೆಗಳನ್ನು ಕೊಯ್ದು ಮೇಯಿಸುತ್ತಾರೆ. ಹಿಸ್ಸಾರಿನಲ್ಲಿ ಕ್ರಿ. ಶ. 1920–21ರಲ್ಲಿ ಮೇವಿನ ಬರಗಾಲವಿದ್ದಾಗ ಸೀಸಮ್ ಮರದ ಹಸಿರು ಎಲೆಗಳನ್ನು ಕೊಯ್ದು ದನಗಳನ್ನು ಮೇಯಿಸಿ ಕಾಪಾಡಲಾಯಿತು. ಕ್ರಿ. ಶ. 1938-39ರಲ್ಲಿಯೂ ಸಹ ಮೇವಿಗೆ ಬರಗಾಲವಿದ್ದಾಗ ಇದೇ ಮರಗಳ ಎಲೆಗಳಿಂದಲೇ ಅವುಗಳ ಜೀವನ ರಕ್ಷಣೆ ಮಾಡಲಾಯಿತು. ಇತ್ತೀಚೆಗೆ 'ಮೆಸ್‌ಕ್ವೈಟ್'' ಎಂಬ ಜಾತಿಯ ಗಿಡಗಳನ್ನು ಬೆಳೆಸಲಾಗಿದೆ. ಇವುಗಳ ಎಲೆ ಹಾಗೂ ಕಾಯಿಗಳನ್ನು ದನಗಳ ಆಹಾರಕ್ಕಾಗಿ ಉಪಯೋಗಿಸಲಾಗುತ್ತಿದೆ. ಈ ದನಗಳ ಹಿಂಡು ಗುಡ್ಡಗಾಡುಗಳಲ್ಲಿರುತ್ತವೆಯೇ ಹೊರತು ಗುಡ್ಡದ ಹತ್ತಿರವಿರುವ ಹಳ್ಳಿಗಳಲ್ಲಿರುವುದಿಲ್ಲ. ಹೀಗಾಗಿ ಜನಗಳ ಸಂಪರ್ಕವಿಲ್ಲದ್ದರಿಂದ ಹೊಸಬರನ್ನು ಕಂಡರೆ ಬಹಳ ಬೆದರುತ್ತವೆ ಮತ್ತು ಕಾಡಾವಸ್ಥೆಯಲ್ಲಿರುವುದರಿಂದ ಸ್ವಭಾವದಿಂದ ಕ್ರೂರವಾಗಿರುತ್ತವೆ. ಈ ದನಗಳು ಮಳೆ, ಗಾಳಿ, ಬಿಸಿಲುಗಳಲ್ಲಿಯೇ ತಿರುಗಾಡಿಕೊಂಡು ಬಯಲಿನಲ್ಲಿಯೇ ವಾಸವಾಗಿರುತ್ತವೆ. ಹೀಗಾಗಿ ಇವು ಹೆಚ್ಚು ಶ್ರಮ ಸಹಿಸ ಬಲ್ಲವಾಗಿವೆ. ಖಿಲಾರಿಗಳು, ಮಳೆಯ ಆಶ್ರಯಕ್ಕಾಗಿ ಸಣ್ಣ ಸಣ್ಣ ಗುಡಾರಗಳನ್ನು ಹಾಕಿ

ಕೊಂಡು ಅವರಲ್ಲಿರುತ್ತಾರೆ. ಇವರಿಗೆ 'ಪಾಲ' ಎಂದು ಕರೆಯುತ್ತಾರೆ. ಬಂಜಾರಿಗಳು ಮತ್ತು ಧನಗರ್‌ರು ಜೋಳದ ದಂಟು ಉಪಯೋಗಿಸಿ ಮಣ್ಣು ಮೆತ್ತಿದ ತಡಿಕೆ ಗೋಡೆಗಳಿಂದ ಕಟ್ಟಿದ ಜೋಪಡಿಗಳಲ್ಲಿ ವಾಸವಾಗಿರುತ್ತಾರೆ. ಖಿಲಾರಿ ಜಾತಿಯ ದನಗಳನ್ನು ಹೆಚ್ಚಾಗಿ ಸಾಕುವ ಮತ್ತು ಬೆಳೆಸುವ ಸಾತಪುಡದಲ್ಲಿಯ ಪ್ರದೇಶಗಳೆಂದರೆ: ಜೋಡಿ, ಬೋರಾಡಿ, ದೊಡ್ಡವಾಡ, ಹಾಟೆಡ್, ಸಾವಖಾನಿ, ಬಾಡವಾನಿ, ಮಿಲಾನ್, ಕಿಟಿಯ, ಸಾಂಗಲಿ ಮತ್ತು ಪಾಲಾಸ್‌ನರ್ ಈ ಭಾಗಗಳಲ್ಲಿ ಮಳೆಯು ಸಾಕಷ್ಟು ಆಗುತ್ತದೆ. ಭೂಮಿ ಕೆಂಪುಮಿಶ್ರ ಬಣ್ಣದಿಂದ ಕೂಡಿದ ಮಸಾರೆ ಭೂಮಿ. ಇಲ್ಲಿಯ ವಿಶಾಲವಾದ ಹುಲ್ಲುಗಾವಲುಗಳಲ್ಲಿ ಹರಿಯುವ ಹಳ್ಳಕೊಳ್ಳಗಳಲ್ಲಿ ಇಡೀ ವರ್ಷವೆಲ್ಲ ದನಗಳಿಗೆ ಕುಡಿಯಲು ನೀರು ಸಿಗುತ್ತದೆ. ಹುಲ್ಲುಗಾವಲುಗಳಲ್ಲಿ ಸಾಕಷ್ಟು ಹುಲ್ಲು ಸಿಗುತ್ತದೆ. ಈ ಹುಲ್ಲುಗಾವಲುಗಳಲ್ಲಿ ಬಿಸಲಿನ ಬೇಗೆಯ ತಾಪವನ್ನು ಪರಿಹರಿಸುವುದಕ್ಕಾಗಿ ದೊಡ್ಡ ಮರಗಳನ್ನು ಬೆಳೆಸಿರುತ್ತಾರೆ. ಸಣ್ಣ ಸಣ್ಣ ಕಂಟಿ, ಕುರುಚಲ ಗಿಡಗಳು, ಪೊದೆಗಳು ಅಲ್ಲಲ್ಲಿ ಬೆಳೆದುಕೊಂಡಿರುತ್ತವೆ. ಇವುಗಳ ತಪ್ಪಲಿನಲ್ಲಿ ಎಲೆ, ಚಿಗುರು, ಹೂ, ಕಾಯಿಗಳಿವು ಬೇಸಗೆಯಲ್ಲಿ ದನಗಳಿಗೆ ಮೇವಾಗಿ ಉಪಯೋಗ ಬೀಳುತ್ತದೆ. ಈ ಭಾಗಗಳಲ್ಲಿ ಸಾಗುವಳಿಮಾಡಿದ ಜಮೀನು ಬಹಳ ಕಡಮೆ. ಜನವರಿ, ಫೆಬ್ರುವರಿ ತಿಂಗಳಲ್ಲಿ ಈ ದನಗಳ ಹಿಂಡನ್ನು ಗುಡ್ಡಗಾಡು ಪ್ರದೇಶಗಳಿಂದ ಹಳ್ಳಿಗಳ ಹತ್ತಿರ ಇರುವ ಜಮೀನುಗಳಲ್ಲಿ ತಂದು ಬೀಡುಬಿಡುತ್ತಾರೆ. ಈ ಕಾಲದಲ್ಲಿ ಸುಗ್ಗಿ ಮುಗಿದು ಬೆಳೆಯನ್ನು ಕೊಯ್ಲು ಮಾಡಿರುತ್ತಾರೆ. ಹೀಗೆ ಕೊಯ್ಲು ಮಾಡಿಬಿಟ್ಟ ಜಮೀನುಗಳಲ್ಲಿ ಕೂಳೆಸೊಪ್ಪು ಬೆಳೆದು ಚಿಗುರಿರುತ್ತದೆ. ಈ ಕೂಳೆಸೊಪ್ಪು, ಹರಡಿಬಿದ್ದ ಧವದಿ ಸಿಡಿಕಾಳುಗಳನ್ನು ಮೇಯಲು ದನಗಳನ್ನು ಬಿಡುತ್ತಾರೆ. ದನಗಳ ಆಹಾರದಲ್ಲಿ ಬದಲಾವಣೆಯಾಗಿ ಅವುಗಳ ಬೆಳವಣಿಗೆ ಸುಧಾರಿಸುತ್ತದೆ. ಜಮೀನಿನ ಮಾಲೀಕರು ತಮ್ಮ ಜಮೀನುಗಳಲ್ಲಿ ದನಗಳನ್ನು ಹೀಗೆ ಬೀಡುಬಿಟ್ಟು ಮೇಯಿಸುವುದಕ್ಕೆ ತಕರಾರು ಮಾಡುವುದಿಲ್ಲ. ಏಕೆಂದರೆ ಈ ದನಗಳ ಹಿಂಡು ಹಾಕಿದ ಸಗಣಿ,ಮೂತ್ರ ಉತ್ತಮ ಗೊಬ್ಬರವಾಗಿ ಜಮೀನು ಹೆಚ್ಚು ಫಲವತ್ತಾಗುತ್ತದೆ. ಆಕಳ ಮಣಕ (ಕಡಸು) ಗಳು ತಡವಾಗಿ ಅಂದರೆ 4 ವರ್ಷ ವಯಸ್ಸಾದ ಮೇಲೆ ನಸೆಗೆ ಬರುತ್ತವೆ. ಆಕಳುಗಳು 2 ವರ್ಷಕ್ಕೊಮ್ಮೆ ಕರುಹಾಕುತ್ತವೆ. ಕರುಗಳು ತಾಯಿ ಹಾಲು ಕೊಡುವವರೆಗೆ ಹಾಲು ಕುಡಿಯುತ್ತವೆ. ಆಕಳುಗಳು ಕಡೆಗಂದಿಗಳಾದಾಗ ಮತ್ತೆ ನಸೆಗೆ ಬರುತ್ತವೆ. ಹೋರಿ ಕರುಗಳನ್ನು ಸ್ಥಳಿಕ ದನದ ವ್ಯಾಪಾರಿಗಳು ಖರೀದಿಮಾಡಿ ಗುಂಪುಗೂಡಿಸಿ ಒಂದು ತಿಂಗಳಾದ ಮೇಲೆ ಅವುಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಿ ಮಾರಾಟಕ್ಕಾಗಿ ದಕ್ಷಿಣ ಮಹಾರಾಷ್ಟ್ರ ಭಾಗಗಳಿಗೂ ಉತ್ತರ ಕರ್ನಾಟಕದ ಭಾಗಗಳಿಗೂ ಹೊಡೆದುಕೊಂಡು ಹೋಗುತ್ತಾರೆ. ಈ ಭಾಗಗಳಲ್ಲಿ ಇವುಗಳಿಗೆ ಅಧಿಕ ಬೇಡಿಕೆ ಇರುತ್ತದೆ, ಈ ಕಾಲಾವಧಿಯಲ್ಲಿ ಕರುಗಳು ಸ್ವಲ್ಪ

ಸಾಧ್ಯವಾಗುತ್ತವೆ. ಹೀಗೆ ಸಾಧುಗೊಳಿಸಿದ ಕರುಗಳ ಹಿಂಡನ್ನು ಮಾರಲು ಅಹಮದ್‌ನಗರ, ಪುಣೆ ಜಿಲ್ಲೆಗೂ ಮುಂದೆ ಸೊಲ್ಲಾಪುರ, ಜತ್, ಪಂಢರಪುರ, ಔಂಧ ಜಿಲ್ಲೆಗಳ ನಾನಾ ಭಾಗಗಳಿಗೂ ಸೊಲ್ಲಾಪುರ, ಸಾಂಗಲಿ, ಮಿರಜ್, ಜಮಖಂಡಿ, ಮೊದಲಾದ ಭಾಗಗಳಿಗೂ ಹೊಡೆದುಕೊಂಡು ಹೋಗುತ್ತಾರೆ. ಈ ದನಗಳು ಹೀಗೆ ಬಹಳ ದೂರ ಪ್ರದೇಶಗಳಲ್ಲಿ ಹರಡಿಕೊಂಡಿವೆ.

ಖಿಲಾರಿ ಜಾತಿಯ ದನಗಳು ದಕ್ಷಿಣ ಮಹಾರಾಷ್ಟ್ರದಲ್ಲಿ ಸಿಗುವುದರಿಂದ ಇದಕ್ಕೆ ಖಿಲಾರ' ಎಂದು ಹೆಸರು ಬಂದಿರುತ್ತದೆ. ಖಿಲಾರ ಎಂದರೆ ದಕ್ಷಿಣ ದಿಕ್ಕಿನ ಎಂದರ್ಥ. ಖಿಲಾರಿ ಜಾತಿಯ ದನಗಳು ಅಮೃತ ಮಹಾಲ್ ಜಾತಿಯ ದನಗಳಂತೆ ಶುದ್ಧ ಜಾತಿಯ ಒಂದೇ ತಳಿಯ ದನಗಳಲ್ಲ. ಖಿಲಾರಿ ಜಾತಿಯ ದನಗಳು ಅಮೃತ ಮಹಲ್ ದನಗಳಿಂದ ಉತ್ಪನ್ನವಾದ ಒಂದು ಉಪಶಾಖೆ ಎಂದು, ಇವುಗಳಲ್ಲಿ ಉತ್ತರ ಭಾರತದಲ್ಲಿಯ ದೊಡ್ಡ ಬಿಳಿಯ ಜಾತಿಯ ದನಗಳ ಮಿಶ್ರಣವು ಕಂಡುಬರುತ್ತದೆ ಎಂದೂ ಕರ್ನಲ್ ಸಾ. ಅರ್ಥರ್ ಆಲಿವರ್ ತನ್ನ 'ಭಾರತದಲ್ಲಿಯ ಕೆಲವು ಮುಖ್ಯ ದನಗಳ ಸಂಕ್ಷಿಪ್ತ ಚರಿತ್ರೆ' ಪುಸ್ತಕದಲ್ಲಿ ಬರೆದಿರುತ್ತಾನೆ. ಈ ಬಗ್ಗೆ ಜಿ. ಮೊಲಿಸನ್ ತನು 'ಮುಂಬಯಿ ಇಲಾಖೆಯಲ್ಲಿಯ ದನಗಳ ತಳಿಗಳು' ಪುಸ್ತಕದಲ್ಲಿ 'ನಾಸಿಕ ಜಿಲ್ಲೆಯಲ್ಲಿ ಸುಮಾರು 19ನೇ ಶತಮಾನದ ಆದಿ ಭಾಗದಲ್ಲಿ ಬರಗಾಲ ಬಿದ್ದಾಗ ದನಗಳ ಅಭಾವ ಉಂಟಾಗಲು ಆಗ ಗೌಡರ ಧನಗರ್ ಎಂಬಾತನು ಮೈಸೂರು ದನಗಳ ಒಂದು ಹಿಂಡನ್ನು ನಾಗಪುರ ಪ್ರದೇಶಕ್ಕೆ ತೆಗೆದುಕೊಂಡು ಹೋದನೆಂದೂ, ಈ ಮೈಸೂರು ದನಗಳು ಅಲ್ಲಿಯ ಸ್ಥಳಿಕ ದನಗಳೊಡನೆ ಕೂಡಿ ಹುಟ್ಟಿದ ದನಗಳೇ 'ಖಿಲಾರ' ದನಗಳೆಂದು ಹೆಸರಾದವು ಎಂದೂ ಬರೆದಿರುತ್ತಾರೆ. ಮುಂಬಯಿ ಇಲಾಖೆಯಲ್ಲಿ ಜಾನುವಾರು ತಜ್ಞರಾಗಿದ್ದ ದಿವಂಗತ ಈ. ಜೆ. ಬ್ರೂಯಿನ್ ಈ ಖಿಲಾರಿ ಜಾತಿಯ ದನಗಳಲ್ಲಿಯೂ ಸಹ ಅಮೃತಮಹಲ್ ಆಟಪಾಡಿಮಹಲ್, ಮಸ್ವಾಡಖಿಲಾರ, ತಪತಿಖಿಲಾರ, ಜತ್‌ಖಿಲಾರ, ಮತ್ತು ನಕಲಿಖಿಲಾರ ಇವೆಲ್ಲವೂ ಸಮಾವೇಶವಾಗಿರುತ್ತವೆ ಎಂದು ಹೇಳಿರುತ್ತಾರೆ. ಈ ಎಲ್ಲ ತರಗತಿಯ ದನಗಳನ್ನು ನಾವು ಇಂದು ಮಾಸವಾಡ, ನಾಗೋಟ, ಜತ್, ಚಿಂಚಲಿ, ವಿಜಾಪುರ, ಸೊಲ್ಲಾಪುರ, ಅಥಣಿ, ಜಮಖಿಖಂಡಿ, ರಸುಂಡಿ, ಪಂಢರಪುರಗಳಲ್ಲಿ ಸೇರುವ ದನಗಳ ವಾರ್ಷಿಕ ಜಾತ್ರೆಯಲ್ಲಿ ಕಾಣಬಹುದು.

ಖಿಲಾರಿ ಜಾತಿಯ ದನಗಳು ಮುಖ್ಯವಾಗಿ ಒಕ್ಕಲುತನದ ಹೊಲದ ಮನೆಯ ಕೆಲಸಗಳಿಗೆ ಮತ್ತು ಸಾರಿಗೆ ಕೆಲಸಗಳಿಗೆ ಬಹಳ ಉತ್ತಮವಾದ ದನಗಳೆಂದು ಹೆಸರು ವಾಸಿಯಾಗಿವೆ. ಇದಕ್ಕಾಗಿ ಇವು ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಮತ್ತು ಉತ್ತರ

ಕರ್ನಾಟಕ ಭಾಗಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡಿವೆ. ಖಿಲಾರಿ ದನಗಳು ಬಹುಮಟ್ಟಿಗೆ ಎಲ್ಲ ವಿಧದಲ್ಲಿ ಅಮೃತ್‌ಮಹಲ್ ದನಗಳನ್ನು ಹೋಲುತ್ತವೆ ಎಂದು ಹೇಳಬಹುದು. ಆದರೆ ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಲ್ಲಿ ಮುಖ್ಯವಾಗಿ ಕಾಣುಬರುವ ವ್ಯತ್ಯಾಸಗಳೆಂದರೆ, ಅವುಗಳ ತಲೆ, ಮುಖ ಮತ್ತು ಕೊಂಬು ಇದರ ಮುಖದ ಭಾಗವು ಕಣ್ಣುಗಳ ಮಧ್ಯದಿಂದ ಮೂಗಿನ ತುದಿಯವರೆಗೆ ಅಮೃತ್ ಮಹಲ್ ದನಗಳಿಗಿಂತ ಸ್ವಲ್ಪ ಉದ್ದವಾಗಿರುತ್ತದೆ. ಆದರೆ ಹಳ್ಳಿಕಾರ ದನಗಳಷ್ಟು ಉದ್ದವಾಗಿ ನೀಳವಾಗಿರದೆ. ಸ್ವಲ್ಪ ಮೇಲಿಂದ ಕೆಳಗೆ ಒತ್ತಿದಂತೆ ಇರುತ್ತದೆ. ಖಿಲಾರಿ ದನಗಳ ಕುತ್ತಿಗೆ ಅಮೃತಮಹಲ್ ದನಗಳಿಗಿಂತ ಸ್ವಲ್ಪ ಗಿಡ್ಡಾಗಿ ದಪ್ಪವಾಗಿರುತ್ತದೆ ಮತ್ತು ಕುತ್ತಿಗೆಯ ಮೇಲಿನ ಚರ್ಮವು ಸಡಿಲವಾಗಿದ್ದು ಹೆಚ್ಚು ಮಡಿಕೆಗಳಿಂದ ಕೂಡಿರುತ್ತದೆ. ಅಮೃತಮಹಲ್ ದನಗಳ ಕುತ್ತಿಗೆ ಉದ್ದವಾಗಿ, ತೆಳುವಾಗಿ ಅದರ ಮೇಲಿನ ಚರ್ಮವು ಬಿಗಿಯಾಗಿ ಹತ್ತಿಕೊಂಡು ನಯವಾಗಿರುತ್ತದೆ. ಈ ದನಗಳ ಹಣೆಯು ಅಮೃತಮಹಲ್ ದನಗಳ ಹಣೆಯಂತೆ ಚಪ್ಪಟೆಯಾಗಿ ತಟ್ಟೆಯಂತಿರದೆ, ಹಳ್ಳಿಕಾರ ದನಗಳಂತೆ ಎರಡೂ ಕಣ್ಣಿನ ಮೇಲೆ ಉಬ್ಬಿಕೊಂಡು ಮಧ್ಯದಲ್ಲಿ ತಗ್ಗಾಗಿ, ಸೀಳುಗೆರೆಯಿಂದ ಕೂಡಿರುತ್ತದೆ. ಅಮೃತಮಹಲ್ ದನಗಳ ಮೈಬಣ್ಣ ಸರ್ವಸಾಧಾರಣವಾಗಿ ಬಿಳಿಯ ಬಣ್ಣದಿಂದ ಹಿಡಿದು ಕಂದುಬಣ್ಣದವರೆಗೆ ಇರುತ್ತದೆ. ಖಿಲಾರಿ ಜಾತಿಯ ದನಗಳ ಮೈಬಣ್ಣ ಬಿಳಿಯ ಬಣ್ಣದಿಂದ ಕೂಡಿದ್ದರೂ ಕುತ್ತಿಗೆಯು ಕಿತ್ತಳೆ ಬಣ್ಣದಿಂದ ಕೂಡಿರುತ್ತದೆ. ಬೂದಿ ಬಣ್ಣದ ದನಗಳಲ್ಲಿ ಕಂದು ಬಣ್ಣದ ಛಾಯೆಮಿಶ್ರಿತವಾಗಿರುತ್ತದೆ. ಖಿಲಾರಿಗಳಲ್ಲಿ ತೊಡೆಯ ಹಿಂಭಾಗ (ನಿತಂಬ) ವು ಬಿಲ್ಲಿನಾಕಾರವಾಗಿರುತ್ತದೆ. ಅಮೃತಮಹಲ್ ದನಗಳಲ್ಲಿ ತಂಬವು ಒಮ್ಮೊಂದೊಮ್ಮೆಲೆ ಇಳಿಜಾರಾಗಿರುತ್ತದೆ. ಖಿಲಾರಿಗಳಲ್ಲಿ ಇಣಿಯು ಹೆಚ್ಚು ದಪ್ಪವಾಗಿ ದೊಡ್ಡದಾಗಿರುತ್ತದೆ, ಮೂಗಿನ ಸಿಂಬೆ ಮತ್ತು ಕಣ್ಣುಗಳ ಪೊರೆಯು ಕೆಂಪು ಬಣ್ಣದಾಗಿರುತ್ತದೆ. ಅಮೃತಮಹಲ್ ದನಗಳ ಮೂಗಿನ ಸಿಂಬೆಯು ಮತ್ತು ಕಣ್ಣುಗಳ ಪೊರೆಯು ಕಪ್ಪುವರ್ಣದ್ದಾಗಿರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಖಿಲಾರಿ ಮತ್ತು ಅಮೃತಮಹಲ್ ದನಗಳು ಒಂದಕ್ಕೊಂದು ನೂರಾರು ವರ್ಷಗಳಿಂದ ಬೆರೆತು ಸಂವರ್ಧನೆ ಹೊಂದಿರುವುದರ ಪರಿಣಾಮವಾಗಿ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಿ ಹೇಳುವುದು ಸುಲಭ ಸಾಧ್ಯವಲ್ಲ. ಖಿಲಾರಿ ದನಗಳು ಎಲ್ಲಿ ಪ್ರಾರಂಭವಾಗುವುವು ಮತ್ತು ಅಮೃತಮಹಲ್ ದನಗಳು ಎಲ್ಲಿಗೆ ಮುಗಿಯುವುವು ಎಂದು ಹೇಳುವುದು ಸಾಧ್ಯವೇ ಇಲ್ಲವೆಂಬುದು ತಜ್ಞರ ಅಭಿಪ್ರಾಯ. ಚಿರಪರಿಚಿತವಾದ ಹೆಚ್ಚು ಅನುಭವವುಳ್ಳವರು ಮಾತ್ರ ಇವುಗಳನ್ನು ಗುರುತಿಸಲು ಸಾಧ್ಯವಾಗಬಹುದು.

ಇವು ಮಧ್ಯಮ ಆಕಾರದ ತರಗತಿಗೆ ಸೇರಿದ ದನಗಳು. ಹೋರಿಗಳು ಇಣಿಯ

ಹಿಂದೆ 50 ಅಂಗುಲ ಉದ್ದವಿರುತ್ತವೆ. ಎದೆಯ ಸುತ್ತಳತೆ 60 ರಿಂದ 80 ಅಂಗುಲ. ಈ ಎದೆಯ ಬೆಳವಣಿಗೆಯು ಉತ್ತಮ ಹೂಡುವ ದನಗಳ ಲಕ್ಷಣವಾಗಿರುತ್ತದೆ. ಆಕಳುಗಳು ಇಣಿಯ ಹಿಂದೆ 45–48 ಅಂಗುಲ ಉದ್ದವಿರುತ್ತವೆ. ಹೋರಿಗಳು 400 ರಿಂದ 500 ಕೆ. ಜಿ. ತೂಕವಿರುತ್ತವೆ. ಆಕಳುಗಳು 350 ರಿಂದ 400 ಕೆ. ಜಿ. ತೂಗುತ್ತವೆ.

ತಪತಿ ಖಿಲಾರಿಯು ಅಚ್ಚ ಬಿಳಿಯ ಬಣ್ಣದ್ದಿರುತ್ತದೆ. ಇದರ ಮೂಗು, ಮೂಗಿನ ಹೊಳ್ಳೆಗಳು, ಮೂಗಿನ ಸಿಂಬೆ ಮತ್ತು ಗೊರಸುಗಳು ಗಜ್ಜರಿ ಬಣ್ಣದಿಂದ ಕೂಡಿರುತ್ತವೆ. ಮಸವಾಡ ಖಿಲಾರಿಯು ನರೆಗೂದಲಿನಂತೆ ಕಂದು ಬಣ್ಣದಿಂದ ಕೂಡಿರುತ್ತದೆ. ಹೋರಿಗಳಲ್ಲಿ ಇಣಿಯ ಭಾಗ ಮತ್ತು ಚಪ್ಪೆಯ ಭಾಗಗಳು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಕುತ್ತಿಗೆಯು ಕೆಮ್ಮಣ್ಣು ಹಚ್ಚಿದಂತೆ ಕೆಂಪಾಗಿರುತ್ತದೆ.

ಎದೆಯು ವಿಶಾಲವಾಗಿರುವುದರಿಂದ ಮುಂಭಾಗವು ಹರವಾಗಿದ್ದು, ಇವು ಹೂಡುವುದಕ್ಕೂ ಮತ್ತು ತೀವ್ರವಾಗಿ ನಡೆಯುವುದಕ್ಕೂ ಯೋಗ್ಯವಾಗಿರುತ್ತವೆ.

ತಲೆಯು ಹಣೆಯಿಂದ ಹಿಂಭಾಗದಲ್ಲಿ ಬಾಗಿ, ಉದ್ದವಾಗಿ ಮತ್ತು ಅಮೃತ ಮಹಾಲ್ ದನಗಳಿಗಿಂತ ಸ್ವಲ್ಪ ಹೆಚ್ಚು ಗಾತ್ರವಿದ್ದಂತೆ ಕಾಣುತ್ತದೆ. ಹಣೆಯು ಮುಂದಕ್ಕೆ ಸ್ವಲ್ಪ ಉಬ್ಬಿದಂತಿರುತ್ತದೆ. ಕೋಡುಗಳು ಬುಡದಲ್ಲಿ ಒಂದಕ್ಕೊಂದು ಸಮೀಪವಾಗಿದ್ದು, ತುದಿಯಲ್ಲಿ ಅಗಲವಾಗಿರುತ್ತವೆ. ಕೋಡುಗಳು ತುದಿಯಲ್ಲಿ ಬಹಳ ಚೂಪಾಗಿರುತ್ತವೆ. ಇದರ ಮುಖವು ಹಳ್ಳಿಕಾರ ದನಗಳಷ್ಟು ಉದ್ದವಾಗಿರದೆ ಸ್ವಲ್ಪ ಗಿಡ್ಡಾಗಿರುತ್ತದೆ.

ಕಣ್ಣುಗಳು ಕಾಂತಿಯುತವಾಗಿದ್ದು ಎದ್ದು ಕಾಣುತ್ತವೆ. ಸ್ವಭಾವದಿಂದ ಇವು ಬಹಳ ಸಿಟ್ಟಿನ ಮತ್ತು ಹುರುಪಿನ ದನಗಳಾಗಿರುತ್ತವೆ.

ಕಿವಿಗಳು ಸಣ್ಣದಾಗಿದ್ದು ತುದಿಯಲ್ಲಿ ಚೂಪಾಗಿರುತ್ತವೆ.

ಹೋರಿಗಳಲ್ಲಿ ಇಣಿಯು ದಪ್ಪವಾಗಿ ಬೆಳೆದಿರುತ್ತದೆ. ಕಾಲುಗಳು ಸ್ನಾಯುಗಳಿಂದ ಕೂಡಿ ಓಟಕ್ಕೆ ಅನುಕೂಲವಾಗಿರುತ್ತವೆ. ಗೊರಸು ಕಪ್ಪಾಗಿ ಗಟ್ಟಿಯಾಗಿರುತ್ತವೆ. ಬಾಲವು ಉದ್ದವಾಗಿ ಅಂದವಾಗಿರುತ್ತದೆ.

ಈ ದನಗಳು ಬಹಳ ಉಗ್ರಸ್ವಭಾವದವುಗಳಾಗಿರುತ್ತವೆ. ಇವುಗಳನ್ನು ಹಿಡಿತದಲ್ಲಿ ತರುವುದು ಸ್ವಲ್ಪ ಕಠಿಣವಾದರೂ ಇವು ಶಾನಾಗಿಯೇ ಮುಂದುವರೆದು ಉತ್ತಮ ಕೆಲಸ ಮಾಡುವ ಪ್ರಾಣಿಗಳಾಗಿವೆ. ಈ ತಳಿಯ ಆಕಳು ಕಡಮೆ ಹಾಲು ಹಿಂಡುತ್ತವೆ.

17ನೇ ಶತಮಾನದಲ್ಲಿ ವಿಶೇಷತಃ ಉತ್ತರ ಕರ್ನಾಟಕದಲ್ಲಿ ಈ ಖಿಲಾರಿ ದನಗಳು ಎಷ್ಟು ಉತ್ತಮವಾದ ಸ್ಥಿತಿಯಲ್ಲಿದ್ದವು ಎಂಬುದನ್ನು ಕುಮಾರವ್ಯಾಸ ಭಾರತ ದಲ್ಲಿಯ ಈ ಕೆಳಗಿನ ಪದ್ಯಗಳಿಂದ ತಿಳಿಯಬಹುದು.

ದುರ್ಯೋಧನನು ಘೋಷಯಾತ್ರೆಗೆ ಹೋದಾಗ ದ್ವೈತವನದಲ್ಲಿಯ ದನಗಳ ಹಿಂಡನ್ನು ಕರೆಸಿ ನೋಡಿದಾಗಿನ ಸಂದರ್ಭ :

ಕರೆಸಿದನು ಕಿಲಾರಿಗಳನಾ ।
ದರಿಸಿ ಹಟ್ಟಿಯ ತುರುಗಳೆಲ್ಲವ ।
ಕರೆಸಿ ನೋಡಿದನಲ್ಲಿ ಹಿಂಡಿನ ಕೋಟಿ ಸಂಖ್ಯೆಗಳ ॥
ಹರಿವ, ಹಾರುವ, ಪಂಠಿಸುವ ಸ್ಕೈ ।
ವರಿವ, ಮರಳುವ, ಮುರಿವ ನಿಲುವೆಳೆ ।
ಗರುಗಳನು ನೋಡಿದನು ನಗುತ ನರೇಂದ್ರನೊಲವಿನಲಿ ॥

ಅವು ಎಷ್ಟು ಉತ್ತಮವಾದ ಸ್ಥಿತಿಯಲ್ಲಿದ್ದವು ಎಂಬುದನ್ನು ಈ ಮುಂದಿನ ಪದ್ಯವು ತಿಳಿಸುತ್ತದೆ :

ಬೆಳೆವಿಣೆಯ ಮಿಡಿಗೊಲವ ಬೌಲದ ।
ನೆಲಕೆ ನಿಗುರುವ ಗಂಗೆದೊಗಲಿನ ।
ಹಲಿಗೆ ಬೆನ್ನಿನ ಸಿಡಿಲಮುರಿಯನೆ ಮೊರೆವ ಹುಂಕೃತಿಯ ॥
ಕೆಲವಿದುರ ಬರಲದ್ರಿಯದ್ರಿಯ ।
ಹಳಚುವಂತಿರೆ ಹರಿವ ಹಾರುವ ।
ಸಲಗ ನೀಡಿರಿದಾಡುತಿರ್ದವು ಹಿಂಡಿನಲಿ ॥

ಆಗಿನ ಕಾಲದಲ್ಲಿ ಗೋಸಂವರ್ಧನೆಯು ಸಲುವಾಗಿ ಹಿಂಡಿನಲ್ಲಿ ಉತ್ತಮವಾದ ಹೋರಿಗಳನ್ನು ಬೀಜಕ್ಕಾಗಿ ಆರಿಸುತ್ತಿದ್ದುದು, ಒಕ್ಕಲುತನಕ್ಕೆ ಯೋಗ್ಯವಾದ ದನ ಗಳನ್ನು ಬೇರ್ಪಡಿಸುತ್ತಿದ್ದುದು, ಬ್ರಾಹ್ಮಣರಿಗೆ, ಗಾಯಕರಿಗೆ, ವಿದ್ಯಾವಂತರಿಗೆ ಉತ್ತೇಜನಕ್ಕಾಗಿ ಮತ್ತು ಮರ್ಯಾದೆಗಾಗಿ, ಗೋವುಗಳನ್ನು ಕೊಡುತ್ತಿದ್ದರು ಎಂಬು ದನ್ನು ಈ ಕೆಳಗಿನಪದ್ಯದಿಂದ ತಿಳಿಯಬಹುದು :

ತರಿಸಿ ಹೋರಿಯ ಗವಿಯ ಗೂಳಿಯ ।
ಬರಿಸಿದನು ಕೆಲ ಕೆಲವ ಕೃಷಿಕರಿ ।
ಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ ॥

ಕರಿಸಿ ಕೊಟ್ಟನು ಭಟರಿಗೆ, ಮ।
ಲ್ಲರಿಗೆ, ಗಾಯಕರಿಗೆ, ವಿದ್ಯಾವಂ ।
ತರಿಗೆ ಬಹು ವಿಧ ಬಹಳ ವಂದಿಗೆ ಮಾಗಧವ್ರಜಕೆ ॥


ಆಗಿನ ಕಾಲದಲ್ಲಿ ದನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ದನಗಳಿಗೆ ಬಹುಮಾನ ಕೊಟ್ಟು ಗೌರವಿಸುತ್ತಿದ್ದರು ಎಂಬುದನ್ನು ಈ ಕೆಳಗಿನ ಪದ್ಯ ತಿಳಿಸುತ್ತದೆ:


ಅಂಗ ಚಿತ್ರವನಿತ್ತು ಮೊದಲಿನ ।
ಪುಂಗವ ಸತ್ಕರಿಸಿ ಹಿಂಡಿನ ।
ಪಂಗಡದ ಗೋಪಾಲಕರಿಗೆ ಕೊಟ್ಟನುಡುಗೊರೆಯ ॥

ಹೀಗೆ ಪಶುಪಾಲನೆಯಲ್ಲಿ ರಾಜ ಪ್ರಜೆಗಳೆಲ್ಲರಿಗೂ ಇದ್ದ ಒಟ್ಟಿನ ಆಸಕ್ತಿಯೇ ಆ ಕಾಲದ ಕರ್ನಾಟಕ ಆರ್ಥಿಕ ವೈಭವಗಳಿಗೆ ಆಧಾರವಾಗಿತ್ತು. ಒಟ್ಟಿನಲ್ಲಿ ಕರ್ನಾಟಕದ ಚರಿತ್ರೆಯಲ್ಲಿ ಅಮೃತಮಹಲ್, ಹಳ್ಳಿಕಾರ, ಗುಜ್ಜಮಾವು, ಬೆಟ್ಟದಪುರದ ದನಗಳು ಮತ್ತು ಖಿಲಾರಿ ಜಾತಿಯ ದನಗಳು ಮುಖ್ಯ ಪಾತ್ರವನ್ನು ವಹಿಸಿ ತಮ್ಮದೇ ಆದ ಒಂದು ವಿಶಿಷ್ಟ ಹೆಸರನ್ನು ಗಳಿಸಿವೆ.

3) ಕೃಷ್ಣಾ ತೀರದ ದನಗಳು ಕೃಷ್ಣಾ ಮತ್ತು ಮಲಪ್ರಭಾ ನದಿಗಳ ತೀರ ಪ್ರದೇಶಗಳೇ ಈ ದನಗಳ ಮೂಲಸ್ಥಾನ. ಆದ್ದರಿಂದಲೇ, ಈ ದನಗಳಿಗೆ ಕೃಷ್ಣಾತೀರದ ಅಥವಾ ಹೊಳೆಸಾಲ ದನಗಳೆಂದು ಕರೆಯಲಾಗಿದೆ. ಸಾಮಾನ್ಯವಾಗಿ ನಾವು ಈ ಜಾತಿಯ ದನಗಳನ್ನು ಕೊಲ್ಹಾಪುರ, ಸಾಂಗಲಿ, ಈಚಲಕರಂಜಿ, ಮಿರಜ, ಕುರಂದವಾಡ, ರಾಮದುರ್ಗ, ಜಮಖಂಡಿ, ಮುಧೋಳ್, ಅಥಣಿ. ಚಿಕ್ಕೋಡಿ, ಚಿಂಚಲಿ, ರಾಯಬಾಗ, ಬೇಗಾವಿ, ಬಿಜಾಪುರ ಈ ಭಾಗಗಳಲ್ಲಿ ನೋಡಬಹುದು.

ಈ ಜಾತಿಯ ದನಗಳು ಬೇರೆ ಶುದ್ಧ ಜಾತಿಯ ಅಮೃತಮಹಾಲ್ ಹಳ್ಳಿಕಾರ ಮೊದಲಾದ ಜಾತಿಯ ದನಗಳಂತೆ ಬಹಳ ಹಿಂದಿನಿಂದ ಬೆಳೆದು ಬಂದ ಶುದ್ಧ ತಳಿಯ ದನಗಳಲ್ಲ. ಈ ದನಗಳ ಉತ್ಪತ್ತಿಯು ಎರಡು ಮೂರು ಜಾತಿಯ ದನಗಳ ರಕ್ತ ಮಿಶ್ರಣದಿಂದ ತೀರ ಇತ್ತೀಚೆಗೆ ಉಂಟಾದುವೆಂದು ಹೇಳಲಾಗಿದೆ. ಸುಮಾರು ಕ್ರಿ. ಶ. 1880ನೇ ಇಸವಿಯವರೆಗೂ ಈ ದನಗಳ ವಿಷಯವಾಗಿ ಹೇಳಿಕೊಳ್ಳುವಷ್ಟು ಸಂಗತಿಗಳು ಗೊತ್ತಿರಲಿಲ್ಲ. ಈ ದನಗಳ ಉತ್ಪತ್ತಿ ಸ್ಥಳಿಕ ದನಗಳೊಂದಿಗೆ ಕಾಠೇವಾಡದ ಗೀರ್ ಜಾತಿಯ ದನಗಳು ಮತ್ತು ಆಂಧ್ರ ಪ್ರದೇಶದ ನೆಲ್ಲೂರು ಜಾತಿಯ





ಚಿತ್ರ ೮: ಕೃಷ್ಣಾತೀರದ ಹೋರಿ (ಮೇಲ್ಭಾಗ): ಕೃಷ್ಣಾತೀರದ ಆಕಳು (ಕೆಳಭಾಗ)

ದನಗಳು ಬೆರೆತು ಆಗಿರಬಹುದು ಎಂದು ಬಾಹ್ಯ ಸಂಗತಿಗಳಿಂದಲೂ ಹಳ್ಳಿಗಳಲ್ಲಿಯ ಸ್ಥಾನಿಕ ಪುರಾವೆಗಳಿಂದಲೂ ಊಹಿಸಬಹುದಾಗಿದೆ. ಇದೂ ಅಲ್ಲದೆ ಹಿಂದಿನ ಸಾಂಗಲಿ ಸಂಸ್ಥಾನದ ಮಹಾರಾಜರು 'ನೆಲ್ಲೂರು' ಜಾತಿಯ ದನಗಳನ್ನು ಮತ್ತು ಗುಜರಾತಿನಿಂದ 'ಗೀರ್' ಜಾತಿಯ ದನಗಳನ್ನು ತರಿಸಿ ತಮ್ಮ ಸಂಸ್ಥಾನದ ಹಳ್ಳಿಗಳ ದನಗಳ ತಳಿ ಸುಧಾರಣೆಗೆ ಕೂಡಿಸಿದ್ದರ ಪರಿಣಾಮವಾಗಿ ಈ ಜಾತಿಯ ದನಗಳು ಉತ್ಪತ್ತಿಯಾಗಿರಬಹುದು ಎಂಬುದು ಈ ಊಹೆಗೆ ಹೆಚ್ಚು ಪುಷ್ಟಿಯನ್ನು ಕೊಡುತ್ತದೆ. ಕೊಲ್ಹಾಪುರದ ಹಿಂದಿನ ಮಹಾರಾಜರು ಕೆಲವು ದನಗಳನ್ನು ಮೈಸೂರಿನಿಂದ ತರಿಸಿ ತಮ್ಮ ರಾಯಬಾಗದ ದನಗಳ ಹಿಂಡನ್ನು ಸುಧಾರಿಸಲು ಉಪಯೋಗಿಸುದುದರ ಪರಿಣಾಮವಾಗಿ ಈ ಹೊಳೆಸಾಲ ದನಗಳ ಹುಟ್ಟಿಗೆ ಬಹಳ ಸಹಾಯವಾಗಿರಬಹುದೆಂದು ಹೇಳಬಹುದು.

ಈ ಜಾತಿಯ ದನಗಳು ಆಕಾರ, ಗಾತ್ರ, ಮೈಕಟ್ಟು ಹಾಗೂ ಬಣ್ಣದಲ್ಲಿ ಬಹುಮಟ್ಟಿಗೆ ನೆಲ್ಲೂರು ಜಾತಿಯ ದನಗಳನ್ನು ಹೋಲುತ್ತವೆ. ಅಲ್ಲದೆ ಇವುಗಳ ಅಗಲವಾದ, ಮುಂದೆ ಉಬ್ಬಿಬಂದಿರುವ ಹಣೆ, ತುದಿಯಲ್ಲಿ ಕೊಂಚ ತಿರುವಿರುವ ಜೋತಾಡುವ ಉದ್ದ ಕಿವಿಗಳು ಮತ್ತು ಈ ಜಾತಿಯ ಆಕಳುಗಳು ಹೆಚ್ಚು ಹಾಲು ಕೊಡುವ ಗುಣವುಳ್ಳವುಗಳಾಗಿರುವುದರಿಂದ ಇವುಗಳಲ್ಲಿ ಕಾಠೇವಾಡದ ಗೀರ್ ಜಾತಿಯ ದನಗಳ ಹೋಲಿಕೆ ಕಂಡುಬರುತ್ತದೆ. ಇದರಿಂದ ಇವು ಬಹಳ ಹಿಂದಿನಿಂದ ಬಂದ ಶುದ್ಧ ತಳಿಯಾಗಿರದೆ ಇತ್ತೀಚೆಗೆ ಉತ್ಪತ್ತಿಯಾದ ಮಿಶ್ರತಳಿಯ ದನಗಳೆಂದು ಹೇಳುವುದು ಸಕಾರಣವೆನ್ನಿಸುತ್ತದೆ. ಈ ಜಾತಿಯ ದನಗಳಲ್ಲಿ ನಾವು ನೆಲ್ಲೂರು ಜಾತಿಯ ದನಗಳ ಗೀರ್ ಮತ್ತು ಮೈಸೂರು ಜಾತಿಯ ದನಗಳ ಲಕ್ಷಣಗಳನ್ನು ಕಾಣಬಹುದು.

ಕೃಷ್ಣಾ ಮತ್ತು ಘಟಪ್ರಭಾ ನದಿಗಳ ದಡದಲ್ಲಿರುವ ಹಳ್ಳಿಗಳಲ್ಲಿರುವ ರೈತರು ತಮ್ಮ ಮುಖ್ಯ ಉದ್ಯೋಗವಾದ ಕೃಷಿಯೊಂದಿಗೆ ಈ ದನಗಳನ್ನು ಸಾಕಿ ಬೆಳೆಸುತ್ತಾರೆ. ಈ ದನಗಳನ್ನು ಹಿಂಡುಹಿಂಡಾಗಿ ಕಟ್ಟಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗಾಡದೆ ತಮ್ಮ ಮನೆಗಳಲ್ಲಿಯೇ ಒಂದು ಅಥವಾ ಎರಡು ಆಕಳುಗಳನ್ನು ಸಾಕಿಕೊಂಡು ಈ ಜಾತಿಯ ದನಗಳನ್ನು ಸಂವರ್ಧನೆ ಮಾಡಿ ಬೆಳೆಸುವುದು ಇಲ್ಲಿಯ ರೈತರ ಸಾಮಾನ್ಯ ಪದ್ಧತಿ. ಆಕಳು, ಹೋರಿ ಮತ್ತು ಕರುಗಳನ್ನು ಹೆಚ್ಚಾಗಿ ಕಟ್ಟಿ ಮೇಯಿಸುವುದೇ ಇಲ್ಲಿಯ ಪದ್ಧತಿ. ತಮ್ಮ ಹೊಲಗಳಲ್ಲಿ ಮಳೆಗಾಲ ಬಿಟ್ಟು, ಸುಗ್ಗಿಯ ಕಾಲದಲ್ಲಿ ಒಣಗಿದ ಜೋಳದ ದಂಟಿನಿಂದ ಹಾಕಿದ ಚಪ್ಪರ,ಗುಡಿಸಲುಗಳಲ್ಲಿ ದನಗಳನ್ನು ಕಟ್ಟಿ ಸಾಕಿ ಬೆಳೆಸುತ್ತಾರೆ. ಈ ದನಗಳಿಗೆ ಜೋಳದ ಮೇವೇ ಮುಖ್ಯ,

ಆಹಾರ. ಇಲ್ಲಿಯ ತೀರ ಪ್ರದೇಶವಲ್ಲಿಯ ಜಮೀನುಗಳಿಗೆ ನದಿಗಳು ನೀರು ಉಣಿಸುವುದರಿಂದ ಮತ್ತು ರೇವೆ ಮಣ್ಣು ತಂದು ಹಾಕುವುದರಿಂದ ಇಲ್ಲಿಯ ಕಪ್ಪು ಎರೆ ಮಣ್ಣಿನಿಂದ ಕೂಡಿದ ಭೂಮಿಯು ಬಹಳ ಫಲವತ್ತಾಗಿರುತ್ತದೆ. ಮಳೆಗಾಲದಲ್ಲಿ ನದಿ ಮಹಾಪೂರ ಬಂದು ಇಳಿದು ಹೋದ ಮೇಲೆ ಎರಡೂ ದಂಡೆಯುದ್ದಕ್ಕೂ ರೈತರು ಜೋಳ ಮತ್ತು ಮುಸುಕಿನ ಜೋಳ (ಗೋವಿನ ಜೋಳ) ಬೆಳೆಸುವುದಲ್ಲದೆ, ಅಕ್ಕಡಿ ಕಾಳುಗಳ ಬಳ್ಳಿ, ಅವರೆ, ಹುರಳಿ, ಅಲಸಂದಿ, ಹೆಸರು, ಚೊಗಚೆ ಬೆಳೆಸುವುದರಿಂದ, ಒಂದಿಲ್ಲೊಂದು ಹಸಿಮೇವು ವರ್ಷದಲ್ಲೆಲ್ಲ ದನಗಳಿಗೆ ಮೇಯಲು ಸಿಗುವುದರಿಂದ ಈ ಜಾತಿಯ ದನಗಳ ಬೆಳವಣಿಗೆ ಉತ್ತಮವಾಗಿರುತ್ತದೆ. ಅಲ್ಲದೆ ಎರಡೂ ದಂಡೆಗಳ ಅಕ್ಕಪಕ್ಕದಲ್ಲಿ ಹುಲುಸಾಗಿ ಬೆಳೆದ ಹಸಿ ಹುಲ್ಲಿನ ಸೌಕರ್ಯವಿರುವುದರಿಂದ ದನಗಳಿಗೆ ವರ್ಷದಲ್ಲೆಲ್ಲ ಸಾಮಾನ್ಯವಾಗಿ ಹೆಚ್ಚು ಕಾಲ ರಸಭರಿತವಾದ ಮತ್ತು ಪೌಷ್ಟಿಕಾಂಶಗಳಿಂದ ಕೂಡಿದ ಹಸಿರು ಮೇವು ಸಾಕಷ್ಟು ದೊರೆಯುತ್ತದೆ. ಬೇಸಿಗೆಯಲ್ಲಿ ಕೊಯ್ದು ಇಟ್ಟ ಹುಲ್ಲಿನ ಜೊತೆಗೆ ಹತ್ತಿಕಾಳು, ನುಚ್ಚು ಅಥವಾ ಕಡಲೆಕಾಯಿ (ಶೇಂಗಾ) ಹಿಂಡಿಯನ್ನು ಕೊಡುತ್ತಾರೆ. ಇದು ಇಲ್ಲಿಯ ದನಗಳ ಜೋಪಾಸನೆಯ ಪದ್ಧತಿ.

ಈ ಜಾತಿಯ ದನಗಳು ಆಕಾರ ಹಾಗೂ ಗಾತ್ರದಲ್ಲಿ ದೊಡ್ಡವು; ದೇಹ ಸ್ಥೂಲ ಹಾಗೂ ನಡಿಗೆಯಲ್ಲಿ ಮಂದಗಾಮಿಗಳು. ಬಲಿತ ಹೋರಿಯ ತೂಕ 600 ರಿಂದ 900 ಕಿಲೋಗ್ರಾಮ್‌ವರೆವಿಗೂ, ಬಲಿತ ಆಕಳ ತೂಕವು 400 ರಿಂದ 500 ಕಿಲೋಗ್ರಾಮ್‌ಗಳವರೆವಿಗೂ ಇರುತ್ತದೆ. ದೇಹವು ಜಡವಾಗಿದ್ದು ಗೊರಸು (ಕೊಳಗ)ಗಳು ಉದ್ದವಿದ್ದು ಬಹಳ ಮೆದುವಾಗಿರುವುದರಿಂದ ಇವು ಕೆಂಪು ಮಸಾರಿ ಕಲ್ಲು ಭೂಮಿಗಳಲ್ಲಿ ಮತ್ತು ಕಲ್ಲು ಹಾಕಿದ ಗಟ್ಟಿ ದಾರಿಗಳ ಮೇಲೆ ಸಾರಿಗೆ ಕೆಲಸಗಳನ್ನು ಅಷ್ಟು ಸಮರ್ಪಕವಾಗಿ ಮಾಡಲಾರವು. ಕಪ್ಪು ಎರೆ ಭೂಮಿಯಲ್ಲಿ ಉತ್ತಮ ಕೆಲಸ ಕೊಡಬಲ್ಲವು.

ಈ ಜಾತಿಯ ದನಗಳು ಸ್ಥೂಲ ಶರೀರ ಹಾಗೂ ಜಡಸ್ವಭಾವ ಹೊಂದಿದ್ದರೂ ಹೆಚ್ಚು ಶಕ್ತಿಯುತವಾದವುಗಳು. ಕಾಲುಗಳ ಎಲುಬುಗಳು ಗಿಡ್ಡವಾಗಿದ್ದು, ದಪ್ಪವಾಗಿ, ಬಹಳ ಗಟ್ಟಿಯಾಗಿರುವುದರಿಂದ ಕಬ್ಬಿಣ ರೆಂಟೆಯಿಂದ(ನೇಗಿಲಿಂದ) ಆಳವಾಗಿ ಉಳುಮೆ ಕೆಲಸ, ಹೊಲಮನೆಯ ಕೆಲಸ ಮತ್ತು ಹೆಚ್ಚು ಭಾರವನ್ನು ಎಳೆಯುವುದಕ್ಕೆ ಬಹಳ ಉಪಯುಕ್ತವಾದ ದನಗಳಾಗಿರುತ್ತವೆ. ಮುಖ್ಯವಾಗಿ ಇವುಗಳನ್ನು ಕಪ್ಪು ಮೆತ್ತ ಭೂಮಿಯಲ್ಲಿ ಕೆಲಸಮಾಡಲು ಉತ್ತಮ ದನಗಳೆಂದು ಪರಿಗಣಿಸಲಾಗಿದೆ.

ಸಾಮಾನ್ಯವಾಗಿ ಈ ಜಾತಿಯ ಆಕಳುಗಳು ಬಿಳಿಯ ಬಣ್ಣವಿರುತ್ತವೆ. ಎತ್ತುಗಳು ಬಿಳುಪು ಮತ್ತು ಕಪ್ಪುಮಿಶ್ರಿತ ಅಥವಾ ಬೂದಿ ಬಣ್ಣದಿಂದ ಕೂಡಿರುತ್ತವೆ.

ಹೋರಿಗಳಲ್ಲಿ ಮುಂಗಾಲಿನ ತೋಳು ಮತ್ತು ಹಿಂಗಾಲಿನ ಚಪ್ಪೆ ಮತ್ತು ಇಣಿಯು ಹೆಚ್ಚು ಕಪ್ಪು ಬಣ್ಣದಿಂದ ಕೂಡಿರುತ್ತವೆ.

ಹಣೆಯು ಅಗಲವಾಗಿ ಮುಂದಕ್ಕೆ ಉಬ್ಬಿಕೊಂಡಿರುತ್ತದೆ. ಕೋಡುಗಳು ಗಿಡ್ಡಾಗಿ ಬುಡದಲ್ಲಿ ದಪ್ಪವಾಗಿ (ಗಡ್ಡಿಕೋಡು) ತುದಿಯಲ್ಲಿ ಚೂಪಾಗಿರದೆ ಮೊಂಡಾಗಿರುತ್ತವೆ. ಕಣ್ಣಿನ ಸುತ್ತಲೂ ಕಪ್ಪು ಮಚ್ಚೆ (ಕಾಡಿಗೆಕಣ್ಣು) ಇರುತ್ತದೆ. ಮುಖದ ಕೆಳಭಾಗವು ಕಿರಿದಾಗಿದ್ದು ಮೂಗಿನ ಸಿಂಬೆಯು ಅಗಲವಾಗಿರುತ್ತದೆ. ಹೋರಿಗಳಲ್ಲಿ ಕಣ್ಣಿನ ಮೇಲೆ ಬೆಳ್ಳನೆ ಮಚ್ಚೆ ಇರುವುದೂ ಉಂಟು. ಕಿವಿಗಳು ಉದ್ದವಾಗಿ, ತುದಿಯಲ್ಲಿ ಸ್ವಲ್ಪ ಬಾಗಿದಂತಿದ್ದು ಜೋತಾಡುತ್ತಿರುವ ಕಿವಿಗಳ ಒಳಭಾಗವು ಕಿತ್ತಲೆ ಹಣ್ಣಿನ ಬಣ್ಣದಂತಿರುತ್ತದೆ.

ಕುತ್ತಿಗೆ ದಪ್ಪವಾಗಿ, ಗಿಡ್ಡಾಗಿ, ಮಡಿಕೆಗಳಿಂದ ಕೂಡಿರುತ್ತದೆ. ಗಂಗೆದೊಗಲು ಮತ್ತು ತೋಬರಿ ಸಡಿಲವಾಗಿ ಜೋತಾಡುತ್ತಿರುತ್ತವೆ. ಹೋರಿಗಳಲ್ಲಿ ಇಣಿಯು ಬಹಳ ದೊಡ್ಡದಾಗಿ ದಪ್ಪವಾಗಿ ಕಪ್ಪು ಬಣ್ಣದಿಂದ ಕೂಡಿರುತ್ತದೆ.

ಕಾಲುಗಳು ಗಿಡ್ಡಾಗಿ, ದಪ್ಪವಾಗಿ ಒಳ್ಳೆಯ ಶಕ್ತಿಯುಳ್ಳವಾಗಿರುತ್ತವೆ. ಅವರೆ ಗೊರಸುಗಳು ಉದ್ದವಿದ್ದು ಮೆತ್ತಗಿರುತ್ತವೆ.

ಈ ದನಗಳು ಕೆಲಸಕ್ಕೆ ತಮ್ಮ ಮೂಲಸ್ಥಾನದಲ್ಲಿ ಬಹಳ ಉಪಯೋಗಕರವಾಗಿರುತ್ತವೆ. ಅಲ್ಲದೆ ಇವುಗಳನ್ನು ಬೇರೆ ಕಡೆ ಸಾಕಿದಲ್ಲಿ ಅಷ್ಟು ಸಮರ್ಪಕವಾಗಿ ಬೆಳೆಯುವುದಿಲ್ಲ ಮತ್ತು ಅಷ್ಟು ಕೆಲಸವನ್ನು ಮಾಡಲಾರವು ಎಂದು ಕಂಡುಬಂದಿದೆ. ಹಸುರು ಹುಲ್ಲೇ ಇವುಗಳ ಆಹಾರ; ಹೀಗಾಗಿ ಸಾಕುವುದಕ್ಕೆ ಖರ್ಚು ಹೆಚ್ಚಾದರೂ ಆಕಳುಗಳು ಹೆಚ್ಚು ಹಾಲು ಕೊಡುತ್ತವೆ. ಈ ಜಾತಿಯ ದನಗಳು ಕೆಲಸ ಹಾಗೂ ಹಾಲಿನ ಉತ್ಪಾದನೆಗೆ ಯೋಗ್ಯವಾದವುಗಳು.

4) ದೇವನಿ ದನಗಳು ದೇವನಿ ಜಾತಿಯ ದನಗಳು ಶುದ್ಧ ಜಾತಿಯ ದನಗಳಲ್ಲವೆಂದು ಹೇಳಬಹುದು. ಈ ದನಗಳಲ್ಲಿ ಬಹುಮಟ್ಟಿಗೆ ಗೀರ್ ಜಾತಿಯ ದನಗಳು ಮತ್ತು ಡಾಂಗಿ ಜಾತಿಯ ದನಗಳ ರಕ್ತ ಮಿಶ್ರಣವಾಗಿರುವುದು ಕಂಡುಬರುತ್ತದೆ. ಹಿಂದಿನ ಹೈದರಾಬಾದ್ ಸಂಸ್ಥಾನದ ಹಿಂಗೋಲಿ, ಉದಗೀರ್, ಔರಂಗಾಬಾದ್ ಪ್ರದೇಶಗಳು ಅಂದರೆ ಇಂದಿನ ಮಹಾರಾಷ್ಟ್ರ ರಾಜ್ಯದ ಪೂರ್ವ ಭಾಗದ ಪ್ರದೇಶಗಳೇ ಈ ದನಗಳ ಮೂಲಸ್ಥಾನ. ದೇವನಿ ಆಕಳು ಹೆಚ್ಚು ಹಾಲು ಕೊಡುತ್ತವೆ. ಮತ್ತು ಎತ್ತು, ಹೋರಿಗಳು ಎರೆ ಭೂಮಿಯ ಕೆಲಸಕ್ಕೆ ಬಹಳ ಉಪಯುಕ್ತವಾದ ದನಗಳು. ದೇವನಿ ಜಾತಿಯ ದನಗಳು

ಅವುಗಳ ಶರೀರ ರಚನೆ, ಮುಖ ಲಕ್ಷಣ ಮತ್ತು ಗುಣಗಳಲ್ಲಿ ಬಹುಮಟ್ಟಿಗೆ ಗೀರ್ ಜಾತಿಯ ದನಗಳನ್ನು ಹೋಲುತ್ತವೆ. ಕ್ರಿ.ಶ. 1942ರಲ್ಲಿ ಈ ದನಗಳನ್ನು ವೇರ್ ಅವರು 'ಗೀರ್' ಜಾತಿಯ ದನಗಳ ಗುಂಪಿಗೆ ಸೇರಿದ ದನಗಳೆಂದು ಕರೆದಿರುತ್ತಾರೆ. ಕ್ರಿ. ಶ. 1958ರಲ್ಲಿ ರಾನ್‌ಧವ್ ಅವರು ದೇವನಿ ದನಗಳಿಗೂ ಗೀರ್ ದನಗಳಿಗೂ ಬಹಳ ಹತ್ತಿರದ ರಕ್ತ ಸಂಬಂಧವುಂಟೆಂದೂ ಈ ದನಗಳು ಹೆಚ್ಚು ಹಾಲು ಕೊಡುವ ಗುಣವನ್ನು ಬಹುಮಟ್ಟಿಗೆ ಗೀರ್ ಜಾತಿಯ ದನಗಳಿಂದ ಪಡೆದುಕೊಂಡಿರಬೇಕೆಂದೂ, ಮತ್ತು ಹೋರಿ ಎತ್ತುಗಳು ದುಡಿಯುವ ಗುಣವು ಡಾಂಗೀ ಜಾತಿಯ ದನಗಳಿಗೆ ಸಂಬಂಧಪಟ್ಟಿರಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ದನಗಳು ಗೀರ್ ಜಾತಿಯ ದನಗಳಿಗೆ ಹೊಂದಿಕೊಂಡಿರುವ ತಳಿಯ ದನಗಳೆಂದು ಹೇಳಬಹುದು. ಹೀಗಾಗಿ ದೇವನಿ ಜಾತಿಯ ಎತ್ತುಗಳು ತಮ್ಮ ಪ್ರದೇಶದ ನೆಲ, ಜಲ, ವಾಯುಗುಣ ಹಾಗೂ ಆಹಾರಗಳಿಗೆ ಹೊಂದಿಕೊಂಡು ತಮ್ಮಲ್ಲಿಯ ದುಡಿಯುವ ಶಕ್ತಿ ಸಾಮರ್ಥ್ಯವನ್ನು ಕಳೆದುಕೊಳ್ಳದೆ ಉಳಿಸಿಕೊಂಡು ಮುಂದುವರಿದಿವೆ. ಇದರಂತೆ ಆಕಳುಗಳೂ ಸಹ ಗೀರ್ ಜಾತಿಯ ದನಗಳಿಂದ ಹಾಲಿನ ಉತ್ಪಾದನಾ ಶಕ್ತಿಯ ಗುಣವನ್ನು ಪಡೆದು ಕೊಂಡು ಇವುಗಳನ್ನು ಹೈನತಳಿಯ ದನಗಳೆಂದು ಪರಿಗಣಿಸಲಾಗಿದೆ.

ದೇವನಿ ದನಗಳು ಹಿಂದಿನ• ಹೈದರಾಬಾದ್ ಸಂಸ್ಥಾನದ ಮುಖ್ಯ ಜಾತಿಯ ದನಗಳ ಪೈಕಿ ಒಂದು ಉತ್ತಮ ಹೈನ ತಳಿಯ ದನಗಳೆಂದು ಹೆಸರು ಪಡೆದಿರುತ್ತವೆ. ಈ ದನಗಳ ತಳಿಯನ್ನು ಸುಧಾರಿಸಿ ಅಭಿವೃದ್ಧಿಗೊಳಿಸಿ ಬೆಳೆಸಿದ ಶ್ರೇಯಸ್ಸು ಬಹಳ ಮಟ್ಟಿಗೆ ಹಿಂದಿನ ಹೈದರಾಬಾದ್ ಸರ್ಕಾರಕ್ಕೆ ಸಲ್ಲುತ್ತದೆ. ಹಿಂಗೋಲಿ ಎಂಬಲ್ಲಿ ಈ ದನಗಳ ಸಂಶೋಧನೆ ಹಾಗೂ ಅಭಿವೃದ್ಧಿಯ ಸಲುವಾಗಿ ಅಲ್ಲಿಯ ಸ್ಥಳದಲ್ಲಿಯ ಉತ್ತಮ ದೇವನಿ ಜಾತಿಯ ದನಗಳನ್ನು ಆರಿಸಿ, ಸಂವರ್ಧನೆಯ ಸಲುವಾಗಿ ಒಂದು ದನಗಳ ಸಂವರ್ಧನೆಯ ಕೇಂದ್ರವನ್ನು ಸ್ಥಾಪಿಸಲಾಯಿತು. ಇದೇ ಪ್ರಕಾರ ಹಿಂಗೋಲಿಯಲ್ಲಿಯ ಹೋರಿಗಳಿಗೆ ಉದಗೀರ್ ಭಾಗದಲ್ಲಿಯ ಉತ್ತಮ ದನಗಳನ್ನು ಆರಿಸಿ ಕೊಂಡು ತಂದು ಅವುಗಳ ಸಂವರ್ಧನೆಗಾಗಿ ಉದಗೀರ್‌ದಲ್ಲಿ ಮತ್ತೊಂದು ಪಶು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಕ್ರಿ. ಶ. 1931ರಲ್ಲಿ ಹಿಂಗೋಲಾದಲ್ಲಿಯ ದನಗಳಿಗಿಂತ ಕ್ರಿ. ಶ. 1952ರಲ್ಲಿ ಉದಗೀರ್‌ದಲ್ಲಿಯ ದನಗಳು ಹಾಲು ಹೆಚ್ಚು ಕೊಡುವುದು ಕಂಡುಬಂದಿತು. ಈ ದೇವನಿ ಹೈನ ತಳಿಯ ದನಗಳ ಹಿಂಡನ್ನು ಹೆಚ್ಚಿನ ಅಭಿವೃದ್ಧಿಗಾಗಿ ಮತ್ತು ಹೆಚ್ಚು ದನಗಳನ್ನು ಉತ್ಪಾದಿಸುವ ಉದ್ದೇಶದಿಂದ ಮರಾಠವಾಡದ ಪ್ರದೇಶದಲ್ಲಿಯ ಹಿಂಗೋಲಿ, ಉದಗೀರ್ ಮತ್ತು ಔರಂಗಾಬಾದ್‌ಗಳಲ್ಲಿ ದೇವನಿ ತಳಿಯ ದನಗಳ ಕೇಂದ್ರಗಳನ್ನು ಸ್ಥಾಪಿಸಿ ತನ್ಮೂಲಕ ಈ ತಳಿ ಅಭಿವೃದ್ಧಿಗೊಳಿಸುವ ಕಾರ್ಯ ಮುಂದುವರಿಸಲಾಯಿತು.

ಕರ್ನಾಟಕ ಪಶುಪಾಲನಾ ಇಲಾಖೆಯುವರು ಬೀದರ್ ಜಿಲ್ಲೆಯಲ್ಲಿ ಒಂದು ದೇವನಿ ದನಗಳ ಸಂಗೋಪನಾ ಕೇಂದ್ರವನ್ನು ಸ್ಥಾಪಿಸಿರುತ್ತಾರೆ. ಈ ದೇವನಿ ಜಾತಿಯ ದನಗಳನ್ನು ಕರ್ನಾಟಕವಲ್ಲಿ ಬೀದರ್ ಮತ್ತು ಗುಲಬರ್ಗಾದ ಕೆಲವು ಭಾಗಗಳಲ್ಲಿ ರೈತ ಜನರು ಸಾಕಿ ಬೆಳೆಸಿಕೊಂಡು ಬಂದಿದ್ದಾರೆ, ಈ ದನಗಳ ಅಭಿವೃದ್ಧಿಗಾಗಿ ಕರ್ನಾಟಕದ ಪಶುಪಾಲನಾ ಇಲಾಖೆಯುವರು ಹೆಚ್ಚಿನ ಆಸಕ್ತಿ ವಹಿಸಿ ಉತ್ತಮ ತಳಿಯ ಹೋರಿಗಳ ವೀರ್ಯದಿಂದ ಕೃತ್ರಿಮ ಗರ್ಭಧಾರಣಾ ಕೇಂದ್ರಗಳನ್ನು ಸ್ಥಾಪಿಸಿ ತಳಿ ಸಂವರ್ಧನೆಯ ಕೆಲಸವನ್ನು ಮುಂದುವರಿಸಿರುತ್ತಾರೆ. ದನಗಳ ಆಹಾರ, ಪೋಷಣೆ, ಆರೈಕೆ ಮತ್ತು ರಕ್ಷಣೆಗಳ ಬಗ್ಗೆ ಆಧುನಿಕ ಪದ್ಧತಿಯ ಎಲ್ಲ ಸೌಕರ್ಯಗಳನ್ನು ಪೂರೈಸಲಾಗಿದೆ. ತ್ವರಿತ ತಳಿಯ ಅಭಿವೃದ್ಧಿ ಯೋಜನೆಯ ಕಾರ್ಯಗಳು ಪ್ರಗತಿ ಪಥದಲ್ಲಿ ಸಾಗಿವೆ.

ಈ ದನಗಳು ಮಧ್ಯಮ ತರಗತಿಯ ಆಕಾರದ ದನಗಳು. ಆಕಳುಗಳು ಹಾಲಿಗೂ ಎತ್ತುಗಳು ದುಡಿತಕ್ಕೂ ಪ್ರಸಿದ್ಧಿ ಪಡೆದಿವೆ. ಹೋರಿಗಳಲ್ಲಿ ಎದೆಯು ಅಗಲವಾಗಿದ್ದು ಪಕ್ಕೆಲುಬುಗಳು ಅಗಲವಾಗಿ ಚೆನ್ನಾಗಿ ಬೆಳೆದುಬಂದಿರುತ್ತವೆ; ಬೆನ್ನು ಸರಳವಾಗಿರುತ್ತದೆ; ಕಾಲುಗಳು ಗಟ್ಟಿಯಾದ ಬಲವಾದ ಎಲುಬುಗಳಿಂದ ಕೂಡಿರುತ್ತವೆ; ಕೋಡುಗಳು ಗಟ್ಟಿಯಾಗಿರುತ್ತವೆ. ಇವುಗಳ ಕಿವಿಗಳು ಗೀರ್ ದನಗಳಂತೆ ಉದ್ದವಾಗಿದ್ದು ಕೆಳಗೆ ಜೋಲುಬಿದ್ದಿರುತ್ತವೆ. ಆದರೆ ಆ ದನಗಳಂತೆ ಕಿವಿಗಳ ತುದಿಯಲ್ಲಿ ಕತ್ತರಿಸಿದ ಗುರುತಿನಂತಿರುವ ಗುರುತು ಕಂಡುಬರುವುದಿಲ್ಲ. ಇವುಗಳ ಹಣೆಯು ಗೀರ್ ದನಗಳಷ್ಟು ಮುಂದಕ್ಕೆ ಉಬ್ಬಿಕೊಂಡಿರದಿದ್ದರೂ ಬೇರೆ ಜಾತಿಯ ದನಗಳಿಗಿಂತ ಸ್ವಲ್ಪ ಮುಂದಕ್ಕೆ ಎದ್ದುಬಂದಿರುತ್ತದೆ. ಆಕಳುಗಳಲ್ಲಿ ಕೋಡುಗಳು ಗೀರ್ ದನಗಳ ಕೋಡುಗಳಂತೆಯೇ ಇರುತ್ತವೆ. ಈ ದನದ ಮೈ ಬಣ್ಣವು ಬಿಳುಪು ಮತ್ತು ಕಪ್ಪು ಅಥವಾ ಬಿಳುಪು ಮತ್ತು ಕೆಂಪು ಬಣ್ಣಗಳ ಮಿಶ್ರಣದಿಂದ ಕೂಡಿರುತ್ತದೆ. ಈ ದನಗಳಲ್ಲಿ ತೋಬರಿ ಮತ್ತು ಗಂಗೆದೊಗಲು ಉದ್ದವಾಗಿ ಬೆಳೆದುಕೊಂಡಿರುತ್ತದೆ. ಮೈ ಚರ್ಮವು ನುಣುಪಾಗಿದ್ದು ಮಿಂಚಿನಿಂದ ಕೂಡಿರುತ್ತದೆ. ಆಕಳುಗಳಲ್ಲಿ ಕೆಚ್ಚಲು ಸಾಮಾನ್ಯವಾಗಿ ಜೋತಾಡದೆ, ದೊಡ್ಡದಾಗಿ ಬಿಗಿಯಾಗಿ ಅಡಕವಾಗಿರುತ್ತದೆ. ಮುಖವು ಗೀರ್ ಜಾತಿಯ ದನಗಳಷ್ಟು ತೆಳುವಾಗಿ ಮತ್ತು ನೀಳವಾಗಿರುವುದಿಲ್ಲ. ಆದರೆ ಬೇರೆ ಜಾತಿಯ ದನಗಳಿಗಿಂತ ಸ್ವಲ್ಪ ಹೆಚ್ಚು ಉದ್ದವಾಗಿರುತ್ತದೆ. ದೇವನಿ ದನಗಳು ಹಾಲು ಹೆಚ್ಚು ಕೊಡಲು ಉತ್ತಮ ಹೈನ ದನಗಳು.


(5) ಗೀರ್ ದನಗಳು

ಗುಜರಾತ್ ಪ್ರಾಂತ್ಯದ ವಾಯುಗುಣ, ನೆಲಗುಣ, ಹಾಗೂ ಜಲಗುಣ ಎಲ್ಲವೂ ದನಗಳನ್ನು ಸಾಕಲು

ಮತ್ತು ಅವುಗಳ ಬೆಳವಣಿಗೆಗೆ ಹಿತಕರವಾಗಿವೆ. ಬನ್ನಾಸಿ ಮತ್ತು ಸರಸ್ವತಿ ನದಿಗಳ ತೀರ ಪ್ರದೇಶಗಳಲ್ಲಿ ವಿಶಾಲವಾದ ಹುಲ್ಲುಗಾವಲುಗಳ ಸೌಕರ್ಯವಿದೆ. ಗುಜರಾತ್ ಪ್ರದೇಶದ ಭೂಮಿ ಬಹಳ ಫಲವತ್ತಾದ ಭೂಮಿ. ಇಲ್ಲಿ ನಾನಾ ಬಗೆಯ ಬೆಳೆಗಳನ್ನು ಹಾಗೂ ದನಗಳ ಮೇವಿನ ಬೆಳೆಗಳನ್ನು ಬೆಳೆಯುತ್ತಾರೆ. ಇದೂ ಅಲ್ಲದೆ ಜಮೀನುಗಳ ಮಧ್ಯೆ ಇರುವ ಬದುಗಳಲ್ಲಿ ಹುಲ್ಲನ್ನು ಬೆಳೆಸುತ್ತಾರೆ. ಕೈರಾ ಮತ್ತು ಬಡೋದಾ ಪ್ರದೇಶಗಳ ಬಹುಭಾಗದ ಹಳ್ಳಿಗಳ ಚೌರ್‌ತಾರ್ ಸುತ್ತಮುತ್ತಲಿನ ಭೂಮಿಗಳಲ್ಲಿ ಭಾರತದಲ್ಲಿಯೇ ಹೆಚ್ಚಾದ ಅಕ್ಕಡಿ ಕಾಳಿನ (ದ್ವಿದಳ) ಧಾನ್ಯದ ಬೆಳೆಗಳನ್ನು ಬೆಳೆಯುತ್ತಾರೆ. ಈ ದ್ವಿದಳ ಧಾನ್ಯಗಳ ನುಚ್ಚು ಮತ್ತು ಇವುಗಳ ಬಳ್ಳಿಗಳು ಸತ್ವಯುತವಾದ ಸಸಾರಜನಕ ಆಹಾರಾಂಶಗಳನ್ನೊಳಗೊಂಡಿರುತ್ತವೆ. ಇವು ಹೈನೋತ್ಪಾದನೆಗೆ ಬೇಕಾದ ಆಹಾರಾಂಶಗಳನ್ನು ಪೂರೈಸುವುವು. ಅಹಮದಾಬಾದ್ ಪಶ್ಚಿಮ ಭಾಗ ಕೈರಿಯಾ, ತಾಸಾರಾ ಭಾಗಗಳಲ್ಲಿ ವಿಶಾಲವಾದ ಹುಲ್ಲುಗಾವಲುಗಳಿವೆ. ಇಲ್ಲಿ ದನಗಳನ್ನು ಸಾಕುವುದಕ್ಕೂ, ಬೆಳೆಸುವುದಕ್ಕೂ ನಿಸರ್ಗವು ಬಹಳ ಅನುಕೂಲಕಾರಿಯಾಗಿದೆ. ಗುಜರಾತಿನ ಪಶುಪಾಲಕರು ಹೈನ ತಳಿ ಸಂವರ್ಧನೆ ಮತ್ತು ಉತ್ಪಾದನೆಯಲ್ಲಿ ಬಹಳ ಶ್ರದ್ಧೆವಹಿಸಿ, ದನಗಳನ್ನು ಚೆನ್ನಾಗಿ ಸಾಕಿ ಬೆಳೆಸುವುದರಲ್ಲಿ ಮತ್ತು ಸಂವರ್ಧನೆಯ ಕಾರ್ಯದಲ್ಲಿ ಹೆಸರಾದ ಗೋಪಾಸನೆಗಾರರು. ಹೀಗಾಗಿ ಉತ್ತಮ ಶುದ್ಧ ಹೈನ ತಳಿಯ ದನಗಳನ್ನು ವಂಶಪರಂಪರೆಯಾಗಿ ಸಾಕಿ ಬೆಳೆಸಿಕೊಂಡು, ಕಾಪಾಡಿಕೊಂಡು ಬಂದಿದ್ದಾರೆ. ಇಂಥ ಉತ್ತಮ ಅನುವಂಶಿಕ ಗುಣಗಳನ್ನು ಹೊಂದಿರುವ ದನಗಳು ಮತ್ತು ಅನುಕೂಲವಾದ ಹಿತಕರವಾದ ಪರಿಸರಗಳ ಪರಿಣಾಮವೇ ಅಲ್ಲಿಯ ಉತ್ತಮ ಹೈನೋತ್ಪಾದನೆಗೆ ಮುಖ್ಯ ಸಾಧನೆಗಳು. ಗುಜರಾತಿನ ಪಶುಪಾಲಕರು ಈ ನಿಸರ್ಗ ಸಂಪತ್ತನ್ನು ಸಂಪೂರ್ಣವಾಗಿ ಸದುಪಯೋಗ ಪಡಿಸಿಕೊಂಡು ಹೈನೋತ್ಪಾದನೆಯನ್ನು ಲಾಭದಾಯಕವಾದ ಉದ್ಯೋಗವನ್ನಾಗಿ ಮಾಡಿಕೊಂಡಿರುತ್ತಾರೆ.

ವಿಶ್ವದಲ್ಲಿಯೇ ಅತಿ ದೊಡ್ಡ ದುಗ್ಧಾಲಯವಿರುವುದು ಗುಜರಾತದಲ್ಲಿಯೇ. ಇಲ್ಲಿಯ ಆನಂದ ಸಹಕಾರಿ ದುಗ್ಧಾಲಯವು ಭಾರತದಲ್ಲಿಯೇ ಹೆಸರಾದ ಒಂದು ದುಗ್ಧ ಕೇಂದ್ರ. ಇಲ್ಲಿಂದ ಮುಂಬಯಿಗೆ ಹಾಲು ಪೂರೈಸಲಾಗುತ್ತಿದೆ. ಈ ದುಗ್ಧಾಲಯದಲ್ಲಿ ಹಾಲಿನಿಂದ ತಯಾರಿಸಿದ ಮಕ್ಕಳ ಆಹಾರವಸ್ತುಗಳು ದೇಶದ ನಾನಾ ಕಡೆಗಳಿಗೆ ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತವೆ. ಗುಜರಾತಿನ ಪಶುಪಾಲಕರು, ಜಾಣರು, ಅಲ್ಲಿಯ ಹೈನೋತ್ಪಾದನೆಯ ಕಾರ್ಯವನ್ನು ಪ್ರಗತಿ ಪಥದ ಮುನ್ನಡೆಯಲ್ಲಿ ಸಾಗಿಸಿರುತ್ತಾರೆ. ಗುಜರಾತದಲ್ಲಿ ಎಲ್ಲಿ ನೋಡಿದರೂ ಹಾಲಿನ ಕೇಂದ್ರಗಳನ್ನು ಮತ್ತು ಹಾಲಿನಿಂದ ತಯಾರಿಸಿದ ಖೋವ, ತುಪ್ಪ, ಕೆನೆ, ಬೆಣ್ಣೆಗಳ ಡಿಪೋಗಳನ್ನು ನೋಡ





ಚಿತ್ರ 6 ; ಗೀರ್ ಹೋರಿ(ಮೇಲ್ಗಡೆ); ಗೀರ್ ಆಕಳು(ಕೆಳಗಡೆ)

ಬಹುದು. ನಮ್ಮ ದೇಶದಲ್ಲಿ ಹಾಲಿನ ಉತ್ಪಾದನೆಗೆ ಗುಜರಾತ ರಾಜ್ಯಕ್ಕೆ ಪ್ರಥಮ ಸ್ಥಾನ.

ಗೀರ್ ಜಾತಿಯ ದನಗಳು ಉತ್ತಮ ಹೈನ ತಳಿಯ ದನಗಳು. ಗುಜರಾತ್ ಮತ್ತು ಮಹಾರಾಷ್ಟ್ರದ ಬಹು ಭಾಗಗಳಲ್ಲಿ ಸಾಮಾನ್ಯವಾಗಿ ಬೇರೆ ಉಳಿದ ಜಾತಿಯ ದನಗಳಿಗಿಂತ ಗೌಳಿ ಜನರು ಹಾಲಿಗಾಗಿ ಗೀರ್ ಜಾತಿಯ ದನಗಳನ್ನು ಸಾಕುತ್ತಾರೆ. ಈ ಜಾತಿಯ ದನಗಳು ಈ ಭಾಗಗಳಲ್ಲಿ ಹೆಚ್ಚು ಜನಪ್ರಿಯತೆಯನ್ನುಗಳಿಸಿಕೊಂಡಿವೆ. ಅಹಮದಾಬಾದಿನಿಂದ ಕಾಥೇವಾಡಕ್ಕೆ ರೈಲಿನಲ್ಲಿ ಪ್ರಯಾಣ ಮಾಡುವಾಗ ಎರಡೂ ಮಗ್ಗಲುಗಳಲ್ಲಿ ದಾರಿಯುದ್ದಕ್ಕೂ ಕಂಡುಬರುವ ಹಳ್ಳಿಗಳ ದನಗಳ ಹಿಂಡಿನಲ್ಲಿ ಶುದ್ಧ ಗೀರ್ ಜಾತಿಯ ತಳಿಯ ದನಗಳನ್ನು ಮತ್ತು ಈ ದನಗಳಿಗೆ ಹುಟ್ಟಿದ ಹಾಗೂ ಈ ಗೀರ ದನಗಳ ಲಕ್ಷಣಗಳಿಂದ ಕೂಡಿದ ಉಪಶಾಖೆಯ ದನಗಳನ್ನು ಹೆಚ್ಚು ಸಂಖ್ಯೆಯಲ್ಲಿ ಕಾಣಬಹುದು. ಕಾಥೇವಾಡದ ದಕ್ಷಿಣ ಭಾಗ, ಅಹಮದಾಬಾದ್ ಕೈಸಾ ಹಾಗೂ ಬಡೋದಾ ಪ್ರದೇಶದ ಭಾಗಗಳಲ್ಲಿ ಈ ಗೀರ್ ಜಾತಿಯ ದನಗಳ ಲಕ್ಷಣಗಳಿಂದ ಕೂಡಿದ ದನಗಳನ್ನು ನೋಡಬಹುದು. ಮುಖ್ಯವಾಗಿ ಕಾಥೇವಾಡ, ಜುನಾಗಡ್, ಬಡೋದ ಮತ್ತು ಪಾಲಟಾಣಾದ ಪ್ರದೇಶಗಳಲ್ಲಿಯೂ, ಮಂತನೇರ್. ಪೋರ್‌ಬಂದರ್, ಮತ್ತು ಬಡೋದಾ ಭಾಗದ ಪ್ರದೇಶಗಳಲ್ಲಿಯೂ ಈ ಗೀರ್ ಜಾತಿಯ ದನಗಳನ್ನು ಸಾಕಿ ಬೆಳೆಸುತ್ತಾರೆ. ಇವುಗಳ ಅನೇಕ ತಳಿಗಳ ವ್ಯಾಪ್ತಿಯು ಉತ್ತರದಲ್ಲಿ ಕಚ್‌ನಿಂದ ಹಿಡಿದು ದಕ್ಷಿಣದಲ್ಲಿ ಹೈದರಾಬಾದ್ ಮತ್ತು ಬೀದರ್ ಜಿಲ್ಲೆಯವರೆಗೂ ಹೆಚ್ಚು ಬೆಳೆದು ಹರಡಿಕೊಂಡಿವೆ. ಈ ಗೀರ್ ಜಾತಿಯ ದನಗಳ ಮೂಲ ಜೋಪಾಸುಗಾರರು ತಮ್ಮ ದನಗಳ ಹಿಂಡನ್ನು ಮೇಯಿಸುವುದರ ಸಲುವಾಗಿ ಹುಲ್ಲು, ನೀರನ್ನು ಹುಡುಕಿಕೊಂಡು ಬಹಳ ದೂರದವರೆಗೆ ಪ್ರವಾಸ ಮಾಡುತ್ತಾರೆ. ಇದರಿಂದಾಗಿ ಈ ಜಾತಿಯ ಶಾಖೆಯ ದನಗಳಿಂದ ಆಯಾ ಸ್ಥಳಗಳಲ್ಲಿ ಉದ್ಭವಿಸಿದ ಉಪಶಾಖೆಯ ಜಾತಿಯ ದನಗಳಲ್ಲಿ ಈ ದನಗಳ ಮುಖ್ಯ ಲಕ್ಷಣಗಳಾದ, ಎದ್ದು ಮುಂದಕ್ಕೆ ಬಂದಿರುವ ಹಣೆ, ಉದ್ದವಾಗಿ ಮತ್ತು ಕೆಳಗೆ ಜೋತುಬಿದ್ದಿರುವ ಹಾಗೂ ಒಳಭಾಗಕ್ಕೆ ತಿರುಗಿರುವ ಕಿವಿಗಳು ಮತ್ತು ಒಳಕ್ಕೆ ಸಿಕ್ಕಿಕೊಂಡಿರುವ ಕಣ್ಣುಗಳು ಮೂರ್ತಿವತ್ತಾಗಿ ಕಂಡುಬರುವುವು. ಗೀರ್ ಜಾತಿಯ ದನಗಳನ್ನು ಬಹಳ ಜಾಗರೂಕತೆಯಿಂದ ಸಾಕಬೇಕು. ಒಂದು ಸಲ ಈ ದನಗಳು ಸೊರಗಿದ ಮೇಲೆ ಪುನಃ ಇವುಗಳನ್ನು ಸುಧಾರಿಸುವುದು ಬಹಳ ಕಷ್ಟ.

ಜುನಾಗಡದ ಗೀರ್‌ನಾರ್ ಅರಣ್ಯ ಪ್ರದೇಶ ಮತ್ತು ಕಾಥೇವಾಡದ ದಕ್ಷಿಣ ಭಾಗದಲ್ಲಿಯ ಗುಡ್ಡಗಾಡು ಪ್ರದೇಶಗಳೇ ಈ ದನಗಳ ಮೂಲಸ್ಥಾನ. ಗೀರ್ ಅಡವಿ

ಯಲ್ಲಿ ಹುಟ್ಟಿ ಬೆಳೆದು ಬಂದಿರುವುದರಿಂದ ಈ ದನಗಳಿಗೆ ಗೀರ್ ಜಾತಿಯ ದನಗಳೆಂದು ಹೆಸರು ಬಂದಿದೆ.

ಗೀರ್ ಜಾತಿಯ ದನಗಳನ್ನು ಅರಣ್ಯ ಪ್ರದೇಶಗಳ ಗುಡ್ಡಗಾಡು ಬುಡಕಟ್ಟಿನ ಜನರು, ಮಧ್ಯಪ್ರದೇಶದಲ್ಲಿಯ ರಾಬಾರಿಗಳು, ಭೇರವಾಡರು ಮತ್ತು ಚಾರನ್ ಎಂಬ ಬುಡಕಟ್ಟಿನ ಜನಾಂಗದವರು, ಹಳ್ಳಿಗಳಲ್ಲಿರುವ ಗೋಸಾವಿ ಎಂಬ ಜನರು ಸಾಕಿ ಬೆಳೆಸುತ್ತಾರೆ. ಈ ದನಗಳನ್ನು ಸಾಕುವುದೊಂದೇ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿರುವ ಜೋಪಾಸನೆಗಾರರು ಮೂಲತಃ ಅಡವಿಯಲ್ಲಿಯೇ ವಾಸವಾಗಿರುತ್ತಾರೆ. ಅವರಿಗೆ ಇರಲು ಸ್ಥಾಯಿಕ ಮನೆಗಳು ಇರುವುದಿಲ್ಲ. ಗುಡಿಸಲುಗಳನ್ನು ಹಾಕಿಕೊಂಡು ಅದರಲ್ಲಿ ವಾಸವಾಗಿರುತ್ತಾರೆ. ತಮ್ಮ ದನಗಳ ಹಿಂಡು ಮೇಯಲು ಬೇಕಾದ ಹುಲ್ಲು ಮತ್ತು ನೀರಿನ ಪ್ರದೇಶಗಳನ್ನು ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗಾಡುತ್ತಿರುತ್ತಾರೆ. ರಾತ್ರಿ ವೇಳೆಯಲ್ಲಿ ಜಾಲಿ ಮುಳ್ಳಿನ ಕಂಟಿಯಿಂದ ಸುತ್ತುವರಿಯಲ್ಪಟ್ಟ ದಡ್ಡಿಗಳಲ್ಲಿ ಕೂಡಿ ಹಾಕುತ್ತಾರೆ. ಬೆಳಿಗ್ಗೆ ಮೇಯಲು ದಡ್ಡಿಯಿಂದ ಹೊರಗೆ ಬಿಡುತ್ತಾರೆ. ದನಗಳನ್ನು ಕಟ್ಟುವುದೇ ಇಲ್ಲ. ದನಗಳು ದಿನವೆಲ್ಲ ಅಡವಿಯಲ್ಲಿ ಮೇವು ಹುಡುಕುತ್ತಾ ಮೇಯುತ್ತಾ ಅಡ್ಡಾಡುತ್ತಿರುತ್ತವೆ. ಹೀಗಾಗಿ ಈ ದನಗಳು ಬಿಸಿಲು, ಚಳಿ, ಮಳೆಗಾಳಿಯ ವಾತಾವರಣಗಳಲ್ಲಿ ಬೆಳೆದು ಬಂದಿರುತ್ತವೆ. ಇಂಥ ಕಷ್ಟದಾಯಕವಾದ ಸನ್ನಿವೇಶ ಮತ್ತು ಪರಿಸರದ ಪರಿಣಾಮದಿಂದ ಈ ದನಗಳು ಗಟ್ಟಿಯಾದ ಮತ್ತು ಸಹಿಷ್ಣುತೆಯ ಸ್ವಭಾವದ ದನಗಳಾಗಿವೆ. ಈ ಗೀರ್ ಅರಣ್ಯ ವಿಸ್ತೀರ್ಣದಲ್ಲಿ ಸುಮಾರು 1000 ಚದರ ಮೈಲುಗಳಷ್ಟು ವಿಶಾಲವಾದ ಕಾಡು ಪ್ರದೇಶವಾಗಿದೆ. ಈ ಪ್ರದೇಶದಲ್ಲಿ 42 ಅಂಗುಲ ಮಳೆ ಬೀಳುವುದು. ಇಲ್ಲಿ ರಸಭರಿತವಾದ ಮತ್ತು ಸತ್ವಯುತವಾದ ಹಸಿರುಹುಲ್ಲು ದನಗಳಿಗೆ ವರ್ಷದಲ್ಲೆಲ್ಲ ಸಿಗುತ್ತದೆ. ಹುಲ್ಲುಗಾವಲುಗಳ ಮಧ್ಯದಲ್ಲಿ ದೊಡ್ಡ ದೊಡ್ಡ ಮರಗಳು ದನಗಳಿಗೆ ಬಿಸಿಲಿನ ತಾಪವಾಗದಂತೆ ನೆರಳನ್ನು ಮತ್ತು ತಂಪನ್ನು ಪೂರೈಸುತ್ತವೆ. ಈ ಕಾಡಿನಲ್ಲಿ ಹಳ್ಳಕೊಳ್ಳಗಳು ಹರಿಯುವುದರಿಂದ, ಕೆರೆಗಳಿರುವುದರಿಂದ ದನಗಳಿಗೆ ಕುಡಿಯುವ ನೀರಿನ ಕೊರತೆಯಾಗುವುದಿಲ್ಲ. ಈ ಅಡವಿಯು ಜುನಾಗಡದ ಸಂಸ್ಥಾನಕ್ಕೆ ಸೇರಿತ್ತು.

ಪ್ರತಿಯೊಬ್ಬ ಜೋಪಾಸನೆಗಾರನು 15 ರಿಂದ 30ರವರೆಗೆ ದನಗಳನ್ನು ಸಾಕಿಕೊಂಡಿರುತ್ತಾನೆ. ಸ್ವಲ್ಪ ಉತ್ತಮ ಸ್ಥಿತಿವಂತನು 40ರಿಂದ 100ರವರೆಗೆ ದನಗಳನ್ನು ಸಾಕಿಕೊಂಡಿರುತ್ತಾನೆ. ಈ ದನಗಳ ಹಿಂಡನ್ನು ಕಾಯುತ್ತಾ, ಮೇಯಿಸುತ್ತಾ ತಿರುಗಾಡುವುದೇ ಇವರ ಜೀವನ ವ್ಯವಸಾಯ. ಹುಲ್ಲನ್ನು ಇವರು ಕೊಯ್ದು ಒಣಗಿಸಿಡು

ವುದಿಲ್ಲ. ಈ ಗೀರ್‌ನಾರ್ ಅಡವಿಯಲ್ಲಿ ಬೇಸಗೆಯಲ್ಲಿ ಕಾಡುಕಿಚ್ಚಿನಿಂದ ಹುಲ್ಲಿಗೆ ಬೆಂಕಿ ಹತ್ತಿ ಸುಟ್ಟು ಹೋಗುವ ಸಂಭವವುಂಟು. ಸಿಂಹ, ಚಿರತೆಗಳ ಕಾಟ ತಪ್ಪಿದ್ದಲ್ಲ. ಆದರೆ ಸುಮಾರು 6 ದನಗಳು ಸೇರಿಕೊಂಡು ಒಂದು ಗೀರ್ ಸಿಂಹವನ್ನು ಎದುರಿಸಿ ಹಿಮ್ಮೆಟ್ಟಿಸುವ ಶಕ್ತಿ ಮತ್ತು ಧೈರ್ಯವನ್ನು ಹೊಂದಿರುತ್ತವೆ. ಆಕಳುಗಳನ್ನು ದಿನಕ್ಕೆ ಎರಡು ಸಲ ಮುಂಜಾನೆ ಮತ್ತು ಸಾಯಂಕಾಲಕ್ಕೆ ಹಾಲು ಹಿಂಡುತ್ತಾರೆ. ಆಕಳುಗಳನ್ನು ಒಂದು ಸ್ಥಳದಲ್ಲಿ ಕಟ್ಟಿ ಹಾಲು ಹಿಂಡುವುದಿಲ್ಲ. ಆಕಳುಗಳು ತಾವೇ ಹಿಂಡುವ ಹೊತ್ತಿಗೆ ಸರಿಯಾಗಿ ಒಂದು ಸ್ಥಳದಲ್ಲಿ ಬಂದು ಸೇರುತ್ತವೆ. ಹಿಂಡುವಾಗ ಆಕಳುಗಳು ಒದೆಯದಂತೆ ಒಂದು 5 ಅಡಿ ಉದ್ದವಿರುವ ಹಗ್ಗದಿಂದ ಅವುಗಳ ಹಿಂಗಾಲುಗಳ ತೊಡೆಗಳಿಗೆ ದಳಿ ಕಟ್ಟಿ ಹಾಲು ಹಿಂಡುವುದು ಇವರ ಪದ್ಧತಿ. ಹೆಚ್ಚಾಗಿ ಉಳಿದ ಹಾಲಿನಿಂದ ತುಪ್ಪ ತಯಾರಿಸಿ ಮಾರಾಟ ಮಾಡುತ್ತಾರೆ. ಮಜ್ಜಿಗೆಯನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುವರು ಮತ್ತು ಹಿಂಡುವ ಆಕಳುಗಳಿಗೆ ಕುಡಿಸುವರು. ಆರೋಗ್ಯವಾದ ಪ್ರಾಯದ ಆಕಳುಗಳು ಎರಡು ವರ್ಷಗಳಿಗೊಮ್ಮೆ ಕರುವನ್ನು ಹಾಕುತ್ತವೆ. ಉತ್ತಮ ಆಕಳು 15ರಿಂದ 18 ತಿಂಗಳು ಕಾಲ ಹಿಂಡುತ್ತವೆ. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳು ಕರುಗಳನ್ನು ಈಯುವ ಕಾಲ. ಆಕಳುಗಳು ಹಾಲು ಹಿಂಡುವುದನ್ನು ನಿಲ್ಲಿಸುವವರೆಗೂ ಕರುಗಳನ್ನು ಆಕಳೊಂದಿಗೆ ಇರಲು ಬಿಡುತ್ತಾರೆ. ಹೋರಿ ಕರುಗಳನ್ನು ಒಂದು ವರ್ಷ ವಯಸ್ಸಾದ ಕೂಡಲೇ ಕಾಥೇವಾಡದ ರೈತ ಜನರಿಗೆ ಮಾರಿಬಿಡುತ್ತಾರೆ. ಆಕಳ ಮಣಕಗಳು 3 ಅಥವಾ 4 ವರ್ಷ ವಯಸ್ಸಿಗೆ ಬೆದೆಗೆ ಬರುತ್ತವೆ. ಪ್ರತಿಯೊಬ್ಬ ಜೋಪಾಸನೆಗಾರನು ತನ್ನ ಹಿಂಡಿನಲ್ಲಿ ಒಂದು ಉತ್ತಮ ಶ್ರೇಷ್ಠ ದರ್ಜೆಯ ಗೀರ್ ಹೋರಿಯನ್ನು ತಳಿ ಸಂವರ್ಧನೆಗಾಗಿ ಸಾಕಿಕೊಂಡಿರುತ್ತಾನೆ. ಅವನು ತಮ್ಮ ಮುಂದಿನ ಹಿಂಡಿನ ಸಂತಾನ ಅಭಿವೃದ್ಧಿಗಾಗಿ ತನ್ನ ಹಿಂಡಿನಲ್ಲಿಯೇ ಉತ್ತಮ ಮತ್ತು ಹೆಚ್ಚು ಹಾಲು ಹಿಂಡುವ ಆಕಳಿಗೆ ಹುಟ್ಟಿದ ಹೋರಿಕರುವನ್ನು ಆರಿಸಿ, ಬಹಳ ಜಾಗರೂಕತೆಯಿಂದ ಸಾಕಿ ಆಯ್ಕೆ ಮಾಡಿ ಉತ್ತಮ ಬೀಜದ ಹೋರಿಯನ್ನಾಗಿ ಬೆಳಸಿಕೊಳ್ಳುತ್ತಾನೆ. ಹೀಗೆ ಆಯ್ಕೆ ಮಾಡಿ ಕಾದಿರಿಸಿದ ಹೋರಿಯನ್ನು ಮುಂದಿನ ಸಂತಾನಾಭಿವೃದ್ಧಿಗಾಗಿ ಉಪಯೋಗ ಮಾಡುತ್ತಾನೆ. ಹೀಗೆ ಈ ಸ್ವಜಾತಿ ತಳಿ ಸಂವರ್ಧನಾ ಪದ್ಧತಿಯಿಂದ ಸಮೀಪ ರಕ್ತಸಂಬಂಧವಿರುವ ದನಗಳನ್ನು ಆರಿಸಿ, ಒಂದಕ್ಕೊಂದು ಜೊತೆಗೂಡಿಸಿ ಸಂತಾನ ಬೆಳೆಸುವುದರಿಂದ ಮಾತಾಪಿತೃಗಳ ಮತ್ತು ಅವರ ಪೂರ್ವಜರ ಹೋಲಿಕೆ ಹೆಚ್ಚು ಹೆಚ್ಚಾಗಿ ಪೀಳಿಗೆಯಲ್ಲಿ ರೂಪುಗೊಳ್ಳುತ್ತಾ ಹೋಗುತ್ತದೆ. ವಿಶಿಷ್ಟ ರಕ್ತ ಪರಂಪರೆಯಲ್ಲಿ ಅನೇಕ ತಲೆಮಾರಿನವರೆಗೆ ಬೆಳೆದು ಹುಟ್ಟಿದ ಆ ತಳಿಯ ಪೀಳಿಗೆಗಳು ಅಧಿಕಾಧಿಕವಾಗಿ ಆನುವಂಶಿಕ ಪರಿಶುದ್ಧತೆಯನ್ನು ಪಡೆಯುವುವು. ಇದರಿಂದಾಗಿ ಈ

ದನಗಳ ಹಿಂಡಿನಲ್ಲಿ ಬೇರೆ ಜಾತಿಯ ಹೋರಿಯ ರಕ್ತ ಸಂಪರ್ಕವೇ ಆಗುವುದಿಲ್ಲ. ಅಲ್ಲದೆ, ಈ ದನಗಳ ಹಿಂಡು ಗೀರ್‌ನಾರ್ ದಟ್ಟಡವಿಯ ಪರ್ವತ ಸೀಮೆಯಲ್ಲಿಯೇ ಉಳಿದಿರುವುದರಿಂದ ಈ ಪ್ರದೇಶಕ್ಕೆ ಹೊರಗಿನಿಂದ ಬೇರೆ ದನಗಳ ಸಂಪರ್ಕ ಬಹಳ ಕಡಮೆ. ಹೀಗಾಗಿ 'ಗೀರ್' ಜಾತಿಯ ದನಗಳು ನೂರಾರು ವರ್ಷಗಳಿಂದ ತಮ್ಮ ತಳಿಯ ಗುಣವೈಶಿಷ್ಟ್ಯತೆ ಮತ್ತು ಪರಿಶುದ್ಧತೆಯನ್ನು ಉಳಿಸಿಕೊಂಡು ಬಂದಿವೆ. ಬೇರೆ ಎಲ್ಲ ಜಾತಿಯ ದನಗಳಿಗಿಂತ ಈ ಗೀರ್ ಜಾತಿಯ ದನಗಳಲ್ಲಿ ಕಂಡುಬರುವ ಏಕರೂಪತೆ ಮತ್ತು ಎದ್ದು ಕಾಣುವ ಪ್ರಮುಖ ವಿಶೇಷ ಗುಣಲಕ್ಷಣಗಳೇ ಈ ದನಗಳು ಶುದ್ಧ ಜಾತಿಯ ದನಗಳು ಎನ್ನುವುದಕ್ಕೆ ಸಾಕ್ಷಿಯಾಗಿರುತ್ತವೆ. ಈ ದನಗಳಿಗೆ ಗೀರ್, ಕಾಥೇವಾಡ ಮತ್ತು ಸುರ್ತಿ ದನಗಳೆಂದು ಕರೆಯುವುದುಂಟು. ಕೆಲವರು ಈ ದನಗಳಿಗೆ ದೇಸನ್ ಎಂದು ಕರೆಯುತ್ತಾರೆ. ಆದರೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಈ ದನಗಳನ್ನು ಗೀರ್ ಜಾತಿಯ ದನಗಳೆಂದು ಕರೆಯುವುದು ಹೆಚ್ಚು ವಾಡಿಕೆಯಲ್ಲಿದೆ. ತಮ್ಮ ಕರುಗಳಲ್ಲಿ ಈ ತಳಿಯ ಲಕ್ಷಣಗಳನ್ನು ಒಡಮೂಡಿಸುವುದರಲ್ಲಿ ಈ ದನಗಳು ಹೆಸರಾದವುಗಳು. ಈ ದನಗಳು ತಮ್ಮ ಮುಂದಿನ ಪೀಳಿಗೆಗಳಲ್ಲಿ ಅನುವಂಶಿಕ ಗುಣಗಳು ಯಥಾವತ್ತಾಗಿ ಮೂಡಿಬರುವಂತೆ ಮುದ್ರಿಸುವ ಒಂದು ವಿಶೇಷ ಶಕ್ತಿಯನ್ನು ಹೊಂದಿರುತ್ತವೆಂದು ಹೇಳಬಹುದು.

ಕಾಥೇವಾಡ, ಪಾಲಿಟಾಣಾ, ಬಡೋದ ಮತ್ತು ಜುನಾಗಡಗಳಲ್ಲಿಯ ಅಂದಿನ ಅರಸರುಗಳು ಶುದ್ಧವಾದ ಹಿಂಡುಗಳನ್ನು ಬಹಳ ವರ್ಷಗಳಿಂದ ಸಾಕಿ, ಬೆಳೆಸಿಕೊಂಡು ಬಂದಿದ್ದಾರೆ. ಈ ಪ್ರದೇಶಗಳಲ್ಲಿಯೂ, ಇವುಗಳ ನೆರೆಹೊರೆಯ ಭಾಗಗಳಲ್ಲಿಯೂ ಶುದ್ಧ ತಳಿಯ ದನಗಳು ಸಿಗುತ್ತವೆ. ಮುಂಬಯಿ, ಗೋರಕ್ಷಣಾ ಮಂಡಳಿ ಹಾಗೂ ನಾಥೂಲಾಲಜಿ ಧರ್ಮಾರ್ಥ ಫಂಡ್ ಮತ್ತು ಮುಳಂದ ಗೋಶಾಳಾ–ಈ ಸಂಸ್ಥೆಗಳೊಂದಿಗೆ ಸಹಕಾರಮಾಡಿ ಶುದ್ಧ ಜಾತಿಯ ಹೋರಿಗಳನ್ನು ಬೆಳೆಸಿರುತ್ತಾರೆ. ಈ ಸಂಸ್ಥೆಗಳಿಂದಲೂ ಸಹ ಶುದ್ಧ ದನಗಳನ್ನು ಪಡೆಯಬಹುದು.

ಈ ದನಗಳ ತಳಿ ಅಭಿವೃದ್ಧಿ ಹಾಗೂ ಸಂತಾನೋತ್ಪಾದನೆಗಾಗಿ ಗುಜರಾತ್ ಸರ್ಕಾರವು ಮೌರ್ವಿ ಮತ್ತು ಜುನಾಗಡದಲ್ಲಿ ಗೀರ್ ಜಾತಿಯ ದನಗಳ ಕೇಂದ್ರವನ್ನು ಸ್ಥಾಪಿಸಿರುತ್ತಾರೆ. ಈ ಕೇಂದ್ರಗಳಲ್ಲಿಯ ಆಕಳುಗಳು ಒಂದು ಹಾಲು ಹಿಂಡುವ ಕಾಲಾವಧಿಯಲ್ಲಿ 1000 ರಿಂದ 3000 ಕಿಲೋಗ್ರಾಂಗಳವರೆಗೆ ಹಾಲು ಕೊಟ್ಟಿರುತ್ತವೆ.

ಗುಜರಾತ್ ರಾಜ್ಯದಲ್ಲಿ ಒಟ್ಟು 225ಕ್ಕಿಂತ ಹೆಚ್ಚು ಗೋಶಾಲೆಗಳು ಇವೆ.

ಎಲ್ಲ ಸ್ಥಳಗಳಲ್ಲಿ ಗೀರ್ ಜಾತಿಯ ಹೈನದ ದನಗಳನ್ನು ಸಾಕಿ ಬೆಳೆಸಿಕೊಂಡಿರುತ್ತಾರೆ.

ಗೀರ್ ಆಕಳು ಉತ್ತಮ ಹೈನ ದನಗಳು. ಆದರಲ್ಲಿಯೂ ಈ ಆಕಳುಗಳು ತಮ್ಮ ಮೂಲಸ್ಥಾನದಲ್ಲಿ ಅತಿ ಶ್ರೇಷ್ಠದರ್ಜೆಯ ಹೈನ ದನಗಳೆಂದು ಪರಿಗಣಿಸಲ್ಪಟ್ಟಿವೆ. ಕರುಹಾಕಿದ ನಂತರ 325 ದಿನಗಳಲ್ಲಿ ಹಾಲು ಹಿಂಡುವ ಒಂದು ಅವಧಿಯ ಕಾಲದಲ್ಲಿ ಒಂದು ದನ 500 ಕಿಲೋಗ್ರಾಮ್ ಹಾಲು ಕೊಟ್ಟಿರುತ್ತದೆ. ಹಾಲಿನಲ್ಲಿ ಬೆಣ್ಣೆಯ ಅಂಶವು 4.9ರಿಂದ 6ರ ವರೆವಿಗೂ ಇರುವುದುಂಟು. ಪ್ರತಿ ದಿವಸ 20 ಕಿಲೋಗ್ರಾಮ್ ಹಾಲು ಕೊಡುವುದುಂಟು. ಜುನಾಗಡ ಸಂಸ್ಥಾನದಲ್ಲಿ ಒಂದು ಸೂಲಿಗೆ 2500ರಿಂದ 3000 ಕಿಲೋಗ್ರಾಮ್ ಹಾಲು ಕೊಟ್ಟ ಟಿಪ್ಪಣಿಗಳಿವೆ. ಠಾಣೆ ಜಿಲ್ಲೆಯಲ್ಲಿ ಮಳಂದ ಮತ್ತು ಖಾಂಡವಲಿಗಳಲ್ಲಿ ಎಷ್ಟೋ ಹಸುಗಳು ಹೈನದ ದಿವಸದಲ್ಲಿ $11\frac{1}{2}$ ರಿಂದ $12\frac{1}{2}$ ಕಿಲೋಗ್ರಾಮ್ ಹಾಲು ಸಾಮಾನ್ಯವಾಗಿ ಕರೆಯುವುವು.

ಈ ದನಗಳು ದೊಡ್ಡ ಸ್ಥೂಲ ಮತ್ತು ಶಿಥಿಲ (ಸಡಿಲಾದ) ಕಾಯದ ಪ್ರಾಣಿಗಳು; ನೋಟಕ್ಕೆ ಬಹು ಸಾಧು ಪ್ರಾಣಿ. ಹೋರಿಗಳು 12ರಿಂದ 14 ಮುಷ್ಟಿಗಳ ವರೆಗೂ, ಆಕಳುಗಳು 10ರಿಂದ 13 ಮುಷ್ಟಿಗಳವರೆಗೂ ಎತ್ತರವಿರುತ್ತವೆ. ಹೋರಿಗಳು 450 ರಿಂದ 500 ಕಿಲೋಗ್ರಾಮ್ ಹಾಗೂ ಆಕಳುಗಳು 375 ರಿಂದ 450 ಕಿಲೋಗ್ರಾಮ್‌ಗಳವರೆಗೂ ತೂಕವಿರುತ್ತವೆ.

ಇವುಗಳ ಮೈಕಟ್ಟು ಮತ್ತು ಶರೀರ ರಚನೆಯು ಮೇಲಿಂದ ನೋಡಲಾಗಿ ಈ ಜಾತಿಯ ದನಗಳನ್ನು ಯೋಗ್ಯವಾದ ವ್ಯವಸ್ಥೆಯಿಂದ ಸಾಕಿಸಲಾಹಿದಲ್ಲಿ ಇವುಗಳನ್ನು ಉತ್ತಮ ಹಿಂಡುವ ಹೈನದನಗಳನ್ನಾಗಿ ಬೆಳೆಸಬಹುದು ಎಂದು ನಿಸ್ಸಂದೇಹವಾಗಿ ಹೇಳಬಹುದು. ಮುಂಬೈ ಸರ್ಕಾರದವರು ಇದಕ್ಕಾಗಿ ಕೆಲವು ಪರೀಕ್ಷಾ ಕ್ಷೇತ್ರಗಳಲ್ಲಿ ಸಂಶೋಧನೆಯ ಕೇಂದ್ರಗಳಲ್ಲಿಯೂ ಕೇಂದ್ರ ಸರ್ಕಾರದವರು ಡೈರಿ ರಿಸರ್ಚ್ ಇನ್ಸಿಟ್ಯೂಟಿನಲ್ಲಿ ಹೆಚ್ಚಿನ ಸಂಶೋಧನೆಗಾಗಿ ಕ್ರಮಬದ್ಧವಾದ ತಳಿ ಅಭಿವೃದ್ಧಿಗೊಳಿಸಿಕೊಂಡು ಗೀರ್ ಹಸುಗಳನ್ನು ಇಟ್ಟುಕೊಂಡಿದ್ದಾರೆ.

ಎತ್ತುಗಳು ದೃಢಕಾಯವಾದ, ಬಲಾಢ್ಯವಾದ ಮತ್ತು ಶಕ್ತಿಯುತವಾದ ದನಗಳು. ಇವು ಹೆಚ್ಚು ಭಾರವನ್ನು ಹೊತ್ತು ಎಳೆಯಬಲ್ಲವು. ಆದರೆ ಬಹಳ ಮಂದಗಾಮಿಗಳು. ಇವುಗಳ ಗೊರಸುಗಳು ಉದ್ದವಾಗಿ, ಮೆತ್ತಗಿರುವುದರಿಂದ ಹೂಡುವುದಕ್ಕೂ ಮತ್ತು ಗಟ್ಟಿಯಾದ ಕಲ್ಲು ನೆಲದ ಮೇಲೆ ರಸ್ತೆ ಸಾರಿಗೆ ಕೆಲಸಕ್ಕೂ ಹೆಚ್ಚು ಉಪಯುಕ್ತವಲ್ಲವೆಂದು ಹೇಳಲಾಗಿದೆ.

ಬಣ್ಣದ ಮೇಲಿನಿಂದಲೇ ಗೀರ್ ಜಾತಿಯ ದನಗಳನ್ನು ಸುಲಭವಾಗಿ ಗುರುತಿಸ ಬಹುದು. ಹೀಗೆ ಬೇರೆ ತಳಿಯ ದನಗಳನ್ನು ಕೇವಲ ಮೈ ಬಣ್ಣದಿಂದ ಗುರುತಿಸು ವುದು ಸಾಧ್ಯವಿಲ್ಲವೆಂದು ಹೇಳಬಹುದು. ಶುದ್ಧ ಗೀರ್ ಜಾತಿಯ ದನಗಳ ಮೈ ಬಣ್ಣ, ಮಿಶ್ರಣವಿಲ್ಲದೆ ಒಂದೇ ಬಣ್ಣದಿಂದ ಕೂಡಿರುತ್ತದೆ. ಅದು ಇಡೀ ಕೆಂಪು ಬಣ್ಣದ್ದಾಗಿರಬಹುದು; ಇಲ್ಲವೇ ಮಸಕು ಬಿಳಿಯ ಬಣ್ಣದ್ದಾಗಿರಬಹುದು. ಆದರೆ ಇಂದಿನ ದಿವಸಗಳಲ್ಲಿ ಹೀಗೆ ಹೇಳುವುದು ಸಾಧ್ಯವಿಲ್ಲ; ಏಕೆಂದರೆ ಇಂದಿನ ನಾಗರೀ ಕತೆಯ ಪ್ರಭಾವದಿಂದ ರಸ್ತೆಗಳು ರೈಲು ಮತ್ತು ವಾಹನ ಸಾರಿಗೆಗಳ ಸೌಲಭ್ಯದಿಂದ ದನಗಳ ಚಲನವಲನಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಹಳ ಸುಲಭ ವಾಗಿ ಹೋಗಿ ಬೆರೆಯುವಂತೆ ಮಾಡಿವೆ. ಇದರಿಂದ ಈ ದನಗಳು ಇಂದು ಕೆಂಪು ಮತ್ತು ಬಿಳಪು, ಕಪ್ಪು ಮತ್ತು ಬಿಳಪು ಹಾಗೂ ನರೆ ಮಸುಕು ಬಿಳೀ ಬಣ್ಣ ಮುಂತಾದ ಮಿಶ್ರಣ ಬಣ್ಣದಿಂದ ಕೂಡಿದ ಮಚ್ಚೆಗಳನ್ನೊಳಗೊಂಡಿರುತ್ತವೆ. ಸಾಮಾನ್ಯವಾಗಿ ಈ ದನಗಳ ಮೈಬಣ್ಣ ಒಂದು ಬಿಳಿಯ ಬಟ್ಟೆಯ ಮೇಲೆ ಕೆಂಪು ಅಥವಾ ಕಪ್ಪು ಬಣ್ಣ ವನ್ನು ಸಿಡಿಸಿದರೆ ಅದು ಹೇಗೆ ಕೆಂಪು ಅಥವಾ ಕಪ್ಪು ಚುಕ್ಕೆಗಳಿಂದ ಕೂಡಿರುತ್ತದೆಯೋ ಹಾಗೆ ಈ ದನಗಳ ಮೈ ಚುಕ್ಕೆಗಳಿಂದ ಕೂಡಿರುತ್ತದೆ. ಹೀಗೆ ಕಪ್ಪು, ಕೆಂಪು, ಬಿಳಿಯ ಚುಕ್ಕೆಗಳಿಂದ ಕೂಡಿರುವುದರಿಂದ ಇವನ್ನು ಚಂಚಬಣ್ಣದ (ಹಂಡಬಂಡ) ಜಾತಿಯ ದನ ಎಂದು ಕರೆಯುವುದು ವಾಡಿಕೆಯಲ್ಲಿದೆ. ಹೊಟ್ಟೆಯ ಉಭಯ ಪಾರ್ಶ್ವಗಳಲ್ಲಿ ಅಥವಾ ಒಂದು ಕಡೆ ಗಾಢವಾದ(ಸಾಂದ್ರವಾದ) ಅಥವಾ ತಿಳಿಯಾದ ಬಣ್ಣದ ಮಚ್ಚೆಯೊಂದು ಇದ್ದೇ ಇರುವುದು ಸ್ವಾಭಾವಿಕ. ಇದು ಈ ಜಾತಿಯ ದನಗಳ ವೈಶಿಷ್ಟ್ಯ.

ಗೀರ್‌ದನ ದೊಡ್ಡದಾದ ಸಡಿಲಾದ ಮೈಕಟ್ಟಿನ ಪ್ರಾಣಿ. ಇದರ ಗಂಗೆದೊಗಲು ದೊಡ್ಡದಿದ್ದು ತೂಗಾಡುತ್ತಿರುತ್ತದೆ. ತೋಬರಿ ಸಹ ದೊಡ್ಡದಿರುತ್ತದೆ. ಕಾಲುಗಳು ದಪ್ಪವಾಗಿ ಶಿಥಿಲವಾಗಿ ದೇಹಕ್ಕೆ ಅಂಟಿಕೊಂಡಿರುತ್ತವೆ.

ತಲೆಯೇ ಗೀರ್ ದನಗಳಲ್ಲಿ ಮುಖ್ಯವಾಗಿ ಕಾಣುವ ಲಕ್ಷಣವಾಗಿರುತ್ತದೆ. ಹಣೆಯು ಉಬ್ಬಿಕೊಂಡು ತಲೆಯಿಂದ ಮುಂದಕ್ಕೆ ಚಾಚಿಕೊಂಡು ಬಂದಿರುತ್ತದೆ. ಹೋರಿಗಳಲ್ಲಿ ಕೊಂಬುಗಳು ಸಣ್ಣದಾಗಿ ದಪ್ಪವಾಗಿದ್ದು ಅರ್ಧಚಂದ್ರಾಕಾರದಲ್ಲಿ ಗೋಲಾಗಿರುತ್ತವೆ. ಆಕಳುಗಳಲ್ಲಿ ಕೋಡುಗಳು ದೊಡ್ಡವಾಗಿದ್ದು ತಿರುವಿಕೊಂಡಿರು ತ್ತವೆ. ಇಂಥ ಕೋಡುಗಳಿಗೆ ಜೋಪಾಸನೆಗಾರರು 'ಭಿಲೋ' ಎಂದು ಕರೆಯುತ್ತಾರೆ.

ಕಿವಿಗಳು ಉದ್ದವಾಗಿದ್ದು ಕೆಳಗೆ ಜೋತುಬಿದ್ದಿರುತ್ತವೆ. ತುದಿಯಲ್ಲಿ ಚರ್ಮದ ಸ್ವಲ್ಪ ಭಾಗ ಕತ್ತರಿಸಿ ತೆಗೆದ ಗುರುತಿನಂತೆ ಕಾಣುತ್ತದೆ. ಈ ದನಗಳಲ್ಲಿ ದವಡೆಯ ಕೆಳಗೆ ಎರಡೂ ಕಿವಿಗಳ ತುದಿಗಳು ಕೂಡಿರುವ ದನಗಳು ಶುದ್ಧ ಜಾತಿಯ ಲಕ್ಷಣಗಳು

ಎಂದು ಹೇಳುತ್ತಾರೆ. ಭಾರತದ ದನಗಳಲ್ಲೆಲ್ಲಾ ಇದು ಹೆಚ್ಚು ಮಾಂಸದಿಂದ ತುಂಬಿ ಕೊಂಡಿರುವ ದನ.

ಈ ದನಗಳಲ್ಲಿ ಹಣೆಯು ಬಹಳ ಮುಂದಕ್ಕೆ ಉಬ್ಬಿಬಂದಿರುವುದರಿಂದ ಇವುಗಳ ಕಣ್ಣುಗಳು ಒಳಗೆ ತಗ್ಗಿನಲ್ಲಿ ಸಿಕ್ಕಿಕೊಂಡಿರುತ್ತವೆ. ಇದರಿಂದ ಈ ಪ್ರಾಣಿಗಳು ಬಹಳ ಮಂದಗತಿಯ ಪ್ರಾಣಿಯಂತೆ ಕಾಣುತ್ತವೆ. ಈ ಜಾತಿಯ ದನಗಳು ಭಾರತದ ಎಲ್ಲ ಭಾಗಗಳಲ್ಲಿ ಕಂಡು ಬರುವುದರಿಂದ ಇವುಗಳ ಉಪಯೋಗವು ಸಾರ್ವತ್ರಿಕವಾಗಿರುವು ದೆಂದು ಹೇಳಬಹುದು.

ಭಾರತದಲ್ಲಿ ಹೆಚ್ಚು ಹಾಲು ಹಿಂಡುವ ಹೈನ ತಳಿಯ ದನಗಳಲ್ಲಿ ಗೀರ್ ಜಾತಿಯ ದನಗಳು ಉತ್ತಮ ಹೈನ ತಳಿಗಳೆಂದು ಹೆಸರುಗಳಿಸಿಕೊಂಡಿವೆ. ಈ ಜಾತಿಯ ಹಸು ಗಳ ಹಾಲಿನಲ್ಲಿ ಬೆಣ್ಣೆಯ ಪ್ರಮಾಣ ಹೆಚ್ಚಾಗಿರುತ್ತದೆ. ಮಾಂಸಕ್ಕೆ ಉಪಯುಕ್ತವಾದ ತಳಿದನ. ಇದಕ್ಕಾಗಿ ಈ ದನಗಳನ್ನು ಹಿಂದೆ ಅಮೆರಿಕಾ ಖಂಡದ ಉಷ್ಣ ಪ್ರದೇಶ ಗಳಿಗೆ ಹೆಚ್ಚಾಗಿ ಟೆಕ್ಸಾಸ್, ಮೆಕ್ಸಿಕೋ ಮೊದಲಾದ ದೇಶಗಳಿಗೆ ಅಲ್ಲಿಯ ಯೂರೋಪಿನ ಮೂಲದ ಮಾಂಸದ ದನಗಳನ್ನು ಅಭಿವೃದ್ಧಿಗೊಳಿಸುವುದರ ಸಲುವಾಗಿ ತೆಗೆದುಕೊಂಡು ಹೋಗಿ ತಮ್ಮಲ್ಲಿಯ ಮಾಂಸದ ದನಗಳನ್ನು ಅಭಿವೃದ್ಧಿಗೊಳಿಸಿಕೊಂಡಿದ್ದಾರೆ.

ಈ ದನಗಳ ಕೊಳಗ (ಗೊರಸು) ಗಳು ಉದ್ದವಾಗಿದ್ದು, ಮೆತ್ತಗಿರುವುದರಿಂದ ಗಟ್ಟಿ ನೆಲದ ಮೇಲೆ ಸಾರಿಗೆ ಕೆಲಸಗಳಿಗೆ ಇವು ಪ್ರಯೋಜನವಿಲ್ಲ. ಬಹಳ ಮಂದ ಸ್ವಭಾವದ ದನಗಳು. ಮಣಕಗಳು(ಕಡಸುಗಳು)ತಡವಾಗಿ(4 ವರ್ಷ ವಯಸ್ಸಿಗೆ)ಬೆದೆಗೆ ಬರುತ್ತವೆ. ಆಕಳುಗಳು 2 ವರ್ಷಕ್ಕೆ ಒಂದು ಸಾರಿ ಕರುಹಾಕುತ್ತವೆ: ಕೆಚ್ಚಲು ದೊಡ್ಡದಾಗಿರುವುದರಿಂದ, ಕೆಚ್ಚಲು ಬಾವು ರೋಗಕ್ಕೆ ಗುರಿಯಾಗುವ ಸಂಭವ ಹೆಚ್ಚು.

(6) ಕಾಂಕ್ರೇಜ್ ದನಗಳು ಗುಜರಾತದಲ್ಲಿಯ ಬನಾಸಕಂಠಾ ಜಿಲ್ಲೆಯು ಈ ದನಗಳ ಮೂಲಸ್ಥಾನ. ಈ ದನಗಳು ಕಾಂಕ್ರೇಜ ಅಥವಾ ವಾಡಿಯಾಲ ಪ್ರದೇಶದಲ್ಲಿ ಹುಟ್ಟಿ ಬೆಳೆದ ದನಗಳು. ಈ ದನಗಳನ್ನು ದನಗಳ ವ್ಯಾಪಾರಸ್ಥರು ಮಾರಾಟಕ್ಕಾಗಿ ಗುಜರಾತ ಮತ್ತು ಬಡೋದಾ ಪ್ರದೇಶದ ಬೇರೆ ಬೇರೆ ಭಾಗಗಳಿಗೆ ದೊಡ್ಡ ದೊಡ್ಡ, ಹಿಂಡುಗಳಲ್ಲಿ ಖರೀದಿ ಮಾಡಿ, ಮಾರಾಟ ಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ. ಹೀಗಾಗಿ ಗುಜರಾತದ ದನಗಳಲ್ಲಿ ಕಾಂಕ್ರೇಜ್ ಜಾತಿಯ ದನಗಳು ಯಾವುವು ಮತ್ತು ಗುಜರಾತದ ದನಗಳು ಯಾವುವು ಎಂಬುದನ್ನು ಗುರುತಿಸುವುದು ಅಷ್ಟು ಸುಲಭವಲ್ಲ. ಈ ದನಗಳು ಶುದ್ಧ ತಳಿಯ ದನಗಳು;

ಕಾಂಕ್ರೇಜ್ ದನಗಳಿಗೆ ಹುಟ್ಟಿದ ಉಪಶಾಖೆಯ ದನಗಳೆಂದು ಹೇಳಬಹುದು. ಒಂದು ಕಾಲಕ್ಕೆ ನಂದುರಬಾರದಿಂದ ಸುರತವರೆಗೆ ವರ್ತಕರು ಮಾಲವಿ ಜಾತಿಯ ಎತ್ತು ಮತ್ತು ಹೋರಿಗಳ ಮೇಲೆ ಗೋಧಿ, ಅಗಸೆ, ತೊಗರಿ, ಕಡಲೆ, ಹೆಸರು, ಉದ್ದು ಮೊದಲಾದ ಬೇಳೆಕಾಳುಗಳನ್ನು ಹೇರಿಕೊಂಡು ಈ ಮಾರ್ಗವಾಗಿ ಸರಕುಗಳನ್ನು ಸಾಗಿಸುತ್ತಿದ್ದರು. ಇದೂ ಅಲ್ಲದೆ ಖಾನದೇಶ, ಇಂದೂರ ಉತ್ತರ ಗುಜರಾತ್ ಮತ್ತು ಕಾಥೇವಾಡಗಳಿಂದಲೂ ದನಗಳ ಸಾಗಣೆ ನಡೆಯುತ್ತಿತ್ತು. ಹೀಗೆ ಈ ದನಗಳ ಚಲನವಲನಗಳಿಂದ ಗುಜರಾತದ ಅನೇಕ ಭಾಗಗಳಲ್ಲಿ ಕಾಂಕ್ರೇಜ ದನಗಳಿಂದ ಮಿಶ್ರಿತವಾದ ಉಪಶಾಖೆಯ ದನಗಳನ್ನು ಕಾಣಬಹುದಾಗಿದೆ. ಹೀಗೆ ಈ ದನಗಳು ಬಹುಕಾಲದಿಂದ ಒಂದಕ್ಕೊಂದು ಮಿಶ್ರಿತವಾಗಿರುವುದರಿಂದ ಯಾವುದು ಕಾಂಕ್ರೇಜ್ ಜಾತಿಯ ದನ ಮತ್ತು ಯಾವುದು ಗುಜರಾತದ ದನ ಎಂದು ಹೇಳುವುದು ಸುಲಭ ಸಾಧ್ಯವಿಲ್ಲ. ಅಹಮದಾಬಾದ್ ಪಶ್ಚಿಮಭಾಗ, ಕೈರಾ, ಠಾಸರಾ ಭಾಗಗಳಲ್ಲಿ ವಿಶಾಲ ವಾದ ಹುಲ್ಲುಗಾವಲುಗಳಿವೆ. ಇಲ್ಲಿ ದನಗಳನ್ನು ಸಾಕುವುದಕ್ಕೂ ಮತ್ತು ಬೆಳೆಸುವು ದಕ್ಕೂ ನಿಸರ್ಗವೂ ಸಹ ಬಹಳ ಸಹಾಯಕವಾಗಿದೆ. ಅನುಕೂಲವಾದ ನಿಸರ್ಗ ಸಂಪತ್ತು ಮತ್ತು ಪರಿಸರಗಳ ಮಿಲನದಿಂದ ಉತ್ತಮ ದನಗಳ ಬೆಳವಣಿಗೆಯಾಗಿದೆ.

ಕಾಂಕ್ರೇಜ್ ಜಿಲ್ಲೆಯೇ ಈ ದನಗಳ ತವರೂರು. ಪಾಲನಪುರದಲ್ಲಿಯ ಕಾಂಕ್ರೇಜ ಜಿಲ್ಲೆಯಿಂದ ಇವಕ್ಕೆ ಕಾಂಕ್ರೇಜ್ ಎಂಬ ಹೆಸರು ಬಂದಿದೆ. ಕಚ್‌ಕೊಲ್ಲಿಯ ನಡು ಪ್ರದೇಶ, ಸಿಂಧ್ ಪ್ರಾಂತದ ಥಾರ್‌ಪಾರ್‌ಕರ್ ಭಾಗ,ಅಹಮದಾಬಾದ್ ಜಿಲ್ಲೆಯ ಢೋಲ್ಕ ಪ್ರದೇಶ, ಧೀಸ್, ರಾಧನಪುರ, ಪಾಲನಪುರ ಮತ್ತು ಕಾಂಕ್ರೇಜ್ ಜಿಲ್ಲೆಯ ಪ್ರದೇಶಗಳೇ ಈ ದನಗಳ ಆಯಕಟ್ಟಿನ ಸ್ಥಳಗಳು. ಇವು ಬಹುಕಾಲದಿಂದ ನೆಲೆಯಾಗಿ ನಿಂತಿರುವ ಶುದ್ಧ ತಳಿ ದನಗಳು. ಈ ಜಾತಿಯ ದನಗಳ ಹಿಂಡನ್ನು ಸಾಕುವ ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಮ್ಮ ಜೊತೆಯಲ್ಲಿ ದನಗಳ ಹಿಂಡನ್ನು ತೆಗೆದುಕೊಂಡು ವಲಸೆ ಹೋಗುವರು. ಸುರತ್, ಕಾಥೇವಾಡ, ಬಡೋದಾ ಪ್ರಾಂತ ಗಳಲ್ಲಿ ಈ ದನಗಳ ಹಿಂಡುಗಳಿಂದ ಆರಿಸಿದ ದುಡಿತದ ದನಗಳಿಗೆ ಹೆಚ್ಚು ಬೆಲೆ ಕೊಟ್ಟು ಕೊಳ್ಳುವ ರೈತಗ್ರಾಹಕ ಜನರು ಸದಾ ಇದ್ದೇ ಇರುತ್ತಾರೆ. ಹೀಗಾಗಿ ಈ ಜಾತಿಯ ದನಗಳಿಗೆ ಹೆಚ್ಚಿನ ಬೇಡಿಕೆ ಇದೆ. ಈ ದನಗಳನ್ನು ಅಮೆರಿಕಾ ದೇಶಕ್ಕೆ ತೆಗೆದು ಕೊಂಡು ಹೋಗಿ ಅಲ್ಲಿಯ ಸ್ಥಳಿಕ ದನಗಳೊಂದಿಗೆ ಕೂಡಿಸಿ ಮಾಂಸದ ತಳಿಯ ದನಗಳನ್ನು ಪಡೆಯಲು ಪ್ರಯೋಗಿಸಿದ್ದುಂಟು. ಹೀಗೆ ಕಾಂಕ್ರೇಜ್ ದನಗಳ ರಕ್ತ ಮಿಶ್ರಣದಿಂದ ಹುಟ್ಟಿದ ದನಗಳು ಅಲ್ಲಿಯ ಯೂರೋಪಿನ ಮೂಲದ ಮಾಂಸದ ರಾಸುಗಳಿಗಿಂತ ಚೆನ್ನಾಗಿ ಬೆಳೆದು ಮಾಂಸಕ್ಕಾಗಿ ಜಗತ್ ಪ್ರಸಿದ್ಧಿಯಾಗಿವೆ.

ಈ ದನಗಳನ್ನು 'ಬನ್ನಿಯಾಯ' ಎಂದು ಕರೆಯುವುದುಂಟು. ಏಕೆಂದರೆ ಕಾಂಕ್ರೇಜ್ ಜಿಲ್ಲೆಯಲ್ಲಿ ಬನ್ನಾಸಿ ಎಂಬ ನದಿ ಹರಿಯುವುದು. ಆ ನದಿಯ ಪ್ರದೇಶಗಳ ದನಗಳಾದುದರಿಂದ ಇದಕ್ಕೆ ಬನ್ನಿಯಾಯ ದನಗಳೆಂದು ಕರೆಯುತ್ತಾರೆ. ಕೆಲವು ಕಡೆ



ಚಿತ್ರ 7: ಕಾಂಕ್ರೇಜ್ ಜಾತಿಯ ಎತ್ತುಗಳ ಜೋಡಿ

'ವಾಗಾಡಿ' ದನಗಳೆಂದು ಕರೆಯುತ್ತಾರೆ. ಏಕೆಂದರೆ ಕೋಳಿ ಜಾತಿಯ ಕಾಡು ಜನರು ವಾಗಾಡಿಯಾ ಎಂಬ ಪಂಗಡಕ್ಕೆ ಸೇರಿದವರು, ಈ ಜನರು ಸಾಕಿದ ದನಗಳನ್ನು

ವಾಗಾಡಿ ದನಗಳೆಂದು ಕರೆಯುವ ವಾಡಿಕೆ ಕೆಲವು ಕಡೆ ಉಂಟು. ರಾಂಧನ್‌ಪುರ ಸಂಸ್ಥಾನದಲ್ಲಿ ಈ ದನಗಳು ಒಡಿಯಾರ ಎಂಬ ಜಿಲ್ಲೆಯಿಂದ ಬಂದಿರುವ ಕಾರಣ ಇವುಗಳನ್ನು 'ಒಡಿಯಾರ' ದನಗಳೆಂದೂ ಕರೆಯುವರು. ಒಡಿಯಾರ ಎಂದರೆ ಹುಲ್ಲು ಗಾವಲಿನ ಪ್ರದೇಶ ಅಥವಾ ಗೋಪಾಲಕರ ನಾಡು. ಈ ಒಡಿಯಾರ ಪ್ರದೇಶದ ಮತ್ತು ಕಾಂಕ್ರೇಜ ಪ್ರದೇಶದ ಸರಹದ್ದುಗಳೆರಡೂ ಒಂದಕ್ಕೊಂದು ಹತ್ತಿಕೊಂಡಿರುತ್ತವೆ. ಹೀಗಾಗಿ ಅಲ್ಲಿಯ ಸ್ಥಳಿಕ ಜನರು ಆಯಾ ಪ್ರದೇಶಗಳಿಂದ ಬಂದ ದನಗಳನ್ನು ಆಯಾ ಸ್ಥಳಗಳ ಹೆಸರಿನಿಂದಲೇ ಕರೆಯುವುದು ವಾಡಿಕೆಯಾಗಿದೆ. ಒಟ್ಟಿನ ಮೇಲೆ ಈ ದನಗಳನ್ನು ಸಾಮಾನ್ಯವಾಗಿ ಎಲ್ಲ ಕಡೆ ಸಾರ್ವತ್ರಿಕವಾಗಿ ಕಾಂಕ್ರೇಜ ಜಾತಿಯ ದನಗಳೆಂದು ಕರೆಯುತ್ತಾರೆ.

ಡೀಸಾ ಪ್ರದೇಶಕ್ಕೆ ಪಶ್ಚಿಮ ಭಾಗದಲ್ಲಿರುವ ಕಾಂಕ್ರೇಜ ಮತ್ತು ವಾಡಿಯಾಲ ಪ್ರದೇಶಗಳು ಹಾಗೂ ಪಾಲನಪುರದ ಪ್ರದೇಶಗಳಲ್ಲಿ ಕಾಂಕ್ರೇಜ ದನಗಳನ್ನು ಹೆಚ್ಚಾಗಿ ಸಾಕಿ ಬೆಳೆಸುತ್ತಾರೆ. ಈ ಪ್ರದೇಶಗಳು ಹೆಚ್ಚಾಗಿ ಗುಡ್ಡಗಾಡುಗಳಿಂದ ಕೂಡಿದ ಅಡವಿಯ ಪ್ರದೇಶ. ಈ ಭಾಗದಲ್ಲಿ ದೊಡ್ಡ ದೊಡ್ಡ ವಿಶಾಲವಾದ ಹುಲ್ಲುಗಾವಲುಗಳ ಸೌಕರ್ಯವಿದೆ. ಆದರೆ ಈ ಎಲ್ಲ ಗೋಚರ ಭೂಮಿಯಲ್ಲಿ ಹುಲ್ಲು ಒಂದೇ ಸಮನಾಗಿ ಬೆಳೆಯುವುದಿಲ್ಲ. ಈ ಹುಲ್ಲುಗಾವಲು ಭೂಮಿಯು ಹೆಚ್ಚಾಗಿ ಸವಳು ಮತ್ತು ಕರಲು ಭೂಮಿಗಳಾಗಿರುತ್ತವೆ. ನದಿಯ ತೀರ ಪ್ರದೇಶಗಳಲ್ಲಿ ಮಾತ್ರ ಉತ್ತಮ ಹುಲ್ಲು ಬೆಳೆಯುತ್ತದೆ. ಈ ಹುಲ್ಲುಗಾವಲುಗಳು ದೊಡ್ಡ ವೃಕ್ಷಗಳಿಂದ ಕೂಡಿರುತ್ತವೆ. ಇವು ದನಗಳಿಗೆ ನೆರಳನ್ನು ಮತ್ತು ತಂಪನ್ನು ಕೊಡುತ್ತವೆ. ಈ ಭಾಗದಲ್ಲಿ ಮಳೆ 25 ಅಂಗುಲ ಬೀಳುತ್ತದೆ. ದನಗಳು ನೀರಿಗಾಗಿ ಆಳವಾದ ಬಾವಿ ಮತ್ತು ಕೆರೆಕುಂಟೆಗಳನ್ನು ಅವಲಂಬಿಸಿರುತ್ತವೆ. ಚಳಿಗಾಲದಲ್ಲಿ ಚಳಿ ಹೆಚ್ಚು. ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ಬಿಸಿಲು ಬಹಳ ಪ್ರಖರವಿರುತ್ತದೆ. ಪಾಲನಪುರದ ಭಾಗಗಳಲ್ಲಿ ಮತ್ತು ವಾಡಿಯಾಲ ಕಾಂಕ್ರೇಜ ಜಿಲ್ಲೆಗಳಲ್ಲಿ ಉತ್ತಮ ಕಾಂಕ್ರೇಜ ಶುದ್ಧ ತಳಿಯ ದನಗಳನ್ನು ಸಾಕುವರು. ತರುವಾಯ, ಸಂತಾಲಪುರ, ವಾರಹಿ, ಮಾರವಾಡ, ಬಾಬಹಾರ ಮತ್ತು ಡಿಯೋದರ, ದೀಸ ಮತ್ತು ಪಾಲನ ಪುರದ ಒಂದು ಭಾಗದಲ್ಲಿಯೂ ಸಹ ಈ ದನಗಳನ್ನು ಸಾಕಿ ಬೆಳೆಸುವರು.

ಋಗ್ವೇದದಲ್ಲಿ ಸಿಂಧು ನದಿಯ ಬಯಲು ಮತ್ತು ಅದರ ಉಪನದಿಯಾದ ಗೋಮಲ ನದಿಯ ತೀರ ಪ್ರದೇಶಗಳು ಬಹಳ ಫಲವತ್ತಾದ ಪ್ರದೇಶಗಳು. ಅಲ್ಲಿ ಉತ್ತಮ ದನಗಳ ಹಿಂಡು ಇತ್ತೆಂದು ಹೇಳಲಾಗಿದೆ. ಕ್ರಿ. ಪೂ. 300ರಲ್ಲಿ ಸಿಂಧೂ ನದಿಯ ತಪ್ಪಲು ಪ್ರದೇಶದಲ್ಲಿ ನಾಗರೀಕತೆ ಬಹಳ ಉನ್ನತಾವಸ್ಥೆಯಲ್ಲಿತ್ತೆಂದು

ಮೋಹೊಂಜೋದಾರ, ಹರಪ್ಪಗಳಲ್ಲಿ ಸಿಕ್ಕಿರುವ ಪುರಾತನ ಅವಶೇಷಗಳಿಂದ ತಿಳಿದು ಬರುತ್ತದೆ. ಅಲ್ಲಿ ಸಿಕ್ಕಿರುವ ದನಗಳ ಮುದ್ರೆ ಮತ್ತು ಎಲುಬುಗಳಿಂದ ಅಲ್ಲಿಯ ಆಗಿನ ಕಾಲದ ದನಗಳು ಇಂದಿನ ಉತ್ತರ ಹಿಂದೂಸ್ಥಾನದ ಎತ್ತರವಾದ ಬಿಳಿಯ ಬಣ್ಣದ ಬೆಳೆದ ಇಣಿಯು, ಉದ್ದ ಕೋಡಿನ ದನಗಳನ್ನು ಬಹುಮಟ್ಟಿಗೆ ಹೋಲುತ್ತವೆ ಎಂದು ಹೇಳಬಹುದು.

ಈ ದನಗಳ ಜೋಪಾಸನೆಗಾರರು ಸಿಂಧು ನದಿಯ ಫಲವತ್ತಾದ ಕಣಿವೆಯ ಪ್ರದೇಶಗಳಲ್ಲಿ ಸಿಂಧ ಪ್ರಾಂತ, ಉತ್ತರ ಗುಜರಾತ್, ರಾಜಪುತಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆಸಿದ್ದರು. ಇವರಲ್ಲಿ ಗುಜರಾತದ ರಬಾರಿ ಎಂಬ ಮತ್ತು ಬಾಹ ವಾಡಿಯರು ಅಹಮದ್‌ನಗರದ ಧನಗರರು ಖಾನದೇಶದ ಬಂಜಾರಿಗಳು ಹೆಸರು ವಾಸಿಯಾದವರು.

ಈ ಜಾತಿಯ ದನಗಳನ್ನು ಹೆಚ್ಚಾಗಿ ರಬಾರಿ ಮತ್ತು ಬಾಹವಾಡಿ ಎಂಬ ಬುಡಕಟ್ಟಿನ ಜನ ಸಾಕುವರು. ರಬಾರಿಗಳು ಆಕಳು, ಎಮ್ಮೆ ಮತ್ತು ಒಂಟೆಗಳನ್ನು ಬಾಹವಾಡಿಯವರು ಆಕಳು, ಕುರಿ ಮತ್ತು ಆಡುಗಳ ಹಿಂಡನ್ನು ಸಾಕಿಕೊಂಡಿರುತ್ತಾರೆ. ಈ ರಬಾರಿ ಮತ್ತು ಬಾಹವಾಡಿ ಜನರಿಗೆ ಈ ದನಗಳ ಸಾಕಾಣಿಕೆ ವಂಶಪರಂಪರಾ ಗತವಾಗಿ ಸಾಗಿ ಬಂದ ಕಲೆ. ಹೀಗಾಗಿ ಈ ಜನರು ಉತ್ತಮ ಕಾಂಕ್ರೇಜ ತಳಿಯ ದನಗಳನ್ನು ಪಾಲಿಸುವುದರಲ್ಲಿ ಹೆಸರುವಾಸಿಗಳಾಗಿದ್ದಾರೆ. ಇವರ ಹಿಂಡುಗಳಿಂದ ಬೇರೆ ಪಶುಪಾಲಕರು ಹೆಚ್ಚು ಹೆಚ್ಚು ಹಣ ಕೊಟ್ಟು ಉತ್ತಮ ದನಗಳನ್ನು ಕೊಂಡು ತಂದು ತಮ್ಮ ಹಿಂಡಿನ ಅಭಿವೃದ್ಧಿಗಾಗಿ ಉಪಯೋಗ ಮಾಡಿಕೊಳ್ಳುತ್ತಾರೆ. ಪ್ರತಿಯೊಬ್ಬ ರಬಾರಿ ಮತ್ತು ಬಾಹವಾಡಿಯು 10 ರಿಂದ 15ರವರೆಗೆ ಮತ್ತು 250ರಿಂದ 300ರವರೆಗೆ ದನಗಳನ್ನು ಸಾಕಿಕೊಂಡಿರುತ್ತಾರೆ. 50 ರಿಂದ 100 ಆಕಳುಗಳಿಗೆ ಸಾಮಾನ್ಯವಾಗಿ ಒಂದು ಅಥವಾ ಎರಡು ಹೋರಿಗಳನ್ನು ಬೀಜಕ್ಕಾಗಿ ಹಿಂಡಿನಲ್ಲಿಟ್ಟುಕೊಂಡಿರುತ್ತಾರೆ. ಇವರು ದನಗಳನ್ನು ಕಟ್ಟುವುದಿಲ್ಲ. ಅವು ಬಿಸಿಲು, ಮಳೆ, ಗಾಳಿ, ಚಳಿಯಲ್ಲಿ ಬಯಲಿನಲ್ಲಿಯೇ ತಿರುಗಾಡುತ್ತಾ ಮೇಯುತ್ತಾ ವಾಸವಾಗಿರುತ್ತವೆ. ಇದರಿಂದಾಗಿ ಈ ದನಗಳು ಸ್ವಾಭಾವಿಕವಾಗಿ ಗಟ್ಟಿಯಾದ ಮತ್ತು ಬಲಾಢ್ಯವಾದ ದನಗಳು. ಕಷ್ಟವನ್ನು ಸಹಿಸಬಲ್ಲ ದನಗಳು. ರಾತ್ರಿಯಲ್ಲಿ ಈ ದನಗಳ ಹಿಂಡನ್ನು ಮುಳ್ಳುಬೇಲಿಯಿಂದ ಸುತ್ತುವರಿಯಲ್ಪಟ್ಟ ದಡ್ಡಿಗಳಲ್ಲಿ ಕೂಡಿಹಾಕುತ್ತಾರೆ. ಬೆಳಿಗ್ಗೆ ಮೇಯಲು ಬಿಡುತ್ತಾರೆ. ಈ ದನಗಳು ಮೇ ಮತ್ತು ಜೂನ್ ಈ ಎರಡು ತಿಂಗಳು ಬಿಟ್ಟು ಉಳಿದ ಕಾಲದಲ್ಲಿ ಹುಲ್ಲುಗಾವಲಿನಿಂದ ಸಿಗುವ ಹುಲ್ಲಿನಿಂದಲೇ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವವು. ಬೇಸಗೆಯಲ್ಲಿ ಮಾತ್ರ ಹಸಿರು ಹುಲ್ಲಿನ ಅಭಾವವಿರು

ವುದರಿಂದ ಎರಡು ತಿಂಗಳು ಮಾತ್ರ ಜೋಳದ ದಂಟು ಮತ್ತು ಸಜ್ಜೆಯ ಮೇವನ್ನು ಗಿಡದ ತಪ್ಪಲುಗಳನ್ನು ಕೊಯ್ದು ತಿನ್ನಲು ಕೊಡುವರು. ಕರುಹಾಕಿದ ನಂತರ ಒಂದು ವಾರದವರೆಗೆ ಆಕಳ ಹಾಲನ್ನು ಹಿಂಡದೆ ಪೂರ್ತಿಯಾಗಿ ಎಲ್ಲವನ್ನು ಕರುವಿನ ಸಲುವಾಗಿ ಕುಡಿಯಲು ಬಿಡುವರು. ಒಂದು ವಾರದ ಮೇಲೆ ಕರುವು ಹೆಣ್ಣು ಕರುವಾದಲ್ಲಿ ಆಗ ಸ್ವಲ್ಪ ಹಾಲನ್ನು ಕರೆದುಕೊಂಡು ತಮ್ಮ ಸ್ವಂತ ಉಪಯೋಗಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಹುಟ್ಟಿದ ಕರು ಗಂಡು ಕರುವಾದಲ್ಲಿ ಅದರ ತಾಯಿ ಹಾಲನ್ನು ಹಿಂಡದೆ ಎಲ್ಲ ಹಾಲನ್ನು ಪೂರ್ತಿಯಾಗಿ ಅದಕ್ಕೆ ಕುಡಿಯಲು ಬಿಡುವುದು ಇವರ ಸಾಮಾನ್ಯ ಪದ್ಧತಿ. ಆಕಳುಗಳಿಗೆ ಈ ಹಿಂಡುವ ಕಾಲದಲ್ಲಿ ಯಾವ ಬೇರೆ ಪೌಷ್ಟಿಕ ಆಹಾರ (ಕಾಳಿನ ಮಿಶ್ರಣ) ವನ್ನು ಕೊಡದ ಕಾರಣ ಅವು ಹಾಲು ಹೆಚ್ಚು ಹಿಂಡಲಾರವು. ಮುಂದೆ ಆಕಳು ಹಾಲು ಕೊಡುವುದನ್ನು ನಿಲ್ಲಿಸಿದ ಕಾಲಕ್ಕೆ ಹೆಣ್ಣು ಕರುಗಳನ್ನು ಆಕಳೊಂದಿಗೆ ಇರಲು ಬಿಡುವರು. ಹೋರಿಕರುಗಳು ಹಾಲು ಕುಡಿಯುವುದನ್ನು ನಿಲ್ಲಿಸಿದ ನಂತರ (ಸುಮಾರು 6 ತಿಂಗಳು ಕರುಗಳಾದ ಮೇಲೆ) ಅವುಗಳನ್ನು ಪಾಟಿದರ್ ರೈತಜನರು ಕೊಂಡು ಕೊಂಡು ಬಹಳ ಕಾಳಜಿಯಿಂದ ಆರೈಕೆ ಮಾಡಿ ಚೆನ್ನಾಗಿ ಸಾಕಿ, ಬೆಳೆಸಿ ಮುಂದೆ ಮಾರಿಬಿಡುವರು. ಈ ಹೋರಿ ಕರುಗಳಿಗೆ ಪೌಷ್ಟಿಕವಾದ ಸತ್ವಯುತವಾದ ದ್ವಿದಳ ಧಾನ್ಯಗಳ ಮೇವನ್ನು ಕಾಳು, ನುಚ್ಚು, ಹೊಟ್ಟು, ಕೊಟ್ಟು ಮೇಯಿಸಿ ಚೆನ್ನಾಗಿ ಬೆಳೆಸುತ್ತಾರೆ. ಮಳೆಗಾಲದಲ್ಲಿ ಹುಲ್ಲುಗಾವಲುಗಳಲ್ಲಿ ಹೋರಿಕರುಗಳನ್ನು ಸ್ವೇಚ್ಛೆಯಾಗಿ ಬಿಟ್ಟು ಮೇಯಿಸುತ್ತಾರೆ. ಉತ್ತಮ ತಳಿ ಸಂವರ್ಧಕರಾದಂತಹ ಬಾಹವಾಡಿ ಮತ್ತು ಗಬಾರಿಗಳು ತಮ್ಮ ಹಿಂಡಿನ ತಳಿ ಸಂರ್ಧನೆಗಾಗಿ ಶ್ರೇಷ್ಠ ದರ್ಜೆಯ ಹೋರಿಯನ್ನು ಆರಿಸುವುದರಲ್ಲಿ ಬಹಳ ಶ್ರದ್ಧೆ ಮತ್ತು ಆಸಕ್ತಿಯನ್ನು ವಹಿಸುತ್ತಾರೆ. ಬೀಜಕ್ಕಾಗಿ ನಿರ್ದಿಷ್ಟ ವಯಸ್ಸಿನ ಹೋರಿಗಳನ್ನು ಆಯ್ಕೆ ಮಾಡುತ್ತಾರೆ. ಉತ್ತಮ ಶ್ರೇಷ್ಠ ತಳಿಯ ಹೋರಿಗೆ ಹಾಗೂ ದೊಡ್ಡದಾದ ಮತ್ತು ಹೆಚ್ಚು ಹಾಲು ಹಿಂಡುವ ಆಕಳಿಗೆ ಹುಟ್ಟಿದ 2ನೇ ಅಥವಾ 3ನೇ ಸೂಲದ ಹೋರಿಕರುವನ್ನು ಮುಂದಿನ ಬೀಜದ ಹೋರಿಯನ್ನಾಗಿ ಇರಿಸಿ ಇಟ್ಟುಕೊಳ್ಳುವರು. ಹೀಗೆ ಆರಿಸಿದ ಹೋರಿಕರುವನ್ನು ಅದು ಸಣ್ಣದಾಗಿರುವಾಗಿನಿಂದಲೇ ಚೆನ್ನಾಗಿ ಮೇಯಿಸಿ, ತಿನ್ನಿಸಿ, ಆರೈಕೆಮಾಡಿ ಬೆಳೆಸುತ್ತಾರೆ. ಇಡೀ ವರ್ಷವೆಲ್ಲಾ ಅದಕ್ಕೆ ಪೌಷ್ಟಿಕ ಆಹಾರ (ಕಾಳಿನ ಮಿಶ್ರಣ ಹಿಂಡಿ) ವನ್ನು ಕೊಡುತ್ತಾರೆ. ಈ ಹೋರಿಕರುವು 3 ಅಥವಾ 3½ ವರ್ಷ ವಯಸ್ಸಿನವಾದ ಮೇಲೆ ಅದನ್ನು ಆಕಳುಗಳ ಮೇಲೆ ಸಂವರ್ಧನೆಗಾಗಿ ಉಪಯೋಗ ಮಾಡುವರು. ಬಾಬರಿ ಪಶುಪಾಲಕರು ಒಂದು ಹೋರಿಗೆ ಹುಟ್ಟಿದ ಮಣಕ (ಮಗಳ) ಗಳ ಮೇಲೆ ಅದೇ ಹೋರಿ (ತಂದೆ) ಯನ್ನು ಪುನಃ ಸಂವರ್ಧನೆಗಾಗಿ ಉಪಯೋಗಿಸುವುದು ಅವರ ಧರ್ಮತತ್ವಕ್ಕೆ ವಿರುದ್ಧವಾದ ಪದ್ಧತಿಯೆಂದು ತಿಳಿದಿರುತ್ತಾರೆ.

ಕಾರಣ ಬೀಜದ ಹೋರಿಗಳನ್ನು ಅನೇಕ ವರ್ಷಕ್ಕೆ ಒಂದಾವರ್ತಿ ತೆಗೆದು ಬಿಡುತ್ತಾರೆ. ಈ ಹೋರಿಯ ಜಾಗಕ್ಕೆ ಆರಿಸಿ, ಬೆಳೆಸಿ, ತಯಾರು ಮಾಡಿ ಕಾದಿಟ್ಟ ಹೋರಿಯನ್ನು ಸಂವರ್ಧನೆಗಾಗಿ ಹಿಂಡಿನಲ್ಲಿ ಬಿಡುತ್ತಾರೆ.

ಈ ಜಾತಿಯ ದನಗಳನ್ನು ರಬಾರಿಗಳು, ಬಾಹವಾಡಿಗಳು ಮತ್ತು ಸ್ವಲ್ಪ ಮಟ್ಟಿಗೆ ಕೋಳಿ ಜನರು ಸಾಕಿ ಬೆಳೆಸುತ್ತಾರೆ. ರಬಾರಿಗಳು ಮತ್ತು ಬಾಹವಾಡಿಗಳು ಉತ್ತಮ ಅನುಭವೀ ಪಶುಪಾಲಕರು. ಅವರು ತಮ್ಮ ಹಿಂಡಿನಲ್ಲಿಯ ಹೋರಿಯ ವಿಷಯವಾಗಿ ಅತಿಶಯ ಜಾಗರೂಕರಾಗಿರುತ್ತಾರೆ. ಇವರು ನಿರಕ್ಷರಿಗಳು. ಆದರೂ ಸಹ ತಮ್ಮ ಸೂಕ್ಷ್ಮದೃಷ್ಟಿ ಮತ್ತು ಅಪಾರ ಅನುಭವದಿಂದ ದನಗಳ ಸುಳಿ ಮತ್ತು ಬಾಹ್ಯ ಅಂಗರಚನೆಯ ರೂಪಲಕ್ಷಣಗಳಿಂದ ಕೂಡಿದ ಉತ್ತಮವಾದ ದನಗಳನ್ನು ಆರಿಸಿ, ಅವುಗಳ ರಕ್ತಶುದ್ಧತೆಯನ್ನು ಪೀಳಿಗೆಯ ಉಚ್ಚಮಟ್ಟವನ್ನು ತಿಳಿದುಕೊಳ್ಳುವಷ್ಟು ಸಮರ್ಥರಾಗಿರುತ್ತಾರೆ. ಇದು ಅವರಿಗೆ ವಂಶಪರಂಪರಾಗತವಾಗಿ ಸಾಗಿಬಂದ ಅನುಭವ.

ಅಹಮದಾಬಾದ್, ಕೈರಾ, ಬರೋಚ ಮತ್ತು ಸುರತ್‌ಜಿಲ್ಲೆಗಳಲ್ಲಿಯೂ ಕಾಥೇವಾಡದಲ್ಲಿ ಒಬ್ಬಿಬ್ಬರು ಈ ಜಾತಿಯ ಪಶುಪಾಲಕರು ಪ್ರತಿಯೊಂದು ಹಳ್ಳಿಯಲ್ಲಿ ಇದ್ದೇ ಇರುತ್ತಾರೆ. ದನಗಳನ್ನು ಕಟ್ಟದೆ ಹಾಗೇ ಬಿಟ್ಟಿರುತ್ತಾರೆ ಮತ್ತು ಕ್ವಚಿತ್ತಾಗಿ ಹಿಂಡುತ್ತಾರೆ. ಇದ್ದಲ್ಲಿಯೇ ಮಳೆಗಾಲದಲ್ಲಿ ಮೇಯಿಸುವುದಕ್ಕೆ ಹುಲ್ಲು ಸಿಗುವುದರಿಂದ ಇದ್ದ ಊರುಗಳಲ್ಲಿಯೇ ಇದ್ದು ದನಗಳನ್ನಿಟ್ಟುಕೊಂಡಿರುತ್ತಾರೆ. ಬೇಸಗೆ ಕಾಲ ಪ್ರಾರಂಭವಾದ ಕೂಡಲೇ ತಮ್ಮ ಎಲ್ಲ ಬರಡು ದನಗಳನ್ನು ಬೀಜದ ಹೋರಿಯನ್ನು ಕಟ್ಟಿಕೊಂಡು ಮೇವು ಹುಡುಕುತ್ತಾ ಎಷ್ಟೋ ಮೈಲುಗಳ ದೂರದವರೆಗೆ ಮೇಯಿಸುವುದರಸಲುವಾಗಿ ಹೊಡೆದುಕೊಂಡು ಹೋಗುತ್ತಾರೆ. ಹೊಸದಾಗಿ ಕರುಹಾಕಿದ ಹಾಗೂ ಗಬ್ಬವಾಗಿರುವ ದನಗಳನ್ನು ತಮ್ಮ ಊರುಗಳಲ್ಲಿಯೇ ಬಿಟ್ಟಿರುತ್ತಾರೆ. ರಬಾರಿ ಮತ್ತು ಬಾಹವಾಡ ಜನರು ಮೇವಿನ ಸಂಗ್ರಹವನ್ನು ಮಾಡುವುದಿಲ್ಲ. ಆಕಳುಗಳು ನಸೆಗೆ ಬರುವ ಋತುವಿನಲ್ಲಿ ಬೀಜದ ಹೋರಿಗಳಿಗೆ ಪೌಷ್ಟಿಕ ಸತ್ವಯುತ ಕಾಳಿನ ಮಿಶ್ರಣ ಆಹಾರವನ್ನು ಕೊಡುತ್ತಾರೆ.

ಜೋಪಾಸನೆಗಾರನು ತನ್ನ ಸ್ವಂತ ಉಪಯೋಗಕ್ಕಾಗಿ ಹಾಗೂ ಬೇರೆಯವರ ಹೋರಿಗಳೊಡನೆ ಅದಲುಬದಲು ಮಾಡುವುದಕ್ಕಾಗಿ ಹೋರಿಗಳನ್ನು ಸಾಕಿಕೊಂಡಿರುತ್ತಾರೆ. ಉತ್ತಮ ಗುಣಲಕ್ಷಣಗಳಿಂದ ಕೂಡಿರುವ ಹೋರಿಕರುವನ್ನು ಪ್ರೀತಿಯಿಂದ ಮತ್ತು ವಿಶೇಷ ಜಾಗರೂಕತೆಯಿಂದ ಅದೇ ಕಾಲಕ್ಕೆ ಕರುಹಾಕಿದ ಬೇರೆ 3 ಅಥವಾ 4

ಆಕಳುಗಳ ಹಾಲನ್ನು ಈ ಹೋರಿ ಕರುವಿಗೆ ಕುಡಿಸಿ ಜೋಪಾಸನೆ ಮಾಡುವುದುಂಟು. ಈ ಜೋಪಾಸನೆಗಾರರ ಮುಖ್ಯ ಜೀವನ ಉದ್ಯೋಗವೆಂದರೆ ಉತ್ತಮ ಎತ್ತುಗಳನ್ನು ಮತ್ತು ಹೋರಿಕರುಗಳನ್ನು ಉತ್ಪಾದಿಸಿ ಮಾರಾಟ ಮಾಡುವುದು. 6 ತಿಂಗಳುಗಳ ಹೋರಿಕರುಗಳನ್ನು ಸಾಮಾನ್ಯವಾಗಿ ದನಗಳ ಮಾರಾಟಗಾರನಿಗೆ ಮಾರಿಬಿಡುತ್ತಾರೆ. ಈ ದನಗಳ ವ್ಯಾಪಾರಿಗಳು ಇಂಥಾ ಹೋರಿಗಳನ್ನು ಕೊಂಡುಕೊಂಡು ಕಸಿ ಮಾಡಿಸಿ, ಅವುಗಳಲ್ಲಿ ಸರಿಯಾದವುಗಳನ್ನು ಆರಿಸಿ, ಎತ್ತುಗಳ ಜೋಡಿಗಳನ್ನಾಗಿ ಹೊಂದಿಸಿ ಮುಂದೆ ಮಾರಾಟಕ್ಕಾಗಿ ಜಾತ್ರೆ ಮತ್ತು ಸಂತೆಗಳಿಗೆ ದನದ ಪೇಟೆಗೆ ಹೊಡೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಹೆಣ್ಣು ಕರುಗಳಿಗೆ ವಿಶೇಷವಾಗಿ ಗಿರಾಕಿಗಳಿರುವುದಿಲ್ಲ. ರಾಧನಪೂರದಲ್ಲಿ ದಸರೆ ಹಬ್ಬದಲ್ಲಿ ದನದ ದೊಡ್ಡ ಜಾತ್ರೆ ನಡೆಯುತ್ತದೆ. ಆಗ ಅಲ್ಲಿ ದನಗಳ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಅಹಮದಾಬಾದ್ ಜಿಲ್ಲೆಯ ಭಾರೋಡಿ ಎಂಬಲ್ಲಿ ಮತ್ತು ಸುರತ್‌ದಲ್ಲಿ ಮತ್ತು ಭೋಜ್ ಎಂಬ ಸ್ಥಳಗಳಲ್ಲಿ ಗುಜರಾತ್ ಸರ್ಕಾರವು ಕಾಂಕ್ರೇಜ ದನಗಳ ಕೇಂದ್ರ (ಫಾರ್ಮ್) ಗಳನ್ನು ಸ್ಥಾಪಿಸಿರುತ್ತಾರೆ. ಈ ಕೇಂದ್ರಗಳಲ್ಲಿ ಶುದ್ಧ ಜಾತಿಯ ಕಾಂಕ್ರೇಜ ದನಗಳ ಉತ್ತಮ ಹೋರಿಗಳನ್ನು ಮತ್ತು ಆಕಳುಗಳನ್ನು ಸಾಕಿ, ಬೆಳೆಸಿ, ಹೋರಿಕರುಗಳನ್ನು ರೈತರಿಗೆ ಪೂರೈಸುತ್ತಾರೆ. ಬಾಣಸಕಾಂತಾ ಜಿಲ್ಲೆಯಲ್ಲಿಯೂ ಕಾಂಕ್ರೇಜ ದನಗಳ ಕೇಂದ್ರವನ್ನು ಸ್ಥಾಪಿಸಿರುತ್ತಾರೆ.

ಕಾಂಕ್ರೇಜ ಹಸುಗಳು, ಚೆನ್ನಾಗಿ ಹಾಲು ಕೊಡುತ್ತವೆ. ಸರಕಾರೀ ಫಾರ್ಮ್‌ನಲ್ಲಿಯ ಆಕಳುಗಳು ತಮ್ಮ ಒಂದು ಹಾಲು ಕೊಡುವ ಕಾಲಾವಧಿಯಲ್ಲಿ 1000 ಕಿಲೋಗ್ರಾಮ್‌ದಿಂದ 3000 ಕಿಲೋಗ್ರಾಮ್‌ಗಳವರೆಗೆ ಹಾಲನ್ನು ಕೊಟ್ಟಿರುತ್ತವೆ. ಒಂದು ಕರಾವಿನಲ್ಲಿ 3,635 ಕಿಲೋಗ್ರಾಮ್ ಹಾಲು ಕೊಟ್ಟಿರುವ ದಾಖಲೆ ಇದೆ. ಸರಾಸರಿ 325 ದಿವಸಕ್ಕೆ 1500 ಕಿಲೋಗ್ರಾಮ್ ಹಾಲು ಕೊಡಬಲ್ಲವು. ಹಾಲಿನ ಬೆಣ್ಣೆಯ ಪ್ರಮಾಣ ಶೇಕಡಾ 4 ರಿಂದ 5 ರಷ್ಟು ಇರುತ್ತದೆ. ಕಾಂಕ್ರೇಜ ದನಗಳ ಹಾಲು ಹಿಂಡುವ ಸ್ಪರ್ಧೆಯಲ್ಲಿ ಕೇಂದ್ರ ಗೋಸಂವರ್ಧನ ಪರಿಷತ್ತು ಏರ್ಪಡಿಸಿದ್ದ ಕ್ರಿ. ಶ. 1963–64ರಲ್ಲಿ ಅಹಮದಾಬಾದಿನ ಶ್ರೀ ಮೋಹನ ಭಾಯಿ ಜಯಸಿಂಗಾಭಾಯಿ ಪಟೇಲ, ತನ್ನ ಶಾಮಲಾ ಎಂಬ ಹೆಸರಿನ ಆಕಳಿಂದ 20.2 ಕಿಲೋಗ್ರಾಮ್ ಹಾಲು ಕರೆದು ಪ್ರಥಮ ಬಹುಮಾನ 2000 ರೂಪಾಯಿ ಪಡೆದಿದ್ದಾನೆ.

ಈ ಜಾತಿಯ ಎತ್ತುಗಳು ಭಾರ ಹೊತ್ತು ಎಳೆಯುವುದಕ್ಕೂ ಮತ್ತು ಸಾರಿಗೆ ಕೆಲಸಗಳಿಗೂ ಬಹಳ ಉಪಯುಕ್ತವಾದವುಗಳೆಂದು ಪ್ರಸಿದ್ಧಿ ಪಡೆದಿವೆ. ಬಹಳ ಬಲವಾದ ಮತ್ತು ಚಪಲಚಿತ್ತ ದನಗಳು. ಉತ್ತರ ಮತ್ತು ದಕ್ಷಿಣ ಗುಜರಾತದಲ್ಲಿ ಈ

ದನಗಳನ್ನು ಕೆಲಸಕ್ಕಾಗಿ ಬಹಳವಾಗಿ ಉಪಯೋಗಿಸುತ್ತಾರೆ. ಖಾನದೇಶ ಜಿಲ್ಲೆಯ ರೈತ ಜನರು ಈ ದನಗಳನ್ನು ಬಹಳವಾಗಿ ಪ್ರೀತಿಸುತ್ತಾರೆ ಮತ್ತು ಕೆಲಸಕ್ಕಾಗಿ ಹೆಚ್ಚಾಗಿ ಬಯಸುತ್ತಾರೆ.

ಕಾಂಕ್ರೇಜ ಎತ್ತುಗಳು ಮತ್ತು ಆಕಳುಗಳು ಸಾಮಾನ್ಯವಾಗಿ ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಕಪ್ಪು ಮೇಲಿನ ಬೂದಿಬಣ್ಣದ ದನಗಳು ಹೆಚ್ಚಾಗಿರುವುದುಂಟು.

ಭಾರತದ ಗೋಕುಲದಲ್ಲೆಲ್ಲ ಕಾಂಕ್ರೇಜ ದನಗಳು ಭಾರಿ ಮತ್ತು ಬಲಿಷ್ಠ. ಎತ್ತರವಾದ, ದಪ್ಪವಾದ ದೊಡ್ಡ ಹುಟ್ಟಿನ ದನಗಳು. ಇದಕ್ಕೆ ವಿಸ್ತಾರವಾದ ಎದೆ, ನೀಳ ಮತ್ತು ನೇರ ಬೆನ್ನು, ದಪ್ಪಹಿರಳು, ಎಲುಬುಗಳು ದಪ್ಪನಾಗಿ ಗಟ್ಟಿಯಾಗಿ ಚೆನ್ನಾಗಿ ಬೆಳೆದುಕೊಂಡಿರುತ್ತವೆ. ಪಕ್ಕೆಲುಬುಗಳು ಎದ್ದು ಬೆಳೆದಿರುತ್ತವೆ. ಗಂಗೆದೊಗಲು ಮಧ್ಯಮತರಗತಿಯದಾಗಿರುತ್ತವೆ. ಮಂದವಾದ ಚರ್ಮ, ಕಾಲುಗಳು ಗಟ್ಟಿಮುಟ್ಟಾಗಿ ಉದ್ದವಾಗಿ ಬಲವಾದ ಸ್ನಾಯುಗಳಿಂದ ಕೂಡಿರುತ್ತವೆ. ಗೊರಸಿನ ಮೇಲಿನ ಗಿಣ್ಣು ಕಪ್ಪಾಗಿರುವುದು. ಹಿಂಗಾಲು ಮುಂಗಾಲುಗಳ ಮೇಲೆಯೂ ಈ ಕಲೆಯುಂಟು. ಆದರೆ ಹಸುಗಳಲ್ಲಿ ಪ್ರಧಾನವಾಗಿ ಕಾಣುವುದಿಲ್ಲ. ಗೊರಸುಗಳು ಉದ್ದವಾಗಿರುವುದರಿಂದ ಈ ದನಗಳು ಮರಳು ಭೂಮಿಯ ಕೆಲಸಗಳಿಗೆ ಹೆಚ್ಚು ಉಪಯೋಗ ಬೀಳುತ್ತವೆ.

ಈ ದನಗಳ ತಲೆಯು ಮೇಲಕ್ಕೆ ನಾಗರಹಾವಿನ ಹೆಡೆಯಂತೆ ಎದ್ದು ಕಾಣುತ್ತಿರುತ್ತದೆ. ಮುಖವು ಉದ್ದವಾಗಿ ಮಧ್ಯದಲ್ಲಿ ತಗ್ಗಾಗಿರುತ್ತದೆ. ಹಣೆಯು ಅಗಲವಾಗಿ ತಳಿಗೆಯಂತೆ ತಗ್ಗಾಗಿರುತ್ತದೆ. ಕೋಡುಗಳು ಬಹಳ ದೊಡ್ಡವಾಗಿ ಮುರಗಿ ಮುರಗಿಯಾಗಿ ತಿರುಗಿಕೊಂಡಿರುತ್ತವೆ. ಆಕಳುಗಳ ಕೋಡುಗಳ ಬುಡದಲ್ಲಿ ಹೆಚ್ಚು ಅಂತರವಿದ್ದು ಉದ್ದವಾಗಿ ಮೇಲಕ್ಕೆ ಮಣಿದು ಗೋಳಾಕಾರವಾಗಿರುತ್ತವೆ; ಅರ್ಧ ಚಂದ್ರಾಕಾರವಾಗಿರುತ್ತವೆ. ಕೊಂಬುಗಳು ಕಲಾತ್ಮಕ ಎನ್ನಬಹುದು. ಕಿವಿಗಳು ಉದ್ದವಿದ್ದು ಕೆಳಗೆ ಜೋತುಬಿದ್ದಿರುತ್ತವೆ, ಮುಖದ ಸುತ್ತಲು ಒಂದು ಅಂಗುಲದಷ್ಟು ಅಗಲವಾದ ತಿಳಿಯ ಬಿಳಿಯ ಬಣ್ಣದ ಗೋವು ಕಾಣುವುದು. ಕಣ್ಣುಗಳು ಬಹಳ ತೀಕ್ಷ್ಣವಾಗಿ ಪ್ರಕಾಶಮಾನವಾಗಿರುತ್ತವೆ.

ಈ ದನಗಳು ದೊಡ್ಡ ಆಕಾರದ ಬಿಗಿಯಾದ ಮೈಕಟ್ಟಿನಿಂದ ಕೂಡಿದ ಬಲಶಾಲಿಯಾದ ದನಗಳು. ಈ ದನಗಳು ದುಡಿತಕ್ಕೂ ಹಾಗೂ ಹಾಲು ಹಿಂಡುವುದಕ್ಕೂ ಎರಡು ಕೆಲಸಗಳಿಗೆ ಉಪಯುಕ್ತವಾದ ಪ್ರಾಣಿಗಳು. ಭಾರತದಲ್ಲಿ ಅತಿಶಯ ಪುರಾತನ ಶುದ್ಧಜಾತಿಯ ದನಗಳಲ್ಲಿ ಈ ಕಾಂಕ್ರೇಜ ದನಗಳೂ ಸಹ ಒಂದಾಗಿರುತ್ತವೆ. ಈ

ದನಗಳನ್ನು ಅಮೆರಿಕಾಕ್ಕೆ ಅಲ್ಲಿಯ ಮಾಂಸದ ತಳಿಯ ದನಗಳನ್ನು ಅಭಿವೃದ್ಧಿಗೊಳಿಸುವುದರ ಸಲುವಾಗಿ ತೆಗೆದುಕೊಂಡು ಹೋಗಿದ್ದರು.

ಮಣಕಗಳು ಬಹಳ ತಡವಾಗಿ 4 ಅಥವಾ 5ನೇ ವರ್ಷ ವಯಸ್ಸಿಗೆ ಬೆದೆಗೆ ಬರುತ್ತವೆ. ಆಕಳುಗಳು $2\frac{1}{2}$ ಅಥವಾ 3 ವರ್ಷಕ್ಕೆ ಒಂದು ಕರು ಹಾಕುತ್ತವೆ. ಈ ದನಗಳನ್ನು ಎಷ್ಟೋ ವರ್ಷಗಳಿಂದ ಸಾಕಿ ಸಾಧು ಮಾಡಿದ್ದರೂ ಸಹ ಈ ದನಗಳಲ್ಲಿ ಇನ್ನೂ ಕಾಡು ದನಗಳಲ್ಲಿ ಕಂಡುಬರುವಂತೆ ಬಹಳವಾಗಿ ಬೆದರುವುದು ಮತ್ತು ಹೊಸಬರನ್ನು ಕಂಡಕೂಡಲೇ ಧಾಳಿ ಮಾಡುವುದಕ್ಕೂ ಹಿಂದೆಗೆಯದ ಸ್ವಭಾವವು ಕಂಡುಬರುತ್ತಿದೆ. ಇದು 'ಬಹುದಿವಸ ಗಂಧಿಯು' ಅಂದರೆ 3 ವರ್ಷಗಳಲ್ಲಿ 2 ಸಾರಿ ಈಯುತ್ತದೆ.

7) ಡಾಂಗಿ ತಳಿ ದನಗಳು ಮಹಾರಾಷ್ಟ್ರ ಪ್ರಾಂತದ ಪಶ್ಚಿಮ ಘಟ್ಟದ ಪ್ರದೇಶದಲ್ಲಿ 'ಡಾಂಗಿ' ಜಾತಿಯ ದನಗಳನ್ನು ಸಾಕುತ್ತಾರೆ. ಈ ದನಗಳನ್ನು 'ಧನಗರ್' ಎಂಬ ಜಾತಿಯ ಜನರು ಸಾಕುವರು. 'ಡಾಂಗಿ' ಜಾತಿಯ ದನಗಳು ಬಿಳುಪು ಮತ್ತು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಖಾನದೇಶದಲ್ಲಿಯ ಈ ದನಗಳು ಕಂದೀ ಹಾಗೂ ಬಿಳಿಯ ಬಣ್ಣದಿಂದ ಕೂಡಿರುತ್ತವೆ. ಈ ದನಗಳು ಸೋನ ಖೇಡ ತಾಲ್ಲೋಕಿನಿಂದ ಬರುವುದರಿಂದ ಇವುಗಳಿಗೆ 'ಸೋನಕೇರಿ' ಎಂದು ಕರೆಯುತ್ತಾರೆ. ಹೆಚ್ಚು ಮಳೆ ಬೀಳುವ ಕಾಡು ಪಶ್ಚಿಮ ಘಟ್ಟದಲ್ಲಿ ಈ ದನಗಳನ್ನು ಸಾಕುವುದರಿಂದ ಇವು ಸ್ವಾಭಾವಿಕವಾಗಿ ಬಹಳ ಮಳೆ ಬೀಳುವ ಗುಡ್ಡಗಾಡು ಪ್ರದೇಶಗಳಿಗೆ ಬಹಳ ಉಪಯುಕ್ತವಾದ ಹಾಗೂ ತಕ್ಕ ದನಗಳು.

ಅಹಮದ್ ನಗರ ಜಿಲ್ಲೆಯ ಅಕೋಲ ಸೋನ್‌ಹಾದ್ (ಖಾನ ದೇಶ ಜಿಲ್ಲೆ) ತಾಲ್ಲೋಕು ಪ್ರದೇಶ ಈ ದನಗಳ ತವರು ಮನೆ. ನಾಸಿಕ್, ಠಾಣೆ, ಕುಲಾಬಾ ಜಿಲ್ಲೆಗಳು ಹಾಗೂ ಬನಸ್ವಾಡ್, ಧರ್ಮಪೂರ್, ಜೋಹಾರ್ ಮತ್ತು ಡಾಂಗ ಈ ಪ್ರದೇಶಗಳ ಘಟ್ಟದ ಪ್ರದೇಶಗಳಲ್ಲಿಯೇ ಜೋಪಾಸನೆಗಾರರು ತಮ್ಮ ಈ ದನಗಳೊಂದಿಗೆ ಬಹಳ ಕಾಲದಿಂದ ಸಾಕಿಕೊಂಡು ಬಂದಿದ್ದಾರೆ.

ಡಾಂಗ ಪ್ರದೇಶದ ದನಗಳಾದುದರಿಂದ ಈ ದನಗಳನ್ನು ಸಾಮಾನ್ಯವಾಗಿ 'ಡಾಂಗಿ' ದನಗಳೆಂದು ಕರೆಯುವುದು ವಾಡಿಕೆಯಾಗಿದೆ. ಡಾಂಗಿ ದನಗಳ ಜೋಪಾಸನೆಗಾರರು ವಂಶಪರಂಪರೆಯಾಗಿ ಇದೇ ಉದ್ಯೋಗವನ್ನು ಮಾಡುತ್ತಾ ಬಂದಿದ್ದಾರೆ. ದನಗಳಿಗೆ ಹುಲ್ಲು ಮೇಯಿಸಿ ತನ್ನ ಉದ್ಯೋಗವನ್ನು ಸಾಗಿಸುತ್ತಾ ತನ್ನ ಜೀವನವನ್ನು ಸುತ್ತಾನೆ. ದೀಪಾವಳಿಗೆಯಾದ ಮೇಲೆ (ಅಕ್ಟೋಬರ್ ತಿಂಗಳು) ತನ್ನ ಮನೆ

ಊರನ್ನು ಬಿಟ್ಟು ದನಗಳೊಂದಿಗೆ ಘಟ್ಟದ ಮೇಲೆ ಬಂದು ಘಟ್ಟದ ಮೇಲಿನ ಬೈಲು ಪ್ರದೇಶಗಳಲ್ಲಿ ದನಗಳನ್ನು ಮೇಯಿಸುತ್ತಾ ತಿರುಗಾಡುತ್ತಿರುತ್ತಾನೆ.



ಚಿತ್ರ 8: ಡಾಂಗಿ ಹೋರಿ

ಮಹಾರಾಷ್ಟ್ರ ಪ್ರಾಂತದಲ್ಲಿ ಮಳೆ ಬೀಳುವ ಪ್ರದೇಶಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಹೊಲದ ಕೆಲಸಕ್ಕಾಗಿ ಭೂಮಿಯನ್ನು ಸಾಗುವಳಿ ಮಾಡುವುದಕ್ಕಾಗಿ ಮತ್ತು ಸಾಗಿಗೆ ಕೆಲಸಗಳಿಗಾಗಿ 'ಡಾಂಗಿ' ದನಗಳು ಉಪಯೋಗ ಬೀಳುವಷ್ಟು ಮತ್ತೆ ಬೇರೆ ಯಾವ ಜಾತಿಯ ದನಗಳೂ ಉಪಯೋಗವಾಗುವುದಿಲ್ಲ. ಇವು ಗಿಡ್ಡ ಜಾತಿಯ ದನಗಳು, ಈ ದನಗಳ ಮಾತೃಸ್ಥಾನ ಹೆಚ್ಚು ಮಳೆಬೀಳುವ ಗುಡ್ಡಗಾಡು ಪ್ರದೇಶಗಳಾ

ದುದರಿಂದ ಈ ದನಗಳು ಸ್ವಾಭಾವಿಕವಾಗಿ ಇಂತಹ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಸಹಿಷ್ಣುತೆಯ ವಿಶೇಷ ಗುಣವನ್ನು ಹೊಂದಿರುತ್ತವೆ. ಈ ದನಗಳ ಕಾಲು ಗಿಡ್ಡವಾಗಿದ್ದು ಕಬ್ಬಿಣದಂತೆ ಗಟ್ಟಿಯಾದ ಗೊರಸುಗಳಿಂದ (ಕೊಳಗಗಳಿಂದ) ಕೂಡಿರುವುದರಿಂದ, ಈ ದನಗಳು ಬತ್ತ ಬೆಳೆಯುವ ಭೂಮಿಯಲ್ಲಿ ನೀರಿನಲ್ಲಿ ನಿಂತು ಕೆಲಸ ಮಾಡುವುದರಲ್ಲಿ ಹೆಸರಾದ ದನಗಳು. ಈ ಕೆಲಸದಲ್ಲಿ ಬೇರೆಯಾವ ಜಾತಿಯ ಯಾವ ದನಗಳೂ ಇವುಗಳನ್ನು ಸರಿಗಟ್ಟಲಾರವು. ಬತ್ತದ ಸಾಗುವಳಿಯ ಕೆಲಸಕ್ಕೆ ಒಳ್ಳೇ ಉಪಯೋಗವಾದ ಪ್ರಾಣಿಗಳು.

ಈ ಜಾತಿಯ ದನಗಳ ಮೈಬಣ್ಣ ಕಪ್ಪು ಮತ್ತು ಬಿಳಿಯ ಬಣ್ಣದ ಮಿಶ್ರಣದಿಂದ ಕೂಡಿರುತ್ತದೆ. ಮೈಚರ್ಮವು ನುಣುಪಾಗಿ ಕಪ್ಪಾಗಿರುತ್ತದೆ. ಈ ದನಗಳಲ್ಲಿ ಚರ್ಮಗ್ರಂಥಿಗಳು ಒಂದು ತೆರನಾದ ಎಣ್ಣೆಯಿಂದ ಕೂಡಿದ ಬೆವರಿನ ದ್ರವವನ್ನು ಉತ್ಪಾದಿಸುವುದರಿಂದ ಮಳೆಯ ನೀರು ಮೈಮೇಲೆ ನಿಂತು ಇಂಗದೆ ಜಾರಿ ಬಿದ್ದು ಹೋಗುತ್ತದೆ. ಹೀಗಾಗಿ ಈ ದನಗಳಿಗೆ ಮಳೆಯಿಂದ ರಕ್ಷಣೆ ಒದಗುತ್ತದೆ. ಕಂದು ಹಾಗೂ ಬಿಳಿಯ ಬಣ್ಣದಿಂದ ಕೂಡಿದ ದನಗಳು ಖಾನ ದೇಶದಲ್ಲಿಯ ಖೇಡ ಪ್ರದೇಶಗಳಲ್ಲಿರುತ್ತವೆ. ಈ ದನಗಳನ್ನು ಅಲ್ಲಿಯ ಜನರು 'ಸೋನ ಖೇಡ' ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ತಲೆಯು ಸಣ್ಣದಿದ್ದು, ಹಣೆಯು ಸ್ವಲ್ಪ ಮುಂದಕ್ಕೆ ಬಂದಿರುತ್ತದೆ. ಮುಖವು ಅಗಲವಾಗಿ ದೊಡ್ಡದಾಗಿರುತ್ತದೆ. ಕೋಡುಗಳು ದಪ್ಪವಾಗಿ ಗಿಡ್ಡಾಗಿದ್ದು ಗೋಲಾಕಾರವಾಗಿರುತ್ತವೆ. ಕಿವಿಗಳು ಸಣ್ಣವಾಗಿ ನೆಟ್ಟಗೆ ಮೇಲಕ್ಕೆ ಎದ್ದು ನಿಂತಿರುತ್ತವೆ. ಬಾಗಿರುವುದಿಲ್ಲ. ಕುತ್ತಿಗೆ ಗಿಡ್ಡಾಗಿ ದಪ್ಪನಾಗಿರುತ್ತದೆ. ಹೋರಿಗಳಲ್ಲಿ ಇಣಿಯು ದಪ್ಪನಾಗಿರುತ್ತದೆ. ಕಾಲು ಗಿಡ್ಡಾಗಿ ಗಣಕೆಯಂತೆ ಬಲವಾಗಿ ಗಟ್ಟಿಯಾಗಿರುತ್ತವೆ.

ಈ ಜಾತಿಯ ದನಗಳು ಸ್ವಾಭಾವಿಕವಾಗಿ ಸ್ವಲ್ಪ ಮಂದ ಸ್ವಭಾವದ ದನಗಳು. ಒಳ್ಳೇ ಉತ್ಸುಕತೆಯಿಂದ ಕೆಲಸ ಮಾಡುತ್ತವೆ. ಬಹಳ ಸಮಾಧಾನ ಗುಣದ ದನಗಳು. ಖುರಗಳು (ಕೊಳಗಗಳು) ಬೆಣಚು ಕಲ್ಲಿನಂತೆ ಬಹಳ ಗಟ್ಟಿಯಾಗಿರುತ್ತವೆ. ಇವುಗಳ ಬಣ್ಣ ಕಪ್ಪು. ಬಹಳ ಮಳೆ ಬೀಳುವ ಪ್ರದೇಶಗಳಲ್ಲಿ ಈ ದನಗಳು ಹೆಚ್ಚು ಉಪಯೋಗವಾದ ಪ್ರಾಣಿಗಳು. ಉತ್ತಮ ಮಾದರಿಯ ದನಗಳು ಗಿಡ್ಡಾಗಿದ್ದು ಗಟ್ಟಿಮುಟ್ಟಾಗಿ ಹೆಚ್ಚು ಶಕ್ತಿಸಾಮರ್ಥ್ಯದಿಂದ ಕೂಡಿರುತ್ತವೆ.


ಮೈಕಟ್ಟಿನಲ್ಲಿ ಈ ಡಾಂಗಿ ಆಕಳುಗಳು ಹೈನ ತಳಿಯ ಆಕಳುಗಳಂತೆ ಕಂಡು ಬಂದರೂ ಇವು ಹಾಲು ಕಡಮೆ ಹಿಂಡುವುವು. ಆದರೆ ಈ ಜಾತಿಯ ಆಕಳುಗಳನ್ನು ಹೆಚ್ಚು ಹಾಲು ಕೊಡುವಂತೆ ಉದ್ದೇಶಿಸಿ, ಬೆಳೆಸಲು ಪ್ರಯತ್ನಿಸಿದಲ್ಲಿ ಕೆಲವು ಪೀಳಿಗೆ

ಗಳಾಗುವುದರಲ್ಲಿಯೇ ಇವು ಉತ್ತಮ ಹಾಲು ಕೊಡುವ ದನಗಳಾಗುತ್ತವೆಂದು ಕಂಡು ಬಂದಿದೆ. ಹೆಚ್ಚು ಹಾಲು ಹಿಂಡುವ ಮಾದರಿಯ ದನಗಳು ಈ ಜಾತಿಯಲ್ಲಿ ಸಿಗುತ್ತವೆ.

8) ಸಿಂಧೀ ದನಗಳು. ಕೆಂಪು ಕರಾಚಿ ಅಥವಾ ಸಿಂಧೀ ತಳಿ

ಭಾರತದಲ್ಲಿ ತನ್ನದೇ ವೈಶಿಷ್ಟ್ಯವುಳ್ಳ ಹಾಲಿನ ತಳಿ ದನಗಳೆಂದರೆ ಸಿಂಧಿ ರಾಸು ಎಂದು ಹೇಳಬಹುದು. ಭಾರತದಲ್ಲಿ ಹೈನ ತಳಿ ದನಗಳಲ್ಲಿ ಹೆಸರಾದ ಕೆಂಪು ಕರಾಚಿ ಅಥವಾ ಸಿಂಧೀ ಜಾತಿಯ ಆಕಳುಗಳನ್ನು ದೇಶದ ಅನೇಕ ಭಾಗಗಳಲ್ಲಿ ನೋಡಬಹುದು. ಈ ಸಿಂಧೀ ಜಾತಿಯ ಆಕಳುಗಳು ಬೇರೆ ಆಕಳುಗಳಂತೆ ಹಾಲಿನ ಹಿಂಡುವಿಕೆಯಲ್ಲಿ ಏರಿಳಿತವಿಲ್ಲದೆ ಏಕಪ್ರಕಾರವಾಗಿ ಒಂದು ನಿಯಮಿತ ಪ್ರಮಾಣದಲ್ಲಿ ಹಾಲು ಹಿಂಡುವ ವಿಶೇಷ ಗುಣವನ್ನು ಹೊಂದಿರುತ್ತವೆ. ಸಿಂಧೀ ರಾಸುಗಳಲ್ಲಿ ಕಂಡುಬರುವ ಇನ್ನೊಂದು ವಿಶೇಷ ಗುಣವೆಂದರೆ ಒಂದು ಪ್ರದೇಶದ ವಾಯುಗುಣ, ಆಹಾರ ಸನ್ನಿವೇಶಗಳಿಗೆ ಬಹುಬೇಗನೆ ಹೊಂದಿಕೊಳ್ಳುವ ಗುಣ. ಕ್ವೆಟಾದಂತಹ ಅತಿಶಯ ಶೀತಲ ಪ್ರದೇಶಗಳಲ್ಲಿಯೂ, ಮಧ್ಯ ಪ್ರದೇಶಗಳಲ್ಲಿಯೂ, ಮಧ್ಯಪ್ರಾಂತ ಹಾಗೂ ಉತ್ತರ ಸಿಂಧ್‌ದಂತಹ ಅತಿಶಯ ಉಷ್ಣ ಪ್ರದೇಶಗಳಲ್ಲಿಯೂ ಸಹ ಈ ಜಾತಿಯ ದನವು ಚೆನ್ನಾಗಿ ಹೊಂದಿಕೊಳ್ಳುವುದು. ಸಿಂಧೀ ದನಗಳು ಕಷ್ಟವನ್ನು ಸಹಿಸಬಲ್ಲ ಶಕ್ತಿಯನ್ನು ಪಡೆದಿರುತ್ತವೆ. ಅನೇಕ ರೋಗಗಳನ್ನು ತಡೆಯುವ ರೋಗಪ್ರತಿಬಂಧಕ ಶಕ್ತಿಯನ್ನು ಹೊಂದಿರುತ್ತವೆ. ಸಾಕುವುದಕ್ಕೂ ಬಹಳ ಸುಲಭ. ಆಕಳುಗಳು ಒಳ್ಳೇ ಶಾಂತ, ಸಾಧು, ಸಮಾಧಾನ ಸ್ವಭಾವದ ದನಗಳು. ಯೂರೋಪಿನಲ್ಲಿ ಹಾಲಿನ ತಳಿಯಾವುದು ಎಂದರೆ 'ಇದು' ಎಂದು ಜೆರ್ಸಿ ಆಕಳನ್ನು ತೋರಿಸುವುದುಂಟು. ಅದೇ ಪ್ರಕಾರ ಭಾರತದ ಜೆರ್ಸಿ ಆಕಳು ಎಂದರೆ ಸಿಂಧೀ. ಇದು ಇಷ್ಟು ಸಾರ್ವತ್ರಿಕ ಉಪಯುಕ್ತವಾದ ಪ್ರಾಣಿಯಾದ್ದರಿಂದ ಈ 'ಸಿಂಧೀ' ಹಸುಗಳನ್ನು ಎಲ್ಲ ಭಾಗದ ದೊಡ್ಡ ಪಟ್ಟಣಗಳಲ್ಲಿ ಸಾಕುವುದು ಸರ್ವಸಾಮಾನ್ಯ ಪದ್ಧತಿಯಾಗಿ ಕಂಡುಬಂದಿದೆ. ಬ್ರೆಜಿಲ್, ಕ್ಯೂಬ, ಜಪಾನ್, ಇಂಡೋಚೀನಾ, ಮಾರಿಶಸ್, ಸಿಂಹಳ ದ್ವೀಪ, ಬ್ರಹ್ಮದೇಶ ಮತ್ತು ಮೆಸಪೊಟೋಮಿಯಾ ದೇಶಗಳಲ್ಲಿ ಈ ಜಾತಿಯ ಆಕಳುಗಳು ಒಳ್ಳೇ ಉತ್ತಮ ಹೈನದನಗಳೆಂದು ಪ್ರಸಿದ್ಧವಾಗಿರುತ್ತವೆ.

ಇಂದು ಪಾಕಿಸ್ತಾನದ ಭಾಗವಾದ ಕರಾಚಿಯಿಂದ 30 ಅಥವಾ 40 ಮೈಲುಗಳ ಸುತ್ತಳತೆಯಲ್ಲಿರುವ ಪ್ರದೇಶ ಮತ್ತು ಬಲೂಚಿಸ್ತಾನಕ್ಕೆ ಸೇರಿದ 'ಲಾಸಿಬಿಲ್' ದ ಗುಡ್ಡಗಾಡು ಪ್ರದೇಶಗಳೇ 'ಸಿಂಧೀ' ಜಾತಿಯ ದನಗಳ ಮಾತೃಭೂಮಿ. ಕರಾಚಿಯ ಸುತ್ತಮುತ್ತಲಿನ ಪ್ರದೇಶದಲ್ಲಿಯ ಸಿಂಧೀ ಜಾತಿಯ ದನಗಳಲ್ಲಿ 'ಗೀರ್' ಜಾತಿಯ ದನಗಳ ರಕ್ತಮಿಶ್ರಣವನ್ನು ಕಾಣಬಹುದು. ಆದರೆ ಲಾಸ್‌ಬಿಲಾದ ದನಗಳು ಶುದ್ಧ



ಚಿತ್ರ ೮ : ಸಿಂಧೀ ಹೋರಿ(ಮೇಲ್ಗಡೆ); ಸಿಂಧೀಆಕಳು(ಕೆಳಗಡೆ)

ಸಿಂಧೀ ತಳಿಯ ದನಗಳು. ಸಿಂಧ್ ಪ್ರಾಂತದ ಕೋಹಿಸ್ತಾನ ಈ ಶುದ್ಧ ಸಿಂಧೀ ದನಗಳ ತವರೂರು. ಕೋಹಿಸ್ತಾನ ಎಂದರೆ ಗುಡ್ಡದ ಸೀಮೆ. ಈ ಪ್ರದೇಶ ಸನ್ನಿವೇಶಗಳಿಗೆ ಅನುಗುಣವಾಗಿ ಈ ದನಗಳು ಹೊಂದಿಕೊಂಡು, ಉತ್ತಮವಾದ ಸೊಗಸಾದ ಹೈನತಳಿಯಾಗಿ ಅಭಿವೃದ್ಧಿಗೊಂಡು, ಬೆಳೆದು ಬಂದಿವೆ. ಇವುಗಳಲ್ಲಿ ಈ ಜಾತಿಯ ದನಗಳ ವಿಶಿಷ್ಟ ಗುಣಗಳನ್ನು ಪಡೆದುಕೊಂಡು ಬೆಳೆದು ಬಂದಿರುವ ಶುದ್ಧದಲ್ಲಿ ಶುದ್ಧವಾದ ಪಂಗಡವೆಂದರೆ ಲಾಸಬಿಲ್ ತಳಿಯ ಸಿಂಧೀ ರಾಸು. ಈ ಶುದ್ಧ ಸಿಂಧೀ ತಳಿಯ ದನಗಳು ಹೇರಳವಾಗಿ ಸಿಂಧ್ ಪ್ರಾಂತದ ಪಶ್ಚಿಮ ಭಾಗದಲ್ಲಿ ಸಿಗುತ್ತವೆ. ಈ ಸೀಮೆಯು ಭೌಗೋಲಿಕವಾಗಿ ಪ್ರತ್ಯೇಕವಾದ ಪ್ರದೇಶವಿದ್ದ ಹಾಗಿದೆ. ಅಲ್ಲಿಯ ಮಹಮ್ಮದೀಯ ರೈತರು ಈ ದನಗಳನ್ನು ಬಹಳ ಶ್ರಮವಹಿಸಿ ಜಾಣತನದಿಂದ ಈ ತಳಿಯ ಪರಿಶುದ್ಧತೆಯನ್ನು ಕಾಪಾಡಿಕೊಂಡು ಉಳಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಸಿಂಧ್ ಪ್ರಾಂತದ ಹೈದರಾಬಾದ್ ಜಿಲ್ಲೆಯ ಭಾಗಗಳಲ್ಲಿ ಈ ಜಾತಿಯ ದನಗಳನ್ನು ಸಾಕುವುದು ಮತ್ತು ಬೆಳೆಸುವುದು ತೀವ್ರಗತಿಯಿಂದ ನಡೆದಿದೆ. ಇಲ್ಲಿಯ ಭೂಮಿಯು ಉಸುಕಿನಿಂದ ಕೂಡಿದ್ದಾಗಿದ್ದು, ಜವಳಿನಿಂದ ಕೂಡಿರುವುದರಿಂದ ಹುಲ್ಲು ಅಷ್ಟು ಚೆನ್ನಾಗಿ ಬೆಳೆಯುವುದಿಲ್ಲ. ಕಡಮೆ ಪ್ರಮಾಣವಲ್ಲಿ ಬೆಳೆಯುತ್ತದೆ. ಈ ಪ್ರದೇಶದಲ್ಲಿ ವರ್ಷದಲ್ಲಿ ಬಹಳ ದಿವಸಗಳವರೆಗೆ ಅಂದರೆ 10 ತಿಂಗಳುವರೆಗೆ ಈ ಪ್ರಾಂತದಲ್ಲೆಲ್ಲ ಸ್ವಲ್ಪ ಹುಲ್ಲು ಸಿಗುವುದು ಅಪರೂಪ.

ಕರಾಚಿಯಿಂದ 30 ಅಥವಾ 40 ಮೈಲುಗಳ ಸುತ್ತಳತೆಯಲ್ಲಿರುವ ಗುಡ್ಡಗಾಡು ಮತ್ತು ಹುಲ್ಲುಗಾವಲುಗಳಿಂದ ಕೂಡಿದ ಪ್ರದೇಶದಲ್ಲಿ ಉತ್ತಮ ಸಿಂಧೀ ಜಾತಿಯ ದನಗಳನ್ನು ಸಾಕಿ ಭೆಳೆಸುತ್ತಾರೆ. ವರ್ಷದಲ್ಲಿ ಬಹಳಷ್ಟು ದಿವಸಗಳಲ್ಲಿ ಆಳವಾದ ಭಾವಿಗಳಿಂದ ನೀರನ್ನು ದನಗಳಿಗೆ ಎತ್ತಿ ಕುಡಿಸಬೇಕಾಗುವುದು. ನೀರಿನ ಸೌಕರ್ಯ ಅಷ್ಟು ಸುಲಭವಲ್ಲ. ಈ ದನಗಳನ್ನು ಹೆಚ್ಚಾಗಿ ಮುಸಲ್ಮಾನ ಜನರು ಸಾಕುವರು. ಕೆಲವು ಶ್ರೀಮಂತ ಪಶುಪಾಲಕರು ಮಾತ್ರ 400 ರಿಂದ 500 ಆಕಳುಗಳನ್ನು ಇಟ್ಟುಕೊಂಡಿರುತ್ತಾರೆ. ಇಂಥವರು ತಮ್ಮ ದನಗಳ ಹಿಂಡನ್ನು ಕಾಯಲು ಮತ್ತು ಮೇಯಿಸಲು ಆಳುಗಳನ್ನು ನೇಮಿಸಿಕೊಂಡಿರುತ್ತಾರೆ. ಮಧ್ಯಮ ತರಗತಿಯ ಪಾಲಕರು 40 ಅಥವಾ 50 ದನಗಳನ್ನು ಸಾಕಿಕೊಂಡಿರುತ್ತಾರೆ. ಇಂಥವರ ಸಂಖ್ಯೆಯೇ ಹೆಚ್ಚು. ಬಡವರು 20 ಆಕಳುಗಳು ಅಥವಾ ಅವಕ್ಕೂ ಕಡಮೆ ಸಂಖ್ಯೆಗಳಲ್ಲಿ ದನಗಳನ್ನು ಸಾಕಿಕೊಂಡಿರುತ್ತಾರೆ. ಈ ಎಲ್ಲ ದನಗಳಿಗೆ ಯಾವ ಋತುವಿನಲ್ಲಿಯೂ ಇರಲು ಯಾವ ತರಹದ ಆಶ್ರಯ ಮತ್ತು ಸೌಕರ್ಯವಿರುವುದಿಲ್ಲ. ಈ ದನಗಳ ಹಿಂಡನ್ನು ಕಾಯುವವರು ಮಾತ್ರ ತಮಗೆ ಬೇಕಾದ ಅನುಕೂಲವಾದ ಮತ್ತು ನೀರಿನ ಸೌಕರ್ಯವಿರುವ ಸ್ಥಳಗಳಲ್ಲಿ ಗುಡಿಸಲು ಮತ್ತು ಜೋಪಡಿಗಳಲ್ಲಿ ವಾಸವಾಗಿರುತ್ತಾರೆ. ತಮ್ಮ ವಸತಿಯು

ಸ್ಥಳಗಳಲ್ಲಿಯೇ ಅವರು ಹಾಲನ್ನು ಕರೆಯುತ್ತಾರೆ. ಸಿಂಧೀ ಜಾತಿಯ ಪಶುಪಾಲಕರು ಒಂದುಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗಾಡುತ್ತಿರುತ್ತಾರೆ. ಹಾಲು ಹಿಂಡದ ಬರಡಾದ ದನಗಳನ್ನು ಬಹುದೂರದ ಪ್ರದೇಶದವರೆಗೆ ಮೇಯಲು ಹೊಡೆದುಕೊಂಡು ಹೋಗುತ್ತಾರೆ. ಅಲ್ಲಿಯ ಹುಲ್ಲುಗಾವಲಿನ ಪ್ರದೇಶಗಳಿಗೆ 'ರಾಕ್ಸ್' ಎಂದು ಕರೆಯುತ್ತಾರೆ. ಹುಲ್ಲು ಹೆಚ್ಚಾಗಿ ಬೆಳೆದ ಸ್ಥಳಗಳಲ್ಲಿಯ ಹುಲ್ಲನ್ನು ಕೊಯ್ದು ಒಣಗಿಸಿ ಒಣಹುಲ್ಲನ್ನಾಗಿ ಮಾಡಿ ಬೇಸಗೆಯಲ್ಲಿ ಮೇಯಿಸುವುದರ ಸಲುವಾಗಿ ಕಾದಿಟ್ಟುಕೊಂಡಿರುತ್ತಾರೆ. ಈ ಕರಡು ಹುಲ್ಲುಗಳಲ್ಲಿ 'ಖಿ' ಮತ್ತು 'ಡ್ಯರ್ಸ್' ಎಂಬ ಎರಡು ಜಾತಿಯ ಹುಲ್ಲು ದನಗಳಿಗೆ ಬಹಳ ಸತ್ವಯುತವಾದ ಪೌಷ್ಟಿಕ ಆಹಾರವಾಗಿರುತ್ತದೆ. 'ಪುಠಾರ್' ಮತ್ತು 'ದಾಮೂಫ್' ಎಂಬ ಜಾತಿಯ ಕರಡು ಹುಲ್ಲು ಅಷ್ಟು ಉತ್ತಮವಾದ ಆಹಾರವಲ್ಲವೆಂದು ಹೇಳಲಾಗಿದೆ.

ಸಿಂಧೀ ದನಗಳ ಜೋಪಾಸನೆಗಾರನು ಒಳ್ಳೇ ಜಾಗರೂಕನಿದ್ದು ಹೆಸರಾದ ಉತ್ತಮ ತಳಿಯ ಹೋರಿ ಕೊಡಿಸುವುದಕ್ಕೋಸ್ಕರ ತನ್ನ ಆಕಳನ್ನು ಬಹಳ ದೂರವಾದರೂ ಸಹ ತೆಗೆದುಕೊಂಡು ಹೋಗುತ್ತಾನೆ. ಈ ಜೋಪಾಸನೆಗಾರರರಿಗೆ ಸ್ಥಿರವಾದ ಮನೆಯಿಲ್ಲ. ದನಗಳಿಗೆ ನೀರು ಕುಡಿಸುವುದರ ಸಲುವಾಗಿ ಮತ್ತು ಕಾಳಿನ ಮಿಶ್ರಣವನ್ನು ನೆನೆ ಹಾಕುವುದರ ಸಲುವಾಗಿ ನೀರು ಬೇಕಾದುದರಿಂದ ಅವನು ನೀರು ಸಿಗುವ ಅಥವಾ ನೀರಿನ ಸೌಕರ್ಯವಿರುವ ದೊಡ್ಡ ದೊಡ್ಡ ಊರುಗಳ ಸಮೀಪದಲ್ಲಿ ಹಿಂಡುವ ದನಗಳನ್ನು ಇಟ್ಟುಕೊಂಡಿರುತ್ತಾನೆ. ಕರಾಚಿಯಲ್ಲಿ ಹಾಲಿಗೆ ಬಹಳ ಬೇಡಿಕೆ ಇರುವುದರಿಂದ ಮತ್ತು ಕರಾಚಿಯ ಗಡಿಭಾಗಗಳಲ್ಲಿ ಹುಲ್ಲುಗಾವಲಿನ ಅನುಕೂಲತೆ ಇರುವುದರಿಂದ ಆಕಳು ಹಿಂಡನ್ನು ಕರಾಚಿಯ ಹತ್ತಿರದಲ್ಲಿಟ್ಟು ಸಾಕಿಕೊಂಡಿರುತ್ತಾನೆ. ಆಕಳುಗಳನ್ನು ಹಾಲು ಹಿಂಡುವಾಗ ಅದಕ್ಕೆ ಹತ್ತಿಕಾಳು, ಹಿಂಡಿ, ಚಿನ್ನಿ, ಕಾಳು, ನುಚ್ಚು ಮತ್ತು ತೌಡುಗಳ ಸೇರಿಕೆ ಮತ್ತು ತೌಡು ಎಲ್ಲವನ್ನು ಕೂಡಿಸಿ ನೆನೆಸಿ ತಿನ್ನಲು ಕೊಡುತ್ತಾರೆ. ಹಾಲು ಕರೆದು ಅದನ್ನು ಒಂಟಿ ಅಥವಾ ಹೇಸರಕತ್ತೆಗಳ ಮೇಲೆ ಹೇರಿ ಬೆಳಗ್ಗೆ 6 ಘಂಟೆಯ ಹೊತ್ತಿಗೆ ಕರಾಚಿಗೆ ಮುಟ್ಟಿಸುತ್ತಾರೆ. ಈ ಜೋಪಾಸನೆಗಾರರು ಹೋರಿಗಳನ್ನು ಬಹಳ ಎಚ್ಚರಿಕೆಯಿಂದ ಆರಿಸುತ್ತಾರೆ. ಹೋರಿಕರುಗಳನ್ನು 2 ವರ್ಷದವುಗಳಾದ ಕೂಡಲೇ ಮಾರಿಬಿಡುತ್ತಾರೆ ಅಥವಾ ದೂರದ ಹುಲ್ಲುಗಾವಲುಗಳಿಗೆ ಕಳುಹಿಸುತ್ತಾರೆ. ಅಲ್ಲಿಯ ಜೋಪಾಸನೆಗಾರರು ದನಗಳನ್ನು ಕಟ್ಟಿ ಮೇಯಿಸುವುದು ಬಹಳ ಕಡಮೆ ಎಂದು ಹೇಳಬಹುದು. ಅವರು ಹೆಚ್ಚಾಗಿ ಹಿಂಡುವ ಆಕಳುಗಳಿಗೆ ಅವು ಹಾಲು ಹಿಂಡುವ ದಿವಸಗಳಲ್ಲಿ ತೋಯಿಸಿ ಇಟ್ಟ ಕಲಸಿನ ಆಹಾರವನ್ನು ತಿನ್ನಿಸುತ್ತಾರೆ. ಇವನಿಗೆ ಇರುವ ಆಸ್ತಿ ಎಂದರೆ ತನ್ನ ಮಕ್ಕಳಂತೆ ಪ್ರೀತಿಯಿಂದ ಸಾಕಿಕೊಂಡಿರುವ ಒಂದು ಆಕಳುಗಳ ಹಿಂಡು. ದನಗಳಿಗೆ ತಿನ್ನಲುಬೇಕಾದ ಆಹಾರದ ಕಲಸನ್ನು

ತಯಾರಿಸುವುದಕ್ಕಾಗಿ ಒಂದು ಪೀಪಾಯಿ; ಮೇವು ತಿನ್ನಲು ಹಾಕುವುದಕ್ಕೋಸ್ಕರ ಬೇಕಾಗುವ ಕೆಲವು ಮರದ ಪೆಟ್ಟಿಗೆಗಳು; ಹಾಲು ತುಂಬಿದ ಕ್ಯಾನುಗಳನ್ನು ಹೊತ್ತುಕೊಂಡು ಪಟ್ಟಣಗಳಿಗೆ ಹೋಗುವುದಕ್ಕಾಗಿ ಒಂದು ಹೇಸರಕತ್ತೆ ಅಥವಾ ಸಾಧ್ಯವಾದಲ್ಲಿ ಒಂದು ಗಾಡಿ ಮತ್ತು ಕೆಲವು ಹಿತ್ತಾಳೆ ಪಾತ್ರೆಗಳು, ಇಷ್ಟೇ ಇವರ ಬಂಡವಾಳ. ಅವನು ತನ್ನ ಹಾಲು ಮಾರಿ ಬಂದ ಹಣದಿಂದ ಹಿಂಡಿ, ಬೇಳೆ ಕಾಳುಗಳ ನುಚ್ಚು, ನುರುಗ ಮತ್ತು ತವಡು ಮುಂತಾದವುಗಳನ್ನು ಕೊಂಡು ತರುತ್ತಾನೆ. ಈ ನುಚ್ಚು, ಕಾಳು, ಹಿಂಡಿ ಮತ್ತು ತವಡನ್ನು ಒಂದು ಪೀಪಾಯಿಯಲ್ಲಿ ನೀರು ಹಾಕಿ ಅದರಲ್ಲಿ ನೆನೆಹಾಕುತ್ತಾನೆ. ಹೀಗೆ ಅದನ್ನು ಸಾಯಂಕಾಲ ನೆನೆಹಾಕಿ ಮಾರನೆ ದಿವಸ ಬೆಳಿಗ್ಗೆ ಮತ್ತು ಬೆಳಗ್ಗೆ ನೆನೆಹಾಕಿದ್ದನ್ನು ಸಾಯಂಕಾಲಕ್ಕೆ ಹಾಲು ಕರೆಯುವುದಕ್ಕಿಂತ ಮೊದಲು ಒಂದು ಕಬ್ಬಿಣದ ಬುಟ್ಟಿ ಅಥವಾ ಬಾಂಡಲಿಯಲ್ಲಿ ತುಂಬಿ ಈ ತೋಯಿಸಿದ ಪೌಷ್ಟಿಕ ಅಹಾರ (ಕಲಸ) ವನ್ನು ಹಿಂಡುವ ದನಗಳಿಗೆ ತಿನ್ನಲು ಕೊಡುತ್ತಾನೆ. ಈ ತೋಯಿಸಿದ ಪೌಷ್ಟಿಕ ಆಹಾರದ ಕಲಸೇ ಅವುಗಳಿಗೆ ಮುಖ್ಯವಾದ ಆಹಾರ. ಬೇಸಗೆಯಲ್ಲಿ ಬಿಸಿಲು ಮತ್ತು ಬಿಸಿಯಾದ ಗಾಳಿಯ ಧೂಳಿನಿಂದ ಮತ್ತು ಚಳಿಗಾಲದಲ್ಲಿ ಅತಿಶಯವಾದ ಹಿಮಗಾಳಿಯಿಂದ ರಕ್ಷಿಸಿಕೊಳ್ಳುವುದಕ್ಕೋಸ್ಕರ ಆಕಳುಗಳನ್ನು ಹತ್ತಿರವಿರುವ ಬೆಟ್ಟದ ತಪ್ಪಲು, ದರಿಗಳಲ್ಲಿ ಅಥವಾ ಕಂದಕಗಳಲ್ಲಿ ಇಟ್ಟಿರುತ್ತಾರೆ. ಈ ಸ್ಥಳದಲ್ಲಿಯೇ ಹಾಲು ಹಿಂಡಿಕೊಳ್ಳುವಾಗ ಅವುಗಳಿಗೆ ಬೆಳಗ್ಗೆ ಮತ್ತು ಸಾಯಂಕಾಲಕ್ಕೆ ಈ ತೋಯಿಸಿಟ್ಟ ಕಾಳಿನ ಮಿಶ್ರಣವನ್ನು ಅವುಗಳ ಮುಂದೆ ತಿನ್ನಲು ಕಬ್ಬಿಣದ ಬುಟ್ಟಿ ಅಥವಾ ಬಾಂಡಲಿಯಲ್ಲಿಟ್ಟು, ಹಾಲು ಹಿಂಡಿಕೊಳ್ಳುತ್ತಾರೆ. ಬೇರೆ ಪಶುಪಾಲಕರಂತೆ ಸಿಂಧೀ ಜೋಪಾಸನೆಗಾರನೂ ಸಹ ಉತ್ತಮ ಹೈನ ತಳಿಯ ದನಗಳನ್ನು ಆರಿಸುವುದರಲ್ಲಿ ಅವುಗಳ ಮುಖ ಲಕ್ಷಣ ಸಾಮುದ್ರಿಕ, ದೇಹರಚನೆ ಮತ್ತು ಸುಳಿಗಳನ್ನು ಚೆನ್ನಾಗಿ ಪರಿಶೀಲಿಸಿ ಆಯ್ಕೆ ಮಾಡುತ್ತಾನೆ.

ಸಿಂಧೀ ತಳಿಯ ದನಗಳ ಮುಖ್ಯ ಬಣ್ಣ ಅಚ್ಚ ಕಪ್ಪು ಮೂಡಿದ ಕೆಂಪು ಅಥವಾ ಮಿಶ್ರ ಹಳದಿಬಣ್ಣದಿಂದ ಹಿಡಿದು ಕಪ್ಪನೆಯ ಕಪಿಲ ವರ್ಣದವರೆಗೆ ಇರುವುದೂ ಉಂಟು. ಮುಖದ ಮೇಲೆ ಬಿಳಿಯ ಮಚ್ಚೆ ಅಥವಾ ಚುಕ್ಕೆ ಮತ್ತು ಗಂಗೆದೊಗಲಿನ ಮೇಲೆ ಒಂದು ಬಿಳಿಯ ಭಾಗ ಕಂಡುಬರುವುದು. ಕಂದು ಬಣ್ಣಗಳಲ್ಲಿಯೂ, ಮಸುಕಾದ ಹಳದಿ ಬಣ್ಣದಲ್ಲಿಯೂ ಉತ್ತಮ ದರ್ಜೆಯ ಸಿಂಧೀ ಆಕಳುಗಳನ್ನು ಕಾಣಬಹುದು. ಈ ಆಕಳುಗಳಲ್ಲಿ ಕಪ್ಪು ಅಥವಾ ಬಿಳಿಯ ಬಣ್ಣದವೂ ಸಹ ಇರುವುದುಂಟು. ನಾಲ್ಕು ಕಾಲುಗಳ ಗೊರಸಿನ ಮೇಲಿನ ಭಾಗ ಮತ್ತು ಮುಖದ ಸುತ್ತಲೂ ನಸುಗೆಂಪು ಬಣ್ಣದ ಛಾಯೆಯನ್ನು ಕಾಣಬಹುದು. ಕಣ್ಣಿನ ಸುತ್ತಲೂ ಕಪ್ಪು ಬಣ್ಣದ ಗೋಲಾಕಾರದ ಮಚ್ಚೆ ಇರುತ್ತದೆ.

ಸಿಂಧೀ ದನಗಳು ಆಕಾರದಲ್ಲಿ ಅಷ್ಟು ದೊಡ್ಡವೂ ಅಲ್ಲದ ಮತ್ತು ಅತಿ ಸಣ್ಣವೂ ಅಲ್ಲದ ಮಧ್ಯಮ ಆಕಾರದ ದನಗಳು. ಮೈಕಟ್ಟು ಚೌಕಾಕಾರವಾಗಿ ಕಾಣುತ್ತದೆ. ಅಂದರೆ ಮುಂಭಾಗಕ್ಕಿಂತ ಹಿಂಭಾಗವು ಅಗಲವಾಗಿ, ಹೊಟ್ಟೆ ಜೋತಾಡುತ್ತಿರುತ್ತದೆ. ಬೆಣೆ ಆಕಾರದಂತೆ ಕಾಣುತ್ತದೆ. ಈ ದನಗಳ ಎದ್ದುಕಾಣುವ ಸಣ್ಣ ತಲೆಯು ನೋಡಲು ಸುಂದರವಾಗಿ ಕಾಣುವುದು, ಹಣೆಯು ಸ್ವಲ್ಪ ಅಗಲವಾಗಿದ್ದು ಎದ್ದು ಕಾಣುತ್ತಿರುತ್ತದೆ. ಮುಖವು ಅಗಲವಾಗಿಯೂ, ಮೂಗಿನ ಹೊಳ್ಳೆಗಳು ದೊಡ್ಡವಾಗಿಯೂ ಇರುತ್ತವೆ, ಕಣ್ಣು ಕಾಂತಿಯಿಂದ ಕೂಡಿದ್ದು ಸ್ವಲ್ಪ ದೊಡ್ಡದಾಗಿದ್ದಂತೆ ಕಾಣುತ್ತವೆ. ಕೋಡುಗಳು ಕಿರಿದಾಗಿದ್ದು ಹೊರಭಾಗಕ್ಕೂ ಮೇಲಕ್ಕೆ ಎದ್ದು ಕ್ರಮೇಣ ಒಳಭಾಗಕ್ಕೆ ಬಾಗಿಕೊಂಡಿರುತ್ತವೆ. ಈ ದನಗಳ ಬೆನ್ನು ಸರಳವಾಗಿಯೂ, ಹೊಟ್ಟೆಯು ಸ್ಥೂಲವಾಗಿಯೂ, ದೊಡ್ಡದಾಗಿಯೂ ಇದ್ದು ಜೋತಾಡುತ್ತಿರುತ್ತದೆ. ಗಂಗೆದೊಗಲು ಮತ್ತು ತೋಬರಿ ಉದ್ದವಾಗಿ ಜೋತಾಡುತ್ತಿರುತ್ತವೆ. ಹೋರಿಗಳಲ್ಲಿ ಇಣಿಯು ದೊಡ್ಡದಾಗಿ ಒಂದು ಮಗ್ಗುಲಿಗೆ ಸ್ವಲ್ಪ ವಾಲಿಕೊಂಡಿರುವಂತೆ ಕಾಣುತ್ತದೆ. ಕಿವಿಗಳು ಸ್ವಲ್ಪ ಉದ್ದವಾಗಿ ಕೆಳಗಡೆ ನೇತುಬಿದ್ದಿರುತ್ತವೆ. ಕೆಚ್ಚಲು ದೊಡ್ಡದಾಗಿ, ಅಗಲವಾಗಿ, ಕೆಳಗೆ ಜೋತಾಡುತ್ತಿರುತ್ತದೆ. ಹಿಂಭಾಗಕ್ಕಿಂತ ಮುಂಭಾಗವು ಸಣ್ಣದಾಗಿರುತ್ತದೆ. ಕಾಲುಗಳು ಗಿಡ್ಡವಾಗಿ ಸ್ನಾಯುಗಳಿಂದ ಕೂಡಿರುತ್ತವೆ. ಹಾಲಿನ ನರಗಳು ಅಂಕುಡೊಂಕಾಗಿ ಎದ್ದು ಕಾಣುತ್ತಿರುತ್ತವೆ. ಮೊಲೆಗಳು ಉದ್ದವಾಗಿದ್ದು ಚೂಪಾಗಿರುತ್ತವೆ; ಮೊಲೆಗಳ ಮೇಲೆ ನಯವಾದ ಕೂದಲುಗಳಿರುತ್ತವೆ.

ಸಿಂಧೀ ದನಗಳು ಬಹಳ ಸಾಧುವಾದ ಮತ್ತು ಸಮಾಧಾನಚಿತ್ತದ ಪ್ರಾಣಿಗಳು. ಎಲ್ಲಿ ಹೋದರೂ ಆ ಸ್ಥಳಗಳಿಗೆ ಹೊಂದಿಕೊಂಡು ಹೋಗುವ ಒಂದು ವಿಶಿಷ್ಟಗುಣವನ್ನು ಪಡೆದುಕೊಂಡಿರುತ್ತವೆ. ಹಾಲಿನ ಉತ್ಪಾದನೆಯಲ್ಲಿ ಬಹಳ ಹೆಚ್ಚು ಕಡಮೆ ಇಲ್ಲದಂತೆ ಒಂದೇ ಸಮನಾಗಿ ಹಿಂಡುತ್ತವೆ. ಇವು ಉತ್ತಮ ಹೈನ ದನಗಳೆಂದೂ ಹೆಸರು ಪಡೆದಿರುತ್ತವೆ.

ಸಿಂಧೀ ದನಗಳು ಒಳ್ಳೇ ಮಿತವ್ಯಯದ ಪ್ರಾಣಿಗಳು. ಸಾಕಲು ಖರ್ಚು ಕಡಮೆ-ಹಾಲಿನ ಉತ್ಪಾದನೆ ಹೆಚ್ಚು. ಆಕಳುಗಳು ತಿನ್ನುವ ಪ್ರಮಾಣ ಕಡಮೆ. 300 ದಿವಸಗಳಲ್ಲಿ 6000 ಕಿಲೋಗ್ರಾಮ್‌ವರೆಗೆ ಹಾಲು ಕೊಡುತ್ತವೆ. ಹಾಲಿನಲ್ಲಿಯ ಬೆಣ್ಣೆಯ ಪ್ರಮಾಣ 4.6 ರಿಂದ 6.4 ರವರೆಗೂ ಇರುತ್ತದೆ. ಸರಾಸರಿ ಒಂದು ಆಕಳು ಒಂದು ಕರಾವಿನ ಕಾಲದಲ್ಲಿ 1500 ಕಿಲೋಗ್ರಾಮ್ ಹಾಲು ಕೊಡುವುದು. ಇಂದು ದೇಶದ ಎಲ್ಲ ಭಾಗಗಳಲ್ಲಿ ಈ ದನಗಳನ್ನು ಕಾಣಬಹುದು, ಎಲ್ಲ ಮಿಲಿಟರಿ ಫಾರ್ಮು


ಮತ್ತು ಬೇರೆ ಸರಕಾರಿ ಫಾರ್ಮ್‌ಗಳಲ್ಲಿ ಈ ದನಗಳನ್ನು ಹೆಚ್ಚಾಗಿ ಸಾಕುವುದು ಕಂಡು ಬಂದಿದೆ.

ಎತ್ತುಗಳು ಕೆಲಸಕ್ಕೆ ಅಷ್ಟು ಉಪಯುಕ್ತವಲ್ಲ. ಆಕಳುಗಳಲ್ಲಿ ಕೆಚ್ಚಲು ಬಹಳ ದೊಡ್ಡದಾಗಿ ನೆಲದವರೆಗೆ ಜೋತಾಡುತ್ತಿರುತ್ತದೆ. ನೋಡಲು ಅಂದವಾಗಿ ಕಾಣು ವುದಿಲ್ಲ. ಮೊಲೆಗಳು ಉದ್ದವಾಗಿದ್ದು ಒಂದಕ್ಕೊಂದು ಬಹಳ ಹತ್ತಿರವಿದ್ದು ಹೆಣಿಗೆ ಯಂತೆ ಅಡಕವಾಗಿರುತ್ತವೆ. ಕೆಚ್ಚಲು ರೋಗಗಳಿಗೆ ಗುರಿಯಾಗುವ ಸಂಭವವುಂಟು.

9) ಹರಿಯಾನ ದನಗಳು :— ಪಂಜಾಬ್ ರಾಜ್ಯದ ರೋಹಟಕ್, ಹಿಸ್ಸಾರ, ಗುರಗಾಂವ್ ಮತ್ತು ಕರ್ನಾಲ್ ಜಿಲ್ಲೆ ಹಾಗೂ ದೆಹಲಿ ಪ್ರದೇಶಗಳೇ ಈ ಹರಿಯಾನ ಜಾತಿಯ ದನಗಳ ಮಾತೃಸ್ಥಾನ. ಈ ದನದ ತಳಿಯನ್ನು ಜೋಧಪುರ, ಜೈಪುರ, ನಾಭಿ, ಅಲ್ವಾರ, ಭರತಪುರ ಪ್ರಾಂತಗಳಲ್ಲಿ ಹೆಚ್ಚಾಗಿ ಸಾಕುತ್ತಾರೆ. ಹರಿಯಾನ ಎತ್ತು ಮತ್ತು ಹೋರಿಗಳು ಹೊಲಮನೆಯ ಕೆಲಸಗಳಿಗೂ ಭಾರ ಎಳೆಯುವುದಕ್ಕೂ ಉತ್ತಮ ದನಗಳು. ಆಕಳುಗಳು ಹಾಲು ಹೆಚ್ಚು ಹಿಂಡುತ್ತವಾದ್ದರಿಂದ ಹರಿಯಾನಾ ಆಕಳುಗಳನ್ನು ಕಲ್ಕತ್ತಾ, ದೆಹಲಿ ಮೊದ ಲಾದ ದೊಡ್ಡ ನಗರಗಳಲ್ಲಿ ಹಾಲಿನ ಪೂರೈಕೆಗಾಗಿ, ದೊಡ್ಡ ಸಂಖ್ಯೆಯಲ್ಲಿ ತೆಗೆದು ಕೊಂಡು ಹೋಗಿ ಗವಳಿ ಜನರು ಸಾಕುತ್ತಾರೆ. ಕರಾವಿನ ಒಂದು ಅವಧಿಯಲ್ಲಿ ಒಂದು ಹರಿಯಾನ ಆಕಳು ಸರಾಸರಿ 4213 ಕಿಲೋಗ್ರಾಮ್ ಹಾಲು ಕೊಡುವುದು ಕಂಡುಬಂದಿದೆ. ಸರಾಸರಿ 1500 ಕಿಲೋಗ್ರಾಮ್ ಹಾಲು ಕೊಡುತ್ತದೆಂದು ಧಾರಾಳ ವಾಗಿ ಹೇಳಬಹುದು. ಹಾಲಿನಲ್ಲಿ ಜಿಡ್ಡಿನ ಪ್ರಮಾಣ ಶೇಕಡಾ 4.4 ರಿಂದ 5.3 ರವರೆಗೆ ಇರುತ್ತವೆ.

ರಾಜಾಸ್ತಾನದಲ್ಲಿಯೂ ಹರಿಯಾನ ಜಾತಿಯ ಆಕಳುಗಳು ಕಂಡುಬರುತ್ತವೆ. ಕರಾವಳಿ ಪರ್ವತಶ್ರೇಣಿ ರಾಜಾಸ್ಥಾನದಲ್ಲಿ ಪೂರ್ವಪಶ್ಚಿಮವಾಗಿ ಹರಡಿದೆ. ಸುಮಾರು 300 ಮೈಲಿ ಉದ್ದದ ಈ ಬೆಟ್ಟದ ಶ್ರೇಣಿ ಕೆಲವು ಕಡೆ ಆರು ಮೈಲಿ ಅಗಲವಾಗಿದೆ. ಅದು ಕೆಲವು ಕಡೆ 60 ಮೈಲಿ ಅಗಲವಾಗಿದೆ. ಒಂದು ಸಾವಿರದಿಂದ ಮೂರು ಸಾವಿರ ಅಡಿ ಎತ್ತರವಿರುವ ಈ ಬೆಟ್ಟವು ತೆಂಕಣ, ಪಡುವಣ ತುದಿಯ ಭಾಗ ದಲ್ಲಿ 5650 ಅಡಿ ಎತ್ತರವಾಗಿದೆ. ಇದೇ 'ಅಬು.' ಈ ಅಬುವಿನ ಆಕಡೆ, ಈಕಡೆ ಸರಸ್ವತಿ, ಬನಾಸ್ ಮುಂತಾದ ನದಿಗಳು ಹರಿಯುತ್ತವೆ. ಕರಾವಳಿಯ ಪಶ್ಚಿಮದ ಕಡೆ ಹಳ್ಳಕೊಳ್ಳಗಳ ನೀರು ಕೂಡಿ ಲೂಣಿ ನದಿಯು ದೊಡ್ಡದಾಗುತ್ತದೆ. ಈ ಪ್ರದೇಶಗಳು ವಿಶಾಲವಾದ ಹುಲ್ಲುಗಾವಲುಗಳಿಂದ ಕೂಡಿವೆ. ರಾಜಾಸ್ಥಾನದ ಹುಲ್ಲು

ಗಾವಳಿಗಳಲ್ಲಿ ಬೆಳೆಯುವ ಸೆವನ್ ಎಂಬ ಜಾತಿಯ ಹುಲ್ಲು ಬಹಳ ಉತ್ತಮವಾದ, ರಸವತ್ತಾದ, ಸತ್ವಯುತವಾದ ಶ್ರೇಷ್ಠ ತರಗತಿಯ ಹುಲ್ಲು. ಇದು ದನಗಾರರಿಗೆ ಒಂದು ವರಪ್ರದಾನವಾಗಿದೆ. ರಾಜಾಸ್ತಾನದಲ್ಲಿ ಜಯಪುರ, ಸಿಕಾರ್, ಜೂನ್‌ಜೂನ್, ಸಾವಾಯಿ, ಮಾಧೋಪುರ, ಟಾನಕ್ ಪ್ರದೇಶದ ಮತ್ತು ಚೂರು, ಬಿಕನೇರ್, ಗಂಗಾ ನಗರ, ಈ ಜಿಲ್ಲೆಗಳಲ್ಲಿ ಉತ್ತಮ ಹರಿಯಾನ ತಳಿಯ ದನಗಳನ್ನು ಸಾಕಿ ಬೆಳೆಸುತ್ತಾರೆ. ಸಿಕಾರ್ ಮತ್ತು ಜೂನ್‌ಜೂನ್ ಜಿಲ್ಲೆಗಳಲ್ಲಿಯ ಹರಿಯಾನ ಜಾತಿಯ ದನಗಳು ಪಂಜಾಬ



ಚಿತ್ರ 10: ಹರಿಯಾನ ಆಕಳು

ದಲ್ಲಿ ಸಿಗುವ ಹರಿಯಾನ ದನಗಳಿಗಿಂತ ಉತ್ತಮವಾದ ದನಗಳು ಎಂದು ಹೇಳಲಾಗಿದೆ. ಈ ದನಗಳನ್ನು ಪಂಜಾಬದಲ್ಲಿಯ ಜಮೀನುದಾರರು ತಮ್ಮಲ್ಲಿಗೆ ತೆಗೆದುಕೊಂಡು ಹೋಗಿ ಪಂಜಾಬದ ದನಗಳೆಂದು ಹೇಳಿ ಮಾರಾಟಮಾಡುತ್ತಾರೆ. ಇಲ್ಲಿಂದ ಈ ಹರಿಯಾನ ಜಾತಿಯ ದನಗಳು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಲ ಮತ್ತು ಅಸ್ಸಾಮಗಳವರೆಗೂ ಮಾರಾಟವಾಗುತ್ತವೆ. ಹೆಚ್ಚಾದ ಹಾಲನ್ನು ತುಪ್ಪವನ್ನಾಗಿ ಮಾಡಿ ಉಪಯೋಗಿಸುತ್ತಾರೆ.

ಹರಿಯಾನ ದನಗಳ ಬಣ್ಣ ಬಿಳಿಯದು ಅಥವಾ ತಿಳಿಯಾದ ಕಪ್ಪು ಬೂದಿ ಬಣ್ಣದಿಂದ ಕೂಡಿರುತ್ತದೆ. ಹರಿಯಾನ ರಾಸುಗಳು ಚೆನ್ನಾಗಿ ಬೆಳೆದು ನೋಡುವುದಕ್ಕೆ ಗಂಭೀರವಾಗಿ ಅಂದವಾಗಿ ಕಾಣುತ್ತವೆ. ಪಂಜಾಬ ಸರಕಾರದವರು ತಮ್ಮ ಕ್ಷೇತ್ರದಲ್ಲಿ ಹರಿಯಾನ ದನಗಳ ಹಿಂಡುಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಾಕಿರುತ್ತಾರೆ.

ಹೋರಿಗಳಲ್ಲಿ ತಲೆ, ಕುತ್ತಿಗೆ, ಇಣೆ ಮತ್ತು ಚಪ್ಪೆಗಳು ಹೆಚ್ಚು ಕಪ್ಪುಬಣ್ಣದಿಂದ ಕೂಡಿರುತ್ತವೆ. ಮುಖವು ಉದ್ದವಾಗಿ, ಸಣ್ಣದಾಗಿರುತ್ತದೆ. ಹಣೆಯು ಚಪ್ಪಟೆಯಾಗಿರುತ್ತದೆ. ತಲೆಯ ಮೇಲೆ ಎರಡು ಕೊಂಬುಗಳ ಮಧ್ಯೆ ಒಂದು ನಿಂಬೆ ಹಣ್ಣಿನಷ್ಟು ಆಕಾರದ ಉಬ್ಬಿದ ಗುಬಟೆಯು ಗಂಟಿನಾಕಾರದಂತೆ ಎದ್ದು ಕಾಣುತ್ತಿರುತ್ತದೆ. ಕೋಡುಗಳು ಗಿಡ್ಡಾಗಿ ತುದಿಯಲ್ಲಿ ಮೊಂಡಾಗಿ ಗೂಟದಂತೆ ಕಾಣುತ್ತದೆ. ಕುತ್ತಿಗೆ ಸಣ್ಣದಾಗಿ ದಪ್ಪನಾಗಿರುತ್ತದೆ.


ಕಿವಿಗಳು ಸಣ್ಣದಾಗಿರುತ್ತವೆ. ನೆಟ್ಟಗೆ ಮೇಲಕ್ಕೆ ಎದ್ದು ನಿಂತಿರುತ್ತವೆ. ಮೈಕಟ್ಟು ಬಿಗಿಯಾಗಿ ಚರ್ಮವು ಮೈಗೆ ಹತ್ತಿರುತ್ತದೆ. ಮೈಮೇಲಿನ ಕೂದಲುಗಳು ನಯವಾಗಿ ರೇಷ್ಮೆಯಂತೆ ಇರುತ್ತವೆ.

ತೋಬರಿ ಮತ್ತು ಗಂಗೆದೊಗಲು ಸಣ್ಣದಾಗಿ ಬಿಗಿಯಾಗಿರುತ್ತವೆ. ಕೆಚ್ಚಲು ಸಾಧಾರಣವಾಗಿಯೂ ಕಾಲುಗಳು ದಪ್ಪವಾಗಿ ಗಿಡ್ಡಾಗಿ ಬಲವಾದ ಸ್ನಾಯುಗಳಿಂದ ಕೂಡಿರುತ್ತವೆ. ಬಾಲವುಉದ್ದವಾಗಿ ನೆಲಕ್ಕೆ ಮುಟ್ಟುವಂತಿರುತ್ತದೆ.

10) ಶಾಹಿವಾಲ್ ಅಥವಾ ಮಾಂಟಿಗೋಮರಿ ದನಗಳು ಈ ತಳಿಯ ದನಗಳು ಮುಖ್ಯವಾಗಿ ಸದ್ಯ ಪಾಕಿಸ್ತಾನಕ್ಕೆ ಸೇರಿದ ಪಂಜಾಬದ ಮಾಂಟಿಗೋಮರಿ ಜಿಲ್ಲೆಯ ಪ್ರದೇಶ ಮತ್ತು ರಾವಿನದಿಯ ತೀರ ಪ್ರದೇಶದ ದನಗಳು. ಈ ದನಗಳನ್ನು ಮುಖ್ಯವಾಗಿ ಹೈನೋತ್ಪಾದನೆಗಾಗಿಯೇ ತಳಿ ಸಂವರ್ಧನೆ ಮಾಡಿ ಬೆಳೆಸಿಕೊಂಡು ಬಂದಿರುವುದರಿಂದ ಇವು ಹೈನ ತಳಿಯ ದನಗಳೆಂದು ಹೆಸರಾಗಿವೆ. ಪಂಜಾಬಿನಲ್ಲೆಲ್ಲಾ ಈ ದನಗಳು ಬಹಳ ಜನರ ಪ್ರೀತಿಯನ್ನು ಗಳಿಸಿಕೊಂಡಿರುತ್ತವೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಲಿನ ಪೂರೈಕೆಗಾಗಿ ಹಿಂದೂಸ್ತಾನದ ಅನೇಕ ಭಾಗಗಳಲ್ಲಿ ಈ ಜಾತಿಯ ದನಗಳನ್ನು ಸಾಕಿಕೊಂಡಿರುವುದನ್ನು ಕಾಣಬಹುದು. ಒಂದು ರಾಸು 300 ದಿವಸಗಳಲ್ಲಿ 7000 ಕಿಲೋಗ್ರಾಮ್‌ಗಳವರೆಗೂ ಹಾಲು ಕೊಡುತ್ತದೆ. ಹಿಂಡುಗಳ ಸರಾಸರಿ ಒಂದು ಕರಾವಿನ ಅವಧಿ 3000 ಕಿಲೋಗ್ರಾಮ್ ಇರುತ್ತದೆ. ಹಾಲಿನಲ್ಲಿಯ ಬೆಣ್ಣೆಯ ಪ್ರಮಾಣ ಶೇಕಡಾ

4.8 ದಿಂದ 6.8 ರವರೆಗೆ. ಈ ತಳಿಯ ಆಕಳುಗಳಲ್ಲಿ 5.000 ಕಿಲೋಗ್ರಾಮ್ ಹಾಲು ಕೊಡುವ ಹಸುಗಳು ಅಪರೂಪವಲ್ಲ.

ಈ ತಳಿಯ ಸಾಕಣೆಯನ್ನು ಕ್ರಮವಾಗಿ ಕೈಗೊಂಡು ಸ್ವಲ್ಪ ಕಾಲವಾಯಿತು. ಈ ಅವಧಿಯಲ್ಲಿಯೇ ತನಗೆ ಸಿಕ್ಕ ಆದ್ಯತೆಯನ್ನು ಸಂಪೂರ್ಣವಾಗಿ ವಿನಿಯೋಗಿಸಿಕೊಂಡು ಈ ತಳಿ ಆಶ್ಚರ್ಯಕರವಾದ ಅಭಿವೃದ್ಧಿ ಮತ್ತು ಪ್ರಗತಿಯನ್ನು ಸಾಧಿಸಿವೆ. ಹೀಗೆ ಈ ದನಗಳು ಅಭಿವೃದ್ಧಿಗೊಂಡು ಮುಂದುವರಿಯುವುದರಲ್ಲಿ ಅನುವಂಶಿಕ ಗುಣಗಳನ್ನು ಪಡೆದುಕೊಂಡಿರುತ್ತವೆ. ಹಾಲು ಹೆಚ್ಚು ಉತ್ಪಾದಿಸುವ ಅನುವಂಶಿಕ ಗುಣ



ಚಿತ್ರ 11: ಸಾಹಿವಾಲ ಜಾತಿಯ ಆಕಳು

ಗಳು ನಮ್ಮ ದನಗಳಲ್ಲಿ ಸುಪ್ತಾವಸ್ಥೆಯಲ್ಲಿ ಅಡಗಿಕೊಂಡಿರುತ್ತವೆ. ಸಾಹಿವಾಲ ರಾಸುಗಳ ಬಣ್ಣ ಸಾಮಾನ್ಯವಾಗಿ ಕೆಂಪು ಮಿಶ್ರಿತ ಬಣ್ಣ. ಕೆಲವು ಶುದ್ಧವಾಗಿ ಕೆಂಪು ಬಣ್ಣದಿಂದ ಕೂಡಿರುತ್ತವೆ. ಮತ್ತೆ ಕೆಲವು ತಾಮ್ರವರ್ಣದವುಗಳು; ಕಪಿಲವರ್ಣದವುಗಳು ಮತ್ತು ಕೆಲವು ಬಿಳಿಯ ವರ್ಣದವುಗಳು.

ಮೈಕಟ್ಟಿನಲ್ಲಿ ಇವು ಉದ್ದವಾದ ಬೀಸಾದ ದನಗಳು; ಮೈ ಮಾಂಸಖಂಡ

ಗಳಿಂದ ತುಂಬಿಕೊಂಡಿರುತ್ತದೆ; ಕಾಲುಗಳು ದಪ್ಪವಾಗಿ ಗಿಡ್ಡಾಗಿರುತ್ತವೆ. ಇವು ಮಂದ ಸ್ವಭಾವದ ದನಗಳು. ಎತ್ತುಗಳು ಕೆಲಸಕ್ಕೆ ಅಷ್ಟು ಹೆಚ್ಚು ಉಪಯುಕ್ತವಲ್ಲ. ಇವು ಮಾಂಸಕ್ಕೆ ಹೆಸರಾದ ದನಗಳು.

ತಲೆಯು ಅಗಲವಾಗಿರುತ್ತದೆ. ಕೋಡುಗಳು ಗಿಡ್ಡಾಗಿ ತುದಿಯಲ್ಲಿ ಮೊಂಡಾಗಿರುತ್ತವೆ. ಭಾರವಾದ ಶರೀರದಿಂದ ಕೂಡಿರುತ್ತದೆ. ಹೋರಿಗಳಲ್ಲಿ ಇಣಿಯು ದಪ್ಪನಾಗಿ ಬೆಳೆದಿರುತ್ತದೆ. ಗಂಗೆದೊಗಲು ಮತ್ತು ತೋಬರಿ ಉದ್ದವಾಗಿ ಕೆಳಗೆ ಜೋತಾಡುತ್ತಿರುತ್ತವೆ. ಬಾಲವು ಉದ್ದವಾಗಿರುತ್ತದೆ. ಕೆಚ್ಚಲು ದೊಡ್ಡದಾಗಿ ಸ್ವಲ್ಪ ಕೆಳಗೆ ಜೋತು ಬಿದ್ದಂತೆ ಕಾಣುತ್ತದೆ.

11) ಓಂಗೋಲ್ ದನಗಳು 'ಓಂಗೋಲ್' ತಳಿಯ ದನಗಳು ಆಂಧ್ರಪ್ರಾಂತದ ಓಂಗೋಲ ಪ್ರದೇಶದಲ್ಲಿಯ ದನಗಳಾದುದರಿಂದ ಈ ದನಗಳಿಗೆ ಓಂಗೋಲ ತಳಿಯ ದನಗಳೆಂದು ಹೆಸರು ಬಂದಿದೆ. ಭಾರತದ ದನಗಳಲ್ಲಿ ದುಡಿತಕ್ಕೆ ಹಾಗೂ ಹಾಲಿಗೆ ಈ ಎರಡೂ ಉದ್ದೇಶಗಳಿಗೆ ಹೆಸರಾದ ತಳಿ ಇದು. ಓಂಗೋಲ ದನಗಳನ್ನು ಹೆಚ್ಚಾಗಿ ನೆಲ್ಲೂರು ಮತ್ತು ಗುಂಟೂರು ಜಿಲ್ಲೆಗಳಲ್ಲಿಯ ರೈತಜನರು ಸಾಕಿಬೆಳೆಸುತ್ತಾರೆ. ಇಲ್ಲಿಯ ಭೂಮಿ ಬಹಳ ಫಲವತ್ತಾಗಿದೆ. ಇಲ್ಲಿಯ ರೈತರು ವಿವಿಧ, ಉತ್ತಮ ಸತ್ವಯುತವಾದ ಮತ್ತು ಹೆಚ್ಚು ಇಳುವರಿಯ ಮೇವಿನ ಬೆಳೆಗಳನ್ನು ಬೆಳೆಯುತ್ತಾರೆ. ಸಸಾರಜನಕಯುಕ್ತವಾದ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವರು. ಈ ಬೇಳೆ ಕಾಳುಗಳು ಮತ್ತು ಶೇಂಗಾಹಿಂಡಿ ದನಗಳಿಗೆ ಉತ್ತಮವಾದ ಪೌಷ್ಟಿಕ ಆಹಾರ. ಅಲ್ಲಿಯ ರೈತಜನರು ತಮ್ಮ ಓಂಗೋಲ ದನಗಳನ್ನು ಬಹಳ ಪ್ರೀತಿಯಿಂದ, ಅವುಗಳಿಗೆ ಉತ್ತಮ ಮೇವು ಹಾಗೂ ಕಾಳಿನ ಮಿಶ್ರಣಗಳನ್ನು ಕೊಟ್ಟು ಸಾಕಿ ಚೆನ್ನಾಗಿ ಬೆಳೆಸುತ್ತಾರೆ. ಇವರು ಬೇರೆ ಪಶುಪಾಲಕರಂತೆ ದನಗಳನ್ನು ಹುಲ್ಲು ಅಡವಿಗಳಿಗೆ ಮೇಯಲು ಬಿಡದೆ ತಮ್ಮ ಹೊಲ ಮನೆಗಳಲ್ಲಿಯೇ ಕಟ್ಟಿ ಮೇಯಿಸುತ್ತಾರೆ. ಇದರಿಂದಾಗಿ ದನಗಳು ಬಹಳ ಉತ್ತಮ ಸ್ಥಿತಿಯಲ್ಲಿ ಬೆಳೆದು ಬಂದಿರುತ್ತವೆ. ಓಂಗೋಲ ದನಗಳು ಬಹಳ ಸಾಧುವಾದ ಪ್ರಾಣಿಗಳು. ಎತ್ತುಗಳು ಬಹಳ ದೃಢಕಾಯದ ಮತ್ತು ಹೆಚ್ಚು ಶಕ್ತಿಸಾಮರ್ಥ್ಯದಿಂದ ಕೂಡಿದ ದನಗಳು. ಭಾರವನ್ನು ಹೊರುವುದಕ್ಕೂ ಮತ್ತು ಎಳೆಯುವುದಕ್ಕೂ ಹೆಸರಾದ ದನಗಳು. ಅಮೃತಮಹಾಲ್ ಮತ್ತು ಖಿಲಾರಿ ದನಗಳಷ್ಟು ತೀವ್ರಗಾಮಿಗಳಲ್ಲ; ಮಂದ ಸ್ವಭಾವದ ದನಗಳು. ರೈತರು ಆಕಳುಗಳಿಗೆ ಪ್ರೀತಿಯಿಂದ ಉತ್ತಮ ರಸವತ್ತಾದ ಮೇವನ್ನೂ ಪೌಷ್ಟಿಕಾಂಶಗಳಿಂದ ಕೂಡಿದ ಕಾಳಿನ ನುಚ್ಚು, ತೌಡು ಹಾಗೂ ಹಿಂಡಿ ಕೊಡುವುದರಿಂದ ಅವು ಹೆಚ್ಚು ಹಾಲು ಹಿಂಡುವವು. ಓಂಗೋಲ

ಎತ್ತುಗಳು ದುಡಿತಕ್ಕೂ, ಹಸುಗಳು ಹಾಲಿಗೂ ಹೆಚ್ಚು ಪ್ರಸಿದ್ಧವಾಗಿವೆ.

ಓಂಗೋಲ ಎಂಬ ಹೆಸರು ಅವಕ್ಕೆ ಬಂದುದು ಈಚೆಗೆ. ಮೊದಲು ಅವನ್ನು ನೆಲ್ಲೂರು ತಳಿ ಎಂದೇ ಕರೆಯುವುದು ವಾಡಿಕೆಯಾಗಿದ್ದಿತು. ಕರುವಂಚಿ,ಪೊಂಡೂರು, ನಿಡಮಾನೂರು, ಜಯವಾರಂ, ಈ ಭಾಗದಲ್ಲಿ ಇವು ಮೊದಲಿನಿಂದಲೂ ಹೆಸರಾಗಿವೆ. ಓಂಗೋಲ್ ತಾಲ್ಲೋಕಿನ ಕುಂಗುತೂರು ಮತ್ತು ಕರವಾಡಿಗಳು ಈ ದನದ ತವರು, ಸಾತನಪಲ್ಲಿ, ವಿನುಕೊಂಡ, ಕಂದುಕೂರು (ನೆಲ್ಲೂರು ತಾಲ್ಲೋಕು) ಚಾಪಟ್ಲಾದ ಕೆಲವು ಭಾಗಗಳು ಮತ್ತು ಗುಂಟೂರು ಜಿಲ್ಲೆಯೂ ಕೂಡ ಓಂಗೋಲ್ ದನಗಳ ನೆಲೆ.

ಓಂಗೋಲ ದನಗಳನ್ನು ಹಿಂದೆ ವಿಶೇಷವಾಗಿ ಅಮೆರಿಕಾದ ಉಷ್ಣ ಪ್ರದೇಶಗಳಾದ ಟೆಕ್ಸಾಸ್, ಮೆಕ್ಸಿಕೋ ಮೊದಲಾದ ದೇಶಗಳಿಗೆ ಅಲ್ಲಿಯ ಯೂರೋಪಿಯನ್ ಮೂಲದ ಮಾಂಸದ ದನಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ತೆಗೆದುಕೊಂಡು ಹೋಗಿರುತ್ತಾರೆ. ಈ ದನಗಳು ಅಲ್ಲಿಯ ಉಷ್ಣತೆಯನ್ನು ಸಹಿಸಬಲ್ಲ ಸಹಿಷ್ಣುತೆ ಶಕ್ತಿಯನ್ನು ಹೊಂದಿರುತ್ತವೆ. ಇವು ಉಣ್ಣೆಗಳಿಂದ ಪ್ರಾಣಿಯಿಂದ ಪ್ರಾಣಿಗೆ ಹರಡುವ ರೋಗಗಳನ್ನು ತಡೆಯಬಲ್ಲ ರೋಗನಿರೋಧಕ ಶಕ್ತಿಯನ್ನು ಹೊಂದಿರುತ್ತವೆ. ಸ್ವಲ್ಪ ಮೇವು ಸಿಗುವ ಕಡೆಗಳಲ್ಲಿಯೂ ಈ ದನಗಳು ಚೆನ್ನಾಗಿ ಬದುಕುತ್ತವೆ. ಆಹಾರ ಅಭಾವ ಕಾಲದಲ್ಲಿ ಎಂಥ ಆಹಾರಕ್ಕೂ ಸಹ ಹೊಂದಿಕೊಳ್ಳುವ ಒಂದು ವಿಶೇಷ ಗುಣವನ್ನು ಪಡೆದುಕೊಂಡಿರುತ್ತವೆ.

ಇವು ಆಕಾರದಲ್ಲಿ ದೊಡ್ಡ ನಿಲುವಿನವು, ಎತ್ತರವಾದ ಬೀಜಿನವು, ಶಕ್ತಿಶಾಲಿಯಾದವು. ಇವುಗಳ ಎಲುಬುಗಳು ಗಟ್ಟಿಯಾಗಿ, ದಪ್ಪವಾಗಿ ಬೆಳೆದುಕೊಂಡಿರುತ್ತವೆ; ತೊಡೆಗಳು ಮತ್ತು ಕಾಲುಗಳು ಬಲವಾದ ಸ್ನಾಯುಗಳಿಂದ ಕೂಡಿರುತ್ತವೆ. ಕುತ್ತಿಗೆ ತೆಳುವಾಗಿ ಸಣ್ಣದಾಗಿರುತ್ತದೆ; ಹಣೆಯು ಅಗಲವಾಗಿ ಚಪ್ಪಟೆಯಾಗಿರುತ್ತದೆ. ಇವು ಅಚ್ಚ ಬಿಳುಪು ಅಥವಾ ಬೂದಿ ಬಣ್ಣದ ದನಗಳು. ಹೋರಿಗಳಲ್ಲಿ ತೊಡೆ, ತೋಳು, ಮತ್ತು ಇಣಿ ಭಾಗಗಳು ಹೆಚ್ಚು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಈ ಜಾತಿಯ ದನಗಳಲ್ಲಿ ಮೈಸೂರು ದನಗಳ ರಕ್ತಮಿಶ್ರಣವಾದಂತೆ ಕಾಣುತ್ತವೆ. ಕಿವಿಗಳು ದೊಡ್ಡವಾಗಿದ್ದು ಇಳಿಬಿದ್ದಿರುತ್ತವೆ. ಕೋಡುಗಳು ಗಿಡ್ಡಾಗಿ ದಪ್ಪನಾಗಿ ಬೆಣೆಯ ಆಕಾರದಂತೆ ಇರುತ್ತವೆ. ಹೋರಿಗಳಲ್ಲಿ ಇಣಿಯು ದೊಡ್ಡದಾಗಿ ದಪ್ಪವಾಗಿರುತ್ತದೆ. ಗಂಗೆದೊಗಲು ಮತ್ತು ತೋಬರಿ ಸ್ವಲ್ಪ ಉದ್ದವಾಗಿರುತ್ತವೆ. ಬಾಲವು ಉದ್ದವಾಗಿ ತುದಿಯಲ್ಲಿ ಕಪ್ಪು ಬಣ್ಣದ ಗೊಂಡೆಯಂತೆ ಕೂದಲುಗಳ ಗುಚ್ಚದಿಂದ ಕೂಡಿರುತ್ತವೆ. ಓಂಗೋಲ ದನದ ಕಣ್ಣು ಸುಂದರ. ಅವು ಅತಿ ಗುಂಡಗಿಲ್ಲದ ಅಗಲವಾದ ಕಣ್ಣುಗಳು. ಕಣ್ಣಿನ ಸುತ್ತಲೂ ಅರ್ಧ ಅಂಗುಲದ ಕಪ್ಪು ಬಣ್ಣವಿರುತ್ತದೆ. ಇದು ಓಂಗೋಲ

ದನವನ್ನು ಸುಲಭವಾಗಿ ಗುರುತಿಸಬಹುದಾದ ಒಂದು ಗುರುತು. ಆಹಾರ ಅಭಾವ ದಿವಸಗಳಲ್ಲಿ ಒಣಮೇವು ತಿಂದು ತಡೆದುಕೊಳ್ಳಬಲ್ಲ ಶಕ್ತಿ ಇವಕ್ಕಿದೆ.

ಈ ತಳಿಯ ಹಸುಗಳು ಒಂದು ಕರಾವಿನ ಅವಧಿಯಲ್ಲಿ ಪರಮಾವಧಿ 4500 ಕಿಲೋಗ್ರಾಮ್‌ಗಳವರೆಗೆ ಹಾಲು ಕೊಡುತ್ತವೆ. ಆವರೆ ಸರಾಸರಿ 1500 ಕಿಲೋಗ್ರಾಮ್. ಹಾಲಿನಲ್ಲಿಯ ಬೆಣ್ಣೆಯ ಅಂಶ ಶೇಕಡಾ 4.5 ರಿಂದ 5 10ರವರೆಗೆ ಇರುತ್ತದೆ.

ಓಂಗೋಲ ಜಾತಿಯ ದನಗಳು ಭಾರತದ ಉತ್ತಮ ಜಾತಿಯ ತಳಿಯ ದನಗಳಲ್ಲಿ ಒಂದಾಗಿವೆ. ಉಳುಮೆ ಮತ್ತು ಗಾಡಿಯ ಕೆಲಸಕ್ಕೆ ಬಹಳ ಯೋಗ್ಯವಾದ ದನಗಳು. ದೊಡ್ಡ ದೇಹದಾಕಾರದ ದನಗಳಾದುದರಿಂದ ನಡಿಗೆಯಲ್ಲಿ ನಿಧಾನ. ಇವುಗಳ ಶರೀರಕ್ಕೆ ತಕ್ಕಂತೆ ಇವರ ಕುತ್ತಿಗೆ ಇಲ್ಲ; ಬಹಳ ಚಿಕ್ಕದಾಗಿರುತ್ತದೆ.

ಕೃಷ್ಣ, ಗುಂಟೂರು ಜಿಲ್ಲೆಗಳು; ಓಂಗೋಲ ತಾಲ್ಲೋಕಿನಲ್ಲಿರುವ ಕರುವಾಟಿ ಸಿದಮನೂರು, ಪೆಂಡೂರು, ಜಯವರಂ; ತರಿಗಳೂರು, ಕರವಾಡಿ, ನೆಲ್ಲೂರು ಜಿಲ್ಲೆಯ ಕಂದ್ಕೂರು ತಾಲ್ಲೋಕು ಮತ್ತು ಮೂಸಿನದಿಯ ದಡದಮೇಲಿರುವ ಕೊಪ್ಪಲುಗಳು ಈ ಓಂಗೋಲ ದನಗಳ ತೌರು. ಓಂಗೋಲ ಪ್ರಾಂತ್ಯದಲ್ಲಿ ಅಪ್‌ಸಣಬು ಮತ್ತು ಹುಲ್ಲು ಈ ದನಗಳ ಮುಖ್ಯ ಮೇವು. ಮಾಲಾ ಹೊಲೆಸರು ತಮ್ಮ ಕುಲವೃತ್ತಿಯಾದ ನೇಯ್ಗೆ ಕೆಲಸದ ಜೊತೆಗೆ ಬಿಡುವಿನ ಕಾಲದಲ್ಲಿ ಕರುಗಳು ಮತ್ತು ಕಸಸುಗಳ ಪೋಷಣೆಯನ್ನು ಮಾಡುತ್ತಾರೆ.

ಅಧ್ಯಾಯ 4

ಎಮ್ಮೆ ಜಾತಿಯ ದನಗಳು

ಭಾರತದಲ್ಲಿ ಬಹಳ ಹಿಂದಿನ ಕಾಲದಿಂದ ಎಮ್ಮೆಗಳನ್ನು ಹಾಲಿಗಾಗಿ ಸಾಕುವ ಪರಿಪಾಠ ಸಾಗಿ ಬಂದಿದೆ. ಇವುಗಳ ಹಾಲನ್ನು ಅನಾದಿಕಾಲದಿಂದ ಉಪಭೋಗ ಮಾಡುತ್ತ ಬಂದಿದ್ದೇವೆ. ಹೀಗಿದ್ದಾಗ್ಯೂ ಸಹ ಆಕಳನ್ನು ಪೂಜ್ಯ ಭಾವದಿಂದಲೂ ಎಮ್ಮೆಗಳನ್ನು ತಿರಸ್ಕಾರ ಭಾವನೆಯಿಂದಲೂ ನೋಡುತ್ತಿದ್ದೇವೆ. ಇದಕ್ಕೆ ಕಾರಣ ನಮ್ಮ ನಂಬುಗೆ: ಆಕಳು ಪರಮಾತ್ಮನ ಸೃಷ್ಟಿ; ಎಮ್ಮೆ ವಿಶ್ವಾಮಿತ್ರನ ಸೃಷ್ಟಿ. ನಂದಿ ಪಾರ್ವತೀ ಪರಮೇಶ್ವರರ ವಾಹನ; ಕೋಣ ಯಮನ ವಾಹನ. ಆಕಳ ಹಾಲು ದೇವರ ಅಭಿಷೇಕಕ್ಕೆ ಪವಿತ್ರ; ಎಮ್ಮೆಯ ಹಾಲು ಅಪವಿತ್ರ.

ಈಶ್ವರನ ಮುಂದಿರುವ ಬಸವಣ್ಣನಿಗೆ ಪೂಜೆ; ಮಾರಮ್ಮ ಮತ್ತು ದುರ್ಗಿಯ ಮುಂದೆ ಕೋಣನ ಬಲಿ. ಹೀಗೆ ಅನಾದಿಕಾಲದಿಂದ ಬಂದಿರುವ ಈ ಧಾರ್ಮಿಕ ಮನೋಭಾವನೆಗಳು ಎಮ್ಮೆಗಳ ಬಗ್ಗೆ ನಮಗೆ ಇರುವ ತಾತ್ಸಾರ ಭಾವನೆಗಳಿಗೆ ಕಾರಣಗಳು. ನಮಗೆ ಆಕಳಿನ ವಿಷಯದಲ್ಲಿ ಉಂಟಾಗುವ ಮಮತೆ, ಮರುಕ, ಅನುಕಂಪ ಎಮ್ಮೆಗಳ ವಿಷಯದಲ್ಲಿ ಉಂಟಾಗುವುದಿಲ್ಲ.

ಎಮ್ಮೆ ಬಹಳ ಮಂದ ಬುದ್ಧಿಯ ಆಲಸ್ಯಪ್ರಾಣಿ; ಆಕಳು ಚುರುಕು ಬುದ್ಧಿಯ ಚಪಲ ಪ್ರಾಣಿ. ನೋಡಲು ಎಮ್ಮೆ ಆಕಾರದಲ್ಲಿ ಒರಟು ಭೀಮಕಾಯದ ಪ್ರಾಣಿ. ಆಕಳು ಮಟ್ಟವಾದ ಅಚ್ಚುಮೆಚ್ಚಿನ ಮೈಕಟ್ಟಿನಿಂದ ಕೂಡಿದ ಚೆಲುವಾದ ಪ್ರಾಣಿ. ಎಮ್ಮೆಯ ಮೈಬಣ್ಣ ಕಪ್ಪು. ಆಕಳು ತೆಳುವಾದ ವಿವಿಧ ಬಣ್ಣಗಳ ಆಕರ್ಷಕ ಪ್ರಾಣಿ. ಎಮ್ಮೆಯ ಕೋಡುಗಳು ದಪ್ಪನಾಗಿ ಅಗಲವಾಗಿ ಅತಿ ಉದ್ದವಾಗಿ ಅಸಹ್ಯವಾಗಿ ಬೆಳೆದುಕೊಂಡಿರುತ್ತವೆ. ಆಕಳುಗಳ ಕೋಡುಗಳು ತೆಳುವಾಗಿ ದುಂಡಾಗಿ ನೋಡಲು ಮನೋಹರವಾಗಿರುತ್ತವೆ. ಎಮ್ಮೆಗಳ ಮೈಚರ್ಮ ದಪ್ಪ ಮತ್ತು ಒರಟು; ಆಕಳ ಮೈಚರ್ಮ ನುಣುಪು ಮತ್ತು ಮೃದು. ಎಮ್ಮೆಗಳಿಗೆ ಕೊಳಚೆಯಲ್ಲಿ ಬಿದ್ದು ಹೊರಳಾಡುವುದೆಂದರೆ ಬಹಳ ಪ್ರೀತಿ; ಆಕಳಿಗೆ ಹೊಲಸು ಸೇರದು. ಈ ಪ್ರಕಾರ ಎರಡೂ ಪ್ರಾಣಿಗಳು ಭಿನ್ನ ಭಿನ್ನ ರೂಪ, ಆಕಾರ ಮತ್ತು ಪರಸ್ಪರ ವಿರೋಧ ಸ್ವಭಾವಗಳ ಪ್ರಾಣಿಗಳು. ಇವರಿಂದಾಗಿ ನಮಗೆ ಎಮ್ಮೆಗಳ ಬಗ್ಗೆ ಇರುವ ಅನಾದರ ಹಾಗೂ ತಿರಸ್ಕಾರ ಭಾವನೆಗೂ ಮತ್ತು ಆಕಳ ಮೇಲಿರುವ ಆಸೆಗೂ ಕಾರಣವಿರಬಹುದು ಎಂದು ಊಹಿಸಬಹುದು.

ಆರ್ಥಿಕ ದೃಷ್ಟಿಯಿಂದ ಮತ್ತು ಹಾಲು ಹೈನದ ವಿಚಾರ ಮಾಡುವಾಗ ಭಾರತದಲ್ಲಿ ಆಕಳ ಜೊತೆಗೆ ಎಮ್ಮೆಗಳ ಹೆಸರನ್ನು ಹೇಳಲೇ ಬೇಕು. ಎಮ್ಮೆಗಳು ಹೈನೋತ್ಪಾದನೆಯಲ್ಲಿ ಆಕಳುಗಳಿಗಿಂತ ಹೆಚ್ಚು ಅಲ್ಲದಿದ್ದರೂ ಕಡಿಮೆಯಿಲ್ಲವೆಂಬುದನ್ನು ತೋರಿಸಿಕೊಟ್ಟಿವೆ. ಇದನ್ನು ಈ ಮುಂದಿನ ದೃಷ್ಟಾಂತದಿಂದ ಉದಾಹರಿಸಬಹುದು. ಎಮ್ಮೆಗಳು ಒಂದು ವರ್ಷದ ಅವಧಿಯಲ್ಲಿ ಸಾಮಾನ್ಯವಾಗಿ ಸರಾಸರಿ 250 ಲೀಟರ್ ಹಾಲನ್ನು ಕೊಡುತ್ತಿರುವವಾದರೂ ಕೃತಕಗರ್ಭಧಾರಣೆ ಮಾಡಿ ಉತ್ತಮ ತಳಿಗಳನ್ನು ಉತ್ಪಾದಿಸಿ ಹೆಚ್ಚು ಹಾಲನ್ನು ದೊರಕಿಸಿಕೊಳ್ಳಬಹುದು. ಕ್ರಿ. ಶ. 1949ರಲ್ಲಿ ಮುಂಬೈಯಲ್ಲಿಯ 'ಆರೇ' ಹಾಲಿನ ಕೇಂದ್ರವು ಪ್ರಾರಂಭವಾದಾಗ ಅಲ್ಲಿಯೂ ಸಹ ಎಮ್ಮೆಗಳ ಪರಿಸ್ಥಿತಿ ಇದೇ ರೀತಿಯಾಗಿತ್ತು. ಆದರೆ ಉತ್ತಮ ತಳಿಗಳನ್ನು ನಿರ್ಮಿಸಿದುದರ ಪರಿಣಾಮವಾಗಿ ಇಂದು ಅಲ್ಲಿನ ಪ್ರತಿ ಎಮ್ಮೆ ಹಾಲಿನ ಉತ್ಪಾದನೆಯನ್ನು ಹದಿನಾಲ್ಕು ಪಟ್ಟು ಹೆಚ್ಚಿಸಲಾಗಿದೆ. ಪಶುವೈದ್ಯರ ದಕ್ಷತೆಯ ಫಲವಾಗಿ ಎಮ್ಮೆಗಳ ಆಯುರ್ಮಾನವೂ ಹೆಚ್ಚಿದೆ. ಜಗತ್ತಿನಲ್ಲಿ ಸಹಕಾರಿ ತತ್ವದ ಮೇಲೆ ಸ್ಥಾಪಿಸಲಾಗಿರುವ

ಹಾಲಿನ ಕೇಂದ್ರಗಳಲ್ಲಿ 'ಆರೆ'' ಒಂದು ಹೆಸರಾದ ದೊಡ್ಡ ಕ್ಷೀರಾಭಿವೃದ್ಧಿಕೇಂದ್ರ. ಅಲ್ಲಿ 16000 ಎಮ್ಮೆಗಳು ಪ್ರತಿ ವರ್ಷ ಸಾವಿರಾರು ಕರುಗಳಿಗೆ ಜನ್ಮವೀಯುತ್ತವೆ. ದೇಶದಲ್ಲಿ ಹೈನದ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತಿ ವರ್ಷ ಮೂರು ಸಾವಿರ ಕರುಗಳನ್ನು ಈ ಹಾಲಿನ ಕೇಂದ್ರವು ಜನತೆಗೆ ಪೂರೈಸುತ್ತದೆ. ಕಲ್ಕತ್ತೆಯ ಬಳಿ ಇರುವ ಹರಿಣ ಘಾಟದಲ್ಲಿಯ ಹಾಲಿನ ಕೇಂದ್ರವೂ ಸಹ ಅತಿ ದೊಡ್ಡ ದುಗ್ಧಾಲಯಗಳಲ್ಲಿ ಒಂದು ಎಂದು ಹೇಳಬಹುದು.

ಹೆಚ್ಚಿಗೆ ಹೈನವನ್ನು ಉತ್ಪಾದಿಸುವಿಕೆಯಲ್ಲಿ ಗುಜರಾತದಲ್ಲಿಯ ಆನಂದದ ಕೈರಾ ಸಹಕಾರಿ ಹಾಲಿನ ಕೇಂದ್ರವು ಪ್ರಸಿದ್ಧಿ ಪಡೆದಿದೆ. ಆನಂದದ ಸುತ್ತಮುತ್ತಲಿನ 432 ಗ್ರಾಮಗಳ 8000 ಜನರು ಈ ಕೇಂದ್ರಕ್ಕೆ ಪ್ರತಿದಿನ ಎಮ್ಮೆ ಹಾಲನ್ನು ಪೂರೈಸುತ್ತಾರೆ. ಅಲ್ಲಿಂದ ಪ್ರತಿದಿನ ಒಂದು ಲಕ್ಷ ಕಿಲೋಗ್ರಾಮ್‌ಗಳಿಗಿಂತ ಹೆಚ್ಚು ಹಾಲನ್ನು ಮುಂಬಯಿ ನಗರಕ್ಕೆ ಪೂರೈಸಲಾಗುತ್ತಿದೆ. ಇದಲ್ಲದೆ ಪ್ರತಿದಿನ ಎಮ್ಮೆ ಹಾಲಿನಿಂದ 9000 ಕಿಲೋಗ್ರಾಮ್ ಮಕ್ಕಳ ಆಹಾರ, 7500 ಕಿಲೋಗ್ರಾಮ್ ಹಾಲಿನ ಪುಡಿ, 1000 ಕಿಲೋಗ್ರಾಮ್ ಗಿಣ್ಣು ಹಾಗೂ 2250 ಕಿಲೋಗ್ರಾಮ್ ತುಪ್ಪವನ್ನು ಉತ್ಪಾದಿಸಲಾಗುತ್ತಿದೆ. ಕರ್ನಾಟಕದಲ್ಲಿ ಹೆಸರಾದ ಧಾರವಾಡದ ಲೈನ್ ಬಜಾರ್ ಪೇಡೆ, ಬೆಳಗಾವಿಯ ಕುಂದ ರುಚಿಯಾದ ಪದಾರ್ಥಗಳು ಎಮ್ಮೆಯ ಹಾಲಿನಿಂದಲೇ ತಯಾರಾಗುತ್ತವೆ.

ಎಮ್ಮೆ ನೀರೊಳಗಿನ ಪ್ರಾಣಿ ಎಂದರೂ ಅತಿಶಯೋಕ್ತಿಯಾಗದು. ಎಮ್ಮೆಗಳು ಸಾಮಾನ್ಯವಾಗಿ ಅತಿ ಹೆಚ್ಚಿನ ಉಷ್ಣ ಪ್ರದೇಶಗಳಿಗಿಂತ ತಂಪಾದ ಹವೆ ಹಾಗೂ 35 ಅಂಗುಲದವರೆಗೆ ಮಳೆ ಬೀಳುವ ಪ್ರದೇಶಗಳಲ್ಲಿ ಚೆನ್ನಾಗಿ ಬಾಳಿ ಬೆಳೆಯುತ್ತವೆ. ಹೈನೋತ್ಪಾದನೆಯಲ್ಲಿ ಅವುಗಳಿಗೆ ಅನುಗುಣವಾದ ವಾತಾವರಣ; ಪರಿಸರ ಮತ್ತು ಆಹಾರ ಇವೂ ಸಹ ಹೆಚ್ಚಿನ ಪರಿಣಾಮವನ್ನುಂಟುಮಾಡುತ್ತವೆ. ಬಿಸಿಲಿನ ಬೇಗೆಯ ತಾಪವನ್ನು ತಡೆಯಲಾರದೆ ಸಾಗುವಳಿ ಕೆಲಸಕ್ಕೆ ಉಪಯೋಗಿಸುವ ಎಮ್ಮೆ, ಕೋಣಗಳು ಕೆಲಸ ಮಾಡದೆ ತೇಕಲು ಪ್ರಾರಂಭಿಸುತ್ತವೆ. ಅವುಗಳ ಮೈಬಣ್ಣ ಅಚ್ಚ ಕಪ್ಪು ಬಣ್ಣದಿಂದ ಕೂಡಿರುವುದರಿಂದ ಮತ್ತು ಮೈಮೇಲಿನ ಚರ್ಮವು ತುಪ್ಪಳಗಳಿಲ್ಲದೆ ಇರುವುದರಿಂದ ಶಾಖವು ನೇರವಾಗಿ ಬೇಗನೆ ಅವುಗಳ ಶರೀರದೊಳಗೆ ಪ್ರವೇಶಿಸುತ್ತದೆ. ಆಗ ಶರೀರದಲ್ಲಿ ಕಾವು ಹೆಚ್ಚಾಗುವುದು. ಇದಕ್ಕಾಗಿ ಎಮ್ಮೆಗಳನ್ನು ಬೇಸಗೆಯಲ್ಲಿ ತಪ್ಪದೆ ನೀರಿನಿಂದ ಮೈ ತೊಳೆಯಬೇಕಾಗುವುದು. ಮಧ್ಯಾಹ್ನದಲ್ಲಿ ಸ್ವಚ್ಛವಾದ ನೀರಿನ ಹೊಂಡ, ನದಿ, ಅಥವಾ ಕೆರೆ ಕುಂಟೆಗಳಲ್ಲಿ ಕೆಲವು ಸಮಯ ಇರಲು ಬಿಟ್ಟಿರಬೇಕು. ನೀರನ್ನು ದಿನಕ್ಕೆ 3 ಸಾರಿಯಾದರೂ ಕುಡಿಸಬೇಕು. ಬೇಸಗೆಯಲ್ಲಿ ಹೊರಗೆ

ಬಿಸಿಲಿನಲ್ಲಿ ಮೇಯುವುದಕ್ಕೆ ಬಿಡುವುದಕ್ಕಿಂತ ಮುಂಚೆ ಅದರ ತಲೆ, ಕೋಡಿನ ಗಡ್ಡೆ, ಕಿವಿ ಮತ್ತು ಬೆನ್ನಿನ ಮೇಲೆ ಎಣ್ಣೆಯನ್ನು ಹಚ್ಚುವುದು ಒಳ್ಳೆಯದು. ಅವುಗಳ ವಾಸದ ಮನೆಯಲ್ಲಿ ಸ್ವಚ್ಛವಾದ ಹವೆ, ಸಾಕಷ್ಟು ಗಾಳಿ, ಬೆಳಕು ಬರುವಂತಿರಬೇಕು. ಅವುಗಳ ಮನೆಯ ಮೇಲಿನ ಛಾವಣಿಯು ತಗಡಿನದಾಗಿದ್ದರೆ ಬೇಸಗೆಯಲ್ಲಿ ತಗಡು ಕಾಯದಂತೆ ಅದರ ಮೇಲ್ಗೆ ಹಸಿ ತಪ್ಪಲು ಅಥವಾ ಒಣಗಿದ ಹುಲ್ಲು ಹೊದಿಸಿ, ಅದರ ಮೇಲೆ ನೀರನ್ನು ಆಗಾಗ್ಗೆ ಹಾಕುತ್ತಿರಬೇಕು. ಉತ್ತಮ ಹಸುಗಳಂತೆ ಉತ್ತಮ ಜಾತಿಯ ಎಮ್ಮೆಗಳನ್ನು ಮಳೆ ಮಿತವಾಗಿ ಬೀಳುವ ಪ್ರದೇಶಗಳಲ್ಲಿ ಸಾಕುತ್ತಿರುವುದು ಕಂಡುಬಂದಿದೆ. ಅಲ್ಲಿಯ ವಾತಾವರಣ, ಸನ್ನಿವೇಶಗಳು ಹಿತಕರವಾಗಿರುವುದೇ ಇದಕ್ಕೆ ಕಾರಣ.

ಎಮ್ಮೆ ಕರುಹಾಕಿದ ನಂತರ ಸುಮಾರು 7 ರಿಂದ 10 ದಿವಸಗಳವರೆಗೆ ಸಂಪೂರ್ಣ ಹಾಲು ಕರೆಯದೆ ಕಡಮೆ ಹಾಲು ಕೊಡುತ್ತದೆ. ಈ ಹಾಲಿಗೆ ಎಳಗಂದಿ ಹಾಲು ಎಂದು ಕರೆಯುತ್ತಾರೆ. ಮುಂದೆ ಅದರ ಹಾಲು ದಿನದಿನಕ್ಕೆ ಹೆಚ್ಚುತ್ತ ಹೋಗುವುದು 6 ಅಥವಾ 7 ತಿಂಗಳಾದ ಮೇಲೆ ಪುನಃ ಸ್ವಲ್ಪ ಸ್ವಲ್ಪ ಕಡಮೆಯಾಗುತ್ತ 9 ತಿಂಗಳುಗಳಿಗೆ ಬತ್ತಿ ಹೋಗುವುದು. ಹಾಲು ಹಿಂಡುವ ಕಾಲದಲ್ಲಿ ಎಮ್ಮೆಗಳಿಗೆ ಅವುಗಳ ಹಾಲಿನ ಉತ್ಪಾದನೆಗೆ ತಕ್ಕಂತೆ ಸಾಕಾಗುವಷ್ಟು ಉತ್ತಮ ಉತ್ಪಾದನಾ ಆಹಾರ ಕೊಡಬೇಕು. ಇಲ್ಲವಾದಲ್ಲಿ ಹಾಲು ಸಮರ್ಪಕವಾಗಿ ಉತ್ಪಾದನೆಯಾಗಲಾರದು. ಕರುಹಾಕಿದ ಹತ್ತು ದಿವಸಗಳವರೆಗೆ ಹತ್ತಿಕಾಳು, ಶೇಂಗಾ, ಹಿಂಡಿ, ಚಿನ್ನಿ ಅಥವಾ ಗೋಟಲಿ ಕೊಡದೆ ಇವುಗಳ ಬದಲಾಗಿ ಸಜ್ಜೆಯನ್ನು ಕುದಿಸಿ, ಬೇಯಿಸಿ ಅದು ಬಿಸಿ ಇದ್ದಾಗ ಅದಕ್ಕೆ ಗೋಧಿ ತವುಡು ಅಥವಾ ಅಕ್ಕಿ ತವುಡು ಸೇರಿಸಿ ಕೊಡಬೇಕು. ಇದು ಸುಲಭವಾಗಿ ಜೀರ್ಣವಾಗುವುದರಿಂದ ಜೀರ್ಣಾಂಗಗಳಿಗೆ ಹೆಚ್ಚಿನ ಶ್ರಮ ಬೀಳುವುದಿಲ್ಲ; ಅಲ್ಲದೆ, ಹಾಲಿನ ಉತ್ಪಾದನೆಯು ಚೈತನ್ಯವೂ ಹೆಚ್ಚುವುದು. ಕರುಹಾಕಿದ ಕೂಡಲೇ ಸಜ್ಜೆಹಿಟ್ಟಿನಿಂದ ಅಂಬಲಿ ತಯಾರಿಸಿ ಅದು ಸ್ವಲ್ಪ ಬೆಚ್ಚಗೆ ಇದ್ದಾಗ ಕುಡಿಸಿದಲ್ಲಿ ಎಮ್ಮೆಯ 'ಮಾಸವು' ಬೇಗನೆ ಹೊರಬೀಳುವುದು.

ಹಾಲು ಕರೆಯುವ ಎಮ್ಮೆಗಳಿಗೆ ಪ್ರಾರಂಭದಲ್ಲಿ 2½ ಕಿಲೋಗ್ರಾಮ್ ಸಜ್ಜೆ ಮತ್ತು 2½ ಕಿಲೋಗ್ರಾಮ್ ಗೋಧಿ ತೌಡು ಕೊಡಬೇಕು. ಇದು ಬಹಳ ಉತ್ತಮ ಮಾದರಿ ಆಹಾರ. ಇದರ ಜೊತೆಗೆ ಈ ಕೆಳಗೆ ಕಾಣಿಸಿದ ಪ್ರಕಾರ ಆಹಾರವನ್ನು ಕೊಡಬೇಕು.

4 ರಿಂದ 6 ಕಿಲೋಗ್ರಾಮ್‌ಗಳವರೆಗೆ ಜೋಳದ ಮೇವು ಅಥವಾ ಒಣಹುಲ್ಲು (ಕರಡ)
7½ ಕಿಲೋಗ್ರಾಮ್‌ಗಳಷ್ಟು ಹಸಿಮೇವು ಅಥವಾ ಹಸಿಹುಲ್ಲು
2½ ಕಿಲೋಗ್ರಾಮ್‌ಗಳಷ್ಟು ತೌಡು] ಇದನ್ನು ಕುಟ್ಟಿ ಬಿಸಿಯಿದ್ದಾಗ ತಿನಿಸಬೇಕು.
2½ ಕಿಲೋಗ್ರಾಮ್‌ಗಳಷ್ಟು ಸಜ್ಜೆ]

ಸ್ವಲ್ಪ ದಿವಸಗಳಾದ ಮೇಲೆ (15 ದಿವಸಗಳ ನಂತರ) ಒಂದು ದಿವಸಕ್ಕೆ 9 ಕಿಲೋಗ್ರಾಮ್ ಹಾಲು ಕರೆಯುವ ಮತ್ತು ಕರುವಿಗೆ ಹಾಲು ಕುಡಿಸುವ ಎಮ್ಮೆಗೆ ಈ ಕೆಳಗೆ ತಿಳಿಸಿರುವ ಆಹಾರವು ಎಲ್ಲ ರೀತಿಯಿಂದಲೂ ಸಾಕಾಗಬಹುದು:

5–7½ ಕಿಲೋಗ್ರಾಮ್ ಹಸಿಮೇವು ಅಥವಾ ಹಸಿಹುಲ್ಲು ಹಾಗೂ 5–7½ ಕಿಲೋಗ್ರಾಮ್ ಒಣಮೇವುಗಳೆರಡನ್ನು ಕತ್ತರಿಸಿ ಸೇರಿಸಿ ಕೊಡಬೇಕು. ಮೇವಿನ ⅖ ಭಾಗದಷ್ಟನ್ನು ಬೆಳಿಗ್ಗೆ 11 ಘಂಟೆಯ ಹೊತ್ತಿಗೆ ಮತ್ತು ⅗ ಭಾಗದಷ್ಟನ್ನು ಸಾಯಂಕಾಲ 6 ಗಂಟೆಗೆ ಕೊಡಬೇಕು. ಇದಲ್ಲದೆ 1½ ಕಿಲೋಗ್ರಾಮ್ ಹತ್ತಿ ಕಾಳು, 1½ ಕಿಲೋಗ್ರಾಮ್ ಗೋಧಿ ತೌಡು, 1½ ಕಿಲೋಗ್ರಾಮ್ ಶೇಂಗಾ ಹಿಂಡಿ, 30–50 ಗ್ರಾಮ್ ಉಪ್ಪು ಇವೆಲ್ಲವನ್ನು ಎರಡುಭಾಗ ಮಾಡಿ ಬೆಳಗಿನ ಹೊತ್ತು ½ ಕಿಲೋಗ್ರಾಮ್ ಭಾಗವನ್ನು ಸಾಯಂಕಾಲದ ಹೊತ್ತು ½ ಭಾಗವನ್ನು ಕೊಡಬೇಕು ಅಥವಾ 4 ಭಾಗ ಗೋಧಿ ತೌಡು, 2 ಭಾಗ ಹಿಂಡಿ 3 ಭಾಗಕಡಲೆ ಹೊಟ್ಟು, 1 ಭಾಗ ನುಚ್ಚನ್ನು ಮಿಶ್ರಣಮಾಡಿ ಬೆಳಿಗ್ಗೆ ½ ಭಾಗ ಹಾಗೂ ಸಾಯಂಕಾಲ ½ ಭಾಗವನ್ನು ಕೊಡಬೇಕು. ಹತ್ತಿ ಕಾಳಿನಿಂದ ಹಾಲಿನ ಮೇಧೋಭಾಗ ವೃದ್ಧಿಯಾಗುವುದು. ಹತ್ತಿಕಾಳು, ಚಿನ್ನಿ (ತೊಗರಿ, ಕಡಲೆಗಳ ಮೇಲಿನ ಸಿಪ್ಪೆ)ಮತ್ತು ತೌಡು ಎಲ್ಲವನ್ನು ಸೇರಿಸಿ ಅದು ಚೆನ್ನಾಗಿ ನೆನೆದಮೇಲೆ ಶೇಂಗಾ ಹಿಂಡಿಯನ್ನು ಸಣ್ಣ ಚೂರುಗಳನ್ನಾಗಿ ಮಾಡಿ ಹರಡಿ ತಿನ್ನಲು ಕೊಡಬೇಕು.

ಹುಲ್ಲುಗಾವಲಿನಲ್ಲಿ ಹುಲ್ಲು, ಮೇಯಲು ಹೆಚ್ಚಾಗಿದ್ದ ಕಾಲದಲ್ಲಿ ಮತ್ತು ಹಸಿಮೇವು ಸಿಗುವ ಕಾಲದಲ್ಲಿ ಒಣಮೇವನ್ನು 3 ರಿಂದ 4 ಕಿಲೋಗ್ರಾಮ್‌ಗಳಷ್ಟು ಕೊಡಬಹುದು. ಅಂದರೆ 1 ಅಥವಾ 1½ ಕಿಲೋಗ್ರಾಮ್‌ಗಳಷ್ಟನ್ನು ಕಡಮೆ ಮಾಡಬಹುದು ಮತ್ತು ಕಾಳಿನ ಮಿಶ್ರಣವನ್ನು ⅓ ಅಂಶದಷ್ಟು ಕಡಮೆ ಮಾಡಿದಲ್ಲಿ ಏನೂ ಕೆಟ್ಟ ಪರಿಣಾಮ ಅಥವಾ ಕೊರತೆಯಾಗುವುದಿಲ್ಲ. ದೊಡ್ಡ ದೇಹದ ಆಕಾರದ ಎಮ್ಮೆಗೆ ದಿನಕ್ಕೆ 20 ಕಿಲೋಗ್ರಾಮ್‌ಗಳಷ್ಟು ಹಸಿಮೇವು, 3 ರಿಂದ 4 ಕಿಲೋಗ್ರಾಮ್‌ಗಳಷ್ಟು ಒಣಮೇವು ಅಲ್ಲದೆ ಮೇಲೆ ತಿಳಿಸಿದ ಪ್ರಕಾರ ಕಾಳಿನ ಮಿಶ್ರಣವನ್ನು (ದಾಣಿ)ಕೊಡಬಹುದು.

ನಮ್ಮಲ್ಲಿಯ ಗೌಳಿ ಮತ್ತು ರೈತ ಜನರು ಸಾಮಾನ್ಯವಾಗಿ ಹಾಲು ಕರೆಯುವುದಕ್ಕೆ ಮೊದಲು ಈ ಕಾಳಿನ ಮಿಶ್ರಣ (ತಿಂಡಿ) ವನ್ನು ಅವರ ಮುಂದಿಟ್ಟು ಹಾಲು ಕರೆಯುವುದಕ್ಕೆ ಪ್ರಾರಂಭಿಸುವುದು ಸಾಮಾನ್ಯ ಪದ್ಧತಿ. ಇದರಿಂದಾಗಿ ಎಮ್ಮೆಗಳಿಗೆ ತಿಂಡಿ ಕಂಡ ಕೂಡಲೇ ಅಥವಾ ಇಟ್ಟ ಕೂಡಲೇ ಅವು ಹಾಲಿನ ಸೊರೆಯನ್ನು ಬೇಗನೆ ಬಿಡುವುವು ಹಾಗೂ ಹಾಲನ್ನು ಪೂರ್ಣವಾಗಿ ಕೊಡುತ್ತವೆ. ಹೀಗಾಗಿ ಸುಲಭವಾಗಿ ಬೇಗನೆ ಹಾಲು ಕರೆಯಲೂಬಹುದು.

ಎಮ್ಮೆಗಳಿಗೆ ತಮ್ಮ ಕರುಗಳ ಮೇಲೆ ತಾಯಿ ಮಮತೆ ಹೆಚ್ಚು. ಇದಕ್ಕಾಗಿ ಹಿಂಡುವುದಕ್ಕಿಂತ ಮುಂದೆ ಅವರ ಕರುವನ್ನು ಹಾಲು ಕುಡಿಯಲು ಬಿಡಬೇಕು. ಎಮ್ಮೆ ತೊರೆ ಬಿಟ್ಟ ಕೂಡಲೇ ಕರುವನ್ನು ಕೊಟ್ಟಿಲಿನಿಂದ ಬಿಡಿಸಿ ತಾಯಿ ಮುಂದೆ ನೆಕ್ಕಲು ಬಿಡಬೇಕು. ಇದರಿಂದ ಹೆಚ್ಚು ಹಾಲು ಹಿಂಡುವಂತೆ ತಾಯಿಯ ಮೇಲೆ ಪರಿಣಾಮ ಉಂಟಾಗುವುದು. ಎಮ್ಮೆಗಳು ತಮ್ಮನ್ನು ನೋಡಿಕೊಳ್ಳುವವರನ್ನು, ತಮಗೆ ಆಹಾರ ಕೊಡುವವರನ್ನು ಮತ್ತು ಹಾಲು ಕರೆಯುವವರನ್ನು ಚನ್ನಾಗಿ ಗುರುತಿಟ್ಟು ಕೊಳ್ಳುತ್ತವೆ. ಆಳು ಬದಲಾಯಿಸಿದರೆ, ಆಹಾರ ಕ್ರಮ, ವೇಳೆ ತಪ್ಪಿದರೆ ಮತ್ತು ಮಗ್ಗುಲಲ್ಲಿಯ ಸಹ ಪ್ರಾಣಿಗಳು ಕಾಣಬರದಿದ್ದಲ್ಲಿ ಅಥವಾ ಪರಿಸರದಲ್ಲಿ ಇದ್ದಕ್ಕಿದ್ದ ಹಾಗೆ ಏನಾದರೂ ಬದಲಾದಲ್ಲಿ ಎಮ್ಮೆಯು ಹಾಲು ಕರೆಯುವುದನ್ನು ಕಡಮೆ ಮಾಡಿಬಿಡುತ್ತದೆ ಅಥವಾ ನಿಲ್ಲಿಸಿಬಿಡಬಹುದು. ಎಮ್ಮೆಯು ಹುಲ್ಲುಗಾವಲುಗಳಲ್ಲಿ ಒಂಟಿಯಾಗಿ ಮೇಯದೆ ಗುಂಪಾಗಿ ಮೇಯುವುದು. ಇವೆಲ್ಲ ಎಮ್ಮೆಗಳಲ್ಲಿ ಕಂಡುಬರುವ ವಿಶಿಷ್ಟ ಗುಣಗಳೆಂದು ಹೇಳಬಹುದು.

ಕೋಷ್ಟಕ 1. ವಿವಿಧ ಧಾನ್ಯಗಳಲ್ಲಿಯ ಆಹಾರಾಂಶಗಳು ಹಾಗೂ ಅವು ಜೀರ್ಣವಾಗುವ ಪ್ರಮಾಣ

ಆಹಾರ ಪದಾರ್ಥಗಳು	ಎಣ್ಣೆಯ ಭಾಗ (ನೂರಕ್ಕೆ)	ಸಸಾರಜನಕ ಭಾಗ (ನೂರಕ್ಕೆ)	ಶರ್ಕರಪಿಷ್ಟಾದಿಗಳು (ನೂರಕ್ಕೆ)	ನಾರಿನಅಂಶ (ನೂರಕ್ಕೆ)
1. ಏಕದಳ ಧಾನ್ಯಗಳು	83–88	60–80	85–90	30–50
2. ಏಕದಳ ಧಾನ್ಯಗಳ ಒಣಗಿದ ಮೇವು ಕರಡ ಅಥವಾ ಬಲಿತ ಕನಿಷ್ಠ ಹುಲ್ಲು	30–40	23–35	40–60	50-60
3. ದ್ವಿದಳ ಧಾನ್ಯಗಳು	75–80	90	92	65–75
4. ದ್ವಿದಳ ಧಾನ್ಯಗಳ ಮೇವು	50–60	57–70	60–70	40–50
5. ಹಿಂಡಿ	90–95	75–85	50–80	ಬದಲಾಗುತ್ತದೆ.

ಕೋಷ್ಟಕ 2. ಕೆಲವು ಮೇವುಗಳಲ್ಲಿಯ ಆಹಾರಾಂಶಗಳು

ಆಹಾರಾಂಶಗಳು	ಒಣ ಜೋಳದ ದಂಟು	ಹೂಡೆಗೆ ಬಂದ ಜೋಳದ ದಂಟು	ಕುದುರೆ ಮಸಾಲೆ	ಗಿನಿಹುಲ್ಲು	ಸೈಲೇಜ್
1. ನೀರು	67.02	80.24	77.75	63.38	12.08
2. ಎಣ್ಣೆ	—	0.46	0.76	0.84	—
3. ಸಸಾರಜನಕ	0.64	1.21	3.00	1.88	2.53
4. ಶರ್ಕರ ಪಿಷ್ಟಾದಿಗಳು	16.42	9.71	11.89	19.36	40.52
5. ನಾರು	12.78	6.15	3.74	8.79	33.95
6. ಬೂದಿ	3.14	2.23	2.86	5.75	10.92

ಕೋಷ್ಟಕ 3. ದ್ವಿದಳ ಬೆಳೆಗಳ ಹೊಟ್ಟು ಮೇವಿನಲ್ಲಿರುವ ಆಹಾರಾಂಶಗಳು

ಆಹಾರಾಂಶಗಳು	ತೊಗರಿಯ ಹೊಟ್ಟು	ದ್ವಿದಳ ಬೆಳೆಗಳ ಹೊಟ್ಟು	ಬಟಾಣಿ ಕಾಳಿನ ಹೊಟ್ಟು
1. ನೀರು	6.22	10.11	9.84
2. ಸಸಾರಜನಕ	14.94	4.46	9.44
3. ಶರ್ಕರ ಪಿಷ್ಟಾದಿಗಳು	54.45	38.84	42.83
4. ನಾರು	14.35	27.63	22.27
5. ಬೂದಿ	10.04	18.94	15.08

ಎಮ್ಮೆಯ ಹಾಲಿನಲ್ಲಿ ಆಕಳ ಹಾಲಿನಲ್ಲಿರುವುದಕ್ಕಿಂತ ಬೆಣ್ಣೆಯು ಅಧಿಕ ಪ್ರಮಾಣದಲ್ಲಿ ಇರುತ್ತದೆ. ಈ ಕಾರಣಕ್ಕಾಗಿಯೇ ಹಳ್ಳಿಗಳಲ್ಲಿ ಹೈನ ಉದ್ಯೋಗ ಮಾಡುವವರು ಎಮ್ಮೆಗಳನ್ನು ಹೆಚ್ಚಾಗಿ ಸಾಕಲು ಬಯಸುತ್ತಾರೆ. ಎಮ್ಮೆ ಹಾಲಿನ ರುಚಿ

ಮತ್ತು ತಂಪು ಬೇರೆ, ಆಕಳ ಹಾಲಿನ ರುಚಿ ಮತ್ತು ತಂಪು ಬೇರೆ. ಎಮ್ಮೆಯ ಹಾಲಿನಿಂದ ತಯಾರಿಸಿದ ಕಾಫಿ, ಚಹಾವನ್ನು ಕುಡಿದವರು ಆಕಳ ಹಾಲಿನಿಂದ ತಯಾರಿಸಿದ ಕಾಫಿ ಚಹಾವನ್ನು ಮೆಚ್ಚುವುದಿಲ್ಲ. ಎಮ್ಮೆಯ ಹಾಲಿನ ಕಾಫಿ ಮತ್ತು ಚಹಾವನ್ನೇ ಬಯಸುತ್ತಾರೆ. ಹಾಲಿನ ಬೆಲೆಯನ್ನು ಅದರಲ್ಲಿಯ ಬೆಣ್ಣೆಯ ಪ್ರಮಾಣದ ಮೇಲೆ ಗೊತ್ತುಪಡಿಸಲಾಗುವುದು. ಎಮ್ಮೆಯು ಮಿಶ್ರತಳಿ ಆಕಳುಗಳಿಗಿಂತ ಕಡಮೆ ಹಾಲು ಕೊಟ್ಟರೂ ಸಹ ಇದರ ಹಾಲಿನಲ್ಲಿ ಬೆಣ್ಣೆಯ ಪ್ರಮಾಣ ಅಧಿಕವಾಗಿರುವುದರಿಂದ ಇದರ ಹಾಲಿಗೆ ಆಕಳ ಹಾಲಿಗಿಂತ ಹೆಚ್ಚಿನ ಬೆಲೆ ಸಿಗುತ್ತದೆ. ಭಾರತದಲ್ಲಿ ಬಹಳಷ್ಟು ಸಿಹಿ ತಿಂಡಿಗಳಾದ ಬಂಗಾಳಿಯ ರಸಗುಲ್ಲ, ಜಾಮೂನು, ಮಹಾರಾಷ್ಟ್ರದ ಶ್ರೀಖಂಡ ಮತ್ತು ಬಾಸುಂದಿ, ಮುಂಬಯಿ ರಸವ [illegible], ಧಾರವಾಡದ ಪೇಡೆ, ಉಳಿದೆಲ್ಲ ಕಡೆಗಳಲ್ಲಿಯ ಜನಪ್ರಿಯವಾದ ದೂಧ್‌ಪೇಡೆ ಹಾಗೂ ದೂಧ್ ಬರ್ಫಿ ಎಮ್ಮೆ ಹಾಲಿನಿಂದಲೇ ಆಗುವುದು.

ರಸವತ್ತಾದ ಹಸಿಮೇವು ಮತ್ತು ಉತ್ತಮ ಹಸಿರು ಹುಲ್ಲಿನಲ್ಲಿ ನೀರಿನ ಅಂಶವು ಹೆಚ್ಚು. ಹೀಗಾಗಿ ಹಸಿಮೇವು ಮತ್ತು ಹಸಿಹುಲ್ಲು ಹೆಚ್ಚು ಸಿಗುವ ಕಾಲದಲ್ಲಿ ಎಮ್ಮೆಯು ಕೊಡುವ ಹಾಲಿನ ಪ್ರಮಾಣವು ಹೆಚ್ಚಾಗುವುದು. ಆದರೆ ಹಾಲಿನಲ್ಲಿಯ ಬೆಣ್ಣೆಯ ಅಂಶವು ಕಡಮೆಯಾಗಿ ನೀರಿನ ಅಂಶವು ಹೆಚ್ಚುವುದು. ಬೇಸಗೆಯಲ್ಲಿ 1½ ಕಿಲೋಗ್ರಾಮ್ ಹಾಲಿನಲ್ಲಿ ½ ಕಿಲೋಗ್ರಾಮ್ ಬೆಣ್ಣೆಯಿರುತ್ತದೆ. ಅದೇ ಮಳೆಗಾಲದಲ್ಲಿ 7½ ಕಿಲೋಗ್ರಾಮ್ ಹಾಲಿನಲ್ಲಿ ½ ಕಿಲೋಗ್ರಾಮ್ ಬೆಣ್ಣೆಯಿರುತ್ತದೆ. ಫೆಬ್ರವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ½ ಕಿಲೋಗ್ರಾಮ್ ಬೆಣ್ಣೆಯ ಉತ್ಪಾದನೆಗೆ 6½ ಕಿಲೋಗ್ರಾಮ್ ಹಾಲು ಬೇಕಾಗುವುದು. ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ 7½ ಕಿಲೋಗ್ರಾಮ್ ಹಾಲು ಬೇಕಾಗುತ್ತದೆ.

ಶೇಂಗಾಹಿಂಡಿ ಹಾಲಿನಲ್ಲಿರುವ ಕೊಬ್ಬಿನ ಅಂಶವನ್ನು ಹೆಚ್ಚಿಸುವುದು. ಹತ್ತಿಕಾಳು ಕೊಟ್ಟಾಗ ಬೆಣ್ಣೆಯು ಗಟ್ಟಿಯಾಗುವುದು.

ಹಾಲು ಕರೆಯುವ ಕಾಲಕ್ಕೆ ಮೊದಲಿಗೆ ಬಂದ ಹಾಲಿನಲ್ಲಿ ಶೇಕಡಾ 4 0ರಷ್ಟು ಬೆಣ್ಣೆಯಿರುತ್ತದೆ. ಕೊನೆಗೆ ಬಂದ ಹಾಲಿನಲ್ಲಿ ಶೇಕಡಾ 10ರಷ್ಟು ಬೆಣ್ಣೆಯಿರುತ್ತದೆ. ಸರಾಸರಿ ಎಮ್ಮೆಯ ಹಾಲಿನಲ್ಲಿ ಶೇಕಡಾ 6.98ರಷ್ಟು ಬೆಣ್ಣೆಯ ಅಂಶವಿರುತ್ತದೆ.

ಸಾಮಾನ್ಯವಾಗಿ ಎಮ್ಮೆಗಳ ಮತ್ತು ಆಕಳುಗಳ ಹಾಲು ಹಿಂಡುವ ಅವಧಿ ಮತ್ತು ಅವುಗಳ ಎರಡು ಸೂಲಗಳ ಮಧ್ಯಂತರದ ಸರಾಸರಿ ಕಾಲವು ಈ ಮುಂದಿನಂತಿರುತ್ತದೆ.

ಸರಾಸರಿ ಹಾಲು ಹಿಂಡುವ ಅವಧಿ (ದಿನಗಳು)	ಎರಡು ಸೂಲುಗಳ ನಡುವಿನ ಸರಾಸರಿ ಅವಧಿ (ದಿನಗಳು)
ಎಮ್ಮೆ 364	524
ಆಕಳು.... 360	475

ಎಮ್ಮೆಗಳಲ್ಲಿ ಎರಡು ಸೂಲುಗಳ ಮಧ್ಯದ ಕಾಲವು ಹೆಚ್ಚಾಗಿರುವುದು ಎಮ್ಮೆಗಳ ಗರ್ಭಧಾರಣೆಯ ಅವಧಿಯು ಆಕಳುಗಳಿಗಿಂತ ಹೆಚ್ಚಾಗಿರುವುದೇ ಕಾರಣ.

ಎಮ್ಮೆಗಳಲ್ಲಿ ಬೆದೆಯ ಚಿಹ್ನೆಗಳು ಆಕಳುಗಳಲ್ಲಿ ಕಂಡುಬರುವಂತೆ ಎದ್ದು ಕಂಡು ಬರುವುದಿಲ್ಲ. ಅವು ಗುಪ್ತವಾಗಿರುತ್ತವೆ. ಇದಕ್ಕೆ 'ಮೂಕ ಬೆದೆ' ಎನ್ನುವರು ಆದ್ದರಿಂದಲೇ ಈ ಬಗ್ಗೆ ಸ್ವಲ್ಪ ಹೆಚ್ಚು ಲಕ್ಷ್ಯ ಕೊಡಬೇಕಾಗುವುದು. ಎಮ್ಮೆಗಳು ಕೆಲವೇ ಗಂಟೆಗಳ ಕಾಲ ಮಾತ್ರ ಬೆದೆಯಲ್ಲಿರುತ್ತವೆ. ಸುಮಾರು 12 ರಿಂದ 15 ಗಂಟೆಗಳ ಕಾಲ. ಆಕಳು 20 ರಿಂದ 24 ಗಂಟೆಗಳ ಕಾಲ ಬೆದೆಯ ಮೇಲಿರುತ್ತವೆ.

ಎಮ್ಮೆಗಳ ಗರ್ಭಾವಧಿಯ ಕಾಲ ಸರಾಸರಿ 315 ದಿವಸಗಳು. ಆಕಳುಗಳಲ್ಲಿ ಗರ್ಭಾವಧಿಯ ಕಾಲ 282 ದಿವಸಗಳು.

ಪ್ರತಿ ದಿನದ ಬೇರೆ ಬೇರೆ ವೇಳೆಯಲ್ಲಿ ಹಾಲಿನಲ್ಲಿಯ ಬೆಣ್ಣೆಯ ಪ್ರಮಾಣ ಹೆಚ್ಚು ಕಡಮೆಯಾಗಿರುತ್ತದೆ. ಪ್ರತಿ ದಿನ ಆಕಳ ಕೆಚ್ಚಲಿನಲ್ಲಿ ದಿನದ ಮತ್ತು ರಾತ್ರಿಯ ಕಾಲದ ವಿಭಾಗಗಳಲ್ಲಿ ಬೆಣ್ಣೆಯ ಅಂಶವು ಹಾಲಲ್ಲಿ ಹೆಚ್ಚು ಕಡಮೆಯಾಗುತ್ತಿರುತ್ತದೆ. ರಾತ್ರಿ 12 ಗಂಟೆಗೆ ಬೆಣ್ಣೆಯ ಅಂಶವು ಹೆಚ್ಚುತ್ತಾ ಹೋಗುವುದು. ಸಾಯಂಕಾಲ ದಿಂದ ಅರ್ಧ ರಾತ್ರಿಯವರೆಗೆ ಬೆಣ್ಣೆ ಮಧ್ಯಮಾವಸ್ಥೆಯಲ್ಲಿರುತ್ತದೆ.

ರಾತ್ರಿ 12½ ಗಂಟೆಗೆ ಬೆಣ್ಣೆಯ ಅಂಶ	ಶೇಕಡಾ	— 2.59 ರಷ್ಟು
ಬೆಳಿಗ್ಗೆ 5½ ಗಂಟೆಯ ಸಮಯಕ್ಕೆ	ಶೇಕಡ	— 4.79 ರಷ್ಟು
ಸಾಯಂಕಾಲ 5 ಗಂಟೆಗೆ	ಶೇಕಡ	— 4.88ರಷ್ಟು

ಭಾರತದಲ್ಲಿ ಹೈನದ ದೃಷ್ಟಿಯಿಂದ ಎಮ್ಮೆ ಸಾಕುವುದರಲ್ಲಿ ಮೊದಲನೆಯ ತೊಡಕೆಂದರೆ ಹಾಲಿನ ಉತ್ಪಾದನೆಯಲ್ಲಿ ಆಗುವ ಋತುನಿಷ್ಠ ಹೆಚ್ಚು ಕಡಮೆಗಳು. ಎಮ್ಮೆಗಳು ಸಾಮಾನ್ಯವಾಗಿ ಆಗಸ್ಟ್, ಅಕ್ಟೋಬರ್ ನಡುವೆ ಕರುಹಾಕುವುದರಿಂದ

ಬೇಸಗೆ ಬರುವ ಹೊತ್ತಿಗೆ ಸರಿಯಾಗಿ ಒಮ್ಮೆಲೇ ಬತ್ತಲಾರಂಭಿಸಿ ಹಾಲಿನ ಪೂರೈಕೆ ಕುಗ್ಗುತ್ತದೆ. ಅಕ್ಟೋಬರ್ ಜನವರಿ ಅವಧಿಯಲ್ಲಿ ಮಿತಿಮೀರಿ ಹಾಲು ಉತ್ಪಾದನೆಯಾಗುತ್ತದೆ. ಇದರ ಕಾರಣವನ್ನು ಶೋಧಿಸಿದಾಗ ಬೇಸಗೆಯಲ್ಲಿ ಬಿಸಲಿನ ತಾಪಕ್ಕೆ ಕೋಣಗಳ ವೀರ್ಯಾಣುಗಳು ಬಹಳ ಮಟ್ಟಿಗೆ ನಾಶ ಹೊಂದುತ್ತವೆ ಮತ್ತು ಉಳಿದ ವೀರ್ಯಾಣುಗಳು ನಿರ್ಬಲ ಮತ್ತು ನಿಶ್ಚೇತನವಾಗಿರುತ್ತವೆ ಎಂದು ಕಂಡುಬಂದಿದೆ. ಎಮ್ಮೆ ಆಗ ಗರ್ಭಧರಿಸುವ ಸಂಭವ ಕಡಮೆಯಾಗುತ್ತದೆ. ಮುಂದೆ ಮಳೆ ಬಿದ್ದಾಗ ಹವೆ ತಂಪಾಗುವುದು. ಭೂಮಿಯು ಹಸಿರು ಚಿಗಿತಾಗ ವೀರ್ಯಾಣುಗಳ ಪ್ರಮಾಣ ಹೆಚ್ಚುತ್ತದೆ ಮತ್ತು ಅವುಗಳ ಚಲನವಲನ ತೀಕ್ಷ್ಣವಾಗುತ್ತದೆ. ಹೀಗೆ ಸುಮಾರಾಗಿ ಆಗಸ್ಟ್‌ರಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಬಹಳಷ್ಟು ಎಮ್ಮೆಗಳು ಗರ್ಭಧರಿಸುವುವು. ಅವು ಕರುಹಾಕಿದಾಗ ಹಾಲಿನ ಪ್ರಮಾಣ ಹೆಚ್ಚುವುದು. ಮುಂದೆ ಬೇಸಗೆಯ ಕಾಲದಲ್ಲಿ ಎಮ್ಮೆ ಬತ್ತತೊಡಗುತ್ತವೆ. ಎಮ್ಮೆಗಳಿಗೆ ಬೇಸಗೆಯ ಕಾಲದಲ್ಲಿ ಬಿಸಿಲಿನ ತಾಪವಾಗದಂತೆ ತಂಪು ಮತ್ತು ನೆರಳನ್ನು ಪೂರೈಸುವುದಲ್ಲದೆ ಸಾಕಷ್ಟು ನೀರು, ದ್ವಿದಳ ಬೆಳೆ ಹಾಗೂ ಅವುಗಳ ಹೊಟ್ಟನ್ನು ಪೂರೈಸಿ ಎಮ್ಮೆಗಳ ಗರ್ಭಧಾರಣೆಯ ಕಾಲವನ್ನು ಕೃತಕವಾಗಿ ಬದಲಾಯಿಸುವುದರ ಮೂಲಕ ಇಡೀ ವರ್ಷ ಏರಿಳಿತವಿಲ್ಲದೆ ಒಂದೇ ಪ್ರಮಾಣದಲ್ಲಿ ಹಾಲು ದೊರೆಯುವಂತೆ ಮಾಡಿಕೊಳ್ಳಬಹುದು.

ಹೈನೋತ್ಪಾದನೆಯ ಕಾರ್ಯದಲ್ಲಿ ಎಮ್ಮೆಗಳು ಮಹತ್ವದ ಪಾತ್ರವಹಿಸುತ್ತವೆ. ಇಂದಿನ ವೈಜ್ಞಾನಿಕ ಸುಧಾರಣೆಯ ದಿವಸಗಳಲ್ಲಿ ಎಮ್ಮೆಗಳ ಭವಿಷ್ಯವು ಉಜ್ವಲವಾಗಿದೆ. ಹೈನತಳಿ ಆಕಳುಗಳಿಗೆ ಕೊಡುವಷ್ಟು ಮಹತ್ವವನ್ನು ಎಮ್ಮೆಗಳ ತಳಿ ಅಭಿವೃದ್ಧಿಗೆ ಕೊಟ್ಟಲ್ಲಿ ಕ್ಷೀರೋತ್ಪಾದನೆಯ ಕಾರ್ಯ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಕೆಲವು ಮುಖ್ಯ ಜಾತಿಯ ಎಮ್ಮೆಗಳ ವರ್ಣನೆ ಈ ಮುಂದೆ ಪ್ರಸ್ತಾಪಿಸಲಾಗಿದೆ:

ಜಾಫರಾಬಾದಿ ಎಮ್ಮೆಗಳು ಜುನಾಗಡದ ಗೀರ್‌ನಾರ್ ಅರಣ್ಯ ಪ್ರದೇಶ ಮತ್ತು ಕಾಥೇವಾಡದ ದಕ್ಷಿಣ ಭಾಗದ ಗುಡ್ಡಗಾಡು ಪ್ರದೇಶಗಳೇ ಈ ಜಾತಿಯ ಎಮ್ಮೆಗಳ ಮೂಲಸ್ಥಾನ. ಕಾಥೇವಾಡದ ದಕ್ಷಿಣ ಭಾಗದಲ್ಲಿಯ ಪ್ರತಿಯೊಂದು ಹಳ್ಳಿ ಮತ್ತು ಊರುಗಳಲ್ಲಿ ಸಾಮಾನ್ಯವಾಗಿ ಈ ಜಾಫರಾಬಾದಿಯ ಜಾತಿಯ ಎಮ್ಮೆಗಳನ್ನು ಹೆಚ್ಚಾಗಿ ತುಪ್ಪವನ್ನು ತಯಾರಿಸುವುದಕ್ಕಾಗಿ ಸಾಕುತ್ತಾರೆ. ಭಾವನಗರದ ಪ್ರದೇಶಗಳಲ್ಲಿ ಈ ಜಾತಿಯ ಶುದ್ಧ ತಳಿಯ ಎಮ್ಮೆಗಳು ಸಿಗುವುವು.

ಈ ಜಾತಿಯ ಎಮ್ಮೆಗಳು ಆಕಾರದಲ್ಲಿ ಬಹಳ ದೊಡ್ಡವು. ಇವು ದೊಡ್ಡ, ಸ್ಥೂಲ ಮತ್ತು ಶಿಥಿಲ ಕಾಯದ ಪ್ರಾಣಿಗಳು. ಇವಕ್ಕೆ ಹೆಚ್ಚು ಆಹಾರಬೇಕು. ಸಾಕುವುದಕ್ಕೆ ಖರ್ಚ ಹೆಚ್ಚು ಬರುವುದು. ವಯಸ್ಸಾದ ಎಮ್ಮೆಗಳ ಕಾಲುಗಳ ಎಲುಬುಗಳು ಮತ್ತು ಗೊರಸುಗಳು ಬಹಳ ದಪ್ಪವಾಗಿ ಒರಟಾಗಿರುತ್ತವೆ. ದೇಹದ ಮುಂಡವು ಬಹಳ ದೊಡ್ಡದಾಗಿರುವುದು. ಎದೆಯ ಮುಂಭಾಗವು ಮುಂದಕ್ಕೆ ಚಾಚಿಕೊಂಡಿರುತ್ತದೆ. ಬೆನ್ನಿನ ಡುಬ್ಬದ ಭಾಗವು ಚೂಪಾಗಿ ಮೇಲಕ್ಕೆ ಎತ್ತರವಾಗಿ ಎದ್ದು ನಿಂತಿರುತ್ತದೆ. ನೋಡಲು ಇವು ಅಷ್ಟು ಅಂದವಾಗಿ ಕಾಣುವುದಿಲ್ಲ. ಬೆನ್ನಿನ ಮೇಲಿನ ಭಾಗವು ಮಟ್ಟವಾಗಿ ಒಂದೇ ಸಮನಾಗಿ ಸರಳವಾಗಿರದೆ ಏರಿಳಿತಗಳಿಂದ ಕೂಡಿರುತ್ತದೆ. ಸರ್ವೇಸಾಧಾರಣವಾಗಿ ಈ ಎಮ್ಮೆಗಳ ಮೈಬಣ್ಣ ಕಪ್ಪು. ಮುಖದ ಮೇಲೆ ಮೊಣಕಾಲುಗಳ ಕೆಳಗೆ ಹಾಗೂ ಹಿಂದಿನ ಕಾಲುಗಳ ಕೆಳಭಾಗವು ಬಿಳಿಯ ಬಣ್ಣದಿಂದ ಬಿಳಿಕಾಲು ಚೀಲ ಧರಿಸಿದಂತೆ ಕಾಣುತ್ತಿರುತ್ತವೆ. ಕಣ್ಣುಗಳು ಬಿಳುಪಾಗಿದ್ದು ಮೂಗಿನ ಸಿಂಬೆ ಮತ್ತು ಹೊಳ್ಳೆಗಳು ಬಿಳಿಯ ಬಣ್ಣ ಅಥವಾ ಗಜ್ಜರಿಯಂತೆ ಕೆಂಪು ಮಸಕು ಬಣ್ಣದಿಂದ ಕೂಡಿರುತ್ತವೆ. ಕೋಣಗಳಲ್ಲಿ ಕೊಂಬುಗಳು ಬಹಳ ಒರಟಾಗಿ ದೊಡ್ಡವಾಗಿರುತ್ತವೆ. ಹಣೆಯು ಮುಂದಕ್ಕೆ ಉಬ್ಬಿಕೊಂಡು ಬಂದಿರುತ್ತದೆ. ಕೊಂಬುಗಳು ದುಂಡಾಗಿರದೆ ಬುಡದಲ್ಲಿ ಅಗಲವಾಗಿದ್ದು, ಕುತ್ತಿಗೆಯ ಎರಡು ಮಗ್ಗುಲಿಂದ ಕೆಳಗೆ ಇಳಿದು ಕಿವಿಯಿಂದ ಜೋತುಬಿದ್ದು ನೇತಾಡುತ್ತಿರುತ್ತವೆ; ತುದಿಯಲ್ಲಿ ಸುರುಳಿ ಸುತ್ತಿಕೊಂಡಿರುತ್ತವೆ. ಎಮ್ಮೆಗಳಲ್ಲಿ ಕುತ್ತಿಗೆ ತೆಳುವಾಗಿ ಉದ್ದವಾಗಿರುತ್ತದೆ; ಕೋಣಗಳಲ್ಲಿ ಕುತ್ತಿಗೆ ದಪ್ಪವಾಗಿ ಮಾಂಸಖಂಡಗಳಿಂದ ತುಂಬಿಕೊಂಡಿರುತ್ತದೆ. ಮುಖವು ಮೊಟಕಾಗಿರುತ್ತದೆ. ಹಣೆ ಅಗಲ. ಭಾರವಾದ ಕೋಡುಗಳು. ಇವೇ ಈ ತಳಿಯ ಮುಖ್ಯ ಗುರುತುಗಳೆಂದು ಹೇಳಬಹುದು. ಕೆಚ್ಚಲು ದೊಡ್ಡದಾಗಿ ಕೆಳಗೆ ಜೋತು ಬಿದ್ದಿರುತ್ತದೆ. ಮೊಲೆಗಳು ಉದ್ದವಾಗಿದ್ದು ಬುಡದಲ್ಲಿ ಕೆಚ್ಚಲಿಗೆ ಕೂಡಿರುವ ಭಾಗದಲ್ಲಿ ಸಣ್ಣದಾಗಿದ್ದು ಕೆಳಗೆ ಬರುಬರುತ್ತಾ ದಪ್ಪವಾಗಿ ತುದಿಯ ಭಾಗವು ದಪ್ಪನಾಗಿರುತ್ತದೆ. ಈ ಎಮ್ಮೆಗಳಲ್ಲಿ ಕೆಲವು ಒಂದು ಸೂಲದ ಅವಧಿಯಲ್ಲಿ 3000 ಕಿಲೋಗ್ರಾಮ್‌ಗಳವರೆಗೆ ಹಾಲು ಕೊಡುವುದುಂಟು; ಸರಾಸರಿ 2000 ಕಿಲೋಗ್ರಾಮ್ ಹಾಲಿನಲ್ಲಿ ಬೆಣ್ಣೆಯ ಪ್ರಮಾಣ ಹೆಚ್ಚು. ಶೇಕಡಾ 9 ರಿಂದ 13ರವರೆಗೆ ಇರುತ್ತದೆ. ಪ್ರಪಂಚದ ಹೈನು ಪ್ರಾಣಿಗಳಲ್ಲಿ ಇದೇ ಗರಿಷ್ಠ ಪ್ರಮಾಣ.

ಮುರ್ರಾ ಅಥವಾ ದಿಲ್ಲಿ ಎಮ್ಮೆಗಳು ದಕ್ಷಿಣ ಪಂಜಾಬ ಮತ್ತು ದಿಲ್ಲಿ ರಾಜ್ಯಗಳು ಈ ತಳಿಯ ಎಮ್ಮೆಗಳ ಮನೆ. ರೋಟಕ್ ಕರ್ನಾಲ್ ಗೋಹಾನಾತ್ ಸೀಲ್, ಹಿಸ್ಸಾರ ಮತ್ತು ಸಿಂಧು ನದಿಯ ತಪ್ಪಲು ಪ್ರದೇಶಗಳಲ್ಲಿ ಶುದ್ಧವಾದ ರಾಸುಗಳು ದೊರೆಯುತ್ತವೆ. ಇಜ್ಜತ್‌ನಗರ, ಮೀರತ್, ಮಥುರದ

ಮಾಧುರೀಕುಂಜ, ನೈನಿತಾಲದ ನಾಗ್ಲ, ಮುಂಬಯಿ ಆರೆದುಗ್ಧಾಲಯ, ವಿಶಾಖಪಟ್ಟಣ, ಜನುರೇಟಪುರ ಈ ಎಲ್ಲ ಫಾರ್ಮ್‌ಗಳಲ್ಲಿ ಮುರ್ರಾವೇ ಹಾಲಿನ ಮೂಲ. ಮುರ್ರಾ ಜಾತಿಯ ಎಮ್ಮೆಗಳು ಬೇರೆ ಜಾತಿಯ ಇನ್ನಿತರ ಎಮ್ಮೆಗಳಿಗಿಂತ ಹೆಚ್ಚು ಉಪಯುಕ್ತವಾದವುಗಳೆಂದು ಇವುಗಳನ್ನು ಭಾರತದ ಅನೇಕ ಪಟ್ಟಣಗಳಲ್ಲಿ ಹಾಗೂ ಡೇಯರಿ ಫಾರ್ಮ್‌ಗಳಲ್ಲಿ ಹಾಲು, ತುಪ್ಪಗಳಿಗಾಗಿ ಸಾಕುತ್ತಾರೆ. ಒಂದು ರಾಸು ಕರಾವಿನ ಅವಧಿಯಲ್ಲಿ 5,000 ಕಿಲೋಗ್ರಾಮ್ ಹಾಲು ಕೊಟ್ಟಿದ್ದುಂಟು. ಹಾಲಿನ ಸರಾಸರಿ ಒಂದೊಂದು ಎಮ್ಮೆ 2000 ಕಿಲೋಗ್ರಾಮ್ ಕೊಡುವುವು. ಹಾಲಿನಲ್ಲಿಯ ಬೆಣ್ಣೆಯ ಪ್ರಮಾಣ ಶೇಕಡಾ 6 5 ರಿಂದ 8.9ರವರೆಗೆ ಅಂದರೆ ಸರಾಸರಿ ಶೇಕಡಾ 7ರಷ್ಟು ಇರುತ್ತದೆ.

'ಮ್ಯುರಾ' ಎಂದರೆ 'ಸುರುಟಿಕೊಂಡ' ಎಂದು ಅರ್ಥ(?) ತನ್ನ ಸುರುಟಿಕೊಂಡ ಕೊಂಬಿನಿಂದಲೇ ಕುಲದ ಹೆಸರು ಪಡೆದ ಎಮ್ಮೆ ಮುರ್ರಾ. ಕೊಂಬಿಲ್ಲದ ಗೋವನ್ನು ನೋಡಬಹುದು; ಆದರೆ ಕೊಂಬಿಲ್ಲದ ಎಮ್ಮೆ ಎಲ್ಲಿಯೂ ಇರಲಾರದು. ಮುರ್ರಾ ಜಾತಿಯ ಎಮ್ಮೆಗಳು ನೋಡಲು ಬಹಳ ದೊಡ್ಡ ಮೈಕಟ್ಟಿನ ಪ್ರಾಣಿಗಳು. ಇವುಗಳ ಬಣ್ಣ ಕಪ್ಪು, ಮುಖದ ಮೇಲೆ ಕಣ್ಣುಗಳ ಹತ್ತಿರ ಮತ್ತು ಬಾಲದ ತುದಿಯಲ್ಲಿ ಬಿಳಿಯ ಬಣ್ಣದ ಚುಕ್ಕೆ ಇರುವುದು ಅಪರೂಪವಲ್ಲ. ಮುರ್ರಾ ಜಾತಿಯ ಎಮ್ಮೆಗಳ ಶರೀರದ ಮುಂದಿನ ಭಾಗವು (ಮುಂಡವು) ಮತ್ತು ಟೊಂಕದ ಎಲುಬುಗಳು ಜಾಫರಾಬಾದಿಯ ಎಮ್ಮೆಗಳಷ್ಟು ದಪ್ಪನಾಗಿ ಎದ್ದು ಕಾಣುವುದಿಲ್ಲ. ಮುರ್ರಾ ಜಾತಿಯ ಎಮ್ಮೆಗಳಲ್ಲಿ ಮುಂಭಾಗಕ್ಕಿಂತ ಹಿಂದಿನ ಭಾಗವು ಸ್ವಲ್ಪ ಹೆಚ್ಚು ದೊಡ್ಡದಾಗಿರುತ್ತದೆ. ಇವುಗಳ ತಲೆ ಸಣ್ಣ; ಹಣೆಯು ಎತ್ತರವಾಗಿ ಮುಂದಕ್ಕೆ ಉಬ್ಬಿರುತ್ತದೆ; ಮುಖವು ತಳಿಗೆಯ ಆಕಾರದಂತೆ ಕಾಣುತ್ತದೆ. ಕೊಂಬುಗಳು ಬುಡದಲ್ಲಿ ದಪ್ಪವಾಗಿದ್ದು ಮುಂದೆ ತಲೆಯ ಮೇಲೆ ತಿರುವಿಕೊಂಡು ತುದಿಯಲ್ಲಿ ಸುರುಳಿಸುತ್ತಿಕೊಂಡು ಟಗರಿನ ಕೊಂಬುಗಳಂತಿರುತ್ತವೆ ಅಥವಾ ಎಮ್ಮೆಗಳ ಕುತ್ತಿಗೆ ಸಣ್ಣದಾಗಿ ತೆಳುವಾಗಿರುತ್ತದೆ. ಒಳ್ಳೇ ಜಾತಿಯ ಎಮ್ಮೆಗಳು ದಿನಕ್ಕೆ 25 ಕಿಲೋಗ್ರಾಮ್ ಹಾಲು ಕೊಡುತ್ತವೆ. ಕೆಚ್ಚಲು ದೊಡ್ಡದಾಗಿ ಉದ್ದವಾಗಿ ಕೆಳಗೆ ಇಳಿಬಿದ್ದಿರುತ್ತದೆ. ಮೊಲೆಗಳು ಸಮನಾಗಿರುತ್ತವೆ. ಈ ಜಾತಿಯ ಮಣಕಗಳು ಜಾಫರಾಬಾದಿ ಎಮ್ಮೆಗಳ ಮಣಕಗಳಿಗಿಂತ ಬೇಗನೇ ಬೆದೆಗೆ ಬರುತ್ತವೆ.

ಮಹಿಸಾನಾ ಎಮ್ಮೆಗಳು ಈ ಜಾತಿಯ ಎಮ್ಮೆಗಳು ಬಡೋದ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿಗುತ್ತವೆ. ಆಕಾರದಲ್ಲಿ ಇವು ಮುರ್ರಾ ಜಾತಿಯ ಎಮ್ಮೆಗಳಿಗಿಂತ ಸಣ್ಣವು ಮತ್ತು ಸುರತಿ ಜಾತಿಯ

ಎಮ್ಮೆಗಳಿಗಿಂತ ಸ್ವಲ್ಪ ದೊಡ್ಡವು. ಇವು ಮಧ್ಯಮ ತರಗತಿಯ ಎಮ್ಮೆಗಳು. ಎಮ್ಮೆಗಳ ಕೋಡುಗಳು ತುದಿಯಲ್ಲಿ ಸುತ್ತಿಕೊಂಡಿರುತ್ತವೆ. ಮೈಬಣ್ಣ ಕಪ್ಪು. ಮುಖದ ಮೇಲೆ, ಕಾಲು ಮತ್ತು ಬಾಲದ ತುದಿ ಬಿಳಿಯ ಬಣ್ಣದಿಂದ ಕೂಡಿರುತ್ತದೆ. ಮಣಕಗಳು ಸಣ್ಣ ವಯಸ್ಸಿಗೆ ಬೆದೆಗೆ ಬರುತ್ತವೆ. ಹಾಲು ಹಿಂಡುವುದರಲ್ಲಿ ಹೆಚ್ಚು ಏರಿಳಿತವಿಲ್ಲದೆ ಒಂದೇ ಸಮನಾಗಿ ಹಿಂಡುತ್ತವೆ. ಇವುಗಳಿಗೆ ಮುರ್ರಾ ಎಮ್ಮೆಗಳಿಗಿಂತ ಕಡಮೆ ಆಹಾರ ಬೇಕಾಗುವುದು. ಹೀಗಾಗಿ ಈ ಎಮ್ಮೆಗಳನ್ನು ಸಾಮಾನ್ಯವಾಗಿ ಹಾಲಿಗಾಗಿ ಹೆಚ್ಚಾಗಿ ಮುಂಬಯಿ ಪಟ್ಟಣದಲ್ಲಿ ಸಾಕುತ್ತಾರೆ.

ಇವು ಮುರ್ರಾ ಮತ್ತು ಸುರತಿ ಎಮ್ಮೆಗಳ ಸಂಕೀರ್ಣದಿಂದ ಹುಟ್ಟಿದ ತಳಿಯ ಎಮ್ಮೆಗಳು. ಇವುಗಳ ಪೀಳಿಗೆಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಹೆಚ್ಚಾಗಿ ಮುರ್ರಾ ಜಾತಿಯ ಕೋಣಗಳನ್ನು ಸಂತಾನಾಭಿವೃದ್ಧಿಗಾಗಿ ಉಪಯೋಗಿಸುವುದು ಒಂದು ಸಂಪ್ರದಾಯಿಕ ಪದ್ಧತಿಯಾಗಿದೆ.

ಸುರತಿ ಎಮ್ಮೆಗಳು ಗುಜರಾತ್ ರಾಜ್ಯದ ಎಲ್ಲ ಭಾಗಗಳಲ್ಲಿ ಈ ಜಾತಿಯ ಎಮ್ಮೆಗಳನ್ನು ಸಾಕುತ್ತಾರೆ. ಈ ತಳಿಯ ಎಮ್ಮೆಗಳ ಪ್ರದೇಶವೆಂದರೆ ಸುರತ್ ಮತ್ತು ಕೈರಾ ಜಿಲ್ಲೆಗಳು, ಬರೋಡೆಯ ಪಾಟ್ಲೇಡ್, ಕ್ಯಾಂಬೆ, ಮುಂಬಯಿಯ ಆನಂದ, ನದಿಯಾದ ತಾಲ್ಲೂಕುಗಳು. ಮುರ್ರಾ ಮತ್ತು ಜಾಫರಾಬಾದಿಯ ಎಮ್ಮೆಗಳೊಂದಿಗೆ ಹೋಲಿಸಿದರೆ ಇವು ಆಕಾರ ಮತ್ತು ಗಾತ್ರದಲ್ಲಿ ಸಣ್ಣವು. ಇವುಗಳ ಮೈಕಟ್ಟು ಅವುಗಳಂತೆ ಸಡಿಲವಾಗಿರದೆ ಬಿಗಿಯಾಗಿರುತ್ತದೆ ಕಪ್ಪು ಬೂದಿ ಬಿಳಿಯ ಮಾಸದ ಬಣ್ಣಗಳುಂಟು. ಸುರತಿ ಎಮ್ಮೆಗಳಲ್ಲಿ ಸಾಮಾನ್ಯವಾಗಿ ಕುತ್ತಿಗೆ ಕೆಳಗೆ ಬಿಳಿಯ ಎರಡು ರೇಖೆಗಳಿರುತ್ತವೆ ಹಸುಗಳಲ್ಲಿ ಸಿಂಧೀ ಆಕಳಂತೆ ಎಮ್ಮೆಗಳಲ್ಲಿ ಸುರತಿ ಜಾತಿಯ ಎಮ್ಮೆಗಳು ಹೈನಕ್ಕೆ ಬಹಳ ಉತ್ತಮವಾದವುಗಳೆಂದು ಹೆಸರುಗಳಿಸಿವೆ. ಹೊಟ್ಟೆಯು ಅಡಕವಾಗಿ ಕೆಚ್ಚಲು ಬಿಗಿಯಾಗಿರುತ್ತದೆ. ಬೇಗನೆ ಕರುಹಾಕಿ ಮುಂದೆ ಕಾಲಕಾಲಕ್ಕೆ ಕ್ರಮವಾಗಿ ಕರು ಹಾಕುತ್ತವೆ. ಒಂದು ರಾಸು ಒಂದು ಕರುವಿನ ಕಾಲದಲ್ಲಿ 2500 ಕಿಲೋಗ್ರಾಮ್ ಹಾಲು ಕೊಟ್ಟಿದೆ. ಸರಾಸರಿ 1750 ಕಿಲೋಗ್ರಾಮ್ ಹಾಲು ಕೊಡುತ್ತವೆ. ಬೆಣ್ಣೆಯ ಪ್ರಮಾಣ ಶೇಕಡಾ 6.5 ರಿಂದ 9ರ ವರೆಗೆ ಇರುತ್ತದೆ. ಕೋಡುಗಳು ಬಹಳ ಉದ್ದವಾಗಿ ಕತ್ತಿಯ ಆಕಾರವಾಗಿ ಅಗಲವಾಗಿರುತ್ತವೆ. ಮೊಣಕಾಲುಗಳ ಮೇಲೆ ಹೆಚ್ಚಾಗಿ ಉದ್ದವಾಗಿ ಕೂದಲುಗಳು ಬೆಳೆದಿರುತ್ತವೆ; ಸಾಮಾನ್ಯವಾಗಿ ಕಪ್ಪು ಬಣ್ಣದಿಂದ ಕೂಡಿರುತ್ತವೆ. ಆದರೆ ತಲೆಯ ಮೇಲೆ ಮತ್ತು ಬಾಲದ ತುದಿ ಬಿಳಿಯ ಬಣ್ಣದಿಂದ ಕೂಡಿರುತ್ತದೆ. ಇವುಗಳ ಬಣ್ಣ ಕಪ್ಪು ಅಥವಾ ಬಣ್ಣ ಕೆಲವಕ್ಕೆ ಎರಡು ಬಿಳಿಯ ಪಟ್ಟಿಯ ಕಂಠಾಭರಣವಿರುವುದು.

ಹೊಳೆಸಾಲು ಎಮ್ಮೆಗಳು ಹೊಳೆಸಾಲು ಎಮ್ಮೆಗಳನ್ನು ಧಾರವಾಡ ಜಾತಿಯ ಎಮ್ಮೆಗಳು ಎಂದು ಕರೆಯುತ್ತಾರೆ. ಈ ಜಾತಿಯ ಎಮ್ಮೆಗಳು ಬಹುಮಟ್ಟಿಗೆ ಸುರತಿ ಜಾತಿಯ ಎಮ್ಮೆಗಳನ್ನು ಹೋಲುತ್ತವೆ. ಇವು ಮುರ್ರಾ ಮತ್ತು ಜಾಫರಾಬಾದಿ ಜಾತಿಯ ಎಮ್ಮೆಗಳಷ್ಟು ದೊಡ್ಡ ಆಕಾರದ ದನಗಳಲ್ಲ. ಮಧ್ಯಮ ತರಗತಿಯ ಜಾತಿಯ ಎಮ್ಮೆಗಳು. ಇವುಗಳಿಗೆ ಹೆಚ್ಚು ಆಹಾರ ಬೇಕಾಗಿಲ್ಲ. ಸಾಕುವುದರಲ್ಲಿ ಖರ್ಚು ಕಡಮೆ. ಇವು ನಿರಾಯಾಸವಾಗಿ ದೂರದ ವರೆಗೆ ತಿರುಗಾಡಿ ಮೇಯಬಲ್ಲವು. ಇವುಗಳ ಮುಖ ಉದ್ದವಾಗಿ ನೀಳವಾಗಿರುತ್ತದೆ. ತಲೆಯು ಸಣ್ಣದಾಗಿರುತ್ತದೆ. ಕೊಂಬುಗಳು ಮುರ್ರಾ ಜಾತಿಯಷ್ಟು ದಪ್ಪ ಮತ್ತು ಅಗಲವಾಗಿರದೆ, ಬಹಳ ಉದ್ದವಾಗಿ ಬೆಳೆದುಕೊಂಡು ಮುಂದಿನ ಕಾಲಿನ ತೋಳು ಅಥವಾ ಎದೆಯವರೆಗೆ ಚಾಚಿಕೊಂಡಿರುತ್ತವೆ. ಇವು ನಿಲುವಿನಲ್ಲಿ ಉತ್ತರಕ್ಕಿಂತ ಬೀಸಾದ ದನಗಳು. ಕಾಲುಗಳು ಗಿಡ್ಡಾಗಿ ಗಡುತರವಾಗಿರುತ್ತವೆ. ಹೆಚ್ಚು ಮೇವಿನ ಹೆಚ್ಚು ಸೌಕರ್ಯವಿಲ್ಲದ ಪ್ರದೇಶಗಳಲ್ಲಿ ಮುರ್ರಾ, ಜಾಫರಾಬಾದಿ ಮತ್ತು ಸುರತಿ ಜಾತಿಯ ಎಮ್ಮೆಗಳಿಗಿಂತ ಈ ಹೊಳೆಸಾಲು ಅಥವಾ ಧಾರವಾಡ ಜಾತಿಯ ಎಮ್ಮೆಗಳನ್ನು ಸಾಕುವುದು ಲಾಭದಾಯಕವೆಂದು ಕಂಡುಬಂದಿದೆ. ಈ ಎಮ್ಮೆಗಳನ್ನು ಘಟಪ್ರಭಾ ಮತ್ತು ಮಲಪ್ರಭಾ ನದಿಯ ದಂಡೆಯ ತಪ್ಪಲ ಪ್ರದೇಶದಲ್ಲಿ ಹೆಚ್ಚಾಗಿ ಸಾಕುತ್ತಾರೆ.

ಅಧ್ಯಾಯ 5

ಯೂರೋಪ್ ದೇಶದ ದನಗಳ ಚರಿತ್ರೆ

ಯೂರೋಪ್ ದೇಶದ ಇಂದಿನ ದನಗಳ ಆಕಾರ, ಎತ್ತರ, ದಪ್ಪ, ಉದ್ದ, ಗಾತ್ರ, ಬಣ್ಣ ಮತ್ತು ಹಾಲು ಹಿಂಡುವ ಗುಣಗಳ ಸಿಂಹಾವಲೋಕನ ಮಾಡಿನೋಡಿದಲ್ಲಿ ಇವು ಸ್ಥಿರವಾದ ಒಂದೇ ತಳಿಯ ದನಗಳಿಂದ ಉತ್ಪನ್ನ ವಾಗದೆ, ಭಿನ್ನ ಭಿನ್ನ ತಳಿಯ ದನಗಳ ಮಿಶ್ರಣದಿಂದ ಉತ್ಪನ್ನವಾದ ಸಂಕರಣ ತಳಿಯ ದನಗಳೆಂದು ಕಂಡು ಬರುತ್ತದೆ.

ಇಂದಿನ ಅಲ್ಲಿಯ ದನಗಳ ಪೂರ್ವಜರು 'ಯೂರಾಸ್' (ಜರ್ಮನಿ ಭಾಷೆಯಲ್ಲಿ 'ಯೂರೆಷೋ')

ಎಂಬ ಕಾಡು ದನಗಳು. ಯೂರಾಸ್ ಅಡವಿ ದನಗಳು ಕ್ರೂರ ಪ್ರಾಣಿಗಳೊಂದಿಗೆ ಕಾಡಿನಲ್ಲಿ ಅಲೆದಾಡುತ್ತಿದ್ದವು. ಇವು 7 ಅಡಿಗಳಷ್ಟು ಎತ್ತರವಾಗಿದ್ದವು; ಅವುಗಳ ಕೊಂಬು 3 ಇಂಚು ಉದ್ದದವು. ಸಣ್ಣ ಆನೆಗಳಂತೆ ಕಾಣುತ್ತಿದ್ದವು ಎಂದು ಜ್ಯೂಲಿಯಸ್ ಸೀಜರ್ ಬರೆದಿರುತ್ತಾನೆ. ಇವುಗಳ ಶರೀರದ ಬಣ್ಣ ಕಪ್ಪು ಅಥವಾ ಬೂದಿ ಮಿಶ್ರಿತ ಕಪ್ಪು. ಇಂದಿಗೂ ಇಂಗ್ಲೆಂಡಿನ ಕಾಡಿನಲ್ಲಿಯ ಕೆಲವು ಭಾಗಗಳಲ್ಲಿ ಇಂಥ ಕಪ್ಪು ಬಣ್ಣದ ಪ್ರಾಣಿಗಳಿರುವುದು ಕಂಡುಬಂದಿದೆ. ಯೂರಾಸ್ ದನಗಳನ್ನು ಅಲ್ಲಿಯ ಜನರು ಕಾಡಿನಿಂದ ಹಿಡಿದುಕೊಂಡು ಬಂದು ಸಾಕಲು ಪ್ರಾರಂಭಿಸಿದರು. ಇಂಥ ಕಾಡುದನಗಳನ್ನು ಕ್ರಮೇಣ ಪಾಲನೆಮಾಡಿ, ಸಾಧುಗೊಳಿಸಿ, ಆಧುನಿಕ ವೈಜ್ಞಾನಿಕ ಪದ್ಧತಿಯಿಂದ ಸಂವರ್ಧನೆ ಮಾಡಿ ಉತ್ತಮ ಹೈನ ದನಗಳನ್ನಾಗಿ ಪರಿವರ್ತನೆ ಮಾಡಿ ಬೆಳೆಸಿದ ಶ್ರೇಯಸ್ಸು ಅಲ್ಲಿಯ ಪಶುಪಾಲಕರಿಗೆ ಸಲ್ಲುತ್ತದೆ. ಭೂಗರ್ಭ ಸಂಶೋಧನೆಯಿಂದ ತಿಳಿದುಬಂದಿರುವುದೇನೆಂದರೆ ಯೂರಾಸ್ ಕಾಡು ದನಗಳು ಮುಂದೆ ಬರುಬರುತ್ತಾ ಯೂರೋಪದಲ್ಲಿ ಮನೆಯ ಸಾಕು ದನಗಳಾದವು. ಅಲ್ಲಿಯ 'ಗ್ರೀನ್' 'ಇಲೆಂಡ್' 'ಗ್ನು' ಮತ್ತು 'ಕುಂಡಾ' ದನಗಳು, ಚಿಲಿಂಗ್‌ಹ್ಯಾಮ್ ದನಗಳ ಸಂಗಡ ಬಹಳವಾಗಿ ಕೂಡಿ ಬೆಳೆಯುತ್ತಿದ್ದವು. ಸ್ಕಾಟ್ಲೆಂಡದ 'ಹೈಲ್ಯಾಂಡ್' ದನಗಳು 'ಎನೋ' ಎಂಬ ಜಿಂಕೆಯ ಜಾತಿಯ ಪ್ರಾಣಿಗಳು; ಜಾವ, ಬಾಲಿದ್ವೀಪ, ಮಲಕ್ಕಾ ಮತ್ತು ಬೋರ್ನಿಯೋ ದನಗಳು ಒಂದು ಕಾಲದಲ್ಲಿ ಕೂಡಿ ಅಲೆದಾಡಿದ ಪ್ರಾಣಿಗಳು. ಇದರಿಂದ ಯೂರೋಪ್ ದೇಶದ ದನಗಳು ಕಾಡೆಮ್ಮೆ, ಕಾಡುಕೋಣ, ಕಾಡು ಆಕಳು (ಕಡವ), ಚಮರಿ, ನೀಲಗಾಯಿ, ಗೌರಬೆಂಟಿಂಗ್, ಈಲೆಂಡ್, ಗ್ನೂ, ಕುಂಡಾ ಮತ್ತು ಯೂರೋಪಿನ ಬೋಸ್ಟರಸ್ ಜಾತಿಯ ಪ್ರಾಣಿಗಳ ಮಿಶ್ರಣದಿಂದ ಉತ್ಪನ್ನವಾದ ದನಗಳೆಂದು ತಿಳಿದುಬರುತ್ತದೆ.

ಬ್ರಿಟನ್ನಿನ ಹೈನತಳಿ ದನಗಳ ಬೆಳವಣಿಗೆ

ರೋಮನ್ ಸಾಮ್ರಾಜ್ಯವು ತನ್ನ ಚಕ್ರಾಧಿಪತ್ಯ, ಸಂಸ್ಕೃತಿ ಮತ್ತು ನಾಗರೀಕತೆಯ ಪ್ರಭಾವವನ್ನು ಯೂರೋಪಿನಲ್ಲೆಲ್ಲಾ ಹರಡಿದ ಕಾಲವು ಒಂದಿತ್ತು. ಸುಮಾರು ಕ್ರಿ. ಪೂ. 55ರಲ್ಲಿ ಜ್ಯೂಲಿಯಸ್ ಸೀಜರನು ಇಂಗ್ಲೆಂಡ್ ದೇಶದ ಮೇಲೆ ದಂಡೆತ್ತಿ ಹೋಗಿ ದಾಳಿ ಮಾಡಿದ. ಆ ಕಾಲದಲ್ಲಿ ಇಂಗ್ಲೆಂಡ್ ಬಹಳ ಅನಾಗರೀಕ ಸ್ಥಿತಿಯಲ್ಲಿತ್ತೆಂದು ಮತ್ತು ಅಲ್ಲಿ ಗಿಡ್ಡಾದ ಕಪ್ಪು ಬಣ್ಣದ 'ಕೆಲ್ಟಿಕ್' ದನಗಳಿದ್ದುವೆಂದು ರೋಮನ್ ಸೈನಿಕರ ವರದಿಯಿಂದ ತಿಳಿದು ಬರುತ್ತದೆ. ಈ ವರದಿಯೇ ಅಂದಿನ ಕಾಲದ ಯೂರೋಪಿನ ಮೂಲ ದನಗಳ ಬಗ್ಗೆ ಸಿಗುವ ಮೊದಲ ಮಾಹಿತಿ ಎಂದು ತಿಳಿದು ಬಂದಿದೆ. ಐರ್ಲೆಂಡಿನ 'ಕೆರಿ' ದನಗಳು 'ಆರಾನ್' ಮತ್ತು ಶಟ್ಲೆಂಡ್

ದ್ವೀಪದ ದನಗಳು ಬಹುಮಟ್ಟಿಗೆ ಎಲ್ಲ ವಿಧದಲ್ಲಿ ಇಂಗ್ಲೆಂಡಿನ ಗಿಡ್ಡಾದ ಕಪ್ಪು 'ಕೆಲ್ಟಿಕ್' ದನಗಳನ್ನು ಹೋಲುತ್ತಿದ್ದವು. ವೇಲ್ಸ್ ಕಪ್ಪು ದನಗಳು ಸಹ ಈ ಮೂಲ ಇಂಗ್ಲೆಂಡಿನ 'ಕೆಲ್ಟಿಕ್' ದನಗಳನ್ನು ಹೋಲುತ್ತಿದ್ದವು ಎಂದು ರೋಮನ್ ಸೈನಿಕರ ವರದಿಗಳಿಂದ ತಿಳಿದು ಬರುತ್ತದೆ.

ರೋಮನರ ಮುಖ್ಯ ವೃತ್ತಿ ವ್ಯವಸಾಯವಾಗಿತ್ತು. ಅವರು ವ್ಯವಸಾಯಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಒಕ್ಕಲುತನದ ಎಲ್ಲ ಕೆಲಸಗಳಿಗೆ ದನಗಳನ್ನು ಉಪಯೋಗಿಸುತ್ತಿದ್ದರು. ರೋಮನ್, ಗ್ರೀಕ್, ನಾರ್ಡಿಕ ಮೊದಲಾದ ಜನರಿಗೆ ಪಶುಪಾಲನಾವೃತ್ತಿ ಅನುವಂಶಿಕವಾಗಿ ಸಾಗಿ ಬಂದಿತ್ತು. ಹೀಗಾಗಿ ರೋಮ್ ದೇಶದ ದನಗಳು ಆಗಿನ ಕಾಲಕ್ಕೆ ಶ್ರೇಷ್ಠ ತರಗತಿಯ ದನಗಳಾಗಿದ್ದವು. ಯೂರೋಪ್ ದೇಶದಲ್ಲಿ ಉತ್ತಮ ಹೈನ ದನಗಳ ಬೆಳವಣಿಗೆ ಮೊಟ್ಟಮೊದಲು ರೋಮನ್ ಜನರಿಂದಲೇ ಪ್ರಾರಂಭವಾಯಿತು ಎಂದು ಹೇಳಬಹುದು. ರೋಮನ್‌ರ ಹತ್ತಿರ ಅಪಾರ ಗೋಧನವಿತ್ತು. ಹಾಲು, ಮೊಸರು, ಬೆಣ್ಣೆ, ಗಿಣ್ಣು ಅವರ ದೈನಂದಿನ ಮುಖ್ಯ ಆಹಾರಗಳಾಗಿದ್ದವು. ಇಟಲಿಯ 'ಪೋ' ನದಿಯು ಕೊಳ್ಳದ ಪ್ರದೇಶಗಳಾದ ಟಾಸ್‌ಕನಿ ಮತ್ತು ಲೊಂಬಾರ್ಡಿ ಎಂಬ ಪ್ರದೇಶಗಳಲ್ಲಿ ಉತ್ತಮ ಜಾತಿಯ ದನಗಳಿದ್ದವು: ಕ್ರಿ. ಶ. 1860ರಲ್ಲಿ ಈಜಿಪ್ಟಿನ ರಾಜನಾದ ಪಾಷಾ ಅಧಿಕ ಸಂಖ್ಯೆಯಲ್ಲಿ ಮೈಸೂರಿನ ಅಮೃತಮಹಲ್ ದನಗಳನ್ನು ಕೊಂಡುಕೊಂಡು ತನ್ನ ದೇಶದ ದನಗಳೊಂದಿಗೆ ಬೆರೆಸಿದನು. ಇದರ ಪರಿಣಾಮವಾಗಿ ಈಜಿಪ್ಟ್ ದನಗಳಲ್ಲಿ ಅಮೃತಮಹಾಲ್ ದನಗಳ ರಕ್ತವು ಸೇರಿಕೊಂಡಿದ್ದರಿಂದ ಅವು ಶ್ರೇಷ್ಠ ದನಗಳಾದವು.

ರೋಮನ್ ಸೈನಿಕರು ಬೇರೆ ದೇಶಗಳ ಮೇಲೆ ದಂಡೆತ್ತಿ ಹೋದಾಗ ತಮ್ಮ ಜೊತೆಯಲ್ಲಿ ಈ ದನಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇವರಿಂದ ಈ ದನಗಳ ತಳಿಯು ಉತ್ತರ ಯೂರೋಪ್ ಭಾಗದಲ್ಲಿ ಮತ್ತು ಇಂಗ್ಲೆಂಡ್ ಮೊದಲಾದ ಸ್ಥಳಗಳಲ್ಲಿ ಹಬ್ಬಿ ಬೆಳೆದು ಹರಡಿಕೊಂಡಿತ್ತು. ಮೊದಲು ಮೊದಲಿಗೆ ಈ ದನಗಳನ್ನು ರೋಮನ್ ಸೈನಿಕರು ತಮಗೆ ಬೇಕಾಗುವ ಮಾಂಸದ ಸಲುವಾಗಿ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಕಾಲಕ್ರಮೇಣ ಈ ದನಗಳನ್ನು ಅಲ್ಲಿಯ ಸ್ಥಳಿಕ ದನಗಳ ಅಭಿವೃದ್ಧಿಗಾಗಿ ಉಪಯೋಗಿಸಲಾಯಿತು. ಇಂದು ನಾವು ಕಾಣುವ ಯೂರೋಪ್ ಖಂಡದ ಉತ್ತಮ ಹೈನ ದನಗಳ ಮೂಲ ಪ್ರಾಣಿಗಳೆಂದರೆ ಇಟಲಿಯ 'ಟಸಕನಿ' ಮತ್ತು 'ಲೊಂಬಾರ್ಡಿ' ದನಗಳು.

ಇವು ಆಕಾರದಲ್ಲಿ ಎತ್ತರವಾಗಿದ್ದು ಮೈಕಟ್ಟಿನಲ್ಲಿ ಅಚ್ಚುಕಟ್ಟಾದ ಬೀಸಾದ ದನಗಳಾಗಿರುತ್ತವೆ. ಇವುಗಳ ಇಣಿಯು ಬೆಳೆದಿರುವುದಿಲ್ಲ. ಹೀಗಾಗಿ ಬೆನ್ನಿನ ಮೇಲು

ಭಾಗವು ಸರಳವಾಗಿ ಉದ್ದವಾದ ಒಂದು ರೇಖೆಯಂತಿರುತ್ತದೆ. ಮುಂಭಾಗಕ್ಕಿಂತ ಹಿಂಭಾಗವು ದೊಡ್ಡದಾಗಿರುತ್ತದೆ. ಇವು ಬೆಣೆಯ ಆಕಾರದವಾಗಿರುತ್ತವೆ. ಈ ದನಗಳು ಮಾಂಸ ಮತ್ತು ಹಾಲು ಉತ್ಪಾದನೆಗೆ ಉಪಯುಕ್ತವಾದ ಪ್ರಾಣಿಗಳು. ರೋಮನ್ ಸೈನಿಕರಿಗಾಗಿ ಈ ದನಗಳ ಹಾಲಿನಿಂದ ಗಿಣ್ಣಿನ ವಡೆಗಳನ್ನು ತಯಾರಿಸುತ್ತಿದ್ದರು. ಒಂದೊಂದು ವಡೆಯೂ ಸಹ ಒಂದು ಚಕ್ರದ ಗಾಡಿಯಷ್ಟು ಗಾತ್ರವಾಗಿದ್ದು 350 ಕಿಲೋಗ್ರಾಮ್ ಭಾರವಿದ್ದವು ಎಂದು ಅಂದಿನ ದಾಖಲೆಗಳಿಂದ ತಿಳಿದುಬರುತ್ತದೆ.

'ಲೊಂಬಾರ್ಡಿ' ದನಗಳಲ್ಲಿ ಕೆಲವು ಹಳದಿ ಮಿಶ್ರಿತವಾದ ಬೂದು ಬಣ್ಣವಿದ್ದರೆ ಮತ್ತೆ ಕೆಲವು ಪಿಂಗಲವರ್ಣದಿಂದ ಕೂಡಿರುತ್ತವೆ. ಹೊಟ್ಟೆಯ ತಳಭಾಗದಲ್ಲಿ ಬಿಳುಪು ಬಣ್ಣ ಮಿಶ್ರಿತವಾಗಿರುತ್ತದೆ. ಈ ಪ್ರಕಾರ ಅವುಗಳ ಮೈಬಣ್ಣ ಹಂಡಬಂಡವಾಗಿರುತ್ತವೆ. 'ಶಾರ್ಟ್‌ಹಾರನ್' ಮತ್ತು 'ಫ್ರೀಜಿಯನ್' ಜಾತಿಯ ದೊಡ್ಡ ಗಾತ್ರದ ದನಗಳು ಈಜಿಪ್ಟಿನ ಲೊಂಬಾರ್ಡಿ ದನಗಳ ಲಕ್ಷಣದಿಂದ ಕೂಡಿರುವುದನ್ನು ನಾವು ಇಂದು ನೋಡಬಹುದು.

ಐದುನೂರು ವರ್ಷಗಳ ನಂತರ ರೋಮನರು ಇಂಗ್ಲೆಂಡ್ ದೇಶದ ಮೇಲಿನ ತಮ್ಮ ಪ್ರಭುತ್ವವನ್ನು ಬಿಟ್ಟುಕೊಟ್ಟರು. ಇವರ ನಂತರ ಆಂಗ್ಲೀಕರು, ಸಾಕ್ಸನರು, ಜೂಟರು, ಡೇನರು ಮತ್ತು ನಾರ್ಡೀಕರು ಒಬ್ಬರಾದ ಮೇಲೆ ಒಬ್ಬರು ಇಂಗ್ಲೆಂಡಿನ ಮೇಲೆ ದಾಳಿ ಮಾಡಿದರು. ಈ ಜನರೂ ಸಹ ದಾಳಿಯ ಕಾಲಕ್ಕೆ ತಮ್ಮ ಸಂಗಡ ತಮ್ಮ ದೇಶದ ದನಗಳನ್ನು ತಂದಿದ್ದರು. ಈ ದನಗಳು ಹೆಚ್ಚಾಗಿ ಕೆಂಪು ಹಳದಿ ಮಿಶ್ರಿತ ಬಣ್ಣ ಮತ್ತು ತಾಮ್ರ ವರ್ಣವಿದ್ದವು. ಬ್ರಿಟನ್ನಿನ ದನಗಳಲ್ಲಿ ಇಂದು ಕಾಣುವ ನಾನಾ ಮಿಶ್ರಿತ ಬಣ್ಣದ ದನಗಳು ಈ ಮೇಲೆ ಹೇಳಿದ ಎಲ್ಲ ದನಗಳ ಸಂಕರಣದ ಪ್ರಭಾವವೆಂದು ಹೇಳಬಹುದು.

ರೋಮನ್‌ರು ತಮ್ಮ ಆಳ್ವಿಕೆಯ ಕಾಲದಲ್ಲಿ ಅಂದಿನ ಮೂಲನಿವಾಸಿಗಳಾದ ಬ್ರಿಟನ್ನಿನ ಜನರಲ್ಲಿ ಯಾವ ಸಂಘಟನೆಯನ್ನು ಮಾಡದಿದ್ದುದರಿಂದ ಮುಂದೆ ಈ ಬ್ರಿಟನ್ನಿನ ಆದಿನಿವಾಸಿಗಳು ರೋಮನ್ನರ ನಂತರ ಬಂದ ದಾಳಿಗಾರರನ್ನು ಎದುರಿಸಲಾರದೆ ತಮ್ಮ ತಮ್ಮ ದನಗಳೊಂದಿಗೆ ಸ್ಕಾಟ್ಲೆಂಡ್, ವೇಲ್ಸ್ ಮೊದಲಾದ ಎತ್ತರ ಗುಡ್ಡಗಾಡು ಪ್ರದೇಶಗಳಿಗೆ ಹೋಗಿ ನೆಲೆಸಿದರು.

ಆಂಗ್ಲೀಕರು, ಸಾಕ್ಸನರು, ಜೂಟರು ಮತ್ತು ಡೇನರು ತಮ್ಮ ದನಗಳೊಂದಿಗೆ ಬಂದು ದಾಳಿ ಮಾಡಿ ಇಂಗ್ಲೆಂಡಿನಲ್ಲಿ ಸ್ಥಿರವಾಗಿ ನೆಲೆ ನಿಂತರೂ ಅವರು ಅಲ್ಲಿಯ ಹೈನ

ದನಗಳ ಅಭಿವೃದ್ಧಿಗೆ ಹೆಚ್ಚು ಗಮನ ಹಾಕಲಿಲ್ಲ. ನಾರಡೀಕರರು ನಾರಮಂಡಿಯ ಮೇಲೆ ದಾಳಿ ಮಾಡಿದ ಕಾಲಕ್ಕೆ ತಮ್ಮ ಜೊತೆಯಲ್ಲಿ ಉತ್ತರ ಫ್ರಾನ್ಸ್‌ನ ದನಗಳನ್ನು ತೆಗೆದುಕೊಂಡು ಹೋಗಿದ್ದರು. ಕ್ರಿ. ಶ. 1066ರಲ್ಲಿ ವಿಲಿಯಂ ದಿ ಕಾಂಕರರ್, ಇಂಗ್ಲೆಂಡಿನ ಮೇಲೆ ದಾಳಿ ಮಾಡಿದಾಗ ಈ ನಾರಡೀಕರರು ತಮ್ಮ ಜೊತೆಯಲ್ಲಿ ಈ ಉತ್ತರ ಫ್ರಾನ್ಸಿನ ದನಗಳನ್ನು ತಂದಿದ್ದರು. ಈ ದನಗಳು ಶರೀರ ಬಾಹ್ಯ ಅಂಗರಚನೆ ಮತ್ತು ಸೌಂದರ್ಯ ವೈಶಿಷ್ಟ್ಯ (ಚಹರೆಪಟ್ಟಿ) ಗಳಲ್ಲಿ ಬಹುಮಟ್ಟಿಗೆ ಜರ್ಸಿ ದನಗಳನ್ನು ಹೋಲುತ್ತಿದ್ದವು.

ಹದಿನೈದು ಮತ್ತು ಹದಿನಾರನೆಯ ಶತಮಾನಗಳವರೆಗೆ ದನಗಳ ತಳಿ ಅಭಿವೃದ್ಧಿಯ ಕಾರ್ಯ ಇಂಗ್ಲೆಂಡಿನಲ್ಲಿ ಬೆಳಕು ಕಂಡಿರಲಿಲ್ಲ. ಆದೇ ಈಜಿಪ್ಟಿನ ಲೊಂಬಾರ್ಡಿ ದನಗಳು, ಫ್ಲೆಮಿಷ್ ದನಗಳು ಮತ್ತು ಡಚ್ ದನಗಳು ಬಹಳ ಸುಧಾರಿಸಿದ್ದವು. ಈ ಸುಧಾರಿಸಿದ ದನಗಳನ್ನು ಇಂಗ್ಲೆಂಡ್ ತನ್ನ ಹೈನ ದನಗಳ ಅಭಿವೃದ್ಧಿಗಾಗಿ ಉಪಯೋಗಿಸಿಕೊಂಡಿತು. ಈ ಪ್ರಕಾರ ನಾನಾ ಭಾಗಗಳಿಂದ ಬಂದ ನಾನಾ ವರ್ಣದ ಭಿನ್ನ ಭಿನ್ನ ಜಾತಿಯ ದನಗಳ ಸಂಕರಣ(ಮಿಶ್ರಣ)ದ ಪರಿಣಾಮವಾಗಿ ನಾವು ಇಂದು ವಿವಿಧ ಮೈಕಟ್ಟು, ಆಕಾರ ಹಾಗೂ ವರ್ಣಗಳಿಂದ ಕೂಡಿದ ದನಗಳನ್ನು ಯೂರೋಪಿನಲ್ಲಿ ನೋಡುತ್ತೇವೆ.

ಹದಿನೆಂಟನೆಯ ಶತಮಾನದ ಮಧ್ಯಕಾಲಕ್ಕೆ ತಳಿ ಅಭಿವೃದ್ಧಿಕಾರ್ಯ ಇಂಗ್ಲೆಂಡಿನಲ್ಲಿ ಒಂದು ನಿಯಮಿತ ಕ್ರಮಬದ್ಧವಾದ ರೀತಿಯಲ್ಲಿ ರೂಪುಗೊಂಡಿತು. ಹೀಗೆ ಒಂದು ಯೋಜನಾಬದ್ಧವಾದ, ಕ್ರಮಬದ್ಧವಾದ ಸುಧಾರಿಸಿದ ಪದ್ಧತಿಯ ತಳಹದಿಯ ಮೇಲೆ ಪಶುಸಂಗೋಪನೆಯ ಕಾರ್ಯ ಮೊಟ್ಟ ಮೊದಲಿಗೆ ಇಂಗ್ಲೆಂಡಿನಲ್ಲಿ ಕ್ರಿ. ಶ. 1725–95ರ ಅವಧಿಯಲ್ಲಿ ರಾಬರ್ಟ್ ಬೇಕ್‌ವೆಲ್‌ನಿಂದ ಪ್ರಾರಂಭವಾಯಿತು. ಇವನೇ ಇಂಗ್ಲೆಂಡಿನ ಆಧುನಿಕ ಹೈನ ತಳಿ ಅಭಿವೃದ್ಧಿಯ ಜನಕ. ಇವನು ಅನುಸರಿಸಿದ ಪದ್ಧತಿಯು ಕೇವಲ ಉದ್ದ ಕೋಡಿನ ಲಾಂಗ್ ಹಾರನ್ ಜಾತಿಯ ದನಗಳ ಮಟ್ಟಿಗೆ ಮಾತ್ರ ಸೀಮಿತಗೊಂಡಿತ್ತು. ಈ ದನಗಳಲ್ಲಿ ಆಗಿನ ಕಾಲದಲ್ಲಿ ಹೇಳಿಕೊಳ್ಳುವಷ್ಟು ಪ್ರಗತಿ ಕಂಡು ಬರದಿದ್ದರೂ ಬೇಕ್‌ವೆಲ್ ಅನುಸರಿಸಿದ ಪದ್ಧತಿ ಬೇರೆ ಪಶುಪಾಲಕರಿಗೆ ಮಾರ್ಗದರ್ಶನವಾಯಿತು. ಇಂದು ಬೇಕ್‌ವೆಲ್‌ನ ಹೆಸರು ಮರೆತು ಹೋಗಿದ್ದರೂ ಅವನು ಹಾಕಿಕೊಟ್ಟ ಪಶುಸಂಗೋಪನಾ ಪದ್ಧತಿಯ ಮಾರ್ಗ ಇಂದಿಗೂ ಸಹ ಎಲ್ಲ ಕಡೆ ಬಳಕೆಯಲ್ಲಿದೆ. ಅವನು ತೋರಿಸಿಕೊಟ್ಟ ತಳಿ ಅಭಿವೃದ್ಧಿಯ ಮಾರ್ಗಗಳು ಈ ಕೆಳಕಂಡಂತಿವೆ:

(1) ಒಂದೇ ಜಾತಿಗೆ ಸೇರಿದ ಶ್ರೇಷ್ಠ ಗುಣವುಳ್ಳ ದನಗಳನ್ನು ಆರಿಸಿ ಅವು

ಗಳನ್ನು ಜೊತೆಗೂಡಿಸಿ ತಳಿ ಉತ್ಪಾದಿಸುವುದು, ಇದಕ್ಕೆ 'ಶುದ್ಧ ಸಂಗೋಪನೆ' ಎನ್ನುತ್ತಾರೆ.

(2) ಬೇರೆ ಬೇರೆ ತಳಿಯ ದನಗಳ ಸಂಕರಣದಿಂದ (ಅಂದರೆ ಎರಡು ಪ್ರತ್ಯೇಕ ಸ್ಥಿರವಾದ ತಳಿಯ ದನಗಳ ಮಿಶ್ರತಳಿ ಉತ್ಪಾದನೆ ಮಾಡುವುದು). ಈ ಪದ್ಧತಿಗೆ 'ಮಿಶ್ರತಳಿ ಸಂಗೋಪನೆ' ಎಂದು ಹೇಳುತ್ತಾರೆ.

(3) ಉಪಯೋಗಕ್ಕೆ ಬಾರದ ದನಗಳನ್ನು ಆರಿಸಿ ತೆಗೆದು ಬಿಡುವುದು.

(4) ಉತ್ತಮ ಆಹಾರ ಪೂರೈಕೆ ಮತ್ತು ಸುಧಾರಿಸಿದ ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸುವುದು.

ಹದಿನೆಂಟನೆಯ ಶತಮಾನದಲ್ಲಿ ಯುರೋಪಿನ ಪಶುಪಾಲಕರು ಹೆಚ್ಚು ಹೆಚ್ಚು ಸಂಖ್ಯೆಗಳಲ್ಲಿ ಈ ಪದ್ಧತಿಯನ್ನು ಕಾರ್ಯರೂಪಕ್ಕೆ ತಂದಾಗ್ಯೂ ಹೈನ ದನಗಳ ಅಭಿವೃದ್ಧಿಯಲ್ಲಿ ಇವರ ಪರಿಣಾಮವು 19ನೇ ಶತಮಾನದಲ್ಲಿ ಕಂಡುಬಂದಿತು. ಇಂದಿಗೂ ಸಹ ರಾಬರ್ಟ್ ಬೇಕ್‌ವೆಲ್ ಹಾಕಿಕೊಟ್ಟ ತಳಿ ಅಭಿವೃದ್ಧಿಯ ಪದ್ಧತಿಗಳು ಎಲ್ಲ ಕಡೆ ಆಚರಣೆಯಲ್ಲಿವೆ. ಇವರ ಜೊತೆಗೆ ಇಂದಿನ ಆಧುನಿಕ ವೈಜ್ಞಾನಿಕ ಪ್ರಗತಿಯಿಂದ ಇತ್ತೀಚೆಗೆ ಒಂದು ತಳಿ ಹೋರಿಯ ಯೋಗ್ಯತೆಯನ್ನು ತಿಳಿಯಲು ಅವರ ಕೌಟುಂಬಿಕ ಚರಿತ್ರೆಯನ್ನು ಅಂದರೆ, ಅಕ್ಕ, ತಂಗಿ, ತಾಯಿ ಮತ್ತು ಮಗಳು ಉತ್ಪಾದನಾ ಶಕ್ತಿಯನ್ನು ಅಳತೆಗೋಲನ್ನಾಗಿ ಉಪಯೋಗಿಸುತ್ತಿದ್ದಾರೆ. ಅಲ್ಲದೆ ಕೃತಕ ಗರ್ಭಧಾರಣಾ ಪದ್ಧತಿಯು ಶೀಘ್ರ ತಳಿ ಅಭಿವೃದ್ಧಿ ಕಾರ್ಯದಲ್ಲಿ ಒಂದು ಬಹು ಮುಖ್ಯ ಸಾಧನವಾಗಿದೆ. ಹೀಗೆ ನೂರಾರು ವರ್ಷಗಳ ನಿರತ ಪರಿಶ್ರಮ ಮತ್ತು ಸಂಗೋಪನೆಯ ಫಲವೇ ಇಂದು ನಾವು ಎಲ್ಲ ಕಡೆ ನೋಡುತ್ತಿರುವ ಬ್ರಿಟನ್ನಿನ ದನಗಳ ಅಭಿವೃದ್ಧಿಯ ರಹಸ್ಯವಾಗಿದೆ.

ಇಂಗ್ಲೆಂಡಿನ ದನಗಳನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಮುಖ್ಯವಾಗಿ 3 ಭಾಗಗಳಾಗಿ ವಿಂಗಡಿಸಬಹುದು :

(1) ಇಂಗ್ಲೆಂಡ್ ಮತ್ತು ವೇಲ್ಸ್ ದನಗಳು
(2) ಸ್ಕಾಟ್ಲೆಂಡ್ ಮತ್ತು ಆಯರ್‌ಲೆಂಡ್ ದನಗಳು
(3) ಇಂಗ್ಲೆಂಡಿನ ಬೇರೆ ಬೇರೆ ದ್ವೀಪದ ದನಗಳು

(1) ಇಂಗ್ಲೆಂಡ್ ಮತ್ತು ವೇಲ್ಸ್ ದನಗಳು	(1) ಶಾರ್ಟ್‌ಹಾರನ್ (ಸಣ್ಣ ಕೊಂಬಿನ ದನಗಳು) (2) ರೆಡ್‌ಪೋಲ್ (3) ಲಿಂಕನ್ ಶಯರ್ (ಸಣ್ಣ ಕೊಂಬು ಮತ್ತು ಕೆಂಪು ಬಣ್ಣದವು)

4) ಹಿರ್‌ಫೋರ್ಡ್ ಶಯರ್ (ಮುಖ ಬಿಳ್ಪಗೆ ಶರೀರ ಕೆಂಪು ಬಣ್ಣ) 5) ರೆಡ್‌ಪೋಲ್ಡ್ (ಕೆಂಪು ಬಣ್ಣದ್ದು) 6) ನಾರ್ಥ್‌ಡೌನ್ (ಶರೀರ ಅರ್ಧ ಬಿಳಿಯದು) ಹಾಗೂ ಸೌಥ್‌ಡೌನ್ 7) ಲಾಂಗ್ ಹಾರನ್ (ಉದ್ದ ಕೋಡು) 8) ಡಾರ್‌ಹ್ಯಾಮ್ (ಸಣ್ಣಕೋಡು) ಮತ್ತು ಯಾರ್ಗ್‌ಶಾಯರ್ 9) ಸೆಸೆಕ್ಸ್ (ಡಾನ್ ಜಾತಿಯದು) 10) ವೇಲ್ಸ್ (ಕಪ್ಪು ಬಣ್ಣದ್ದು) 11) ಫಾಕ್ಲೆಂಡ.

2) ಸ್ಕಾಟ್ಲೆಂಡ್ ಮತ್ತು ಆಯರ್ಲೆಂಡ್ ದನಗಳು 1) ಅಬರಡೀನ್ ಎಂಗಸ್ 2) ಅಯರಶಯರ್ 3) ಗಾಲ್ವೇ 4) ವೆಸ್ಟ್ ಹೈಲೆಂಡ್ 5) ಕೆರ್ರಿ ಹಾಗೂ ಡೆಕ್ಸ್‌ಟರ್

3) ಇಂಗ್ಲೆಂಡಿನ ಬೇರೆ ಬೇರೆ ದ್ವೀಪದ ದನಗಳು 1) **ಹೈನ ದನಗಳು:** (ಅ) ಜರ್ಸಿ (ಆ) ಗರನ್ಸಿ (ಇ) ಹೊಲ್‌ಸ್ಟೀನ್–ಫ್ರೀಜಿಯನ್ ಕೆರಿಡೆಕ್ಸ್‌ಟರ್

2) ಮಾಂಸ ಮತ್ತು ಹಾಲಿನ ದನಗಳು: (ಅ) ಶಾರ್ಟ್‌ಹಾರನ್ (ಆ) ಲಿಂಕನ್‌ಷೈರ್ (ಇ) ರೊಡ್‌ಪೋಲ್ಡ್ (ಈ) ಡೆಕ್ಸ್‌ಟರ್

3) **ಮಾಂಸದ ದನಗಳು:** (ಅ) ಹಿರ್‌ಪೋರ್ಡ್ (ಆ) ಡೌನ್ (ಇ) ಸಸ್ಕೆ (ಈ) ಲಾಂಗ್‌ಹಾರಾನ್ (ಉ) ಡೆಕ್ಸ್‌ಟರ್ (ಊ) ಪೆನ್‌ಬ್ರೂಕ್ (ಎ) ಮಾರ್ಟಿನ್ (ಏ) ಅಬರಡೀನ್ (ಐ) ಗಾಲ್ವೆ ವೆಸ್ಟ್ ಹೈಲೆಂಡ್

4) ಹಾಲೆಂಡ್ ದನಗಳು 1) ಹೋಲ್‌ಸ್ಟೀನ್–ಫ್ರೀಜಿಯನ್ 2) ಲೇಕನ್ ಫೀಲ್ಡ್ ಅಥವಾ ಡಚ್‌ಬೆಲ್ಟ್

(i) ಇಂಗ್ಲೆಂಡ್ ಮತ್ತು ವೇಲ್ಸ್ ದನಗಳು

1) ಡೈರಿ ಶಾರ್ಟ್‌ಹಾರನ್ (ಸಣ್ಣ ಕೊಂಬಿನ ದನಗಳು) ಈ ದನಗಳು ಯಾವ ಜಾತಿಗೆ ಸೇರಿದ ದನಗಳೆಂದು ನಿರ್ಣಯ ಮಾಡುವುದು ಸ್ವಲ್ಪ ಕಠಿಣ. ಇದು ಸಂಕರಣ ಜಾತಿಯ ದನವೆಂದು ಬಹು ಜನರ ಅಭಿಪ್ರಾಯ. ಶ್ರೀ ಲಿಂಕಲೇರ ಎಂಬ ವಿದ್ವಾಂಸರ, ಇದು ಸ್ಯಾಕ್ಸನ್ ಜನ ತಮ್ಮ ಜೊತೆಗೆ ತಂದ ಬೋಸ್ಟರಸ್ ಜಾತಿಯ ದನವೆಂದು ಸ್ಥಿರಗೊಳಿಸಿರುತ್ತಾರೆ. ಕ್ರಿ. ಶ. 18ನೇ ಶತಮಾನದ ಅಂತಿಮ ಭಾಗ (1790)ದಲ್ಲಿ ಹೈನ ತಳಿಯ ಅಭಿವೃದ್ಧಿಯ ಕಾರ್ಯದಲ್ಲಿ ನಿರತರಾದ ಮತ್ತು ಆಸಕ್ತಿವಹಿಸಿದ್ದ, ಸಮ್ಮಾವಂತರಾದ ಕಾಲಿಂಗ್ ಬ್ರದರ್ಸ್ ಥಾಮಸ್ ಬೂತ್ ಮತ್ತು ಥಾಮಸ್ ಬೇಟ್ಸ್ ಎಂಬುವರು ಇಂಗ್ಲೆಂಡಿನ ಈಶಾನ್ಯ ಭಾಗದಲ್ಲಿರುವ ಟೀಸ್ ನದಿ ಜಿಲ್ಲೆಯಲ್ಲಿಯ ಉತ್ತಮ ಶಾರ್ಟ್‌ಹಾರನ್ ಆಕಳುಗಳನ್ನು ಆರಿಸಿ ಹಾಲೆಂಡದ ಫ್ರೀಜಿಯನ್ ಮತ್ತು ಡೆನ್ಮಾರ್ಕ್‌ಗಳಿಂದ ಆರಿಸಿ ತಂದ ಉತ್ತಮ ರೆಡ್‌ಡೇನ್ ಹೈನ ತಳಿಯ ಹೋರಿಗಳೊಂದಿಗೆ ಸಂವರ್ಧನೆ ಮಾಡಿದರು,

ಇವುಗಳಿಗೆ ಹುಟ್ಟಿದ ಸಂಕರಣ [ಮಿಶ್ರ] ಜಾತಿಯ ದನಗಳು ಮಾಂಸ ಮತ್ತು ಹಾಲು ಈ ಎರಡೂ ಕೆಲಸಕ್ಕೆ ಉಪಯುಕ್ತವಾದವು. ಈ ದನಗಳನ್ನು 'ಡೈರಿಶಾರ್ಟ್‌ಹಾರನ್' ದನಗಳೆಂದು ಕರೆಯಲಾಯಿತು. ಇವುಗಳ ಹಾಲಿನಲ್ಲಿ ಬೆಣ್ಣೆ ಅಧಿಕಾಂಶದಲ್ಲಿರುತ್ತದೆ. ಈ ಜಾತಿಯ ಆಕಳುಗಳು ಹಿಂಡದೆ ಬರಡಿದ್ದಾಗ್ಯೂ ಸಹ ಅವುಗಳ ಶರೀರ ಮಾಂಸ ಖಂಡಗಳಿಂದ ತುಂಬಿಕೊಂಡಿರುತ್ತದೆ. ಆದ್ದರಿಂದ ಇವು ಮಾಂಸಕ್ಕೆ ಹೆಸರಾದ ದನಗಳೆಂದು ಹೇಳಲಾಗಿದೆ. ಈ ಜಾತಿಯ ಹೋರಿಗಳನ್ನು ಮಾಂಸಕ್ಕಾಗಿ ಕೊಬ್ಬಿಸಿ ಬೆಳೆಸುತ್ತಾರೆ. ಇವುಗಳ ತೂಕ 600 ಕಿಲೋಗ್ರಾಮ್‌ಗಳಿಗಿಂತ ಕಡಮೆ ಇರುವುದಿಲ್ಲ. ಇವು ಹಾಲಿಗೂ ಸಹ ಪ್ರಸಿದ್ಧವಾದ ಹೈನ ದನಗಳು. ಇವರ ಶರೀರದ ಬಣ್ಣ ಬಿಳುಪು ಮತ್ತು ಕೆಂಪು ಮಿಶ್ರ ಅಥವಾ ಉಜ್ವಲ ರಕ್ತ ಬಣ್ಣ. ಹಣೆಯು ಸಣ್ಣದಾಗಿರುತ್ತದೆ. ಮೂಗು ಉದ್ದವಾಗಿ ಸ್ವಲ್ಪ ಎತ್ತರವಾಗಿರುತ್ತದೆ. ಕಣ್ಣುಗಳು ಕಪ್ಪು ಬಣ್ಣದಿಂದ ಕಾಂತಿಯುತವಾಗಿರುತ್ತವೆ. ಮುಂದಿನ ಎರಡು ಕಾಲುಗಳು ಹಿಂದಿನ ಕಾಲುಗಳಿಗಿಂತ ಗಿಡ್ಡಾಗಿರುತ್ತವೆ. ಬೆನ್ನು ಸರಳರೇಖೆಯಂತೆ ಒಂದೇ ಸಮನಾಗಿರುತ್ತದೆ. ಆಕಳುಗಳ ಕೆಚ್ಚಲು ಕೊಡದಂತೆ ದೊಡ್ಡವಾಗಿ ಜೋತಾಡುತ್ತಿರುತ್ತದೆ.

(ii) **ರೆಡ್‌ಪೋಲ್ :** 19ನೇ ಶತಮಾನದ ಪ್ರಾರಂಭದ ಕಾಲಕ್ಕೆ ಇಂಗ್ಲೆಂಡಿನಲ್ಲಿ ನಾರ್‌ಫೋಕ್ ಮತ್ತು ಸಫೋಕ್‌ಗಳಲ್ಲಿಯ ದನಗಳನ್ನು ಆರಿಸಿ ಇವುಗಳ ಸಂಯೋಗದಿಂದ ತಳಿಸಂವರ್ಧನೆ ಮಾಡಿ ಈ ತಳಿಯ ದನಗಳನ್ನು ಅಭಿವೃದ್ಧಿಗೊಳಿಸಿ ಬೆಳೆಸಲಾಯಿತು. ' ಹೀಗೆ ಬಹಳ ಕಾಲವವರೆಗೆ ಇವುಗಳ ಸಂಯೋಗದಿಂದ ಹುಟ್ಟಿದ ಪೀಳಿಗೆಯಲ್ಲಿ ನಾರ್‌ಫೋಕ್ ದನಗಳಲ್ಲಿಯ ತುಂಬಿದ ಮಾಂಸ ಖಂಡದ ಗುಣ ಮತ್ತು ಅವುಗಳ ಕೆಂಪು ಬಣ್ಣವನ್ನು ಸಫೋಕ್ ದನಗಳಲ್ಲಿಯ ಹಾಲು ಮತ್ತು ಬೆಣ್ಣೆಯ ಗುಣ ಮತ್ತು ಅವುಗಳ ಕೆಂಪು ಬಣ್ಣವನ್ನು ಸಫೋಕ್ ದನಗಳಲ್ಲಿಯ ಹಾಲು ಮತ್ತು ಬೆಣ್ಣೆಯ ಗುಣವಲ್ಲದ ಅವುಗಳ ತಲೆಯ ಮೇಲೆ ಅಂದರೆ ನೆತ್ತಿಯ ಮೇಲೆ ಎರಡು ಕೋಡುಗಳ ಮಧ್ಯೆ ಕಾಣುವ ಎತ್ತರವಾದ ಗುಬಟೆಯನ್ನು ಅನುವಂಶಿಕವಾಗಿ ಪಡೆದಿರುತ್ತವೆ. ಇದಕ್ಕಾಗಿ ಈ ದನಗಳನ್ನು ರೆಡ್‌ಪೋಲ್ ಎಂದು ಕರೆಯಲಾಗಿದೆ.

(iii) **ಲಿಂಕನ್‌ಶಯರ್ :** (ಸಣ್ಣ ಕೋಡುಗಳ ಕೆಂಪು ಬಣ್ಣದ ದನ) : ಈ ಜಾತಿಯ ದನಗಳು ಕಾಡು ಹಾಗೂ ಗುಡ್ಡಗಾಡುಗಳ ದನಗಳು ಮತ್ತು ಸಣ್ಣ ಕೊಂಬಿನ ದನಗಳ ಸಂಯೋಗದಿಂದ ಉತ್ಪಾದನೆಯಾದ ದನಗಳು ಎಂದು ಹೇಳಲಾಗಿದೆ. ಈ ಜಾತಿಯ ಎತ್ತುಗಳು ಒಕ್ಕಲತನಕ್ಕೆ ಬಹಳ ಉಪಯುಕ್ತವಾಗಿವೆ. ಇವು ಕಡಿಮೆ ಆಹಾರವನ್ನು ತಿನ್ನುತ್ತವೆ. ಬಹಳ ಶ್ರಮಜೀವಿಗಳು, ನಿರೋಗದನಗಳು.

(4) ಹೆರಿಫೋರ್ಡ್‌ಶಯರ್ ದನಗಳು ಈ ದನಗಳ ಮುಖ, ಕುತ್ತಿಗೆ ಮತ್ತು ಹೊಟ್ಟೆಯ ಭಾಗಗಳು ಬಿಳಿಯ ಬಣ್ಣದಿಂದ ಕೂಡಿರುತ್ತವೆ, ಉಳಿದ ಶರೀರದ ಭಾಗವು ಕೆಂಪು ಬಣ್ಣ. ಇದರ ಮುಖವು ಬಿಳಿಯ ಬಣ್ಣದಿಂದ ಕೂಡಿರುವುದರಿಂದ ಈ ಜಾತಿಯ ದನಗಳು ಷಾರ್ಟ್‌ಹಾರ್ನ್ ಜಾತಿಯ ದನಗಳ ಸಂಯೋಗದಿಂದ ಉತ್ಪನ್ನವಾದ ಸಂಕರಣ ಜಾತಿಯ ದನಗಳೆಂದು ಬಹು ಜನರ ಅಭಿಪ್ರಾಯವಿದೆ. ಇನ್ನು ಉಳಿದ ಎಲ್ಲ ವಿಷಯಗಳಲ್ಲಿ ಈ ದನಗಳು ಸಣ್ಣ ಕೊಂಬಿನ ದನಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಆದರೆ ಅವುಗಳಷ್ಟು ಹಾಲು ಹಿಂಡುವುದಿಲ್ಲ. ಇದು ಮಾಂಸಕ್ಕೆ ಹೆಸರಾದ ಜಾತಿಯ ದನ. ಈ ದನಗಳು ಸ್ವಾಭಾವಿಕವಾಗಿ ಶಾಂತಿ ಮತ್ತು ಧೈರ್ಯ ಗುಣಗಳಿಂದ ಕೂಡಿರುತ್ತವೆ. ಆಕಾರದಲ್ಲಿ ಸಾಮಾನ್ಯವಾಗಿ ದೊಡ್ಡ ಮೈಕಟ್ಟಿನ ದನಗಳು. ಇವುಗಳ ಮೈ ಕೋಮಲವಾದ(ನಯವಾದ) ಮತ್ತು ಉದ್ದವಾದ ರೋಮಗಳಿಂದ ತುಂಬಿರುತ್ತದೆ. ಹೋರಿಗಳ ಕೋಡು ಕೆಳಭಾಗದಲ್ಲಿ ಬಾಗಿದ್ದರೆ ಆಕಳುಗಳ ಕೋಡು ಮೇಲಿನ ಭಾಗದಲ್ಲಿ ಬಾಗಿಕೊಂಡಿರುತ್ತವೆ. ಇವು ಎಂಥ ಆಹಾರವನ್ನಾದರೂ ತಿಂದು ಜೀವಿಸಬಲ್ಲ ವಿಶೇಷ ಗುಣವನ್ನು ಪಡೆದಿರುತ್ತವೆ.

(5) ನಾರ್ಥ್‌ಡೌನ್ ಮತ್ತು ಸೌತ್‌ಡೌನ್ ದನಗಳು ಈ ದನಗಳನ್ನು 'ಪಶ್ಚಿಮದ ಮಾಣಿಕ್ಯಗಳು' ಎಂದು ಕರೆಯುತ್ತಾರೆ. ನಾರ್ಥ್‌ಡೌನ್ ಜಾತಿಯ ದನಗಳು ಗುಡ್ಡಗಾಡು ಪ್ರದೇಶಗಳಲ್ಲಿಯೂ ಮತ್ತು ಸೌತ್‌ಡೌನ್ ಜಾತಿಯ ದನಗಳು ಬಯಲು ಪ್ರದೇಶಗಳಲ್ಲಿಯೂ ವಾಸಿಸುತ್ತವೆ. ಇವುಗಳ ಶರೀರ ರಚನೆ ಮತ್ತು ಬಣ್ಣ ನೋಡಲು ಸುಂದರವಾಗಿರುತ್ತವೆ. ಹೊಟ್ಟೆಯ ಕೆಳಭಾಗ ಬಹಳ ಬಿಳುಪು ಅಥವಾ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಕೋಡುಗಳು ಸಣ್ಣವಾಗಿ ಬಿಳಿಯ ಬಣ್ಣದ್ದಾಗಿರುತ್ತವೆ. ಇವುಗಳ ಮುಖ ಸಣ್ಣದಾಗಿ ತೆಳ್ಳಗಿರುತ್ತದೆ; ಕಣ್ಣುಗಳು ಬೆಕ್ಕಿನ ಕಣ್ಣುಗಳಂತಿದ್ದು ಹೊಳೆಯುತ್ತಿರುತ್ತವೆ; ಮೂಗು ಚಿಳ್ಳಗೆ ಇರುತ್ತದೆ; ಕಿವಿಗಳು ಕೆಳಗೆ ಇಳಿಬಿದ್ದಿರುತ್ತವೆ; ಗಂಗೆದೊಗಲು ಮತ್ತು ಪಶೆ ತಿಳಿಯ ಕೇಸರಿ ಬಣ್ಣದಿಂದ ಕೂಡಿರುತ್ತವೆ; ಹಿಂದಿನ ಭಾಗವು ಪ್ರಶಸ್ತವಿರುತ್ತದೆ. ನಾರ್ಥ್‌ಡೌನ್ ದನಗಳಿಗಿಂತ ಸೌತ್‌ಡೌನ್ ದನಗಳು ಆಕಾರದಲ್ಲಿ ದೊಡ್ಡವಿರುತ್ತವೆ.

(6) ಲಾಂಗ್‌ಹಾರನ್ ದನಗಳು ಇವುಗಳಲ್ಲಿ ಸಣ್ಣವು ಮತ್ತು ದೊಡ್ಡ ಜಾತಿಯ ದನಗಳೆಂದು ಎರಡು ಬಗೆಯ ದನಗಳಿರುತ್ತವೆ. ಸಣ್ಣ ಆಕಾರದ ದನಗಳು ಹೆಚ್ಚಾಗಿ ಗುಡ್ಡಗಾಡು ಪ್ರದೇಶ ಮತ್ತು ಮಲೆನಾಡು ಭಾಗದ ಪ್ರದೇಶಗಳಲ್ಲಿಯೂ ಇರುತ್ತವೆ. ಇವು ಹಾಲು ಹೆಚ್ಚು ಹಿಂಡುತ್ತವೆ ಮತ್ತು ಸ್ವಾಭಾವಿಕವಾಗಿ ಸರಿಯಾಗಿ ಆರೈಕೆ ಮಾಡಿದಲ್ಲಿ ದೊಡ್ಡದಾಗಿ ಬೆಳೆಯುತ್ತವೆ. ಹೀಗಾಗಿ

ಮಾಂಸಕ್ಕೂ ಸಹ ಬರುತ್ತವೆ. ಈ ದನಗಳ ಶರೀರ ಉದ್ದವಾಗಿರುತ್ತದೆ. ಕಾಲುಗಳು ಗಿಡ್ಡ, ಕೋಡು ಉದ್ದ, ಹೊಟ್ಟೆ ದೊಡ್ಡದಾಗಿರುತ್ತದೆ. ಮೈಮೇಲೆ ದಟ್ಟನಾದ ಉದ್ದವಾದ ಕೂದಲುಗಳಿರುತ್ತವೆ. ಇವು ಚಳಿಯನ್ನು ತಡೆದುಕೊಳ್ಳಬಲ್ಲವು.

(7) ರೆಡ್‌ಪೋಲ್ಡ್ ದನಗಳು ಈ ದನಗಳ ಬಣ್ಣ ಕೆಂಪು; ಕಾಲುಗಳು ಗಿಡ್ಡ ಹಾಗೂ ತೆಳ್ಳಗಿರುತ್ತವೆ: ಬಾಲ ಸಣ್ಣದು. ಹಾಲಿನ ನಳಿಕೆ ದಪ್ಪವಾಗಿರುತ್ತವೆ. ಇವಕ್ಕೆ ಕೊಂಬುಗಳಿಲ್ಲ. ಯೂರೋಪಿಗೆ ಈ ಜಾತಿಯ ಆಕಳು ಎಲ್ಲಿಂದ ಬಂದವು ಯಾವಾಗ ಬಂದವು ಎಂಬುದರ ಬಗ್ಗೆ ಏನೂ ತಿಳಿದುಬಂದಿಲ್ಲ. ಶ್ರೀ ಪವೇಲ್‌ಸಾಹೇಬ ಎಂಬುವರು ಈ ದನಗಳನ್ನು ಬಹಳ ಅಭಿವೃದ್ಧಿಗೊಳಿಸಿರುತ್ತಾರೆ. ಇವು ಹಾಲು ಹೆಚ್ಚು ಹಿಂಡುತ್ತವೆ. ಈ ಜಾತಿಯ ದನಗಳಲ್ಲಿ ಕಂಡುಬರುವ ಒಂದು ವಿಶೇಷ ಗುಣವೆಂದರೆ ಕರು ಹಾಕುವ ತನಕ ಹಾಲು ಕರೆಯುತ್ತಲೇ ಇರುತ್ತವೆ.

(8) ಡಾರ್‌ಹ್ಯಾಮ್ ಮತ್ತು ಯಾರ್ಕ್‌ಶಯರ್ ದನಗಳು ಥೇಮ್ಸ್ ನದಿಯ ಎರಡು ತೀರಗಳಲ್ಲಿಯ ಡಾರ್‌ಹ್ಯಾಮ್ ಮತ್ತು ಯಾರ್ಕ್‌ಶಯರ್ ಪ್ರದೇಶಗಳು ಸಣ್ಣ ಕೋಡಿನ ದನಗಳ ಉತ್ಪಾದನೆಗೆ ಪ್ರಧಾನ ಸ್ಥಾನಗಳಾಗಿವೆ. ಈ ಜಾತಿಯ ಆಕಳುಗಳು ಬಹಳ ಉಪಯೋಗವಿರುವುದರಿಂದ ಜಗತ್ತಿನ ನಾನಾ ಭಾಗಗಳಲ್ಲಿ ಹರಡಿಕೊಂಡಿವೆ.

(9) ಸಸೆಕ್ಸ್ ದನಗಳು ಈ ಜಾತಿಯ ದನಗಳ ಮುಖ ಚಪ್ಪಟೆಯಾಗಿ ಹಲಗೆಯಂತೆ ಇರುತ್ತದೆ. ಹೊಟ್ಟೆ ಮತ್ತು ಎದೆ ಸರಳ ರೇಖೆಯಂತೆ ನೆಟ್ಟಗಿರುತ್ತದೆ. ಎಲುಬುಗಳು ದಪ್ಪವಾಗಿ ಬಹಳ ಗಟ್ಟಿಯಾಗಿರುತ್ತವೆ. ಆಕಳುಗಳು ಬಹಳ ಸಣ್ಣವಯಸ್ಸಿಗೆ ಬೆದೆಗೆ ಬಂದು ಬೇಗನೆ ಗಬ್ಬವಾಗುತ್ತವೆ. ಇವು ಕೇವಲ ತಮ್ಮ ಕರುಗಳಿಗೆ ಸಾಕಾಗುವಷ್ಟು ಹಾಲನ್ನು ಕರೆಯುತ್ತವೆ. ಈ ಜಾತಿಯ ದನಗಳು ಬಹಳ ಶ್ರಮದ ಕೆಲಸ ಮತ್ತು ಹೆಚ್ಚು ಭಾರವನ್ನು ಹೊರುವುದಕ್ಕೆ ಬಹಳ ಉಪಯುಕ್ತವಾದ ದನಗಳು. ಇಂಗ್ಲೆಂಡಿನಲ್ಲಿ ಈ ದನಗಳ ಬಗ್ಗೆ ಜನರಲ್ಲಿ ಬಹಳ ಆದರವಿದೆ.

ಇವುಗಳಲ್ಲಿ ದೊಡ್ಡ ಮತ್ತು ಸಣ್ಣ ಆಕಾರದ ದನಗಳು ಎಂದು ಎರಡು ಪ್ರಕಾರದ ದನಗಳಿವೆ. ಈ ಜಾತಿಯ ದನಗಳು ಮತ್ತು ಡೌನ್ ಜಾತಿಯ ದನಗಳು ಎರಡೂ ಒಂದೇ ಎಂದು ಕಂಡುಬರುತ್ತದೆ. ಸಸೆಕ್ಸ್, ಕೆಂಟ್ ಮತ್ತು ಸುರ್ರೆ ಪ್ರದೇಶಗಳಲ್ಲಿ ಇವುಗಳನ್ನು ಹೆಚ್ಚಾಗಿ ಸಾಕುತ್ತಾರೆ. ಸಸೆಕ್ಸ್ ಪ್ರದೇಶವು ಉತ್ತಮ ಗೋಚರ

ಭೂಮಿಗೆ ಹೆಸರಾದ ಪ್ರದೇಶ. ಇಲ್ಲಿ ದನಗಳಿಗೆ ಸದಾಕಾಲ ಹಸಿ ಹುಲ್ಲು ಯಥೇಚ್ಛ ವಾಗಿ ಮೇಯುವ ಸೌಕರ್ಯವಿರುವುದರಿಂದ ಇವು ಆಕಾರದಲ್ಲಿ ದೊಡ್ಡವಾಗಿಯೂ ಸಬಲವಾಗಿಯೂ ಬೆಳೆದಿರುತ್ತವೆ.

(10) ವೇಲ್ಸ್ ದನಗಳು ಈ ದನಗಳು ವೇಲ್ಸಿನ ಪ್ರಾಚೀನ ದನಗಳು, ಬಣ್ಣದಲ್ಲಿ ಕಪ್ಪು. ಸಾಕ್ಸನರು ಮತ್ತು ರೋಮನರು ತಮ್ಮ ಜೊತೆಯಲ್ಲಿ ಬಿಳಿಯ ಹಾಗೂ ಕಪ್ಪು ಬಣ್ಣದ ದನಗಳನ್ನು ತಂದಿದ್ದರು. ಅವುಗಳ ತಳಿಯೇ ಈ ವೇಲ್ಸ್ ದನಗಳು. ಇವು ಕಡಿಮೆ ಆಹಾರವನ್ನು ತಿನ್ನುತ್ತವೆ. ಆದರೂ ದಷ್ಟಪುಷ್ಟವಾಗಿರುತ್ತವೆ. ಇವುಗಳನ್ನು ಸಾಕುವುದಕ್ಕೆ ಹೆಚ್ಚು ಖರ್ಚು ಬರುವುದಿಲ್ಲ.

(11) ಫಾಕ್ಲೆಂಡ್ ದನಗಳು ಇಂಗ್ಲೆಂಡಿನ ರಾಜನಾದ 7ನೇ ಹೆನ್ರಿ ತನ್ನ ಮಗಳಾದ ಮಾರ್ಗ್ರೇಟಳನ್ನು ಸ್ಕಾಟ್ಲೆಂಡ್ ರಾಜನಾದ ನಾಲ್ಕನೆಯ ಜೇಮ್ಸನಿಗೆ ಕೊಟ್ಟು ಮದುವೆ ಮಾಡಿದ. ಆ ಮದುವೆಯ ಕಾಲಕ್ಕೆ ಜೇಮ್ಸಿನ ಎಲ್ಲಾ ರಾಜಪರಿವಾರದ ಜನರು ಫಾಕ್ಲೆಂಡ್ ರಾಜಭವನದಲ್ಲಿ ಇಳಿದುಕೊಂಡಿದ್ದರು. ಅವರ ಉಪಯೋಗಕ್ಕಾಗಿ 300 ಆಕಳುಗಳನ್ನು ಅರಮನೆಯಲ್ಲಿ ಇಡಲಾಗಿತ್ತು. ಮುಂದೆ ಅವು ಅಲ್ಲಿಯೇ ಉಳಿದವು. ಹೀಗಾಗಿ ಆ ಆಕಳ ಹಿಂಡಿನ ಸಂತಾನಕ್ಕೆ ಮುಂದೆ ಫಾಕ್ಲೆಂಡ್ ದನಗಳೆಂದು ಕರೆಯಲಾಯಿತು.

2. ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ದನಗಳು

(1) ಅಬರ್ಡೀನ್ ಎಂಗಸ್ ದನಗಳು ಸ್ಕಾಟ್ಲೆಂಡಿನ ಈ ಅಬರ್ಡೀನ್ ಎಂಗಸ್ ಜಾತಿಯ ದನಗಳು ಬಹಳ ಹೆಸರಾದ ದನಗಳು. ಈ ಜಾತಿಯ ದನಗಳ ತಳಿ ಅಭಿವೃದ್ಧಿಯ ಕೆಲಸ ಕ್ರಿ. ಶ. 1729ರ ನಂತರ ಪ್ರಾರಂಭವಾಯಿತು. ಈ ದನಗಳು ಸ್ವಲ್ಪ ಕಾಲದಲ್ಲಿಯೇ ಆಶ್ಚರ್ಯಕರವಾದ ಪ್ರಗತಿಯನ್ನು ಸಾಧಿಸಿರುತ್ತವೆ. ಈ ದನಗಳ ಸುಧಾರಣೆಗೆ ವಾಟಸನ್ ಹಾಗೂ ವಿಲಿಯಂಮೊಕಂಬಿ ಬಹಳ ಶ್ರಮಿಸಿರುತ್ತಾರೆ ಮತ್ತು ಈ ದನಗಳ ಮಹತ್ವದ ಬಗ್ಗೆ ಎಲ್ಲರಿಗೂ ತಿಳಿಯುವಂತೆ ಎಲ್ಲ ಕಡೆಗೆ ಸಾಕಷ್ಟು ಪ್ರಚಾರ ಮಾಡಿರುತ್ತಾರೆ. ಇದರ ಪರಿಣಾಮವಾಗಿ ಇವು ಸ್ಕಾಟ್ಲೆಂಡಿನ ಹೆಸರಾದ ದನಗಳ ಶ್ರೇಣಿಯಲ್ಲಿ ಒಂದು ಮುಖ್ಯ ಜಾತಿಯ ದನಗಳು ಎಂದು ಪರಿಗಣಿಸಲ್ಪಟ್ಟಿವೆ.

ಹಾಲು ಹಿಂಡುವ ಹಾಗೂ ಹಾಲಿನಲ್ಲಿರುವ ಬೆಣ್ಣೆಯ ಪ್ರಮಾಣದ ದೃಷ್ಟಿಯಿಂದ ಇವು ಬಹಳ ಉತ್ತಮ ಜಾತಿಯ ದನ. ಈ ದನಗಳನ್ನು ಇಂದು ನಾವು ಅಮೇರಿಕ

ಕೆನಡಾ, ಆಸ್ಟ್ರೇಲಿಯಾ ಹಾಗೂ ಯೂರೋಪದ ಅನೇಕ ಭಾಗಗಳಲ್ಲಿ ಕಾಣಬಹುದಾಗಿದೆ. ಇದು ಮಾಂಸಕ್ಕೊ ಹೆಸರಾದ ಜಾತಿಯ ದನ.

(2) ಆಯರಶಯರ್ ದನಗಳು 18ನೇ ಶತಮಾನದ ಕೊನೆಯ ಭಾಗದಲ್ಲಿ ಸ್ಕಾಟ್ಲೆಂಡಿನಲ್ಲಿರುವ ಆಯರಶಯರ್ ಜಿಲ್ಲೆಯಲ್ಲಿ ದನಗಳ ತಳಿ ಅಭಿವೃದ್ಧಿಗೊಳಿಸಲು ಶಾರ್ಟ್‌ಹಾರನ್, ಫ್ರೀಜಿಯನ್ ಮೊದಲಾದ ಉತ್ತಮ ತಳಿ ಹೋರಿಗಳನ್ನು ಸಂವರ್ಧನೆಗಾಗಿ ಉಪಯೋಗಿಸಲಾಯಿತು. ಇವುಗಳಿಂದ ಉತ್ಪನ್ನವಾದ ದನಗಳನ್ನು ಆಯರಶಯರ್ ದನಗಳೆಂದು ಕರೆಯಲಾಯಿತು. ಈ ದನಗಳ ಕಾಲುಗಳು ಬಹಳ ತೆಳುವಾಗಿ ಜಿಂಕೆಯ ಮೈಬಣ್ಣದಂತೆ ಅಥವಾ ಅಚ್ಚ ಕೆಂಪು, ಅಚ್ಚ ಬಿಳುಪು ಬಣ್ಣದ್ದಾಗಿರುತ್ತದೆ. ಇದು ಕಡಿಮೆ ಆಹಾರವನ್ನು ತಿನ್ನುವುದರಿಂದ ಸಾಕಲು ಖರ್ಚು ಕಡಿಮೆ ಬರುತ್ತದೆ. ಸಾಕುವುದು ಸುಲಭ, ಹಾಲು ಹೆಚ್ಚು ಕರೆಯುತ್ತವೆ. ಗುಣದಲ್ಲಿಯೂ ಉತ್ತಮ ಮತ್ತು ರುಚಿಕರವಾಗಿರುತ್ತದೆ. ಇದು ಬಹಳ ಕಷ್ಟಸಹಿಷ್ಣುತೆಯ ದನ. ಇದು ಬೇರೆ ದೇಶಗಳ ಹವಾ, ನೀರು, ಆಹಾರಗಳಿಗೆ ಬೇಗನೆ ಹೊಂದಿಕೊಳ್ಳುವ ವಿಶೇಷ ಗುಣವನ್ನು ಹೊಂದಿರುತ್ತದೆ. ಆದ್ದರಿಂದ ಬೇಕಾದ ಕಡೆ ಸಾಕಲು ಅನುಕೂಲ. ಈ ದನಗಳ ಬಗ್ಗೆ ಸ್ಕಾಟ್ಲೆಂಡ್ ಜನರಿಗೆ ಬಹಳ ಅಭಿಮಾನ. ಅವರು ಹೊರನಾಡಿಗೆ ಹೋದಾಗ ತಮ್ಮ ಈ ಹೆಮ್ಮೆಯ ದನಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಈ ಆಯರಶಯರ್ ದನಗಳು ದೇಶದ ನಾನಾ ಭಾಗಗಳಲ್ಲಿ ಹರಡಿ ಹಬ್ಬಿಕೊಂಡು ಬೆಳೆದು ಬಂದಿವೆ.

(3) ಗಾಲ್ವೆ ದನಗಳು ಸ್ಕಾಟ್ಲೆಂಡಿನ ದಕ್ಷಿಣ ಪಶ್ಚಿಮ ಭಾಗದಲ್ಲಿ ಗಾಲ್ವೆ ಎಂಬ ಹೆಸರಿನ ಒಂದು ಪುರಾತನ ಪ್ರದೇಶವಿದೆ. ಇದೇ ಈ ದನಗಳ ಮುಖ್ಯನಿವಾಸಸ್ಥಾನ. ಮೊದಲಿಗೆ ಈ ದನಗಳ ಕೋಡುಗಳು ಬಹಳ ದೊಡ್ಡವಿದ್ದವು. ಆದರೆ ಇತ್ತೀಚೆಗೆ ಇಲ್ಲಿಯ ಪಶು ಪಾಲಕರು ತಳಿಸಂವರ್ಧನೆ ಮಾಡಿರುವುದರಿಂದ ಈ ದನಗಳಲ್ಲಿ ಕೋಡುಗಳು ಕಂಡುಬರುವುದಿಲ್ಲ. ಸಾಮಾನ್ಯವಾಗಿ ಈ ದನಗಳ ಬಣ್ಣ ಕಪ್ಪು. ಈ ದನಗಳು ಹಾಲಿಗೆ ಅಷ್ಟು ಪ್ರಸಿದ್ಧಿ ಪಡೆದಿಲ್ಲ. ಹಾಲಿನಲ್ಲಿ ಬೆಣ್ಣೆಯ ಅಂಶ ಬಹಳ ಅಧಿಕವಾಗಿರುತ್ತದೆ. ಈ ಜಾತಿಯ ದನಗಳು ಹೆಚ್ಚಾಗಿ ಅಮೆರಿಕಾ, ಕೆನಡಾ, ಗ್ರೀಸ್, ಸೈಪ್ರಸ್, ರಶಿಯಾ ಮತ್ತು ಮೆಸಪಟೋಮಿಯಾ ದೇಶಗಳಲ್ಲಿ ಹೋಗಿ ಸೇರಿಕೊಂಡಿವೆ.

(4) ವೆಸ್ಟ್ ಹೈಲೆಂಡ್ ದನಗಳು ಸ್ಕಾಟ್ಲೆಂಡಿನ ಪಶ್ಚಿಮ ಹೈಲೆಂಡದ ಸಮುದ್ರ ತೀರ ಪ್ರದೇಶ ಮತ್ತು ಯಾರ್ಕಶಯರ್ ಜಿಲ್ಲೆ

ಗಳಲ್ಲಿ ಈ ದನಗಳು ಕಂಡುಬರುತ್ತವೆ. ಇವು ಬಹಳ ಬೀಸಾದ ಮತ್ತು ಬಲಿಷ್ಠ ದನಗಳು. ಸಾಧಾರಣವಾಗಿ ಕಪ್ಪು ಬಣ್ಣದ ದನಗಳು. ಆಕಾರ ಮತ್ತು ಮೈಕಟ್ಟಿನಲ್ಲಿ ಇವು ಚೌಕಾದ ದನಗಳು. ಇವುಗಳ ಕೊಂಬು ಬಹಳ ಉದ್ದವಾಗಿ ಇರುತ್ತವೆ. ಇವು ಹೆಚ್ಚಾಗಿ ಜಂಗಲಿ ಮತ್ತು ಬೈಸನ್ ಜಾತಿಯ ದನಗಳನ್ನು ಹೋಲುತ್ತವೆ. ಬಹಳ ಪ್ರಾಚೀನ ಕಾಲದಲ್ಲಿ ಈ ದನಗಳನ್ನು 'ಕೈಲೋ' ದನಗಳೆಂದು ಕರೆಯುತ್ತಿದ್ದರು. 'ಕೈಲೋ' ಆಕಳು ಮತ್ತು ಕಾಡು ಕೋಣಗಳ ಸಂಕರಣದಿಂದ ಈ ತಳಿಯ ಉತ್ಪಾದನೆಯ ಕಾರ್ಯದಲ್ಲಿ ನಾರ್ದರ್ನ್‌ಐರ್ಲ್ಯಾಂಡಿನ ಡ್ಯೂಕ್ ಜನರು ಆಶಾದಾಯಕವಾದ ಸಫಲತೆಯ ಪ್ರಾಪ್ತಿಯನ್ನು ಪಡೆದಿರುತ್ತಾರೆ.

(5) ಕೆರಿ ಮತ್ತು ಡೆಕ್ಸ್ಟರ್ ದನಗಳು

ಇವು ಐರ್ಲೆಂಡಿನ ದನಗಳು. ಕೆರಿ ಜಾತಿಯ ದನಗಳು ಆಕಾರದಲ್ಲಿ ಬಹಳ ಸಣ್ಣವು. ಕಡಿಮೆ ಆಹಾರ ತಿಂದಾಗ್ಯೂ ಸಹ ಮೈ ತುಂಬಿಕೊಂಡಿರುತ್ತದೆ. ಹಾಲು ಹೆಚ್ಚು ಹಿಂಡುತ್ತವೆ. ದನಗಳ ಬಣ್ಣ ಕಪ್ಪು ಮತ್ತು ಬಿಳುಪು ಬಣ್ಣದಿಂದ ಕೂಡಿರುತ್ತದೆ. ಕೋಡುಗಳು ಗಿಡ್ಡಾಗಿ ಮೇಲಕ್ಕೆ ನೆಟ್ಟಗೆ ಸಣ್ಣಗೂಟದಂತಿರುತ್ತವೆ. ಕೋಡು ಬಿಳಿಯ ಬಣ್ಣದ್ದಿದ್ದು ತುದಿಯಲ್ಲಿ ಮಾತ್ರ ಕಪ್ಪು ಬಣ್ಣದಿಂದ ಕೂಡಿರುತ್ತದೆ, ಕಣ್ಣುಗಳು ಉಜ್ವಲವಾಗಿರುತ್ತವೆ. ಮೈಶರೀರವು ಮಾಟವಾಗಿದ್ದು ಸುಂದರವಾಗಿ ಕಾಣುತ್ತದೆ. ಚರ್ಮ ಬಹಳ ನಯವಾಗಿರುತ್ತದೆ.

ಕೆರಿ ಆಕಳುಗಳ ಡೆಕ್ಸ್ಟರ್ ಸಾಹೇಬ ಪ್ರತ್ಯೇಕವಾದ ಒಂದು ಸ್ವತಂತ್ರ ಜಾತಿಯ ದನಗಳ ಉತ್ಪಾದನೆಯನ್ನು ಮಾಡಿ ಈ ದನಗಳಿಗೆ 'ಕೆರಿ ಡೆಕ್ಸ್ಟರ್' ದನಗಳೆಂದು ಕರೆದಿದ್ದಾರೆ. ಇವು ಬಹಳ ಬಲಿಷ್ಠವಾದ ದನಗಳು. ಕೆರಿ ಪ್ರಾಂತದ ಬಿರುಗಾಳಿಯನ್ನು ತಡೆದುಕೊಳ್ಳುವ ಶಕ್ತಿ ಸಾಮರ್ಥ್ಯವು ಈ ದನಗಳಲ್ಲಿದೆ. ಇವು ಕೆರಿ ದನಗಳಷ್ಟು ಹಾಲು ಹಿಂಡುವುದಿಲ್ಲ.

3. ಇಂಗ್ಲಿಷ್ ಕಡಲುಗಾಲುವೆಯ ದನಗಳು

(1) ಹೈನದನಗಳು : (ಅ) ಜರ್ಸಿ ಮತ್ತು ಗರನ್ಸಿ ದನಗಳು

ಫ್ರಾನ್ಸಿನ ಉತ್ತರ ತೀರ ಪ್ರದೇಶಕ್ಕೆ 10 ರಿಂದ 30 ಮೈಲುಗಳ ದೂರದಲ್ಲಿ ಮತ್ತು ಇಂಗ್ಲೆಂಡಿನ ದಕ್ಷಿಣ ಭಾಗಕ್ಕೆ ಸುಮಾರು 50 ರಿಂದ 120 ಮೈಲುಗಳ ದೂರದಲ್ಲಿ ಇಂಗ್ಲಿಷ್ ಕಡಲುಗಾಲುವೆಯಲ್ಲಿ ದ್ವೀಪಗಳ ಒಂದು ಸಮೂಹವಿದೆ. ಇದನ್ನು ಛಾನಲ್ ದ್ವೀಪಗಳು ಎಂದು ಕರೆಯುತ್ತಾರೆ. ಈ ದ್ವೀಪಗಳು ಮೊದಲು ಫ್ರಾನ್ಸ್ ದೇಶಕ್ಕೆ ಸೇರಿದ್ದವು. ಆದರೆ ಕ್ರಿ. ಶ. 1066 ರಿಂದ ಬ್ರಿಟಿಷ್ ವಸಾಹತುಗಳಾದವು.


ಇವುಗಳಲ್ಲಿ ಮುಖ್ಯವಾದ ದ್ವೀಪಗಳೆಂದರೆ - ಜರ್ಸಿ, ಗರನ್ಸಿ, ಅಲ್‌ಡರನಿ ಮತ್ತು ಸಾರಕ್ ಈ ಛಾನಲ್ ದ್ವೀಪಗಳೇ ಜರ್ಸಿ ಮತ್ತು ಗರನ್ಸಿ ದನಗಳ ಮೂಲಸ್ಥಾನ.

ಜರ್ಸಿ ದ್ವೀಪದ ಹವಾಮಾನ ಬಹಳ ಹಿತಕರ. ಇದು ಒಂದು ಆರೋಗ್ಯ ಧಾಮವೆನಿಸಿದೆ. ಇಲ್ಲಿಯ ಹವಾಮಾನ ಉತ್ತಮವಾಗಿರುವುದರಿಂದ ಇಲ್ಲಿಯ ದನಗಳು ಕ್ಷಯ ರೋಗದಿಂದ ವಿಮುಕ್ತವಾಗಿವೆ. ಈ ದ್ವೀಪದ ಜನರ ಪ್ರಮುಖ ಉದ್ಯೋಗ ವೆಂದರೆ ಪಶುಪಾಲನೆ ಮತ್ತು ಆಲೂಗಡ್ಡೆ ಬೆಳೆಯುವುದು. ಇಲ್ಲಿಯ ಪಶುಪಾಲಕರು ತಮ್ಮ ದನಕರುಗಳನ್ನು ಚೆನ್ನಾಗಿ ಆರೈಕೆ ಮಾಡಿ ಬೆಳೆಸುತ್ತಾರೆ. ಹುಲ್ಲುಗಾವಲು ಗಳಲ್ಲಿ ಬೇರೆ ದೇಶದವರಂತೆ ಸ್ವೇಚ್ಛೆಯಾಗಿ ಮೇಯಲು ಬಿಡದೆ, ಆಕಳುಗಳ ಕುತ್ತಿಗೆಗೆ ಒಂದು ಸರಪಳಿ ಹಾಗೂ ಗುದ್ದಿ (ಗುದ್ದಿಗೆ) ಕಟ್ಟಿ ಮೇಯಲು ಬಿಡುತ್ತಾರೆ. ಇವರ ಪರಿಣಾಮವಾಗಿ ಅಲ್ಲಿಯ ದನಗಳು ಹುಲ್ಲುಗಾವಲಿನಲ್ಲಿ ಒಂದು ಸಾಲು ಹಿಡಿದು ಕ್ರಮ ವಾಗಿ ಮೇಯುವುವು. ಹೀಗಾಗಿ ದನಗಳ ತುಳಿತದಿಂದ ಹೆಚ್ಚು ಹುಲ್ಲು ಹಾಳಾಗುವು ದಿಲ್ಲ ಮತ್ತು ಮೇಯುವ ಹುಲ್ಲಿನಲ್ಲಿ ಉಳಿತಾಯವಾಗುವುದು.

ಈ ದನಗಳು ನೂರ್ಸ್ ಜಾತಿಯ ದನಗಳಿಂದ ಉತ್ಪತ್ತಿಯಾದವುಗಳೆಂದು ಈ ದ್ವೀಪಗಳ ಪೂರ್ವ ಚರಿತ್ರೆಯಿಂದ ತಿಳಿದು ಬರುತ್ತದೆ. ಇಲ್ಲಿಯ ಭೂಮಿ ಫಲವತ್ತಾ ದುದಲ್ಲ. ಈ ಬಂಜರು ಪ್ರದೇಶದಲ್ಲಿ ದನಗಳು ಸರಿಯಾಗಿ ಏಳಿಗೆಯಾಗುತ್ತಿರಲಿಲ್ಲ. ಅಂದಿನ ಕಾಲದಲ್ಲಿ ಹೈನು ಮತ್ತು ಮಾಂಸದ ಉದ್ಯೋಗಗಳು ಅಷ್ಟು ಲಾಭದಾಯಕ ವಾಗಿಲ್ಲದಿದ್ದುದರಿಂದ ಅಲ್ಲಿಯ ಜನರು ಮೊದಲು ಮೊದಲಿಗೆ ದನಗಳ ಹೈನುತಳಿಯ ಅಭಿವೃದ್ಧಿಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿರಲಿಲ್ಲ. ಈ ದ್ವೀಪಗಳಲ್ಲಿಯ ಜನರು ಬಹಳ ಬಡವರಾಗಿದ್ದರು. ತಮ್ಮ ದಿನದ ಜೀವನೋಪಾಯವನ್ನು ಮೀನುಗಾರಿಕೆ ಮತ್ತು ಕೈ ಹೆಣಿಕೆಯ ಉಣ್ಣೆಯ ಬಟ್ಟೆಗಳ ತಯಾರಿಕೆಗಳಿಂದ ಸಾಗಿಸುತ್ತಿದ್ದರು. ಈ ಉದ್ಯೋಗಕ್ಕೆ ಬೇಕಾಗುವ ಉಣ್ಣೆಯನ್ನು ಅವರು ಹೊರಗಿನಿಂದ ತರಿಸಿಕೊಳ್ಳು ತ್ತಿದ್ದರು. ಏಕೆಂದರೆ ಅಲ್ಲಿ ಕುರಿಗಳೂ ಸಹ ಸರಿಯಾಗಿ ಬೆಳೆಯುತ್ತಿರಲಿಲ್ಲ. 16ನೇ ಶತಮಾನದಲ್ಲಿ ಇಲ್ಲಿ ತಯಾರಿಸಿದ ಕೈಹೆಣಿಕೆಯ ಉಣ್ಣೆ ಅಂಗಿಗಳು ಇಂಗ್ಲೆಂಡಿನಲ್ಲಿ ಬಹಳ ಮೆಚ್ಚುಗೆಯನ್ನು ಪಡೆದಿದ್ದವು. ಈ ಉಣ್ಣೆ ಅಂಗಿಗಳನ್ನು ಇಂಗ್ಲೆಂಡಿನಲ್ಲಿ ಜರ್ಸಿ ಮತ್ತು ಗರನ್ಸಿ ಅಂಗಿಗಳು ಎಂದು ಕರೆಯುತ್ತಿದ್ದರು.

ಸುಮಾರು 250 ವರ್ಷಗಳ ಹಿಂದೆ ಈ ದ್ವೀಪದ ಜನರು ಇಂಗ್ಲೆಂಡಿನೊಂದಿಗೆ ದನಕರುಗಳ ವ್ಯಾಪಾರವನ್ನು ಪ್ರಾರಂಭಿಸಿದರು ಎಂದು ಹೇಳಲಾಗಿದೆ. ದನಗಳನ್ನು ಈ ದ್ವೀಪಗಳಿಂದ ಆರಿಸಿ ಎಲ್ಲವನ್ನು ಒಂದು ಕಡೆ ಗುಂಪುಗೂಡಿಸಿ, ಕಡೆಯ ಬಂದರು

ಸ್ಥಳವಾದ ಆಲ್ಡರ್ನಿ ದ್ವೀಪದಿಂದ ಹಡಗಿನ ಮೂಲಕ ಸಮುದ್ರ ಮಾರ್ಗವಾಗಿ ಇಂಗ್ಲೆಂಡಿಗೆ ಸಾಗಿಸುತ್ತಿದ್ದ ಕಾರಣ ಈ ದನಗಳನ್ನು ಬಹಳ ಕಾಲದವರೆಗೆ ಇಂಗ್ಲೆಂಡಿನಲ್ಲಿ 'ಆಲ್ಡರನಿ' ದನಗಳೆಂದು ಕರೆಯುತ್ತಿದ್ದರು. ಆಗಿನ ಕಾಲದಲ್ಲಿ ಹಡಗಿನ ಪ್ರಯಾಣಿಕರು ಹಾಲಿನ ಪೂರೈಕೆಗಾಗಿ ಆಕಳುಗಳನ್ನು ಮತ್ತು ಆಡುಗಳನ್ನು ಹಡಗಿನಲ್ಲಿಯೇ ತೆಗೆದುಕೊಂಡು ಹೋಗುತ್ತಿದ್ದರು. ಈ ದ್ವೀಪಗಳ ಆಕಳುಗಳು ಆಕಾರದಲ್ಲಿ ಮತ್ತು



ಚಿತ್ರ 12: ಜರ್ಸಿ ಹೋರಿ

ಗಾತ್ರದಲ್ಲಿ ಸಣ್ಣವಾಗಿದ್ದರಿಂದ ಅವುಗಳನ್ನು ಹಡಗಿನಲ್ಲಿ ಸಾಗಿಸಿಕೊಂಡು ಹೋಗಲು ಬಹಳ ಅನುಕೂಲವಾಗಿದ್ದವು. ಇದರಿಂದ ಇವುಗಳನ್ನು ಆಗಿನ ಕಾಲದಲ್ಲಿ 'ಹಡಗಿನ ದನಗಳು' ಎಂದು ಕರೆಯುತ್ತಿದ್ದರು. ಇಂಗ್ಲಿಷ್ ಶ್ರೀಮಂತ ಜನರು ಇವುಗಳ ಸೌಂದರ್ಯಕ್ಕೆ ಮೆಚ್ಚಿ ತಮ್ಮ ಮನೆಗಳ ಉದ್ಯಾನ ವನದಲ್ಲಿ ಸಾರ್ವಜನಿಕ ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಪ್ರದರ್ಶನಕ್ಕಾಗಿ ಮತ್ತು ಪ್ರೀತಿಗಾಗಿ ಸಾಕಲು ಪ್ರಾರಂಭಿಸಿದರು.

ಕಾಲಕ್ರಮೇಣ ಇಂಗ್ಲೆಂಡಿನ ಈ ದ್ವೀಪಗಳ ಹೈನ ದನಗಳ ಮಾರಾಟವು ಹೆಚ್ಚಿತು. ಈ ಹೆಚ್ಚಿನ ಬೇಡಿಕೆಯನ್ನು ಪೂರೈಸುವುದಕ್ಕೆ ಈ ಕಡಲ್ಗಾಲುವೆ ದ್ವೀಪದ

ದನಗಳ ವ್ಯಾಪಾರಸ್ಥರು ಬ್ರಿಟನ್ನಿನಿಂದ ಫ್ರೆಂಚ್ ದನಗಳನ್ನು ಅಧಿಕ ಸಂಖ್ಯೆಯಲ್ಲಿ ತರಿಸಿಕೊಂಡರು. ಇವುಗಳನ್ನು ಅಲ್‌ಡರ್‌ನಿ ದನಗಳೆಂಬ ಹೆಸರಿನಿಂದಲೇ ಇಂಗ್ಲೆಂಡಿಗೆ ಕಳುಹಿಸುತ್ತಿದ್ದರು. ಈ ಬ್ರಿಟನ್ನಿನ ಫ್ರೆಂಚ್ ದನಗಳು ಬಹುಮಟ್ಟಿಗೆ ಕಡಲ್ಗಾಲುವೆ ದ್ವೀಪದ ದನಗಳನ್ನು ಹೋಲುತ್ತಿದ್ದವು. ಈ ರೀತಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ನಡೆದ ನೂರಾರು ಯುದ್ಧದ ಪರಿಣಾಮವಾಗಿ ಈ ಫ್ರೆಂಚ್ ದನಗಳನ್ನು ಇಂಗ್ಲೆಂಡಿಗೆ ಸಾಗಿಸುವುದನ್ನು ಕಾಯಿದೆಯಿಂದ ಪ್ರತಿಬಂಧಿಸಲಾಯಿತು.

ಕ್ರಿ. ಶ. 1789ರಲ್ಲಿ ಜರ್ಸಿ ದ್ವೀಪದ ಪಶುಪಾಲಕರ ಹಿತರಕ್ಷಣೆಗಾಗಿ ಫ್ರೆಂಚ್ ದನಗಳನ್ನು ಈ ದ್ವೀಪಕ್ಕೆ ತರದಂತೆ ಮತ್ತು ಹೊರಗೆ ಕಳುಹಿಸದಂತೆ ಕಾಯಿದೆ ಜಾರಿ ಮಾಡಲಾಯಿತು. ಇದೇ ಪ್ರಕಾರ ಕ್ರಿ.ಶ. 1819ರಲ್ಲಿ ಗರನ್ಸಿ ದ್ವೀಪಕ್ಕೂ ಸಹ ಫ್ರೆಂಚ್ ದನಗಳನ್ನು ತರಿಸುವುದನ್ನು ಕಾಯಿದೆಯಿಂದ ಪ್ರತಿಬಂಧಿಸಲಾಯಿತು. ಹೀಗೆ ಫ್ರಾನ್ಸ್ ದೇಶದಿಂದ ದನಗಳನ್ನು ಈ ದ್ವೀಪಗಳಿಗೆ ತರುವುದನ್ನು ಕಾಯಿದೆಯಿಂದ ಪ್ರತಿಬಂಧಿಸಿದಾಗ್ಯೂ ಅವುಗಳ ಸಾಗಾಟವನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಾಗಲಿಲ್ಲ. ಈ ಕಾಯಿದೆಯ ಪರಿಣಾಮದಿಂದ ಈ ದ್ವೀಪದ ದನಗಳಿಗೆ ಬೇರೆ ಹೊರಗಿನ ದನಗಳೊಡನೆ ಸಂಪರ್ಕ ನಿಂತು ಹೋಯಿತು. ಈ ದ್ವೀಪವು ಬಹಳ ಸಣ್ಣದಾದುದರಿಂದ ಅನ್ಯ ಮಾರ್ಗವಿಲ್ಲದೆ ಇಲ್ಲಿಯ ದನಗಳನ್ನು ಅವುಗಳೊಳಗೇ ಒಂದಕ್ಕೊಂದನ್ನು ಸೇರಿಸಿ ಸಂವರ್ಧನೆ ಮಾಡಬೇಕಾಯಿತು. ಇದು ಹೀಗೆ ಬಹಳ ಕಾಲದವರೆಗೆ ನಡೆದಿದ್ದರಿಂದ ತೀರ ಹತ್ತಿರ ರಕ್ತಸಂಬಂಧವಿರುವ ಆಪ್ತ ಸಂಬಂಧಿಕ ದನಗಳು ಒಂದಕ್ಕೊಂದು ಬೆರೆತುಕೊಂಡು ಬೆಳೆದು ಬಂದವು. ಈ ಹತ್ತಿರ ಸಂಬಂಧಿತ ದನಗಳ ಸಂಗೋಪನೆಯು ಪರಿಣಾಮವಾಗಿ ಜರ್ಸಿ ದನಗಳ ಬೆಳವಣಿಗೆಯಲ್ಲಿ ಪ್ರಗತಿಯಾಗಿದೆ. ಆಕಾರದಲ್ಲಿ ಸಣ್ಣದಾಗಿ, ಸಣ್ಣ ಹುಟ್ಟಿನ ದನಗಳಾಗಲು ಕಾರಣವಾಯಿತು. ಆದರೆ ಇದರಿಂದ ಅವುಗಳ ಹಾಲು ಹಿಂಡುವ ಗುಣದ ಮೇಲೆ ಯಾವ ರೀತಿಯ ಕೆಟ್ಟ ಪರಿಣಾಮವೂ ಆಗಲಿಲ್ಲವೆಂದು ಹೇಳಬಹುದು. ಏಕೆಂದರೆ ಇಂದು ಜಗತ್ತಿನಲ್ಲಿ ಅಧಿಕ ಹಾಲಿಗೆ ಜರ್ಸಿ ದನಗಳು ಹೆಸರುಗಳಿಸಿವೆ.

ಈ ದ್ವೀಪದ ಆಕಳುಗಳು ಆಕಾರದಲ್ಲಿ ಸಣ್ಣವಾಗಿ, ಮೈಕಟ್ಟಿನಲ್ಲಿ ಮೋಟಾಗಿ ಅಚ್ಚುಕಟ್ಟಾಗಿದ್ದುದರಿಂದ, ಮೈಬಣ್ಣ ಮಿಶ್ರಿತಬಣ್ಣದಿಂದ ಕೂಡಿದ್ದುದರಿಂದ ಅವು ನೋಡುವುದಕ್ಕೆ ಸುಂದರವಾಗಿ ಕಾಣುತ್ತಿದ್ದವು. ಹೆಚ್ಚು ಹಾಲು ಹಿಂಡುತ್ತಿದ್ದುದರಿಂದ ಈ ದನಗಳು ಇಂಗ್ಲೆಂಡಿನಲ್ಲಿ ಹೆಚ್ಚು ಪ್ರೀತಿಯನ್ನು ಗಳಿಸಿದವು. ದಿನದಿನಕ್ಕೆ ಇವುಗಳ ಡಿಕೆಯೂ ಹೆಚ್ಚಾಗಿ ದನಗಳ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. 19ನೇ ಶತಮಾನದ ಮಧ್ಯಕಾಲದವರೆಗೆ ಈ ದ್ವೀಪಗಳಿಂದ ಹೊರಗೆ ಮೈನ ಆಕಳು

ಗಳನ್ನು ಮಾತ್ರ ಕಳುಹಿಸಲಾಗುತ್ತಿತ್ತು. ಹೋರಿಗಳನ್ನು ರಫ್ತು ಮಾಡುತ್ತಿರಲಿಲ್ಲ. ಇದರಿಂದ ಈ ಆಲ್ಡರ್ನಿ ದನಗಳ ಪೀಳಿಗೆಯು ಈ ದ್ವೀಪಗಳಿಂದ ಹೊರಗೆ ಬೆಳೆಯುವ ಅವಕಾಶ ಇಲ್ಲವಾಗಿತ್ತು.

ನೆಪೋಲಿಯನ್ ಯುದ್ಧಾನಂತರ ಇಂಗ್ಲಿಷ್ ಶ್ರೀಮಂತ ಜನರಿಂದ ಈ ದ್ವೀಪದ ದನಗಳಿಗೆ ಬೇಡಿಕೆ ಹೆಚ್ಚಾಯಿತು. ಇಂಗ್ಲೆಂಡ್ ಜನರು ಮಿಶ್ರಬಣ್ಣದ ಹಾಲು ಮತ್ತು ಮಾಂಸ ಎರಡೂ ಗುಣಗಳಿಂದ ಕೂಡಿರುವ ಆಕಳುಗಳನ್ನು ಹೆಚ್ಚಾಗಿ ಕೇಳತೊಡಗಿದರು. ಇದೂ ಅಲ್ಲದೆ ಅಂದಿನ ಪರಿಸ್ಥಿತಿಯಲ್ಲಿ ಕೇವಲ ಹೈನದ ಉದ್ಯೋಗವೊಂದೇ ಅಷ್ಟು ಲಾಭದಾಯಕವಾಗಿ ಸಾಗದಂತಾಗಿತ್ತು. ಇದಕ್ಕಾಗಿ ಹೈನ ಮತ್ತು ಮಾಂಸಗಳೆರಡೂ ಕೆಲಸಕ್ಕೆ ಉಪಯೋಗವಾಗುವಂತಹ ದನಗಳಿಗೆ ಗಿರಾಕಿಗಳಿಂದ ಹೆಚ್ಚು ಬೇಡಿಕೆ ಇದ್ದುದರಿಂದ ಇಂಥ ಎರಡೂ ಗುಣಗಳನ್ನು ಹೊಂದಿರುವ ದನಗಳನ್ನು ಉತ್ಪಾದಿಸುವುದರ ಸಲುವಾಗಿ ಈ ದ್ವೀಪದ ಪಶುಪಾಲಕರು ಶಾರ್ಟ್ ಹಾರ್ನ್, ಆಯರಶಯರ್, ಫ್ರೀಜಿಯನ್ ಮತ್ತು ಬ್ರಾನ್‌ಸ್ವಿಸ್, ಜಾತಿಯ ಹೋರಿಗಳನ್ನು ತಯಾರಿಸಿಕೊಂಡು ತಮ್ಮಲ್ಲಿಯ ದನಗಳೊಂದಿಗೆ ಜೊತೆಗೂಡಿಸಿ ಮಿಶ್ರತಳಿ ದನಗಳನ್ನು ಉತ್ಪಾದಿಸಿ ಬೆಳೆಸಿಕೊಂಡರು. ಈ ಮಿಶ್ರತಳಿಯ ದನಗಳು ಆಕಾರದಲ್ಲಿ ದೊಡ್ಡವಾಗಿ, ಮಿಶ್ರಬಣ್ಣಗಳಿಂದಲೂ ಹಾಗೂ ಹಾಲು ಮತ್ತು ಮಾಂಸ ಗಳೆರಡೂ ಗುಣಗಳಿಂದ ಕೂಡಿದ್ದವು. ಈ ಮಿಶ್ರತಳಿಯ ಪರಿಣಾಮ ಮುಂದೆ ಜರ್ಸಿ ಮತ್ತು ಗರನ್ಸಿ ಆಕಳುಗಳ ಮೇಲೆ ಏಷ್ಟರಮಟ್ಟಿಗಾಯಿತು ಎಂಬುದನ್ನು ಹೇಳಲು ಸಾಧ್ಯವಿಲ್ಲ.

ಈ ದ್ವೀಪಗಳಿಗೆ ಕ್ರಿ.ಶ. 1891ರಲ್ಲಿ ಹೊರಗಿನಿಂದ ಕೇವಲ ಮಾಂಸದ ದನಗಳನ್ನು ಬಿಟ್ಟು ಬೇರೆ ಹೈನದ ದನಗಳನ್ನು ತರಿಸಿಕೊಳ್ಳುವುದನ್ನು ನಿಲ್ಲಿಸಲಾಯಿತು. ಕ್ರಿ.ಶ. 1789ರಲ್ಲಿ ಮತ್ತು ಕ್ರಿ.ಶ. 1819ರಲ್ಲಿ ಇಲ್ಲಿಯ ದನಗಳನ್ನು ಫ್ರೆಂಚ್ ದನಗಳೊಂದಿಗೆ ಜೊತೆಗೂಡಿಸಿ ತಳಿಸಂವರ್ಧನೆ ಮಾಡುವುದನ್ನು ನಿಲ್ಲಿಸಲಾಯಿತು. ಜರ್ಸಿ ಮತ್ತು ಗರನ್ಸಿ ದನಗಳಲ್ಲಿ ಆಯಾ ಸ್ವಜಾತೀಯ ದನಗಳಲ್ಲಿಯೇ ಉತ್ತಮವಾದವುಗಳನ್ನು ಆರಿಸಿ ಪ್ರತ್ಯೇಕವಾಗಿ ಅವುಗಳ ತಳಿ ಅಭಿವೃದ್ಧಿಗೊಳಿಸುವ ಕಾರ್ಯ ಕ್ರಿ.ಶ. 1891ರಿಂದ ಪ್ರಾರಂಭವಾಯಿತು.

ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಲ್ಲಿ ಜರ್ಸಿ ಮತ್ತು ಗರನ್ಸಿ ದನಗಳನ್ನು ಬೇರ್ಪಡಿಸಲಾಯಿತು. ಅಂದಿನಿಂದ ಈ ದನಗಳನ್ನು ಹಿಂದೆ ಕರೆಯುತ್ತಿದ್ದ 'ಆಲ್ಡರ್ನಿ' ದನಗಳೆಂಬ ಹೆಸರಿನ ಬದಲಾಗಿ ಜರ್ಸಿ ದ್ವೀಪದ ದನಗಳನ್ನು

ಜರ್ಸಿ ದನಗಳೆಂದು ಮತ್ತು ಅಲ್ಡರ್‌ನಿ ದ್ವೀಪದ ದನಗಳನ್ನು ಗರನ್ಸಿ ದನಗಳೆಂದು ಕರೆಯುವ ರೂಢಿ ಬಳಕೆಯಲ್ಲಿ ಬಂದಿತು. ಇದು ಈಗಲೂ ಸಹ ಮುಂದುವರಿದಿದೆ.

ಜರ್ಸಿ ದನಗಳು

ಕ್ರಿ.ಶ. 1834ರಲ್ಲಿ ಈ ಜರ್ಸಿ ದ್ವೀಪದ ದನಗಳನ್ನು ಜರ್ಸಿ ತಳಿಯ ದನಗಳೆಂದು ಘೋಷಿಸಲಾಯಿತು. ಅದೇ ವರ್ಷ ರಾಯಲ್ ಜರ್ಸಿಕೃಷಿ ಮತ್ತು ತೋಟಗಾರಿಕೆಯ ಸಂಘ ಸ್ಥಾಪನೆಯಾಯಿತು. ಎಲ್ಲ ಜರ್ಸಿ ಪಶುಪಾಲಕರು ತಮ್ಮ ಜರ್ಸಿ ದನಗಳನ್ನು ಈ ಸೊಸೈಟಿಯಲ್ಲಿ ನೊಂದಾಯಿಸಿದರು. ಈ ಸೊಸೈಟಿಯು ಅಂದಿನಿಂದ ಈ ಜರ್ಸಿದನಗಳ ದಾಖಲೆಯನ್ನು ಮತ್ತು ಅವುಗಳ ಅನುವಂಶಿಕ ಚರಿತ್ರೆಯ ದಾಖಲೆಯನ್ನು ಕಾದಿಡುವ ಕೆಲಸವನ್ನು ಕೈಗೊಂಡಿದೆ.

ಕ್ರಿ.ಶ. 1868ರಲ್ಲಿ ಅಮೇರಿಕೆಯಲ್ಲಿ ಜರ್ಸಿ ದನಗಳ ದಾಖಲೆ ಪುಸ್ತಕವನ್ನು ಇಡಲು ಪ್ರಾರಂಭಿಸಿತು. ಇದಾದ 15 ವರ್ಷಗಳ ನಂತರ ಇಂಗ್ಲಿಷ್ ಜರ್ಸಿ ದನಗಳ ಸಂಘವು 1883ರಲ್ಲಿ ಸ್ಥಾಪಿತವಾಯಿತು. ಕ್ರಿ ಶ. 1900 ರಲ್ಲಿ ಆಸ್ಟ್ರೇಲಿಯಾ ತನ್ನಲ್ಲಿಯ ಜರ್ಸಿ ದನಗಳನ್ನು ನೊಂದಾಯಿಸುವ ಸಂಘವನ್ನು ಸ್ಥಾಪಿಸಿತು. ಕ್ರಿ.ಶ. 1907ರಲ್ಲಿ ಕ್ವೀನ್ಸ್‌ಲೆಂಡಿನವರು ತಮ್ಮ ಜರ್ಸಿ ದನಗಳ ಸಂಘವನ್ನು ಸ್ಥಾಪಿಸಿಕೊಂಡರು. ಇದಕ್ಕೂ ಮೊದಲು ಅವರು ತಮ್ಮ ದನಗಳನ್ನು ಕ್ರಿ.ಶ. 2900ರಲ್ಲಿ ಸ್ಥಾಪಿತವಾದ ಹೈನ ದನಗಳ ಸಂಘದಲ್ಲಿಯೇ ನೊಂದಾಯಿಸುತ್ತಿದ್ದರು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಸ್ಟ್ರೇಲಿಯಾ ಮತ್ತು ಕ್ವೀನ್ಸ್‌ಲೆಂಡ್‌ಗಳ ಜರ್ಸಿ ದನಗಳ ಸಂಘವು ಪ್ರಾರಂಭವಾದಂದಿನಿಂದ ಆಸ್ಟ್ರೇಲಿಯಾದ ಎಲ್ಲ ಕಡೆ ಜರ್ಸಿ ತಳಿಯ ದನಗಳಲ್ಲಿ ಹೆಚ್ಚು ಸುಧಾರಣೆಯಾಗಿ ಪ್ರಸಿದ್ಧಿ ಹೊಂದಿರುತ್ತವೆ. ಈ ಜರ್ಸಿದನಗಳನ್ನು ಇಂದು ಪ್ರಪಂಚದಲ್ಲೆಲ್ಲ ಉತ್ತಮ ಹೈನ ದನಗಳೆಂದು ಪರಿಗಣಿಸಲಾಗಿದೆ.

ಕ್ರಿ.ಶ. 1912ರಲ್ಲಿ ಜರ್ಸಿ ದನಗಳ ಹಿಂಡಿನ ಹಾಲಿನ ಪ್ರಮಾಣದ ಪರೀಕ್ಷಾಲಯ ಉದ್ಘಾಟಿಸಲ್ಪಟ್ಟಿತು. ಇದಕ್ಕೆ ಅನೇಕ ಜರ್ಸಿದನಗಳನ್ನು ಸೇರಿಸಲಾಯಿತು. ಸ್ವಲ್ಪ ಕಾಲದವರೆಗೆ ಆಯುಶಯರ್ ಹಸುಗಳು ಹೆಚ್ಚು ಪ್ರತಿಭೆಯನ್ನು ಪಡೆದಿದ್ದವು. ಆದರೆ ಕೆಲವು ಶ್ರೀಮಂತ ಜರ್ಸಿ ಪಶುಪಾಲಕರು ತಮ್ಮ ದನಗಳ ತಳಿ ಅಭಿವೃದ್ಧಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಜರ್ಸಿ ಆಕಳುಗಳನ್ನು ಬಹುಮಟ್ಟಿಗೆ ಅಭಿವೃದ್ಧಿಗೊಳಿಸಿದರು. ಇದರ ಪರಿಣಾಮವಾಗಿ ಜರ್ಸಿ ಆಕಳುಗಳು ಹಾಲಿನ ಉತ್ಪಾದನೆಯಲ್ಲಿ

ಆಯುಶಯರ್ ಆಕಳುಗಳ ಮೇಲೆ ತಮ್ಮ ವಿಕ್ರಮವನ್ನು ಸ್ಥಾಪಿಸುವಂತಾಯಿತು. ಹೀಗಾಗಿ ಅವು ಹೆಚ್ಚು ಜನಪ್ರಿಯವಾದವು. ಕ್ರಿ.ಶ. 1910 ಮತ್ತು ಕ್ರಿ.ಶ. 1935 ರಲ್ಲಿ ವಿಕ್ಟೋರಿಯಾದಲ್ಲಿ ಜರ್ಸಿ ಹೋರಿಗಳನ್ನು ತಳಿ ಅಭಿವೃದ್ಧಿಗಾಗಿ ಅಲ್ಲಿಯ ಕೆಂಪು ಮತ್ತು ಬಿಳಿಯ ಡೈರಿ ಆಕಳುಗಳ ಮೇಲೆ ಉಪಯೋಗಿಸಲಾಯಿತು. ಇದರ ಪರಿಣಾಮದಿಂದ ವಿಕ್ಟೋರಿಯಾದಲ್ಲಿ ಆಯುಶಯರ್, ಶಾರ್ಟ್‌ಹಾರನ್ ಜಾತಿಯ ದನಗಳಲ್ಲಿ ಜರ್ಸಿ ಜಾತಿಯು ಬೆರೆಯಿತು. ಈ ಮಿಶ್ರ ತಳಿಯ ಜರ್ಸಿ ಆಕಳುಗಳ ಹಾಲಿನಲ್ಲಿ ಬೆಣ್ಣೆ ಪ್ರಮಾಣವು ಮೂಲ ಆಯುಶಯರ್ ಮತ್ತು ಶಾರ್ಟ್ ಹಾರನ್ ಆಕಳುಗಳಿಗಿಂತ ಹೆಚ್ಚಾಯಿತು. ಈ ಸಂಘಾರಣೆಯಿಂದ ಅಲ್ಲಿಯ ಪಶುಪಾಲಕರಿಗೆ ಹೆಚ್ಚಿನ ಲಾಭವುಂಟಾಯಿತು. ಈ ಎಲ್ಲಾ ಕಾರಣಗಳಿಂದ ಅಲ್ಲಿ ಜರ್ಸಿ ತಳಿಯ ದನಗಳು ಹೆಚ್ಚು ಜನಪ್ರಿಯತೆ ಮತ್ತು ಕೀರ್ತಿಯನ್ನು ಸಂಪಾದಿಸಿರುತ್ತವೆ.

ಜರ್ಸಿ ದನಗಳು ಆಕಾರದಲ್ಲಿ ಸಣ್ಣವು. ಫ್ರೀಜಿಯನ್ ದನಗಳಿಗಿಂತ ಗಿಡ್ಡ ದನಗಳು. ಪ್ರೈಕೃತಿನಲ್ಲಿ ಅಚ್ಚುಕಟ್ಟಾಗಿ ನೋಡಲು ಮೋಟಾಗಿ ಕಾಣುತ್ತವೆ. ಮಧ್ಯಮ ಗಾತ್ರದ ಜರ್ಸಿ ಆಕಳ ತೂಕವು 325ರಿಂದ 350 ಕೆ.ಜಿ. ವರೆಗೆ ಇರುತ್ತದೆ, ಹೋರಿಯು ಆಕಳಿಗಿಂತ 50 ರಿಂದ 75 ಕೆ.ಜಿ. ಹೆಚ್ಚು ಭಾರವಿರುತ್ತದೆ.

ಶುದ್ಧ ಜರ್ಸಿ ದನಗಳ ಮೈಬಣ್ಣ ಕಂದು, ನಸುಗೆಂಪು ಅಥವಾ ತಾಮ್ರವರ್ಣಗಳಿಂದ ಕೂಡಿರುತ್ತದೆ. ಕೆಂಪು, ಹಳದಿ, ಮಿಶ್ರಿತ ಬಣ್ಣ ಅಥವಾ ಜಿಂಕೆ ಬಣ್ಣದಿಂದಲೂ ಸಹ ಕೂಡಿರುತ್ತದೆ. ಹೊಟ್ಟೆಯ ತಳಭಾಗ ಬಿಳಿಯ ಬಣ್ಣದಿಂದ ಕೂಡಿರುತ್ತದೆ. ಕಿವಿಯ ಒಳಭಾಗ, ಕೆಚ್ಚಲು ಮತ್ತು ಕಂಕುಳ ಸಂದಿಯೊಳಗಿನ ಭಾಗ ಹಳದಿ ಬಣ್ಣದಿಂದ ಕೂಡಿರುತ್ತದೆ.

ಕಾಲುಗಳು ಗಿಡ್ಡಾಗಿದ್ದು, ಗೊರಸುಗಳು, ಕಪ್ಪಾಗಿ, ಗಟ್ಟಿಯಾಗಿರುತ್ತವೆ. ಬೆನ್ನು ಸರಳವಾಗಿದ್ದು ಹೊಟ್ಟೆಯು ಸ್ಥೂಲವಾಗಿ ಜೋತಾಡುತ್ತಿರುತ್ತದೆ. ಮುಂಭಾಗವು ಸಣ್ಣದಾಗಿದ್ದು ಹಿಂಭಾಗವು ದೊಡ್ಡದಾಗಿ ಬೆಣೆಯ ಆಕಾರದಂತೆ ಕಾಣಿಸುತ್ತದೆ, ಕುತ್ತಿಗೆ ಉದ್ದವಾಗಿ ತೆಳ್ಳಗಿರುತ್ತದೆ. ಬಾಲ ಉದ್ದವಾಗಿರುತ್ತದೆ. ಕಿವಿಗಳು ಸಣ್ಣವು. ಮುಖ ಮತ್ತು ಹಣೆ ಸಣ್ಣವು; ಸ್ವಲ್ಪ ಎತ್ತರವಿರುತ್ತವೆ. ಕೋಡುಗಳು ಸಣ್ಣವು.

ಕೆಚ್ಚಲು ಅಗಲವಾಗಿ ಒಮ್ಮೊಮ್ಮೆ ಉದ್ದವಾಗಿ ಜೋತಾಡುವಂತೆ ಇದ್ದು ಹಿಂಭಾಗಕ್ಕಿಂತ ಮುಂಭಾಗವು ಸಣ್ಣದಿರುತ್ತದೆ. ಕೆಚ್ಚಲು ಮೇಲೆ ರೇಶ್ಮೆಯಂತೆ ನಯವಾದ ಹೊಳಪಿನಿಂದ ಕೂಡಿದ ಕೂದಲುಗಳು ಹೇರಳವಾಗಿ ಬೆಳೆದುಕೊಂಡಿರುತ್ತವೆ.

ಜರ್ಸಿ ದನಗಳನ್ನು ಸಾಕುವುದರಲ್ಲಿ ಫ್ರೀಜಿಯನ್ ಆಕಳಿಗಿಂತ ಕಡಿಮೆ ಖರ್ಚು ಬರುತ್ತದೆ. ಹಾಲಿನಲ್ಲಿ ಬೆಣ್ಣೆಯ ಪ್ರಮಾಣ ಶೇಕಡಾ 5.6 ರಷ್ಟು ಇರುತ್ತದೆ. ಇವು ಫ್ರೀಜಿಯನ್ ದನಗಳಿಗಿಂತ ಹೆಚ್ಚು ಶ್ರಮವನ್ನು ಮತ್ತು ಬಿಸಿಲಿನ ತಾಪವನ್ನು ತಡೆಯಬಲ್ಲವು. ಇಂದು ಜಗತ್ತಿನಲ್ಲಿ ಜರ್ಸಿ ದನಗಳು ಉತ್ತಮ ಹಾಗೂ ಶ್ರೇಷ್ಠ ಹೈನದ ದನಗಳೆಂದು ಹೆಸರನ್ನು ಗಳಿಸಿಕೊಂಡಿವೆ.

ಗರನ್ಸಿ ದನಗಳು ಈ ದನಗಳನ್ನು ನಾರ್ಮಂಡಿಯಿಂದ ಗರನ್ಸಿ ದ್ವೀಪಕ್ಕೆ ತರಲಾಯಿತು. ಗರನ್ಸಿ ದ್ವೀಪ, ಜರ್ಸಿ ದ್ವೀಪಕ್ಕಿಂತ ಸಣ್ಣದು ಮತ್ತು ಬಡ ದ್ವೀಪ. ಈ ಗರನ್ಸಿ ದನಗಳ ಅಭಿವೃದ್ಧಿಯ ಕಾರ್ಯ ಬಹಳ ಮಂದಗತಿಯಿಂದ ನಡೆಯಿತು. ಗರನ್ಸಿ ದ್ವೀಪದಲ್ಲಿ ರಾಯಲ್ ಕೃಷಿ ಮತ್ತು ತೋಟಗಾರಿಕೆಯ ಸಂಘ ಪ್ರಾರಂಭವಾಗುವುದಕ್ಕಿಂತ 4 ವರ್ಷ ಮೊದಲು ಕ್ರಿ.ಶ. 1879ರಲ್ಲಿ ಅಮೆರಿಕಾದಲ್ಲಿ ಗರನ್ಸಿ ದನಗಳ ಕೂಟ ಪ್ರಾರಂಭವಾಯಿತು. ಆಸ್ಟ್ರೇಲಿಯಾದ ಗರನ್ಸಿ ದನಗಳ ಸಂಘವು ಕ್ರಿ.ಶ. 1911ರಲ್ಲಿ ಉದಯವಾಯಿತು. ಆದರೆ ಕ್ರಿ.ಶ. 1914ರವರೆಗೆ ಹಿಂದಿನ ದಾಖಲೆಯ ಪುಸ್ತಕ ಪ್ರಕಟಣೆಗೆ ಬರಲಿಲ್ಲ.

ಕ್ರಿ.ಶ. 1889ರ ದನಗಳ ಪ್ರದರ್ಶನದ ಸಮಯದಲ್ಲಿ ಗರನ್ಸಿ ದನಗಳು ಬಹಳ ಮಹತ್ವ ಪಡೆದಿದ್ದವು. ಈ ಆಕಳುಗಳ ಕೆಚ್ಚಲು ಬಹಳ ದೊಡ್ಡದಾಗಿರುತ್ತದೆ. ಇವರ ತಲೆ ಉದ್ದ ಮತ್ತು ದೊಡ್ಡದು, ಕಣ್ಣುಗಳು ದೊಡ್ಡವು. ಹಣೆ ಅಗಲವಾಗಿರುತ್ತದೆ, ಕೊಂಬು ಸಣ್ಣವು; ಕುತ್ತಿಗೆ ಉದ್ದ ಮತ್ತು ತೆಳುವಾಗಿರುತ್ತದೆ. ಹಾಲಿನಲ್ಲಿ ಬೆಣ್ಣೆಯ ಪ್ರಮಾಣ ಜರ್ಸಿ ಆಕಳಿನಂತೆ ಹೆಚ್ಚಾಗಿರುತ್ತದೆ, ಬೆಣ್ಣೆಯ ಬಣ್ಣ ಜರ್ಸಿಯಂತೆ ಹಳದಿಯಾಗಿರುತ್ತದೆ. ಬಹಳ ಬಲಿಷ್ಠವಾದ ಕಷ್ಟ ಸಹಿಷ್ಣುತೆಯ ದನಗಳಿವು. ಅಮೆರಿಕಾದವರು, ಇವನ್ನು ಬಹಳವಾಗಿ ಖರೀದಿ ಮಾಡಿ ತಮ್ಮ ದೇಶಕ್ಕೆ ಕೊಂಡೊಯ್ದಿದ್ದಾರೆ.


4. ಹಾಲೆಂಡದ ದನಗಳು

ಹಾಲೆಂಡ್ ದೇಶದ ದನಗಳನ್ನು ಮುಖ್ಯವಾಗಿ ಮೂರು ಜಾತಿಗಳಾಗಿ ವಿಂಗಡಿಸಬಹುದು, ಅವುಗಳೆಂದರೆ :

(1) ಹೋಲಿಸ್ಟೀನ್ — ಫ್ರೀಜಿಯನ್ (2) ಲೇಕನ್ ಫೀಲ್ಡ್ ಅಥವಾ ಡಚ್ ಬೆಲ್ಟ್ ದನಗಳು ಮತ್ತು (3) ಉತ್ತರ ಹಾಲೆಂಡ್ ದನಗಳು.

(1) ಹೋಲಿಸ್ಟೀನ್—ಫ್ರೀಜಿಯನ್ ದನಗಳು

ನೆದರ್‌ಲೆಂಡಿನ ಉತ್ತರ ಭಾಗದ ತುತ್ತ ತುದಿಯಲ್ಲಿರುವ ಝೂಡರ್‌ಝೀ ಪ್ರದೇಶದ ಅಕ್ಕಪಕ್ಕದಲ್ಲಿರುವ ಫ್ರೀಜಲೆಂಡ್ ಮತ್ತು ಉತ್ತರ ಹಾಲೆಂಡ್ ದೇಶಗಳೇ ಈ ಫ್ರೀಜಿಯನ್ ದನಗಳ ಮೂಲಸ್ಥಳ. ಈ ಎರಡು ಪ್ರದೇಶಗಳ ವಿಸ್ತೀರ್ಣ ಸುಮಾರು 2,300ಚದುರ ಮೈಲಿ. ಈ ಎರಡೂ ಪ್ರದೇಶಗಳು ಭೌಗೋಳಿಕವಾಗಿ ದೊಡ್ಡ ಕಂದಕಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. ಹೀಗಾಗಿ ಸಾರಿಗೆ ಸೌಕರ್ಯಗಳ ಅನುಕೂಲ ಬಹಳ ಕಡಿಮೆ ಮತ್ತು ಬೇರೆ ಪ್ರದೇಶದ ದನಗಳ ಸಂಪರ್ಕವು ಅಷ್ಟು ಸುಲಭವಲ್ಲ. ಇದರಿಂದಾಗಿ ಇಲ್ಲಿಯ ದನಗಳು ತಮ್ಮ ಜಾತಿಯ ಗುಣಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿವೆ. ಹಾಲೆಂಡ್ ದೇಶ ಸಮುದ್ರ ಮಟ್ಟಕ್ಕಿಂತ ಕೆಳಗಿದೆ. ಈ ಪ್ರದೇಶದ ಭಾಗಗಳು ದೊಡ್ಡ ದೊಡ್ಡ ಕಂದಕಗಳಿಂದ ಸುತ್ತುವರಿಯಲ್ಪಟ್ಟಿವೆ.



ಚಿತ್ರ 13: ಹೋಲಿಸ್ಟೀನ್ ಫ್ರೀಜಿಯನ್ ಹೋರಿ

ಇಲ್ಲಿಯ ಜಮೀನುಗಳಲ್ಲಿ ಸಮುದ್ರದ ನೀರು ಸದಾ ಜಿನುಗುತ್ತಿರುತ್ತದೆ. ಹಾಲೆಂಡಿನಲ್ಲಿಯ ಹನ್ನೊಂದು ಪ್ರಾಂತಗಳಲ್ಲಿ-ಫ್ರೀಜ್‌ಲೆಂಡ್, ಡ್ರೆನ್ತೆ, ಉತ್ತರ ಹಾಲೆಂಡ್ ಮತ್ತು ದಕ್ಷಿಣ ಹಾಲೆಂಡ್ ದೇಶಗಳ ಜನರು ಹೈನೋತ್ಪಾದನ ಮತ್ತು ಹೈನತಳಿಯ ದನಗಳನ್ನು ಸಾಕುವುದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ, ಇದು ಒಂದು ರಾಷ್ಟ್ರೀಯ

ಉದ್ಯೋಗವೆಂಬ ಉದಾತ್ತ ಭಾವನೆಯಿಂದ ಸತತ ಉದ್ಯೋಗಶೀಲರಾಗಿರುತ್ತಾರೆ. ಉತ್ತರ ಮತ್ತು ದಕ್ಷಿಣ ಹಾಲೆಂಡಿನಲ್ಲಿಯ ಪ್ರದೇಶಗಳು ಸಮುದ್ರ ಮಟ್ಟಕ್ಕಿಂತ 20 ಅಡಿ ಕೆಳಗೆ ಇರುತ್ತವೆ. ಸುಮಾರು 3ನೇ ಒಂದು ಭಾಗದಷ್ಟು ಭೂಮಿಯನ್ನು ಹಸಿರುಹುಲ್ಲುಗಾವಲುಗಳಿಗಾಗಿ ಕಾಯ್ದಿರಿಸಲಾಗಿದೆ. ಈ ಪ್ರದೇಶಗಳ ಸಮುದ್ರ ತೀರದಲ್ಲಿಯ ಪ್ರದೇಶಗಳು ಮರಳಿನ ದಿಣ್ಣೆಗಳಿಂದಲೂ ಕಂದಕಗಳಿಂದಲೂ ಕೂಡಿರುತ್ತವೆ. ಭೂಮಿಯಲ್ಲಿ ಸದಾ ತಂಪು ಇರುವುದರಿಂದ ಭೂಮಿಯು ಫಲವತ್ತಾಗಿದೆ. ಉತ್ತಮ ಬೆಳೆ ಬರುತ್ತದೆ. ವಿಶಾಲವಾದ ನಾನಾ ಜಾತಿಯ ರಸಭರಿತವಾದ ಹುಲ್ಲುಗಾವಲುಗಳಿಂದ ಕೂಡಿರುತ್ತದೆ. ದನಗಳಿಗೆ ಮೇಯಲು ಸದಾಕಾಲ ಯಥೋಚಿತವಾಗಿ ಹಸಿ ಮೇವು ಸಿಗುತ್ತದೆ. ಉತ್ತರ ಹಾಲೆಂಡ್‌ನಲ್ಲಿ ಬೇಸಿಗೆಯ ಉಷ್ಣತೆಯು ಅಷ್ಟು ಪ್ರಖರವಲ್ಲ, ತಂಪು ಪ್ರದೇಶ. ಆದರೆ ಚಳಿಗಾಲದಲ್ಲಿ ಸಹಿಸಲಾಗದಷ್ಟು ವಿಪರೀತ ಚಳಿ.

ಈ ದನಗಳ ಮೂಲ ಉತ್ಪತ್ತಿಯ ಬಗ್ಗೆ ನಿರ್ದಿಷ್ಟವಾಗಿ ಏನೂ ತಿಳಿದು ಬಂದಿಲ್ಲ. ಫ್ರೀಜಿಯನ್ಸ್ ಮತ್ತು ಭೇಟೇವಿಯನ್ಸ್ ಎಂಬ ಬುಡಕಟ್ಟಿನ ಜನಾಂಗದವರು ಮಧ್ಯ ಯೂರೋಪ್‌ದಿಂದ ರೈನ್ ನದಿಯ ಮಾರ್ಗವಾಗಿ ಕ್ರಿ.ಪೂ.ದ ಕೊನೆಯ ಭಾಗದಲ್ಲಿ ಮತ್ತು ಕ್ರಿ.ಶಕದ ಪ್ರಾರಂಭದ ಕಾಲದಲ್ಲಿ ಹಾಲೆಂಡಿಗೆ ಬಂದು ನೆಲೆಸಿದವರು ಎಂಬುದು ಸಾಮಾನ್ಯ ನಂಬಿಕೆ. ಸಾಂಪ್ರದಾಯಿಕ ಹೇಳಿಕೆಯ ಪ್ರಕಾರ ಈ ಎರಡೂ ಪಂಗಡಗಳ ಜನಾಂಗದವರ ಪೈಕಿ ಒಂದು ಪಂಗಡದವರು ಕಪ್ಪು ಬಣ್ಣದ ದನಗಳನ್ನೂ ಮತ್ತೊಂದು ಪಂಗಡದ ಜನರು ಬಿಳಿಯ ಬಣ್ಣದ ದನಗಳನ್ನೂ ತಮ್ಮೊಂದಿಗೆ ಬರುವಾಗ ತಂದಿದ್ದರೆಂದು ಹೇಳಲಾಗಿದೆ. ಆದರೆ ಡೇವೀಸ್ 13ನೇ ಶತಮಾನದ ಆದಿಭಾಗದಲ್ಲಿ ಹಂಡಬಂಡ ಬಣ್ಣಗಳಿಂದ ಕೂಡಿದ ದನಗಳು ಹಾಲೆಂಡ್ ಪ್ರದೇಶವನ್ನೊಳಗೆ ಬಂದಿರಬೇಕು ಎಂದು ಬರೆದಿರುತ್ತಾರೆ. ಆಲ್‌ಬರ್ಟರ್ ಮ್ಯಾಗನಸ್ ಎಂಬುವರು 18ನೇ ಶತಮಾನದವರೆಗೆ ಹಾಲೆಂಡಿನಲ್ಲಿ ಕೆಂಪು ಮತ್ತು ಬಿಳಿಯ ಬಣ್ಣ ಮಿಶ್ರಿತ ದನಗಳು ಕಂಡು ಬರುತ್ತಿದ್ದುವು, ಕಪ್ಪು ಬಣ್ಣದಿಂದ ಕೂಡಿದ ದನಗಳು ಆಗ ಕಂಡು ಬರುತ್ತಿದ್ದಿಲ್ಲವೆಂದು ಹೇಳಿರುತ್ತಾರೆ. ಈ ದನಗಳು ಮುಂದೆ ಫ್ರಾನ್ಸಿನ ಉತ್ತರ ಭಾಗದಲ್ಲಿ ಹಾಗೂ ಜರ್ಮನಿಯ ಪೂರ್ವ ಭಾಗದಲ್ಲಿ ಹೋಲ್‌ಸ್ಟೀನ್‌ವರೆಗೆ ಅಥವಾ ಸ್ಕೆಲ್‌ವಿಗ್‌ವರೆಗೆ ಹರಡಿ ಹಬ್ಬಿಕೊಂಡಿರಬಹುದು ಎಂದು ಹೇಳುತ್ತಾರೆ. ಫ್ರೀಜಿಯನ್ ಪ್ರದೇಶವು ಉತ್ತಮ ಜಾತಿಯ ದನಗಳಿಗೆ ಹೆಸರುವಾಸಿಯಾಗಿದೆ.

ಹಾಲೆಂಡಿನ ಪಶುಪಾಲಕರು ತಮ್ಮ ಮುಂದಿನ ದನದ ಪೀಳಿಗೆಯ ಅಭಿವೃದ್ಧಿಯ ಸಲುವಾಗಿ ತಮ್ಮ ಹಿಂಡಿನಲ್ಲಿರುವ ಉತ್ತಮ ದನಗಳನ್ನು ಆರಿಸಿ, ಅವುಗಳಲ್ಲಿಯೇ

ಅತಿ ಸಮೀಪದ ರಕ್ತಸಂಬಂಧವಿರುವ ದನಗಳನ್ನು ಒಂದಕ್ಕೊಂದು ಜೊತೆಗೂಡಿಸಿ ಸಂವರ್ಧನೆಮಾಡಿ ತಳಿ ಎಬ್ಬಿಸುವುದು ಅಲ್ಲಿಯ ಸಂಪ್ರದಾಯಕವಾದ ಪದ್ಧತಿ. ಇದಕ್ಕಾಗಿ ಅಲ್ಲಿಯ ಪಶುಪಾಲಕರು ತಮ್ಮ ಹಿಂಡಿನಲ್ಲಿಯೇ ಹುಟ್ಟಿದ ಉತ್ತಮ ಎರಡು ಹೋರಿಗಳನ್ನು ಸಂವರ್ಧನೆಗಾಗಿ ಆರಿಸಿ, ಬೆಳೆಸಿಕೊಂಡು ಮುಂದೆ ಅವುಗಳನ್ನು ಒಂದು ವರ್ಷಗಳ ಮುಂದಿನ ತಳಿ ಸಂತಾನಾಭಿವೃದ್ಧಿಗಾಗಿ ಉಪಯೋಗಿಸುತ್ತಾರೆ. ಈ ಹೋರಿಗಳಿಗೆ ಹುಟ್ಟಿದ ಕರುಗಳು ಉತ್ತಮವಾಗಿ ಕಂಡುಬರದಿದ್ದಲ್ಲಿ ಅವುಗಳನ್ನು ತೆಗೆದು, ಬೇರೆ ಹೋರಿಗಳನ್ನು ತಮ್ಮ ತಮ್ಮಲ್ಲಿಯೇ ಪರಸ್ಪರ ವಿನಿಮಯ ಮಾಡಿಕೊಂಡು ತಮ್ಮ ಹಿಂಡನ್ನು ಅಭಿವೃದ್ಧಿಗೊಳಿಸಿ ಕೊಳ್ಳುತ್ತಾರೆ. ಹೀಗೆ ನೂರಾರು ವರ್ಷಗಳಿಂದ ರಕ್ತಸಮೀಪ ಸಂಬಂಧವುಳ್ಳ ದನಗಳ ಸಂಗೋಪನೆಯಿಂದ ಈ ಫ್ರೀಜಿಯನ್ ಜಾತಿಯ ದನಗಳಲ್ಲಿ ಭಿನ್ನತೆಗಿಂತ ಏಕರೂಪತೆ ಕಂಡುಬರುತ್ತದೆ. ಕೆಂಪು ಮತ್ತು ಬಿಳಿಯ ಮಿಶ್ರಿತ ಬಣ್ಣದಿಂದ ಕೂಡಿದ ದನಗಳನ್ನು ಸಹ ನೋಡಬಹುದು. ಆದರೆ ಅಲ್ಲಿಯ ಪಶುಪಾಲಕರು ಹೆಚ್ಚಾಗಿ ಕಪ್ಪು ಮತ್ತು ಬಿಳಿಯ ಮಿಶ್ರಣದ ದನಗಳನ್ನು ಹೆಚ್ಚಾಗಿ ಮೆಚ್ಚುತ್ತಾರೆ.

ಫ್ರೀಜಿಯನ್ ಜಾತಿಯ ದನಗಳಿಗೆ ಮೊದಲಿಗೆ ಹಾಲೆಂಡ್ ದೇಶದ ಫ್ರೀಜಿಯನ್ ದನಗಳೆಂದು ಹೆಸರು ಬಂದಿದೆ. ಆದರೆ ಈ ದನಗಳನ್ನು ಜರ್ಮನಿಯ ಹೋಲಿಸ್ಟೀನ್ ಬಂದರದಿಂದ ಹಡಗಿನಲ್ಲಿ ಪರದೇಶಗಳಿಗೆ ರಫ್ತುಮಾಡುತ್ತಾರೆ, ಆದ್ದರಿಂದ ಅಮೆರಿಕನ್ನರು ಈ ದನಗಳನ್ನು 'ಹೋಲಿಸ್ಟೀನ್' ಫ್ರೀಜಿಯನ್ ಎಂದು ಕರೆಯುತ್ತಾರೆ. ರೋಮನ್ ಸೈನಿಕರು ಯೂರೋಪಿನ ಮೇಲೆ ದಾಳಿ ಮಾಡಿದಾಗ ಅವರು ತಮ್ಮ ಜೊತೆಯಲ್ಲಿ ಟಸ್ಕನಿ ಮತ್ತು ಲಂಬಾರ್ಡಿಯ ಈಜಿಪ್ಟಿನ ದನಗಳನ್ನು ತೆಗೆದುಕೊಂಡು ಹೋಗಿದ್ದರು. ಈ ದನಗಳನ್ನು ಅಲ್ಲಿಯ ಸ್ಥಳದ ದನಗಳೊಂದಿಗೆ ಸಂಗೋಪನೆಗಾಗಿ ಉಪಯೋಗಿಸಲಾಯಿತು. ಈ ಸಂಕರಣ ತಳಿಯ ದನಗಳನ್ನು ಫ್ರೀಜಿಯನ್ ದನಗಳೆಂದು ಕರೆಯಲಾಯಿತು. ಇವುಗಳನ್ನು ಹೋಲಿಸ್ಟೀನ್ ದನಗಳೆಂದೂ ಸಹ ಕರೆಯುತ್ತಾರೆ.

ಫ್ರೀಜಿಯನ್ ಹೋರಿಗಳನ್ನು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಚಾನಲ್ ಐಲೆಂಡ್ಸ್‌ಗಳಿಗೆ ಅಲ್ಲಿಯ ದನಗಳನ್ನು ಸುಧಾರಿಸುವುದರ ಸಲುವಾಗಿ ತೆಗೆದುಕೊಂಡು ಹೋಗಿ ಉಪಯೋಗಿಸಲಾಯಿತು. ಫ್ರೀಜಿಯನ್ ಹೋರಿಗಳನ್ನು ಲಾಂಗ್ ಹಾರನ್, ಶಾರ್ಟ್ ಹಾರನ್, ಆಯರ್‌ಶಯರ್, ಜರ್ಸಿ ಮತ್ತು ಗರನ್ಸಿ ಆಕಳುಗಳ ಮೇಲೆ ಉಪಯೋಗಿಸಿ ಉತ್ತಮ ಹೈನ ತಳಿಯ ದನಗಳನ್ನು ಉತ್ಪಾದಿಸಲಾಯಿತು. ಡಚ್ಚರೂ ಸಹ ಫ್ರೀಜಿಯನ್ ಹೋರಿಗಳಿಂದ ತಮ್ಮಲ್ಲಿಯ ತಳಿಯನ್ನು ಅಭಿವೃದ್ಧಿ ಮಾಡಿಕೊಂಡರು.

ಕ್ರಿ.ಶ. 1918ಕ್ಕಿಂತ ಮುಂಚೆ ಆಸ್ಟ್ರೇಲಿಯಾ ಖಂಡದ ವಿಕ್ಟೋರಿಯಾದಲ್ಲಿ ಇಬ್ಬರನ್ನು ಮಾತ್ರ ಫ್ರೀಜಿಯನ್ ಜಾತಿಯ ದನಗಳ ಪಶುಪಾಲಕರು ಎಂದು ಪರಿಗಣಿಸಲಾಗಿತ್ತು. ಕ್ರಿ.ಶ. 1919ರಲ್ಲಿ ಸರ್ಕಾರದ ವ್ಯವಸಾಯ ಇಲಾಖೆಯವರು ವಿಕ್ಟೋರಿಯಾದಲ್ಲಿ ಒಂದು ಪಶುಸಂಗೋಪನೆಯ ಕೇಂದ್ರವನ್ನು ಸ್ಥಾಪಿಸಿ, ತನ್ಮೂಲಕ ಈ ತಳಿಯ ದನಗಳ ಪ್ರಚಾರ ಕಾರ್ಯವನ್ನು ಭರದಿಂದ ಮಾಡಿದರು. ಇವುಗಳು ಕೊಡುವ ಹಾಲಿನ ಪ್ರಮಾಣದ ಪ್ರಾತ್ಯಕ್ಷಿಕ ಪ್ರದರ್ಶನಗಳಿಂದ ಈ ಜಾತಿಯ ದನಗಳನ್ನು ಹೆಚ್ಚು ಜನಪ್ರಿಯಗೊಳಿಸಲಾಯಿತು. ವಿಕ್ಟೋರಿಯಾದಲ್ಲಿಯ ಈ ಪಶುಸಂಗೋಪನಾ ಕೇಂದ್ರವು ಅಲ್ಲಿಯ ಫ್ರೀಜಿಯನ್ ದನಗಳ ಅಭಿವೃದ್ಧಿಯ ಕಾರ್ಯಕ್ಕೆ ತಳಪಾಯ ಹಾಕಿದೆ. ಈ ಎಲ್ಲ ಕಾರಣಗಳಿಂದ ಈಗ ಆಸ್ಟ್ರೇಲಿಯಾದಲ್ಲಿ ಎಲ್ಲ ಕಡೆ ಫ್ರೀಜಿಯನ್ ದನಗಳನ್ನು ನೋಡಬಹುದು.

ಫ್ರೀಜಿಯನ್ ದನಗಳು ಯುರೋಪಿನ ಹೈನ ದನಗಳಲ್ಲೆಲ್ಲ ದೊಡ್ಡವು. ಎಂದು ಹೇಳಬಹುದು. ಪ್ರೌಢ ಆಕಳಿನ ತೂಕವು 600 ರಿಂದ 750 ಕೆ.ಜಿ.ಗಳ ವರೆಗೆ ಇರುತ್ತದೆ. ಹೋರಿಗಳ ತೂಕವು 900 ಕೆ.ಜಿ.ಗಳಷ್ಟು ಇರುತ್ತದೆ.

ಕಾಲುಗಳು ಗಿಡ್ಡಾಗಿಯೂ, ದಪ್ಪವಾಗಿಯೂ ಒಳ್ಳೆ ಸಾಮರ್ಥ್ಯವುಳ್ಳವಾಗಿರುತ್ತವೆ. ಮೈಕಟ್ಟಿನ ಮೇಲಿನಿಂದ ನೋಡಿದಾಗ ಇವು ಸ್ಥೂಲವಾದ ಪ್ರಾಣಿಗಳೆಂದು ಕಂಡುಬರುತ್ತದೆ. ದೇಹವು ಜಡವಿದ್ದು ಗೊರಸುಗಳು ಬಹಳ ಮೃದುವಾಗಿರುವುದರಿಂದ ಗಟ್ಟಿಯಾದ ಕಲ್ಲು ರಸ್ತೆಗಳ ಮೇಲೆ ನಡೆಯಲಾರವು. ಇವರ ಕೊಳಗ (ಗೊರಸು)ಗಳು ಕೆಂಪಗೆ ಗಜ್ಜರಿ ಬಣ್ಣದಂತಿರುತ್ತವೆ. ಮೊಣಕಾಲು ಮತ್ತು ಹಿಂದಿನ ಕಾಲುಗಳು ಬಿಳಿಯ ಬಣ್ಣದಿಂದ ಕೂಡಿರುತ್ತವೆ.

ಇವುಗಳ ಇಣಿಯು ಬೆಳೆದಿರುವುದಿಲ್ಲ. ಹೀಗಾಗಿ ಬೆನ್ನಿನ ಮೇಲುಭಾಗವು ಸರಳವಾಗಿ, ಉದ್ದವಾಗಿ ಒಂದೇ ಸಮವಾಗಿ ಕಾಣುತ್ತದೆ. ಮುಂಭಾಗಕ್ಕಿಂತ ಹಿಂಭಾಗವು ದೊಡ್ಡದಾಗಿರುತ್ತದೆ. ಬೆನ್ನು ಕಿರಿದಾಗಿರುತ್ತದೆ. ಈ ದನಗಳು ಮಾಂಸ ಮತ್ತು ಹಾಲುಗಳೆರಡಕ್ಕೂ ಪ್ರಸಿದ್ಧಿ ಪಡೆದಿವೆ.

ಬಣ್ಣದ ಮೇಲಿನಿಂದಲೇ ಫ್ರೀಜಿಯನ್ ಹೋಲಿಸ್ಟೀನ್ ದನಗಳನ್ನು ಬಹು ಸುಲಭವಾಗಿ ತಿಳಿಯಬಹುದು. ಮೈಬಣ್ಣ ಬಿಳಿಯ ಮತ್ತು ಕಪ್ಪು ಬಣ್ಣಗಳಿಂದ ಕೂಡಿರುತ್ತದೆ. ಇವುಗಳಿಗೆ ತಿನ್ನಲು ಆಹಾರ ಹೆಚ್ಚಾಗಿ ಬೇಕಾಗುತ್ತದೆ. ಸಾಕಲು ಖರ್ಚು ಹೆಚ್ಚು. ಫ್ರೀಜಿಯನ್ ಆಕಳುಗಳ ಹಾಲಿನಲ್ಲಿ ಬೆಣ್ಣೆಯ ಅಂಶವು ಬಹಳ ಕಡಿಮೆ ಇರುತ್ತದೆ.

ಈ ಜಾತಿಯ ಆಕಳುಗಳ ಹಾಲಿನಲ್ಲಿ ಬೆಣ್ಣೆಯ ಅಂಶವು ಕಡಿಮೆ. ಸರಾಸರಿ ಶೇಕಡಾ 3.6ರಷ್ಟು ಇರುತ್ತದೆ. ಬೆಣ್ಣೆಯ ಪ್ರಮಾಣ ಕಡಿಮೆ ಇದ್ದಾಗ್ಯೂ ಹಾಲು ಕರೆಯುವ ಪ್ರಮಾಣ ಬಹಳ ಹೆಚ್ಚು. ಇದರಿಂದಾಗಿ ಹಾಲಿನ ಉತ್ಪಾದನೆಯ ವ್ಯಾಪಾರ ದೃಷ್ಟಿಯಿಂದ ಈ ಜಾತಿಯ ದನಗಳು ಉತ್ತಮ ದನಗಳು. ಅಮೇರಿಕಾದ ಉತ್ತರ ಅಟ್ಲಾಂಟಿಕ್ ಪ್ರದೇಶಗಳಲ್ಲಿ ನೂರಕ್ಕೆ 49ರಷ್ಟು ಫ್ರೀಜಿಯನ್ ಹಸುಗಳ ಹಾಲನ್ನು ಉಪಯೋಗಿಸಲಾಗುತ್ತಿದೆ. ಇದೇ ರೀತಿ ಬೇರೆ ಕಡೆಗಳಲ್ಲಿಯೂ ಸಹ ದಕ್ಷಿಣ ಅಮೇರಿಕಾದ ಪ್ರದೇಶಗಳನ್ನು ಬಿಟ್ಟು ಫ್ರೀಜಿಯನ್ ದನಗಳನ್ನೇ ಹಾಲಿಗಾಗಿ ಉಪಯೋಗಿಸಲಾಗುತ್ತಿದೆ.

ಹೋಲಿಸ್ಟೀನ್ ಫ್ರೀಜಿಯನ್ ಜಾತಿಯ ದನಗಳು ಹೆಚ್ಚು ಆಹಾರ ತಿನ್ನುತ್ತವೆ. ಹೀಗೆ ಹೆಚ್ಚಾಗಿ ತಿಂದ ಆಹಾರವನ್ನು ಸಮರ್ಪಕವಾಗಿ ಹಾಲಾಗಿ ಪರಿವರ್ತನೆ ಮಾಡುವ ಒಂದು ವಿಶೇಷ ಗುಣವನ್ನು ಹೊಂದಿರುತ್ತವೆ. ಈ ಜಾತಿಯ ದನಗಳು ಬೇಗನೆ ಬೆಳೆಯುತ್ತವೆ.

ಈ ದನಗಳಲ್ಲಿ ವಯಸ್ಸಾದ ಮೇಲೆ ಹಾಲು ಕಡಿಮೆಯಾದಾಗ್ಯೂ ಸಹ ಇವುಗಳ ಶರೀರವು ಹೆಚ್ಚು ಮಾಂಸಗಳಿಂದ ತುಂಬಿಕೊಂಡಿರುವುದರಿಂದ, ಮಾಂಸಕ್ಕಾಗಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ. ಹಸಿರು ಮೇವಿನಲ್ಲಿರುವ ಕ್ಯಾರೋಟೀನ್ ಎಂಬ ವಸ್ತುವನ್ನು ಸಮರ್ಥನೀಯವಾಗಿ 'ಎ' ಜೀವಸತ್ವವನ್ನಾಗಿ ಮಾರ್ಪಡಿಸುವುದರಿಂದ ಈ ಜಾತಿಯ ಆಕಳುಗಳ ಹಾಲು ಬೇರೆ ಜಾತಿಯ ಆಕಳುಗಳ ಹಾಲಿಗಿಂತ ಹೆಚ್ಚು ಬಿಳುಪಾಗಿರುತ್ತದೆ. ಈ ಆಕಳುಗಳ ಹಾಲಿನಲ್ಲಿ 'ಎ' ಜೀವಸತ್ವ ಅಧಿಕ ಪ್ರಮಾಣದಲ್ಲಿರುತ್ತದೆ.

ಈ ಜಾತಿಯ ದನಗಳಿಗೆ ಸಾಕಷ್ಟು ತಂಪು ಹವೆ ಮತ್ತು ನೆರಳನ್ನು ಪೂರೈಸಿದಲ್ಲಿ ಇವುಗಳು ನಮ್ಮ ದೇಶದಲ್ಲೂ ಉಷ್ಣತೆಯನ್ನು ತಾಳಬಲ್ಲವು.

(2) **ಲೇಕನ್ ಫೀಲ್ಡ್ ಅಥವಾ ಡಚ್ ಬೆಲ್ಟ್ ದನಗಳು** ಈ ದನಗಳ ತೌರೂರು ಹಾಲೆಂಡ್ ದೇಶ. ಇವು ಬಹಳ ಮಟ್ಟಿಗೆ ಇಂಗ್ಲೆಂಡಿನ ಗಾಲ್ವೇದ ದನಗಳನ್ನು ಹೋಲುತ್ತವೆ. ಆದರೆ ಕೋಡುಗಳಲ್ಲಿ ವ್ಯತ್ಯಾಸವಿದೆ. ಯೂರೋಪಿನಲ್ಲಿ ಈ ದನಗಳಿಗೆ 'ಡಚ್ ಬೆಲ್ಟ್' ದನಗಳೆಂದೂ ಇಂಗ್ಲೆಂಡಿನಲ್ಲಿ 'ಲೇಕನ್ ಫೀಲ್ಡ್' ಎಂದೂ ಕರೆಯುತ್ತಾರೆ. ಈ ದನಗಳ ಮುಂಭಾಗ ಮತ್ತು ಹಿಂಭಾಗವು ಅಚ್ಚ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಆದರೆ ಇದರ ಮಧ್ಯಭಾಗವು ಶುದ್ಧ ಬಿಳಿಯ ಬಣ್ಣದಿಂದ ಕೂಡಿದ ಒಂದು ದೊಡ್ಡ ಅಗಲವಾದ ಪಟ್ಟೆ

ಯಂತೆ ಕಾಣುತ್ತದೆ. ಇದನ್ನು ನೋಡಿದರೆ ಇದರ ಮಧ್ಯಭಾಗಕ್ಕೆ ಒಂದು ಶುದ್ಧ ಬಿಳಿಯ ಕಂಬಳಿಯ ಪಟ್ಟಿಯನ್ನು ಬಿಗಿದಂತೆ ಕಾಣುತ್ತದೆ. ಇದಕ್ಕಾಗಿ ಈ ದನಗಳಿಗೆ 'ಡಚ್ ಬೆಲ್ಟ್'ಎಂದು ಹೆಸರು ಬಂದಿದೆ. ಇವು ಹೋಲಿಸ್ಟೀನ್ ದನಗಳಿಗಿಂತ ಸಣ್ಣವು. ಮೆದುವಾದ ತಗ್ಗಿನ ಸ್ಥಳಗಳಲ್ಲಿ ಸಮೃದ್ಧಿಯಾಗಿ ಬೆಳೆದ ಹಸಿ ಹುಲ್ಲನ್ನು ಯಥೇಚ್ಛವಾಗಿ ತಿಂದು ದಷ್ಟಪುಷ್ಟವಾಗಿ ಬೆಳೆದಿರುತ್ತವೆ. ಬೇರೆ ಸ್ಥಳದಲ್ಲಿ ಅಷ್ಟು ಚೆನ್ನಾಗಿ ಬೆಳೆಯುವುದಿಲ್ಲ. ಹಾಲಿಗಾಗಿ ಸಾಕುತ್ತಾರೆ. ಇಂಗ್ಲೆಂಡ್, ಮೆಕ್ಸಿಕೋ, ಕೆನಡಾ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಈ ಜಾತಿಯ ದನಗಳು ಕಡಿಮೆ ಸಂಖ್ಯೆಗಳಲ್ಲಿರುತ್ತವೆ.

5. ಡೆನ್ಮಾರ್ಕ್‌ದೇಶದ ದನಗಳು

(1) ಅಲ್‌ಡೇನ್‌ಬರ್ಗ್ ಮತ್ತು ರೆಡ್‌ಡೇನ್ ದನಗಳು ಡೆನ್ಮಾರ್ಕ್ ದೇಶ ಅಲ್‌ಡೇನ್‌ಬರ್ಗ್ ಮತ್ತು ರೆಡ್‌ಡೇನ್ ದನಗಳ ಮಾತೃಸ್ಥಾನ. ಡೆನ್ಮಾರ್ಕ್ ದೇಶ ದನಕರುಗಳ ವೈಭವದ ನಾಡು, ಯೂರೋಪ್ ದೇಶದ ಹೈನ ತಳಿಯ ದನಗಳ ತವರೂರು. ಜಾಗತಿಕ ಗೋಗೃಹವೆಂದು ಡೆನ್ಮಾರ್ಕ್ ಹೆಸರುಗಳಿಸಿದೆ. 19ನೇ ಶತಮಾನದ ಅಂತಿಮಾರ್ಧದಲ್ಲಿ ಡೆನ್ಮಾರ್ಕ್‌ನ ದ್ವೀಪಗಳಲ್ಲಿಯ ಸ್ಥಳೀಕ ದನಗಳ ಸಂಕರಣದಿಂದ ಈ ರೆಡ್‌ಡೇನ್ ದನಗಳು ವಿಕಸಿತವಾದವು. ಇದಕ್ಕಾಗಿ ಮೂಲತಃ ದಕ್ಷಿಣ ಜೆಟ್‌ಲ್ಯಾಂಡಿನ ದನಗಳು ಜರ್ಮನಿಯ ಸ್ಲೆಸ್‌ವಿಗ್‌ನ ಅಂಗ್ಲೀಕ ದನಗಳು ಹಾಗೂ ಸ್ಲೆಸ್‌ವಿಗ್‌ನ ಜವಳು ಪ್ರದೇಶದ ದನಗಳನ್ನು ಜೊತೆಗೂಡಿಸಿ ಸಂಕರಣಗೊಳಿಸಿ ಮಿಶ್ರತಳಿ ಉತ್ಪಾದಿಸಲಾಯಿತು. ಹೀಗೆ ಈ ಮೂರು ಸ್ಥಳೀಕ ದನಗಳ ರಕ್ತಮಿಶ್ರಣದಿಂದ ಉತ್ಪನ್ನವಾದ ತಳಿಯ ದನಗಳೇ ಪ್ರಖ್ಯಾತ 'ರೆಡ್‌ಡೇನ್' ದನಗಳು. ಸ್ಥಾನಿಕ ದನಗಳಾದ ಅಂಗ್ಲೀಕ ದನಗಳು 2500 — 3000 ಕಿಲೋ ಗ್ರಾಮ್‌ಗಳಷ್ಟು ಹಾಲು ಕರೆಯುತ್ತಿದ್ದವು. 'ಸ್ಲೆಸ್‌ವಿಗ್‌ನ' ಜವಳು ಪ್ರದೇಶದ ದನಗಳು ದೊಡ್ಡ ಮೈಕಟ್ಟಿನ, ಹೆಚ್ಚು ಮಾಂಸ ಖಂಡಗಳಿಂದ ಕೂಡಿದ ದನಗಳು. ಇವುಗಳ ಸಂಕರಣದಿಂದ 'ರೆಡ್‌ಡೇನ್' ದನಗಳು ಹುಟ್ಟಿದವುಗಳಾದ್ದರಿಂದ ಅವು ತಮ್ಮ ಹಾಲಿನ ಗುಣವನ್ನು ಸ್ಥಳೀಕ ಅಂಗ್ಲೀಕ ದನಗಳಿಂದಲೂ ಹಾಗೂ ತಮ್ಮ ಮೈಕಟ್ಟಿನ ಆಹಾರ ಮತ್ತು ಮಾಂಸದ ಗುಣವನ್ನು ಸ್ಥಳೀಕ ಸ್ಲೆಸ್‌ವಿಗ್ ದನಗಳಿಂದಲೂ ಪಡೆದುಕೊಂಡವು. ಇದರ ಪರಿಣಾಮವಾಗಿ ಈ ರೆಡ್‌ಡೇನ್ ದನಗಳು ಹಾಲಿಗೇ ಅಲ್ಲದೆ ಮಾಂಸಕ್ಕೂ ಉಪಯೋಗವಾದ ದನಗಳಾಗಿವೆ.

ಕ್ರಿ.ಶ. 1878ರಲ್ಲಿ ಈ ರೆಡ್‌ಡೇನ್ ತಳಿಯ ದನಗಳಿಗೆ ಸರ್ಕಾರದಿಂದ ಮನ್ನಣೆಯನ್ನು ಕೊಡಲಾಯಿತು. 1885ರಲ್ಲಿ ಈ ದನಗಳ ವಂಶಾವಳಿಯ ಟಿಪ್ಪಣಿ ಪುಸ್ತಕವನ್ನು ಇಡಲಾಯಿತು. ಡೆನ್ಮಾರ್ಕಿನಲ್ಲಿ ರಾಷ್ಟ್ರೀಯ ಹೈನ ತಳಿಯ ದನಗಳೆಂದು ಜನಪ್ರೀತಿಯನ್ನು ಗಳಿಸಿಕೊಂಡಿವೆ. ಡೆನ್ಮಾರ್ಕದಲ್ಲಿ ಶೇಕಡಾ 60ರಷ್ಟು ದನಗಳು ರೆಡ್‌ಡೇನ್ ಜಾತಿಯ ದನಗಳು. ಶೇಕಡಾ 20ರಷ್ಟು ದನಗಳು ಹೋಲಿಸ್ಟೀನ್ ಫ್ರೀಜಿಯನ್ ಜಾತಿಯ ದನಗಳು. ಹೈನಕ್ಕೆ ಸರ್ವೋತ್ಕೃಷ್ಟ ದನಗಳೆಂದು ಕೀರ್ತಿಯನ್ನು ಪಡೆದಿವೆ.

ಮೊಟ್ಟಮೊದಲು ಡೆನ್ಮಾರ್ಕ್ ಜನರು ಮುಖ್ಯವಾಗಿ ತಮ್ಮ ಜೀವನವನ್ನು ಒಕ್ಕಲತನದ ಉದ್ಯೋಗದಿಂದಲೇ ಸಾಗಿಸುತ್ತಿದ್ದರು. ಬರುಬರುತ್ತ ಒಂದು ಕಾಲಕ್ಕೆ ಈ ದೇಶದ ಜಮೀನಿನ ಸಾರವು ಬಹಳ ನಿಸ್ಸತ್ವವಾದ್ದರಿಂದ ಒಕ್ಕಲತನದ ಉತ್ಪಾದನೆಗೆ ಒಂದು ವರ್ಷಕಾಲ ಕಾಯಬೇಕಾಯಿತು. ಇದಲ್ಲದೆ ಮತ್ತೆ ಬೇರೆ ಕಾರಣಗಳಿಂದ ಅಲ್ಲಿಯ ಒಕ್ಕಲತನವು ಲಾಭದಾಯಕವಾಗದೆ ರೈತರ ಆರ್ಥಿಕಸ್ಥಿತಿ ಬಹಳ ಹೀನಾವಸ್ಥೆಗೆ ಬಂದು, ಜೀವನ ಸಾಗುವುದೇ ಬಹಳ ಕಷ್ಟವಾಯಿತು. ಇಂಥ ವಿಷಮ ಪರಿಸ್ಥಿತಿಯನ್ನು ಎದುರಿಸುವುದು ಅಧಿಕ ಹೈನೋತ್ಪಾದನೆಯಿಂದಲೇ ಎಂದು ತಿಳಿದು ಅಲ್ಲಿ ಆಗ ಬಿಳಿಯ ಕ್ರಾಂತಿಯ ಯೋಜನೆಯನ್ನು ಕೈಗೊಳ್ಳಲಾಯಿತು. ಆಗ ಅಲ್ಲಿಯ ರೈತರು ಎಲ್ಲರೂ ಸೇರಿ ಸರಿಯಾದ ಆಲೋಚನೆ ಮಾಡಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕಾಗಿ ಅತ್ಯಂತ ಕ್ರಮಬದ್ಧವಾದ ಸುಧಾರಿಸಿದ ಆಧುನಿಕ ವೈಜ್ಞಾನಿಕ ಪದ್ಧತಿಯ ಪಶುಪಾಲನೆ, ಸಂವರ್ಧನೆಗಳ ತಳಹದಿಯ ಮೇಲೆ ಹೈನ ತಳಿಯ ದನಗಳನ್ನು ಅಭಿವೃದ್ಧಿಗೊಳಿಸಿ ಹೈನ ದನಗಳ ಹಿಂಡನ್ನು ಬೆಳೆಸಿಕೊಂಡರು. ಇವರಿಂದ ಅವರ ಸಂಪಾದನೆ ಅಧಿಕಗೊಂಡು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಉತ್ತಮಗೊಂಡದ್ದರಿಂದ ಅವರು ಪಶುಪಾಲನೆಯಲ್ಲಿ ಹೆಚ್ಚು ಆಸಕ್ತಿವಹಿಸಿ ಪಶುಪಾಲನೆಯನ್ನೇ ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡರು. ಇದರಿಂದ ಈ ಹೈನ ಅಭಿವೃದ್ಧಿಯ ಉದ್ಯೋಗ ಇಂದು ಡೆನ್ಮಾರ್ಕ್‌ನಲ್ಲಿ ರಾಷ್ಟ್ರೀಯ ಉದ್ಯೋಗವೆಂದು ಪರಿಗಣಿಸಲಾಗಿದೆ. ಡೆನ್ಮಾರ್ಕ್ ಜನರು ಬಹಳ ಶ್ರಮಜೀವಿಗಳು. ಇಲ್ಲಿಯ ಪಶುಪಾಲಕರು ದನಗಳ ಪಾಲನೆ, ಪೋಷಣೆ, ಸಂವರ್ಧನೆಯ ಕಾರ್ಯಗಳಲ್ಲಿ ಜಗತ್ತಿನಲ್ಲಿ ಉತ್ತಮ ಪಶುಪಾಲಕರೆಂದು ಹೆಸರುಗಳಿಸಿಕೊಂಡಿರುತ್ತಾರೆ. ದನಗಳನ್ನು ಬಹಳ ಉತ್ತಮ ರೀತಿಯಿಂದ ಸಾಕಿ ಬೆಳೆಸಿಕೊಂಡು ಬಂದಿದ್ದಾರೆ. ಇಲ್ಲಿಯ ಹೆಂಗಸರು ಸಹ ದನಗಳನ್ನು ಸಾಕುವುದರಲ್ಲಿ ಮತ್ತು ಅವುಗಳ ಅಭಿವೃದ್ಧಿಯ ಕಾರ್ಯದಲ್ಲಿ ಬಹಳ ಆಸಕ್ತಿವಹಿಸಿ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ತಳಿಶಾಸ್ತ್ರದಲ್ಲಿ ಪರಿಣತೆಯನ್ನು ಪಡೆದಿರುತ್ತಾರೆ. ಒಬ್ಬೊಬ್ಬ ಹೆಂಗಸರು ಸುಮಾರು 100 ರಿಂದ

150 ರವರೆಗೆ ಆಕಳುಗಳ ಹಿಂಡನ್ನು ಪಾಲನೆ ಮಾಡುತ್ತಾರೆ. ಸುಮಾರು 80 ವರ್ಷಗಳಲ್ಲಿ ಡೆನ್ಮಾರ್ಕಿನ ಪಶುಪಾಲಕರು ತಮ್ಮ ಅವಿರತ ಶ್ರದ್ಧೆ ಮತ್ತು ಪರಿಶ್ರಮದಿಂದ ರೆಡ್‌ಡೇನ್ ಹೈನತಳಿಯ ದನಗಳ ಸಂಖ್ಯೆ ದ್ವಿಗುಣಗೊಂಡು ಒಂದೊಂದು ಆಕಳು ತಮ್ಮ ಕರಾವಿನ ಅವಧಿಯ ಕಾಲದಲ್ಲಿ ಮೊದಲಿಗಿಂತ 2½ ಪಾಲಿನಷ್ಟು ಹೆಚ್ಚು ಹಾಲು ಹಿಂಡುವಷ್ಟು ಸುಧಾರಣೆಯಾಯಿತು. ಹೈನ ತಳಿಯ ಅಭಿವೃದ್ಧಿ ತೀವ್ರಗತಿಯಿಂದ ಮುಂದುವರೆದು ಇಂದು ಡೆನ್ಮಾರ್ಕ್ ದೇಶ ಜಗತ್ತಿನಲ್ಲಿಯ ಉತ್ತಮವಾದ ಒಂದು ಗೋಕ್ಷೀರದ ಕೇಂದ್ರವೆಂದು ಕೀರ್ತಿಗಳಿಸಿಕೊಂಡಿದೆ. ಕೆಲವು ವರ್ಷಗಳ ಕಾಲದಲ್ಲಿಯೇ ಅಲ್ಲಿಯ ಪಶುಪಾಲಕರ ಶ್ರದ್ಧೆ ಮತ್ತು ಶ್ರಮದಿಂದ ಇಂದು ಡೆನ್ಮಾರ್ಕ್ ದೇಶ ಪಶು ಸಂಪದ್ಯುಕ್ತವಾದ ದೇಶವಾಗಿರುತ್ತದೆ. ಖೋವಾ, ಕೆನೆ, ಬೆಣ್ಣೆ ಮತ್ತು ಹಾಲಿನಿಂದ ತಯಾರಿಸಿದ ಪದಾರ್ಥಗಳು ಇಲ್ಲಿಂದ ಜಗತ್ತಿನ ನಾನಾ ದೇಶಗಳಿಗೆ ರಫ್ತಾಗುತ್ತವೆ.

ಈ ದನಗಳ ಮೈಬಣ್ಣ ಅವುಗಳ ಹೆಸರೇ ಸೂಚಿಸುವಂತೆ ಕೆಂಪು ಬಣ್ಣ. ನಮ್ಮಲ್ಲಿಯ ಕೆಂಪು ಸಿಂಧಿ ದನಗಳ ಮೈಬಣ್ಣ ಕೆಂಪು ಎನ್ನಬಹುದು. ಹೋರಿಗಳು ಆಕಳುಗಳಿಗಿಂತ ಹೆಚ್ಚು ಕಪ್ಪುಮಿಶ್ರಿತ ಕೆಂಪು ಬಣ್ಣದಿಂದ ಕೂಡಿರುತ್ತವೆ. ಆಕಾರದಲ್ಲಿ ದನಗಳು ಎತ್ತರವಾದ ಜೀಸಾದ ದನಗಳು. ಮೈ ಮಾಂಸಖಂಡಗಳಿಂದ ತುಂಬಿಕೊಂಡು ದಷ್ಟಪುಷ್ಟವಾದ ದನಗಳು. ಗಾಂಭೀರ್ಯ ಮತ್ತು ಬಹಳ ಶಾಂತ ಸ್ವಭಾವದ ಧೈರ್ಯದ ದನಗಳು. ಕಣ್ಣುಗಳು ಕಪ್ಪಾಗಿ ಕಾಂತಿಯುಕ್ತವಾಗಿರುತ್ತವೆ. ಕೋಡುಗಳು ಸಣ್ಣವಾಗಿ ದಪ್ಪಾಗಿ ಮೊಂಡಾಗಿರುತ್ತವೆ: ಗೊರಸುಗಳು ಕಪ್ಪಾಗಿ ಗಟ್ಟಿಯಾಗಿರುತ್ತವೆ. ಆಕಳುಗಳ ಕೆಚ್ಚಲು ಗಾತ್ರದಲ್ಲಿ ಬಹಳ ದೊಡ್ಡವು. ಕೊಡದಂತೆ ದಪ್ಪನಾಗಿ ಕೆಳಗೆ ಜೋತಾಡುತ್ತಿರುತ್ತವೆ. ಕೆಲವು ವೇಳೆ ಕೆಚ್ಚಲು ನೆಲವನ್ನು ಮುಟ್ಟುವಷ್ಟು ದೊಡ್ಡದಾಗಿರುವ ಸಂದರ್ಭವುಂಟು. ಇಂಥ ದನಗಳು ಮಲಗುವಾಗ ಏಳುವಾಗ ತಮ್ಮ ಕೆಚ್ಚಲನ್ನು ತುಳಿದು ಗಾಯ ಮಾಡಿಕೊಳ್ಳುವ ಸಂಭವ ಹೆಚ್ಚು. ಬಾಲ ನೀಳವಾಗಿ ಉದ್ದವಾಗಿರುತ್ತದೆ. ಕುತ್ತಿಗೆ ಗಿಡ್ಡಾಗಿ ದಪ್ಪವಾಗಿರುತ್ತದೆ. ಅವು ಹುಟ್ಟಿದ ಕೇವಲ 2ವರ್ಷ ವಯಸ್ಸಿಗೆ ಗರ್ಭಧಾರಣೆಯಾಗುವುದು ಈ ಜಾತಿಯ ಆಕಳ ಮಣಕಗಳ ಒಂದು ವೈಶಿಷ್ಟ್ಯ. ಸಾಮಾನ್ಯವಾಗಿ ಅವು ತಾವು ಹುಟ್ಟಿದ 27ನೇ ತಿಂಗಳಿನಲ್ಲಿ ಕರುವಿನ ತಾಯಿಗಳಾಗುತ್ತವೆ.

ಸಾಮಾನ್ಯವಾಗಿ ಈ ಜಾತಿಯ ಹೋರಿ ಹಾಗೂ ಆಕಳುಗಳ ಕೆಲವು ವಿವರಗಳು ಈ ಮುಂದಿನಂತಿವೆ :

ಹೋರಿ	ಆಕಳು
ತೂಕ–100 ರಿಂದ 1300 ಕಿಲೋಗ್ರಾಮ್	650 ರಿಂದ 700 ಕಿಲೋಗ್ರಾಮ್
ಎತ್ತರ–148 ಸೆಂಟಿಮೀಟರ್	132 ಸೆಂಟಿಮೀಟರ್
ಸೊಂಟದ ಸುತ್ತಳತೆ–64 ಸೆಂಟಿಮೀಟರ್	58 ಸೆಂಟಿಮೀಟರ್
ಎದೆಯ ಸುತ್ತಳತೆ–236 ಸೆಂಟಿಮೀಟರ್	200 ಸೆಂಟಿಮೀಟರ್
ಅಂದೇ ಹುಟ್ಟಿದ ಕರುಗಳತೂಕ–41 ಕಿಲೋಗ್ರಾಮ್	39 ಕಿಲೋಗ್ರಾಮ್

ಈ ದನಗಳು ಹಾಲಿಗೇ ಅಲ್ಲದೆ ಮಾಂಸಕ್ಕೂ ಉಪಯುಕ್ತವಾದ ದನಗಳು. ಸಾಕುವ ದೃಷ್ಟಿಯಿಂದ ಈ ದನಗಳು ಬಹಳ ಉತ್ತಮವಾದ ಮತ್ತು ಲಾಭದಾಯಕ ವಾದುವುಗಳೆಂದು ತಿಳಿದುಬಂದಿದೆ. ಈ ದನಗಳ ಉಪಯುಕ್ತತೆಯನ್ನು ಕಂಡು 40 ಬೇರೆ ದೇಶಗಳು ಈ 'ರೆಡ್‌ಡೇನ್' ಜಾತಿಯ ಹೋರಿಗಳನ್ನು ತಮ್ಮಲ್ಲಿಯ ದನಗಳ ಹಾಲೋತ್ಪಾದನೆಯನ್ನು ಹೆಚ್ಚಿಸಲು ಉಪಯೋಗಿಸುತ್ತಿದ್ದಾರೆ. ಇದೇ ದೃಷ್ಟಿಯಿಂದ ಕ್ರಿ.ಶ. 1964ರಲ್ಲಿ ಡೆನ್‌ಮಾರ್ಕ್‌ದಿಂದ 50 ರೆಡ್‌ಡೇನ್ ಮಣಕಗಳನ್ನು ಮತ್ತು ಹೋರಿಗಳನ್ನು ಬೆಂಗಳೂರಿನ ಹೆಸರಘಟ್ಟ ಫಾರಂನಲ್ಲಿರುವ ಇಂಡೋಡ್ಯಾನಿಷ್ ಪ್ರಾಯೋಜನಾ ಕೇಂದ್ರಕ್ಕೆ ತರಿಸಲಾಯಿತು. ಇವು ಇಂದು ಕರ್ನಾಟಕದ ರಾಜ್ಯದಲ್ಲಿ ಹೈನ ತಳಿಯ ಅಭಿವೃದ್ಧಿಯ ಕಾರ್ಯದ ಕೇಂದ್ರ ಬಿಂದುಗಳಾಗಿವೆ. ಈ ಹೋರಿಗಳ ವೀರ್ಯವನ್ನು ಕೃತಕ ಗರ್ಭಧಾರಣ ಕೇಂದ್ರಗಳಲ್ಲಿ ಸಂಗ್ರಹಿಸಿಟ್ಟು ಬೇಕಾದಾಗ ಅದನ್ನು ಸ್ಥಳಿಕ ಆಕಳುಗಳ ಮೇಲೆ ಪ್ರಯೋಗಿಸಿ ತೀವ್ರ ತಳಿ ಅಭಿವೃದ್ಧಿ ಕಾರ್ಯವು ಪ್ರಗತಿ ಪಥದಲ್ಲಿ ಮುಂದುವರಿದಿದೆ. ನಮ್ಮ ರಾಜ್ಯದಲ್ಲಿ ಉತ್ತಮ ಮಿಶ್ರ ತಳಿ ಹೈನ ದನಗಳನ್ನು ಉತ್ಪಾದಿಸುವಂತೆ ಯೋಜನೆಯನ್ನು ಕಾರ್ಯಾಚರಣೆಗೆ ತರಲಾಗಿದೆ.

ಈ ದನಗಳಲ್ಲಿ ಕಂಡುಬರುವ ಒಂದು ಕೊರತೆಯೆಂದರೆ ಇವುಗಳ ಕೆಚ್ಚಲು ಬಹಳ ದೊಡ್ಡವಾಗಿ ಬಹಳ ಕೆಳಗೆ ಇಳಿಬಿದ್ದಿರುತ್ತವೆ ಮತ್ತು ಬೇಗನೆ ಕೆಚ್ಚಲು ರೋಗಕ್ಕೆ ಗುರಿಯಾಗುತ್ತವೆ. ಬಿಸಿಲಿನ ತಾಪವನ್ನು ಈ ದನಗಳು ತಾಳಲಾರವು.

ಅಮೇರಿಕಾದಲ್ಲಿ ಹೈನೋತ್ಪಾದನೆ

ಇಂದು ನಾವು ನಿಜವಾದ ಗೋಸಂಪತ್ತು ಮತ್ತು ಗೋ ವೈಭವಗಳನ್ನು ನೋಡಬೇಕಾದರೆ ಅಮೇರಿಕಾ ದೇಶಕ್ಕೆ ಹೋಗಿ ನೋಡಬೇಕು. ಅಮೇರಿಕಾ ದೇಶ ಗೋಕೈಲಾಸ, ಗೋಕುಲನಾಡು, ಅಮೇರಿಕಾ ದೇಶದಲ್ಲಿ ಇಂದು ಉತ್ಪತ್ತಿಯಾಗುವ

ಹಾಲನ್ನು ಹಾಲಿನ ಸೀಸೆಗಳಲ್ಲಿ ತುಂಬಿ ಒಂದರ ಹಿಂದೆ ಒಂದರಂತೆ ಜೋಡಿಸಿ ಸಾಲಾಗಿ ಇಟ್ಟಲ್ಲಿ ಅದು ಭೂಮಂಡಲದ ಸುತ್ತಲೂ ತುಂಬಿ ಉಳಿಯುವುದು ಎಂದು ಹೇಳಿದರೆ ಆಶ್ಚರ್ಯವೆನಿಸಬಹುದು. ಇದು ಉತ್ಪ್ರೇಕ್ಷೆಯಲ್ಲ, ಸತ್ಯ ಸಂಗತಿ, ಅಲ್ಲಿಯ ಜನರಿಗೆ ತಮ್ಮ ಮನಃ ತೃಪ್ತಿ ಹಾಲನ್ನು ಉಂಡ ಉಳಿದಿದ್ದನ್ನು ಹೇಗೆ ವಿನಿಯೋಗ ಮಾಡಬೇಕು ಎಂಬ ಚಿಂತೆಯಾದರೆ ನಮ್ಮಲ್ಲಿ ಮಕ್ಕಳಿಗೆ, ತಾಯಂದಿರಿಗೆ, ರೋಗಿಗಳಿಗೆ ಹೇಗೆ ಹಾಲನ್ನು ಪೂರೈಸಬೇಕು ಎಂಬುದು ದೊಡ್ಡ ಸಮಸ್ಯೆಯಾಗಿದೆ. ಇದೇ ನಮಗೂ ಅವರಿಗೂ ಹಾಲಿನ ಪೂರೈಕೆಯಲ್ಲಿರುವ ಅಂತರ.

ಅಮೇರಿಕಾದಲ್ಲಿ ಯಾವುದೇ ಯೋಜನೆಯಾಗಲೀ ಅದು ಬೃಹದಾಕಾರದಲ್ಲಿಯೇ ಪೂರ್ತಿಗೊಳ್ಳುತ್ತದೆ. ಸಣ್ಣದು ಎಂಬುದು ಅವರಿಗೆ ಗೊತ್ತಿಲ್ಲವೆಂದೇ ಹೇಳಬಹುದು. ಇದನ್ನು ನಾವು ಅಲ್ಲಿಯ ಹಾಲಿನ ಉದ್ದಿಮೆಯಲ್ಲಿಯೂ ಸಹ ಕಾಣಬಹುದು. 1847 ರಲ್ಲಿ ಮೊದಲು ಹಾಲು ಸ್ವಲ್ಪ ಪ್ರಮಾಣದಲ್ಲಿ ರೈಲಿನಿಂದ ನ್ಯೂಯಾರ್ಕ್‌ನಗರಕ್ಕೆ ಬಂದು ಮುಟ್ಟಿತು. ಹೀಗೆ ದಿನದಿನಕ್ಕೆ ಹೆಚ್ಚುತ್ತಾ 1921ರಲ್ಲಿ ನ್ಯೂಯಾರ್ಕ್ ನಗರಕ್ಕೆ 2646550 ಕ್ವಾರ್ಟ್ಸ್‌ಗಳ ಅಂದರೆ 661637 ಗ್ಯಾಲನ್ ಅಥವಾ 165409 ಚಿಮಣಿ ಎಣ್ಣೆ ಡಬ್ಬಿಗಳಷ್ಟು ಹಾಲು ಒಂದು ದಿವಸಕ್ಕೆ 709 ಹಳ್ಳಿಗಳಿಂದ 405 ಮೈಲು ದೂರದಿಂದ 11ಬೇರೆ ಬೇರೆ ರೈಲು ಮಾರ್ಗಗಳಿಂದ 32 ರೈಲುಗಳಲ್ಲಿ 257 ವ್ಯಾಗನ್‌ಗಳಲ್ಲಿ ಬಂದಿರುತ್ತದೆ. ಇದನ್ನು 4.50,000 ಆಕಳುಗಳು 45,000ದನಗಳ ಫಾರ್ಮ್‌ನಲ್ಲಿ ಉತ್ಪಾದಿಸಿರುತ್ತವೆ. ಈ ಹಾಲನ್ನು 343 ಹಾಲಿನ ವಿತರಣಾ ಕೇಂದ್ರಗಳ ಮೂಲಕ ಗ್ರಾಹಕರಿಗೆ ಹಂಚಲಾಯಿತು. 1922ರಲ್ಲಿ ಜನವರಿ ಒಂದಕ್ಕೆ 2,40,28000 ಆಕಳುಗಳು 45 ಮಿಲಿಯನ್ ಕೆ.ಜಿ. ಅಥವಾ 100 ದಶಲಕ್ಷ ಗ್ಯಾಲನ್ (ಅಂದರೆ 250.00C00 ಚಿಮಣಿ ಎಣ್ಣೆ ಡಬ್ಬಿಗಳಷ್ಟು) ಹಾಲು ಕೊಟ್ಟಿರುತ್ತವೆ. 1925ರಲ್ಲಿ ವರ್ಷಕ್ಕೆ ಪ್ರತಿಯೊಬ್ಬ ಅಮೇರಿಕನನಿಗೆ ಹಾಲು ಹಾಗೂ ಅದರಿಂದ ತಯಾರಿಸಿದ ಪದಾರ್ಥಗಳ ಪ್ರಮಾಣ ಈ ರೀತಿ ಇದ್ದವು: ಹಾಲು 54.75 ಗ್ಯಾಲನ್, ಬೆಣ್ಣೆ 8.52 ಕೆ.ಜಿ.; ಗಿಣ್ಣು 2.13 ಕೆ.ಜಿ.; ಹಾಲಿನಪುಡಿ 7.43 ಕೆ.ಜಿ. ಮತ್ತು ಐಸ್‌ಕ್ರೀಮ್ 2.07 ಗ್ಯಾಲನ್. 1925ರಲ್ಲಿ ರೈಲು, ಟ್ರಾಮ್, ಮತ್ತು ಲಾರಿಗಳ ಮೂಲಕ ನ್ಯೂಯಾರ್ಕ್ ನಗರಕ್ಕೆ 377099000, ಬೋಸ್ಟನ್‌ಗೆ 83645000 ಹಾಗೂ ಫಿಲಾಡಲ್ಫಿಯಾಕ್ಕೆ 54807000 ಗ್ಯಾಲನ್ ಹಾಲು ಸಾಗಿಸಲ್ಪಟ್ಟಿರುತ್ತದೆ ಎಂದು ಮಾರ್ಕೆಟ್ ಮಿಲ್ಕ್ ಎಂಬ ಪುಸ್ತಕದಲ್ಲಿ ಶ್ರೀ ಆರ್ನೆಸ್ಟ್ ಕೆಲ್ಲಿ ಮತ್ತು ಕ್ಲಾರೆನ್ಸ್ ಕ್ಲೆಮೆಂಟ್ ಎಂಬುವರು ಬರೆದಿರುತ್ತಾರೆ. ಹೀಗೆ ಪ್ರತಿಯೊಬ್ಬ ಅಮೇರಿಕನ್ನನು ತಾನು ತನ್ನಮನಃತೃಪ್ತಿ ಹಾಲು ಉಂಡು ಹೆಚ್ಚಾದದ್ದನ್ನು ಪರದೇಶಗಳಿಗೆ ರಫ್ತು ಮಾಡುತ್ತಾನೆ. ಈ ಪ್ರಕಾರ ಅಲ್ಲಿನ ದುಗ್ಧ ಉದ್ಯಮವು

ಮೊದಲು ಅಂದರೆ 1847 ರಲ್ಲಿ ವಾಮನಾವತಾರದಲ್ಲಿ ಬಹು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ್ದು. ಕ್ರಮೇಣ ಬೆಳೆಯುತ್ತಾ ಇಂದು ವಿರಾಟ ಸ್ವರೂಪ ತಾಳಿ ಜಗತ್ತಿನಲ್ಲಿಯೇ ಹಾಲಿನ ಉತ್ಪಾದನೆಯಲ್ಲಿ ಅಗ್ರಸ್ಥಾನ ಗಳಿಸಿಕೊಂಡಿದೆ.

ಇಂದು ಜಗತ್ತಿನಲ್ಲಿ ಸಂಪತ್ತು ಸಮೃದ್ಧಿಗೆ ಮೊದಲನೆಯ ಸ್ಥಾನಗಳಿಸಿರುವ ಅಮೇರಿಕಾ ದೇಶವೂ ಸಹ ಒಂದಾನೊಂದು ಕಾಲಕ್ಕೆ ಅರಣ್ಯಮಯವಾಗಿತ್ತು. ಮನುಷ್ಯರಿಗೆ ಅಜ್ಞಾತ ಪ್ರದೇಶವಾಗಿತ್ತು. ಅಲ್ಲಿಯ ಮೂಲನಿವಾಸಿಗಳಾದ ರೆಡ್‌ಇಂಡಿಯನ್‌ರಿಗೆ ನಾಗರೀಕತೆಯ ಗಾಳಿಯೂ ಸಹ ಸೋಂಕಿರಲಿಲ್ಲ. ಆಗಿನ ಕಾಲದಲ್ಲಿ ಅಲ್ಲಿಯ ಆದಿನಿವಾಸಿಗಳಿಗೆ ಹಾಲು ಎಂಬುದೇ ಗೊತ್ತಿರಲಿಲ್ಲ. ಆಕಳುಗಳೂ ಸಹ ಇರಲಿಲ್ಲ. 'ಮೇರಿ' ಎಂಬ ಪ್ರದೇಶದಲ್ಲಿ ಮಾತ್ರ ಕೆಲವು ಎಮ್ಮೆ ಜಾತಿಯ ಪ್ರಾಣಿಗಳಿದ್ದವು. ಅವೂ ಸಹ ಬಹಳ ಕಾಡಾವಸ್ಥೆಯಲ್ಲಿದ್ದವು. ದೇಶ ಶೋಧಕರು ಅಮೇರಿಕಾಕ್ಕೆ ಮೊದಲ ಬಾರಿ ಬಂದಾಗ ಅವರು ತಮ್ಮ ಜೊತೆಯಲ್ಲಿ ಆಕಳುಗಳನ್ನು ತಂದಿರಲಿಲ್ಲ. ಇದರಿಂದ ಅವರಿಗೆ ಬಹಳ ದುಃಖವಾಯಿತು. ಏಕೆಂದರೆ ಮಕ್ಕಳು ಹಾಲಿನ ಅಭಾವದಿಂದ ಸತ್ತವು. ಅಲ್ಲಿ ಜೀವನ ಸಾಗುವುದೇ ಆಗ ಅತಿಕಷ್ಟವಾಯಿತು. ಇದರ ಅನುಭವದಿಂದ 1493 ರಲ್ಲಿ ಕೊಲಂಬಸನು ತನ್ನ 2ನೆಯ ಯಾತ್ರೆಯ ಸಮಯದಲ್ಲಿ ಯೂರೋಪಿನಿಂದ ಕೆಲವು ಆಕಳುಗಳನ್ನು ಹಡಗಿನಿಂದ ಸಾನ್‌ಡಾಮಿಂಗೊ ಶಿಖರಕ್ಕೆ ತೆಗೆದುಕೊಂಡು ಹೋದನು. ಅಲ್ಲಿಂದ ಮುಂದೆ ಅವು 1525ರಲ್ಲಿ ಮೆಕ್ಸಿಕೋ ಹಾಗೂ 1583ರಲ್ಲಿ ಫ್ಲಾರಿಡಾಗೆ ತಲುಪಿದವು.

ಇದರ ನಂತರ 1620ರಲ್ಲಿ ಮೊದಲು ಮೊದಲು ಇಂಗ್ಲಿಷರು ಅಮೇರಿಕಾ ತಲುಪಿದರು. ಈ ಮಧ್ಯದಲ್ಲಿ ಪೋರ್ಚುಗೀಸರು ನ್ಯೂಫೌಂಡಲೆಂಡಿನಲ್ಲಿ, ಫ್ರೆಂಚರು ಅಕೇಡಿಯಾದಲ್ಲಿ ಮತ್ತು ಇಂಗ್ಲಿಷರು ವರ್ಜೀನಿಯಾದಲ್ಲಿ ತಮ್ಮ ಜೊತೆಯಲ್ಲಿ ತಂದ ಗೋವಿನ ಹಿಂಡುಗಳೊಡನೆ ಹೋಗಿ ನೆಲಸಿದರು. ಈ ಪ್ರಕಾರ ಅಮೇರಿಕಾದಲ್ಲಿ ಭಿನ್ನ ಭಿನ್ನ ಸ್ಥಳಗಳಲ್ಲಿ ಈ ಗೋವುಗಳು ಯೂರೋಪಿನಿಂದಲೇ ಬಂದವು. ಹಾಲೆಂಡಿನಿಂದಲೂ ಹಡಗಿನಲ್ಲಿ ಗೋವು ಮತ್ತು ಕುರಿಗಳು ಅಲ್ಲಿಗೆ ಬಂದವು. ಬ್ರಾಡ್‌ಫೋರ್ಡಿನ ಗವರ್ನರನು ತನ್ನ ದಿನಚರಿತ್ರೆಯಲ್ಲಿ ಈ ಹಡಗುಗಳು ಬಂದ ಮೇಲೆ ಇಲ್ಲಿ 6 ಜನರಿಗೆ ಒಂದು ಆಕಳು ಮತ್ತು 2 ಕುರಿಗಳಾದವು ಎಂದು ಬರೆದಿದ್ದಾನೆ. ಅಮೇರಿಕಾದ ಮೂಲನಿವಾಸಿಗಳು ಈ ಪ್ರಕಾರ ಗೋಪತಿ ಪದವಿಯ ಅಧಿಕಾರಿಗಳಾದರು. ಇದರಿಂದ ಗೋಪಾಲನಾ ಪದ್ಧತಿ ರೂಢಿಯಾಯಿತು. ಪ್ರತಿಯೊಬ್ಬ ಅಮೇರಿಕನ್ನನು ಸ್ವಾನುಭವದಿಂದ ಯಾತ್ರಾಕಾಲದಲ್ಲಿ ಗೋವಿನ ಹಾಲಲ್ಲದೆ ಮತ್ತೆ

ಬೇರೆ ಪೌಷ್ಟಿಕ ಪದಾರ್ಥಗಳು ಸಿಗುವುದು ಅಸಂಭವವಾದ್ದರಿಂದ ಹಾಲಿಗೆ ವಿಶೇಷ ಮಹತ್ವ ಬಂತು. ಅದು ದೈನಂದಿನ ಅತಿ ಅವಶ್ಯಕವಾದ ಪದಾರ್ಥವಾಗಿ ಹೆಚ್ಚು ಬಳಕೆಯಲ್ಲಿ ಬಂತು. ಹೀಗಾಗಿ ಅಮೇರಿಕಾದಲ್ಲಿ ಎಲ್ಲೆಡೆಗಳಲ್ಲಿ ಗೋಕುಲವೇ ಕಾಣುವಂತಾಯಿತು. ಇಲ್ಲಿರುವಷ್ಟು ಉತ್ತಮ ಆಕಳುಗಳು ಪ್ರಪಂಚದಲ್ಲಿ ಮತ್ತೆಲ್ಲಿಯೂ ಇಲ್ಲ.

ಅಮೇರಿಕಾ ಗೋಪಾಲನಾ ಸಂಪ್ರದಾಯ ತಲತಲಾಂತರದಿಂದ ಬಂದದ್ದು. ಅಲ್ಲಿಂದ ಈ ಸಂಪ್ರದಾಯ ಆಂಸ್ಟರ್‌ಡಾಮ್ ಮತ್ತು ನ್ಯೂಯಾರ್ಕ್‌ದ ಇಂಗ್ಲೀಷ್ ವಸಾಹತುಗಳಿಗೆ ತಲುಪಿತು. ಹಡಸನ್‌ನ ಪಶ್ಚಿಮ ದಡದಲ್ಲಿ ಹರ್ಕಿಮರ್ ಮತ್ತು ಆರೆಂಜ್ ಕೌಂಟಿ ಎಂಬ ಸ್ಥಳಗಳಿವೆ. ಈ ರಾಜ್ಯಗಳು ಗೋಸಂಪತ್ತಿನಿಂದ ತುಂಬಿವೆ: ಈ ರಾಜ್ಯದ ಆದಿನಿವಾಸಿಗಳು ಈ ಗೋರಾಜ್ಯಾಧಿಪತಿಗಳು. ಇಲ್ಲಿ ಸರ್ವರೂ ಸುಖ ಸಂಪನ್ನಪ್ರಿಯರು. ಅವರ ಸಮಸ್ತ ವೈಭವವೂ ಗೋಪಾಲನೆಯಿಂದ ಆಗಿದೆ. ಹರ್ಕಿಮರ್ ಪ್ರದೇಶವು ಉತ್ತಮ ಮೊಸರಿಗೆ ಪ್ರಸಿದ್ಧ. ಇದರ ವ್ಯಾಪಾರದಿಂದ ಅಲ್ಲಿಯ ಗೋಪತಿಗಳು ಕೋಟ್ಯಾಧಿಪತಿಗಳಾಗಿದ್ದಾರೆ. ಅಲ್ಲಿಯ ಆದಿನಿವಾಸಿಗಳು ಇದೇ ವ್ಯಾಪಾರ ಮಾಡುತ್ತಾರೆ. ಆರೆಂಜ್ ಕೌಂಟಿಯ ಬೆಣ್ಣೆಯು ಜಗತ್‌ಪ್ರಸಿದ್ಧಿಯಾದದ್ದು. ಅಲ್ಲಿಯ ಜನರು ಬೆಣ್ಣೆಯನ್ನು ಬಂಗಾರವೆಂದು ತಿಳಿಯುತ್ತಾರೆ. ಅಲ್ಲಿಯ ಬೆಣ್ಣೆಯು ಚಿನ್ನದಂತೆ ಹಳದಿಬಣ್ಣ, ಅಲ್ಲಿಯ ಬ್ಯಾಂಕುಗಳ ನೋಟುಗಳೂ ಸಹ ಮೊದಲು ಹಳದಿ ಬಣ್ಣದ್ದಾಗಿದ್ದವು. ಅಲ್ಲಿ ಆಕಳುಗಳೆಂದರೆ ಇಂದು ನಮ್ಮಲ್ಲಿಯ ಬ್ಯಾಂಕಿನಲ್ಲಿಟ್ಟ ಠೇವಣಿ ಹಣ ಇದ್ದಂತೆ ಎಂದು ಭಾವಿಸಿದ್ದಾರೆ. ಬೆಣ್ಣೆಯ ವ್ಯಾಪಾರದಿಂದಲೇ ಅವರು ಸುಖಸಂಪನ್ನರಾದರು. ಮೊದಲಿನಿಂದಲೂ ಹಡಸನ್ ಪಶ್ಚಿಮ ಪ್ರದೇಶವು ಹಾಲಿನ ವ್ಯಾಪಾರಕ್ಕೆ ಹೆಸರುವಾಸಿಯಾದದ್ದು.

ಯಾವ ಪ್ರಕಾರ ಯೂರೋಪಿನಲ್ಲಿ ಭಿನ್ನ ದೇಶಗಳಿಂದ ಬಂದ ಜನರು ತಮ್ಮ ಪರಂಪರೆ ಮತ್ತು ವಿಶೇಷತೆಯನ್ನು ತೆಗೆದುಕೊಂಡು ಬಂದರೋ ಅದೇ ಪ್ರಕಾರ ಅವರ ಜೊತೆಯಲ್ಲಿ ಬಂದ ಗೋವುಗಳೂ ಸಹ ತಮ್ಮ ವಿಶೇಷತೆಯಿಂದ ಕೂಡಿಕೊಂಡಿವೆ. ಹಡ್‌ಸನ್ ನದಿಯ ದಡದಲ್ಲಿ ಮೊದ ಮೊದಲು ಡಚ್ ಜನರು ಬಂದು ನೆಲಸಿದರು. ಅವರು ಅಲ್ಲಿ ಮೊಸರಿನ ವ್ಯಾಪಾರ ಪ್ರಾರಂಭಿಸಿದರು. ಅವರು ಹಾಲೆಂಡ್, ಶೀನ್ಸ್‌ಲೆಂಡ್ ಆಕಳುಗಳನ್ನು ತಮ್ಮ ಜೊತೆಯಲ್ಲಿಯೇ ತೆಗೆದುಕೊಂಡು ಬಂದರು. ಇವುಗಳನ್ನು ಫ್ರೀಜಿಯನ್-ಹೋಲಿಸ್ಟೀನ್ ಆಕಳುಗಳೆಂದು ಕರೆಯುತ್ತಾರೆ: ಸ್ವಿಟ್ಜರ್‌ಲೆಂಡಿನ ಎತ್ತರ ಪ್ರದೇಶದ ಪರ್ವತ ಸೀಮೆಯಿಂದ ತಂದ ಆಕಳು

ಗಳನ್ನು 'ಸ್ವಿಸ್' ಜಾತಿಯವೆಂದು ಕರೆಯುತ್ತಾರೆ. ಇವುಗಳ ಗೊರಸುಗಳು ಕಬ್ಬಿಣದಂತೆ ಗಟ್ಟಿ. ಏಕೆಂದರೆ ಗ್ರೀಷ್ಮ ಋತುವಿನಲ್ಲಿ ಇವುಗಳ ಪೂರ್ವಜರು ಮೇಯಲು ಪರ್ವತದ ಮೇಲೆ ಹತ್ತಬೇಕಾಗುತ್ತಿತ್ತು. ಚಳಿಗಾಲದಲ್ಲಿ ಗೋವುಗಳನ್ನು ಪರ್ವತದ ಗುಹೆಗಳಲ್ಲಿಡುತ್ತಿದ್ದರು. ಹೀಗೆ ಅವು ಪರ್ವತ ಸೀಮೆಯಲ್ಲಿ ಕಲ್ಲು ತುಳಿಯುತ್ತಾ ತಿರುಗಾಡುವುದರಿಂದ ಅವುಗಳ ಗೊರಸುಗಳು ಗಟ್ಟಿಯಾಗಿ ಕಬ್ಬಿಣದಂತೆ ಇರುತ್ತವೆ. ಸ್ಕಾಟ್ಲೆಂಡಿನಿಂದ ತಂದ ಗೋವುಗಳು 'ಆಯರ್‌ಶಯರ್' ಎಂದು ಕರೆಯಲ್ಪಡುತ್ತವೆ. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಮಧ್ಯ ಸಮುದ್ರ ತೀರದಲ್ಲಿ ಜರ್ಸಿ ಮತ್ತು ಗರನ್ಸಿ ದ್ವೀಪಗಳಿಂದ ತಂದ ದನಗಳನ್ನು ಅಮೇರಿಕಾದಲ್ಲಿ ಅದೇ ಹೆಸರಿನಿಂದ ಎಂದರೆ ಜರ್ಸಿ ಗರನ್ಸಿ ದನಗಳೆಂದು ಕರೆಯುತ್ತಾರೆ. ಈ 5 ಜಾತಿಯ ಎಂದರೆ (1) ಹೋಲಿಸ್ಟೀನ್ (2) ಸ್ವಿಸ್ (3) ಆಯರ್‌ಶಯರ್ (4)ಜರ್ಸಿ ಮತ್ತು (5)ಗರನ್ಸಿ ದನಗಳು ಅಮೇರಿಕಾದಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತವೆ.

ಗೋರಕ್ಷಣಾ ದೃಷ್ಟಿಯಿಂದ ಗೋಲೋಕವಿರುವುದು ಅಮೇರಿಕಾದಲ್ಲಿ. ಡೆನ್ಮಾರ್ಕ್, ನ್ಯೂಜಿಲೆಂಡ್, ಅರ್ಜೆಂಟೈನಾ, ನ್ಯೂಗಿನಿ, ರೂಸ್, ಆಸ್ಟ್ರೇಲಿಯಾ ಮತ್ತು ಸಿರಿಯಾ ದೇಶಗಳು ಅದ್ಭುತ ಪ್ರಗತಿ ಪಡೆದಿವೆ, ನಿಜ. ಆದರೆ ಅಮೇರಿಕಾದ ಚಮತ್ಕಾರವು ಬೇರೆಯಾಗಿದೆ. ಇಲ್ಲಿಯ ಆಕಳುಗಳಿಗೆ ಕೊಳಕು, ಹೊಲಸು, ಕತ್ತಲೆ ಮತ್ತು ದುರ್ಗಂಧಮಯದ ದನದ ಜೋಪಡಿಗಳು ಎಂಬುದೇ ಗೊತ್ತಿಲ್ಲ. ಒಳ್ಳೆ ರಸಭರಿತವಾದ ಮೇವು, ಸ್ವಚ್ಛವಾದ ನೀರು, ಶುದ್ಧಹವೆಯಾಡುವ ಬೆಳಕಿನ ಎಲ್ಲ ವಸತಿ ಸೌಕರ್ಯಗಳು ವಿಪುಲವಾಗಿವೆ. ಎಲ್ಲ ತರಹದ ಅತ್ಯಾಧುನಿಕ ವಿಜ್ಞಾನದ್ಯ ಯಾವ ಸೌಕರ್ಯಗಳಿಗೂ ಅವುಗಳಿಗೆ ಕೊರತೆ ಎಂಬುದೇ ಇಲ್ಲ. ಒಟ್ಟಿನಲ್ಲಿ ನಮ್ಮ ದೇಶದಲ್ಲಿ ಮನುಷ್ಯರಿಗೆ ಸಿಗದ ವೈದ್ಯಕೀಯ ಮತ್ತು ಇನ್ನಿತರ ಆಧುನಿಕ ನಿತ್ಯ ಜೀವನದ ಸೌಕರ್ಯ ಮತ್ತು ಸೌಲಭ್ಯಗಳು ಅಲ್ಲಿನ ಆಕಳುಗಳಿಗೆ ಬಹು ಸುಲಭವಾಗಿ ಸಿಗುತ್ತವೆ ಎಂದು ಒಂದೇ ಮಾತಿನಲ್ಲಿ ಹೇಳಬಹುದು.

ಅಲ್ಲಿಯ ದನಗಳು ಮೇಯುವುದರ ಸಲುವಾಗಿ 1919ರಲ್ಲಿ 1055 ದಶಲಕ್ಷ ಎಕರೆ ಹುಲ್ಲುಗಾವಲಿನ ಸೌಕರ್ಯವಿತ್ತು. ಅಂದರೆ ನೂರಕ್ಕೆ 55ರಷ್ಟು ಭೂಮಿಯು ಹುಲ್ಲುಗಾವಲಿನದಾಗಿತ್ತು. ಅದೇ ವರ್ಷದಲ್ಲಿ ಹಸಿಮೇವಿನ ಸೌಕರ್ಯವನ್ನು ಬಿಸಿಲು ಕಾಲದಲ್ಲಿ ಪೂರೈಸುವುದರ ಸಲುವಾಗಿ ಹದಮಾಡಿದ ತಗ್ಗಿನಲ್ಲಿ ಹಸಿಮೇವನ್ನು ಕಾದಿಡುವುದರ ಸಲುವಾಗಿಯೇ 4ದಶಲಕ್ಷ ಎಕರೆಯಲ್ಲಿ ಬೀಜ ಬಿತ್ತಲಾಗಿತ್ತು. ಅಲ್ಲದೆ 15 ದಶಲಕ್ಷ ಎಕರೆಯಲ್ಲಿ ಕೇವಲ ದನಗಳ ಮೇವಿನ ಬೆಳೆಯನ್ನು ಬೆಳೆಸಲಾಗಿತ್ತು. ವಿಸ ಕಾನ್‌ಸಿನ್ ಎಂಬಲ್ಲಿ 100,000ಕ್ಕಿಂತ ಹೆಚ್ಚು ಹದದ ಮೇವಿನ ತಗ್ಗುಗಳಿವೆ. ಅಲ್ಲಿ

ಸುಮಾರು 100ಕ್ಕಿಂತ ಹೆಚ್ಚು ನಾನಾ ಜಾತಿಯ ಹುಲ್ಲುಗಳನ್ನು ಬೆಳೆಯುತ್ತಾರೆ. 1920ರಲ್ಲಿ 5ಸಾವಿರ ಕಾರ್ಖಾನೆಗಳಲ್ಲಿ 7ದಶಲಕ್ಷ ಟನ್ನಿನಷ್ಟು ದನಗಳ ಆಹಾರ ಪದಾರ್ಥಗಳನ್ನು ತಯಾರಿಸಲಾಯಿತು. ಈ ಆಹಾರ ಪದಾರ್ಥಗಳ ಬೆಲೆ 1000 ದಶಲಕ್ಷ ಡಾಲರಿನಷ್ಟಾಗುತ್ತದೆ. ಈ ಅನುಕೂಲತೆ, ಸೌಕರ್ಯ ಸೌಲಭ್ಯಗಳಿಂದ ಅಮೇರಿಕಾ ಇಂದು ಪಶುಸ್ವರ್ಗವಾಗಿದೆ.

ನಾವೂ ಸಹ ಆಕಳುಗಳನ್ನು ಪೂಜಿಸುತ್ತೇವೆ. ಆದರೆ ನಮ್ಮ ಪೂಜೆ ವಿಚಿತ್ರ. ಅವರು ಮೂರ್ತಿ ಪೂಜೆಯ ಆಧಾರಕರಲ್ಲದಿದ್ದರೂ ಸಹ ಆಕಳಿನ ಉಪಯೋಗಕ್ಕಾಗಿ ಅದರ ಏಳಿಗೆಗಾಗಿ ಬೇಕಾದ ಎಲ್ಲ ಸೌಕರ್ಯಗಳನ್ನು ಪೂರೈಸಿ ಅವುಗಳಿಂದ ಪೂರ್ಣ ಲಾಭವನ್ನು ಪಡೆಯುತ್ತಾರೆ. ಹೀಗಾಗಿ ಅಲ್ಲಿಯ ದನಗಳು ಜೀವಂತವಿರುವವರೆಗೂ ಸುಖ ಸಂತೋಷದಿಂದ ಬದುಕಿ ಬಾಳುತ್ತವೆ. ನಮ್ಮಲ್ಲಿ ಅವುಗಳಿಗೆ ಸುಖ, ಸತ್ತ ಮೇಲೆಯೋ— ಇದೇ ನಮಗೂ ಅವರಿಗೂ ಇರುವ ಪಶುಪಾಲನೆಯ ಅಂತರ. ಅವರು ಅವುಗಳಿಗೆ ಬೇಕಾದ ಉತ್ತಮ ರಸವತ್ತಾದ ಮೇವು, ಪೌಷ್ಟಿಕ ಆಹಾರ ಕೊಟ್ಟು ಅವುಗಳ ಆರೋಗ್ಯವನ್ನು ಕಾಪಾಡುವುದರಲ್ಲಿ ಹೆಚ್ಚು ಆಸಕ್ತಿ, ಪ್ರೀತಿವಹಿಸುತ್ತಾರೆ. ಹೀಗಾಗಿ ಅಲ್ಲಿಯ ಆಕಳುಗಳು ಹಾಲು ಬೆಣ್ಣೆಯನ್ನು ಯಥೇಚ್ಛವಾಗಿ ಕೊಡುತ್ತವೆ. ಆಕಳುಗಳಲ್ಲಿ ನಾವು 33ಕೋಟಿ ದೇವತೆಗಳನ್ನು ಕಲ್ಪಿಸುತ್ತೇವೆ. ಆದರೆ ಅಮೆರಿಕನರಂತೆ ಅವುಗಳ ದುಗ್ಧಸ್ಥಾನದಲ್ಲಿರುವ ಭಾಗ್ಯಲಕ್ಷ್ಮಿಯನ್ನು ನೋಡುತ್ತಿಲ್ಲ. ನಾವು ಅದನ್ನು ಲಕ್ಷಿಸಿದರೆ ನಮ್ಮ ದೇಶವೂ ಸಹ ಸಂಪತ್ತಿನಿಂದ ಕೂಡಿ ನಮ್ಮಲ್ಲಿಯ ಜೀವನ ಸುಖಪ್ರದವಾಗುತ್ತದೆ.

ಭಾರತದ ಪ್ರಾಚೀನ ಸಂಸ್ಕೃತಿ ಗೋರಸಂಸ್ಕೃತಿ. ಆದರೆ ನಿಜವಾದ ಗೋಪೂಜೆ ಆನಂದೋತ್ಸಾಹಗಳನ್ನು ಈಗ ಅಮೇರಿಕಾದಲ್ಲಿ ಕಾಣುತ್ತೇವೆ. 'ಎಲ್ಲಿ ಹಾಲಿರುವುದೋ ಅಲ್ಲಿ ಬುದ್ಧಿ, ಎಲ್ಲಿ ಬುದ್ಧಿ ಇರುವುದೋ ಅಲ್ಲಿ ವಿಜಯ' ಎಂಬುದನ್ನು ಅಮೇರಿಕನ್ನರು ಅನುಭವದಿಂದ ಕಂಡು ಕೊಂಡಿದ್ದಾರೆ. ಅಮೇರಿಕಾದಲ್ಲಿ ದನಗಳಿಗೆ ಕಾಯಿಲೆಯಾದರೆ ನಮ್ಮಲ್ಲಿಯ ಜನರಿಗಿಂತ ಹೆಚ್ಚು ಉಪಚಾರವಾಗುತ್ತದೆ. ಮೇಫ್ಲವರ್ ಹಬ್ಬದ ಹುಟ್ಟುದಿನ ಏರ್ಪಡಿಸಲಾದ ಭೋಜನ ಸತ್ಕಾರದಲ್ಲಿ ಅಲಂಕೃತವಾದ ಹೆಸರಾದ ಆಕಳುಗಳನ್ನು ಶೃಂಗರಿಸಿ ಮೆರೆಸಲಾಯಿತು. ಆ ಸಮಾರಂಭಕ್ಕೆ ಬಂದ 3ಸಾವಿರ ಅತಿಥಿಗಳು ಈ ಆಕಳ ಹಾಲಿನಿಂದಲೇ ತಯಾರಿಸಿದ ಕಾಫಿಯನ್ನು ಕುಡಿದು ಸಂತೋಷಗೊಂಡರು. 40-50 ಪೌಂಡಿಗಿಂತ ಕಡಿಮೆ ಹಾಲು ಕೊಡುವ ಆಕಳುಗಳನ್ನು ತೆಗೆದುಬಿಡುತ್ತಾರೆ. ಅಲ್ಲಿ ನೀರು ಸೇರಿಸಿದ ಹಾಲು ಅಥವಾ ಹೊಲಸಿನಿಂದ ದೂಷಿತವಾದ ಹಾಲನ್ನು ಯಾರೂ ಮಾರುವುದೇ ಇಲ್ಲ. ನಾವು ಪಶ್ಚಿಮ

ದವರಿಂದ ಸ್ವಚ್ಛತೆ, ಪಶುವೈದ್ಯಶಾಸ್ತ್ರ ಕಲಿಯಬೇಕು. ಇದರಿಂದ ಉನ್ನತಿ ಪಡೆಯುವುದು ಖಂಡಿತ ಸಾಧ್ಯ. ನಾವು ಅಮೇರಿಕಾ ದೇಶದಿಂದ ಪಶುಪಾಲನೆಯ ಬಗ್ಗೆ ಕಲಿಯಬೇಕಾದ ಮುಖ್ಯ ವಿಷಯವೇನೆಂದರೆ—ಆಕಳುಗಳಿಗೆ ಧಾರ್ಮಿಕ ಮಹತ್ವ ಕೊಟ್ಟು ಕೇವಲ ಪೂಜಿಸುವರೆ ಸಾಲದು. ಈ ಬಗ್ಗೆ ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ್ ಜವಾಹರಲಾಲರು 'ಪೂಜೆ ಮತ್ತು ದಯಾಗುಣ ಎರಡೂ ಯಾವಾಗಲೂ ಜೋಡಿಯಾಗಿರಲಾರವು' ಎಂದು ಹೇಳಿರುವುದು ಸತ್ಯದ ಮಾತಾಗಿದೆ. ಇದರ ಜೊತೆಗೆ ನಾವು ಲೌಕಿಕ ದೃಷ್ಟಿಯಿಂದ ಅವುಗಳ ಸರ್ವಾಂಗೀಣ ಹಿತವನ್ನು ಬಯುಸುವುದು ಅವಶ್ಯಕ. ದನಗಳ ಹಿತವೇ ಜನಗಳ ಹಿತ. ದನಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ಅಮೇರಿಕನ್ನರು ತಿಳಿದು ಪಶುಸಂಪತ್ತನ್ನು ಹೆಚ್ಚಿಸಿ ಕೊಂಡಿದ್ದಾರೆ.

ಅಮೇರಿಕೆಯಲ್ಲಿ ಹಿಂದೂಸ್ತಾನದ ಬ್ರಾಹ್ಮಣೀ ದನಗಳು

ನಮ್ಮಲ್ಲಿಯ ಬುದ್ಧಿಜೀವಿಗಳು, ಪ್ರತಿಭಾವಂತ ಮೇಧಾವಿಗಳು, ತತ್ವಜ್ಞಾನ ಪಂಡಿತರು, ಅಮೇರಿಕಾ ದೇಶದಲ್ಲಿ ತಮ್ಮ ಪ್ರತಿಭೆ, ಕೀರ್ತಿಯನ್ನು ಬೆಳಗಿದಂತೆ, ನಮ್ಮಲ್ಲಿಯ ಬ್ರಾಹ್ಮಣೀ ದನಗಳು ಸಹ ಅಮೇರಿಕಾ ಮೊದಲಾದ ದೇಶಗಳಲ್ಲಿ ತಮ್ಮ ಪ್ರತಿಭೆಯನ್ನು ಬೀರಿರುತ್ತವೆ. ಆಸ್ಟ್ರೇಲಿಯಾದಲ್ಲಿ ಒಂದು ಭಾರತದ ಬ್ರಾಹ್ಮಣೀ ಆಕಳು 13 ಸಾವಿರ ಡಾಲರ್ ಬೆಲೆಗೆ ಮಾರಾಟವಾಯಿತು ಎಂದು ಮೆಲ್‌ಬೋರ್ನ್ ದಿಂದ ಒಂದು ಸುದ್ದಿ ಸಂಸ್ಥೆಯು ವರದಿ ಮಾಡಿರುತ್ತದೆ. ಇದು ಭಾರತದ ಬ್ರಾಹ್ಮಣೀ ಆಕಳುಗಳ ಶ್ರೇಷ್ಠತೆಗೆ ಒಂದು ಸಾಕ್ಷಿ ಎಂದು ಹೇಳಬಹುದು.

ನಮ್ಮಲ್ಲಿಯ ಪಶುಪಾಲನಾ ಪದ್ಧತಿ ಜಗತ್ತಿನಲ್ಲಿಯ ಉಳಿದೆಲ್ಲ ದೇಶಗಳಿಗಿಂತ ಮೊದಲೇ ಪ್ರಬುದ್ಧವಾಟ್ಟವನ್ನು ಮುಟ್ಟಿತ್ತು. ಎರಡು ಸಾವಿರ ವರ್ಷಗಳಿಗಿಂತ ಹಿಂದೆಯೇ ಅದು ಒಂದು ಸುಸಂಬದ್ಧವಾದ ಶಾಸ್ತ್ರವೆನಿಸಿತ್ತು ಎಂದು ವೇದ ಪುರಾಣ ಗಳಿಂದ ವ್ಯಕ್ತವಾಗುತ್ತದೆ. ಇಂದು ನಾವು ಹೇಗೆ ಡೆನ್ಮಾರ್ಕ್, ಹಾಲೆಂಡ್, ಆಸ್ಟ್ರೇಲಿಯಾ, ಅಮೇರಿಕಾ ದೇಶಗಳಿಂದ ನಮ್ಮಲ್ಲಿಯ ಹೈನತಳಿ ದನಗಳ ಉತ್ಪಾದನೆ ಮತ್ತು ಅಭಿವೃದ್ಧಿಗೆ ಅಲ್ಲಿಂದ ದನಗಳನ್ನು ತಂದು ಉಪಯೋಗಿಸುತ್ತಿರುವೆವೋ ಹಾಗೆಯೇ ನಮ್ಮಲ್ಲಿಯ ದನಗಳನ್ನು ವಿದೇಶೀಯರು ತಮ್ಮ ದೇಶಗಳಿಗೆ ತೆಗೆದು ಕೊಂಡು ಹೋಗುತ್ತಿದ್ದ ಕಾಲವೂ ಒಂದಿತ್ತು. ಅಮೇರಿಕ, ಬ್ರೆಜಿಲ್, ಆಸ್ಟ್ರೇಲಿಯಾ ಕಾಂಬೋಡಿಯಾ, ಕೆನ್ಯಾ, ಫಿಲಿಪೈನ್ಸ್, ಥೈಲೆಂಡ್ ಮೊದಲಾದ ದೇಶಗಳಿಗೆ ನಮ್ಮ ದೇಶದಿಂದ ಪ್ರತಿವರ್ಷ ಲಕ್ಷಾಂತರ ರೂಪಾಯಿಗಳಷ್ಟು ದನಗಳು ರಫ್ತಾಗು

ತ್ತಿದ್ದವು. ಒಂದಾನೊಂದು ಕಾಲಕ್ಕೆ ಭಾರತ ಪ್ರಪಂಚದ ನಾನಾ ಭಾಗಗಳಿಗೆ ದನಗಳನ್ನು ಪೂರೈಸುವ ಕೇಂದ್ರಗಳಲ್ಲಿ ಒಂದಾಗಿತ್ತು. ಈಗ ಇದೆಲ್ಲವೂ ನಿಂತುಹೋಗಿದೆ. ಇಂದು ನಮ್ಮಲ್ಲಿ ದನಗಳು ಬಹಳ ಕ್ಷೀಣಾವಸ್ಥೆಯಲ್ಲಿವೆ. ಇದು ನಿಜ. ಎಂತಹ ಸುವ್ಯವಸ್ಥೆಯೂ ಸಹ ಕಾಲಕ್ರಮದಲ್ಲಿ ಶಿಥಿಲವಾಗುವುದು ಪ್ರಕೃತಿಯ ನಿಯಮವೆಂದು ತೋರುತ್ತದೆ. ಆದರೆ ನಾವು ಹೀಗೆ ನಿರಾಶರಾಗಲು ಕಾರಣವಿಲ್ಲ. ನಮ್ಮಲ್ಲಿಯ ದನಗಳು ತಮ್ಮ ಉತ್ಪಾದನಾ ಶಕ್ತಿಯನ್ನು ಕಳೆದುಕೊಂಡಿಲ್ಲ. ಅವುಗಳಲ್ಲಿ ಈ ಶಕ್ತಿ ಸಾಮರ್ಥ್ಯವು ಪ್ರತಿಕೂಲ ಸನ್ನಿವೇಶಗಳ ಮೂಲಕ ದನಗಳಲ್ಲಿ ಅಂತರ್ಗತವಾಗಿ ಸುಪ್ತಾವಸ್ಥೆಯಲ್ಲಿ ಅಡಗಿಕೊಂಡಿವೆ. ನಮ್ಮಲ್ಲಿಯ ಪಶುಪಾಲನೆ, ಸಂಗೋಪನೆ, ಪೋಷಣೆ, ಆರೈಕೆಯ ಕಾರ್ಯಗಳನ್ನು ಸುಧಾರಿಸಿದ ವೈಜ್ಞಾನಿಕ ತಳಹದಿಯ ಮೇಲೆ ತಜ್ಞರ ಸಹಾಯ ಮತ್ತು ಸಲಹೆಗಳಂತೆ ಮುಂದುವರಿಸಿದಲ್ಲಿ ಅವುಗಳಲ್ಲಿ ಅಡಗಿರುವ ಈ ಉತ್ಪಾದನಾ ಶಕ್ತಿ ಚೇತನಗೊಂಡು ಪ್ರಕಾಶಕ್ಕೆ ಬರುವುವು. ಆಗ ನಮ್ಮಲ್ಲಿಯ ದನಗಳೂ ಸಹ ಬೇರೆ ದೇಶದ ದನಗಳೊಂದಿಗೆ ಯಾವ ರೀತಿಯಲ್ಲಿಯೂ ಕಡಿಮೆಯಿಲ್ಲದ ರೀತಿಯಲ್ಲಿ ಶ್ರೇಷ್ಠತೆಯನ್ನು ಪಡೆದು ಮೆರೆಯಬಲ್ಲವು. ಇದಕ್ಕೆ ಯಾವ ಸಂದೇಹವಿಲ್ಲ ಎಂಬುದನ್ನು ನಾವು ನಮ್ಮಲ್ಲಿಯ ಬ್ರಾಹ್ಮಣೀ ದನಗಳಿಂದ ತಿಳಿಯಬಹುದು.

ಹಿಂದೂಸ್ತಾನದಲ್ಲಿ ಸುಮಾರು 30 ಕ್ಕಿಂತ ಹೆಚ್ಚು ಜಾತಿಯ ದನಗಳು ಕಂಡು ಬರುತ್ತವೆ. ಅವು ಯಾವ ಯಾವ ಪ್ರದೇಶಕ್ಕೆ ಸಂಬಂಧಿಸಿವೆಯೋ ಅದಕ್ಕನುಗುಣವಾಗಿ ಅವುಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಮುಖ್ಯವಾಗಿ ಗುಜರಾತ್, ನೆಲ್ಲೂರು, (ಓಂಗೋಲ್)ಗೀರ್ ಮತ್ತು ಕೃಷ್ಣಾತೀರದ ನಾಲ್ಕು ಜಾತಿಯ ದನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಯುಕ್ತ ಅಮೇರಿಕಾ ದೇಶಗಳಿಗೆ ತೆಗೆದುಕೊಂಡು ಹೋಗಲಾಗಿದೆ. ಅಲ್ಲಿ ಈ ನಾಲ್ಕು ಜಾತಿಯ ದನಗಳನ್ನು ಪ್ರತ್ಯೇಕವಾಗಿಟ್ಟು ಸಂಗೋಪನೆ ಮಾಡದೆ ಈ ಎಲ್ಲ ದನಗಳನ್ನು ಅಲ್ಲಿಯ ಸ್ಥಳೀಕ ದನಗಳೊಂದಿಗೆ ಬೇಕು ಬೇಕಾದ ಹಾಗೆ ಸಮ್ಮಿಳನಗೊಳಿಸಿ ಸಂವರ್ಧನೆ ಮಾಡಲಾಯಿತು. ತತ್ಪರಿಣಾಮವಾಗಿ ಇಂದು ಅಮೇರಿಕಾದಲ್ಲಿಯ ಬ್ರಾಹ್ಮಣೀ ದನಗಳು ಜಗತ್ತಿನಲ್ಲಿಯೇ ಮಾಂಸಕ್ಕೆ ಹೆಸರಾದ ದನಗಳಾಗಿವೆ. ಅಲ್ಲಿಯ ಇಂದಿನ ಮಾಂಸದ ದನಗಳ ಉತ್ಪಾದನೆಗೆ ಭಾರತದ ಬ್ರಾಹ್ಮಣೀ ದನಗಳೇ ಮೂಲಪುರುಷರು ಎಂದು ಹೇಳಬಹುದು. ಈ ಕಾರ್ಯದಲ್ಲಿ ಗುಜರಾತದ ದನಗಳಿಗೆ ಅಗ್ರಸ್ಥಾನ.

ಭಾರತದಿಂದ ದನಗಳನ್ನು (ಬ್ರಾಹ್ಮಣೀ) ಅಮೇರಿಕಾಕ್ಕೆ ಮೊಟ್ಟಮೊದಲಿಗೆ ಯಾವಾಗ ತೆಗೆದುಕೊಂಡು ಹೋದರು ಎಂಬುದು ವಿಮರ್ಶಾತ್ಮಕ ಪ್ರಶ್ನೆಯಾಗಿದೆ.

ಈ ಸಂಬಂಧದಲ್ಲಿ ಲಾಯಿಡ್‌ಕ್ಲೈಬರ್ನ್ ಎಂಬುವರ ವರದಿ ಪ್ರಕಾರ ನಮಗೆ ತಿಳಿದು ಬಂದಿರುವುದೇನೆಂದರೆ ದಕ್ಷಿಣ ಕಾರೋಲಿನಿಂದ ಫೇರ್ ಫೀಲ್ಡ್ ಕೌಂಟಿಯಲ್ಲಿಯ ಡಾ|ಜೇಮ್ಸ್ ಬೋಂಟನ್ ಡೇವಿಸ್ ಎಂಬುವರು ತುರ್ಕಿಸ್ತಾನದಲ್ಲಿ ಸುಲ್ತಾನರಿಗೆ ಕೃಷಿ ಶಾಸ್ತ್ರ ಸಲಹೆಗಾರರಾಗಿದ್ದಾಗ ಅವರು ಅಲ್ಲಿ ಹಿಂದೂಸ್ಥಾನದ ಬ್ರಾಹ್ಮಣೀ ದನಗಳ ಸೌಂದರ್ಯ, ಚಿಲವು, ನಿಲವು, ಮೈಕಟ್ಟು ಮತ್ತು ಸಧೃಡತೆಗಳಿಗೆ ಮಾರುಹೋಗಿ 1849ರಲ್ಲಿ ಇಲ್ಲಿಂದ ಬಾಸ್‌ಇಂಡಿಕಸ್ (ಜೇಬು) ದನಗಳನ್ನು ತಮ್ಮ ದೇಶಕ್ಕೆ ತೆಗೆದು ಕೊಂಡು ಹೋದರು ಎಂದು ಹೇಳಲಾಗಿದೆ. ಇದೇ ನಮಗೆ ತಿಳಿದು ಬರುವ ಮೊದಲ ನೆಯ ವರದಿ. ಅನಂತರ 1854ರಲ್ಲಿ ಬ್ರಿಟಿಷ್ ರಾಜರು ಅಮೆರಿಕೆಯ ರಿಚರ್ಡ್ ಬಾರೋ ಎಂಬುವರು ತಮ್ಮ ಪ್ರಜೆಗಳಿಗೆ ಕಬ್ಬು ಮತ್ತು ಹತ್ತಿ ಬೆಳೆಯುವ ವಿಧಾನ ಗಳ ಬಗ್ಗೆ ಉತ್ತಮ ತಿಳುವಳಿಕೆ ಮತ್ತು ತರಬೇತಿ ಕೊಟ್ಟಿದ್ದಕ್ಕಾಗಿ ಸಂತುಷ್ಟರಾಗಿ, ಅವರಿಗೆ ಎರಡು ಹಿಂದೂಸ್ತಾನದ ಬ್ರಾಹ್ಮಣೀ ಹೋರಿಗಳನ್ನು ಬಹುಮಾನವಾಗಿ ಕೊಟ್ಟು ಸತ್ಕರಿಸಲಾಯಿತು. ಈ ಹೋರಿಗಳಿಂದ ಅಮೇರಿಕಾದಲ್ಲಿ ಹುಟ್ಟಿದ ದನ ಗಳನ್ನು 'ಬಾರೋಗ್ರೇಡ್' ದನಗಳೆಂದು ಅಲ್ಲಿಯ ಕೊಲ್ಲಿಯ ತೀರ ಪ್ರದೇಶಗಳಲ್ಲಿಯ ಪಶುಪಾಲಕರಿಗೆ ಚಿರಪರಿಚಿತವಾದವು. ಈ ಹೋರಿಗಳಿಗೆ ಹುಟ್ಟಿದ ಕರುಗಳು ಉತ್ತಮ ಸಂತತಿಯ ದನಗಳೆಂದು ಕಂಡುಬಂದದ್ದರಿಂದ 1885ರಲ್ಲಿ ಟೆಕ್ಸಾಸ್‌ದ ಜೆ.ಎಮ್.ಫ್ರಾಸ್ಟ್ ಮತ್ತು ಆಲ್‌ಬರ್ಟ್ ಮಾಂಟಿಗೋಮರಿ ಎಂಬುವರು ಎರಡು ಹೋರಿಗಳನ್ನು ಹಿಂದೂಸ್ಥಾನದಿಂದ ತರಿಸಿಕೊಂಡರು. ಈ ಹೋರಿಗಳನ್ನು ಅಲ್ಲಿಯ 'ಬಾರೋಗ್ರೇಡ್' ದನಗಳೊಂದಿಗೆ ಜೊತೆಗೂಡಿಸಿ ಸಂಗೋಪನೆ ಮಾಡಿ ಹಿಂದೂ ಸ್ಥಾನದ 'ಬಾಸ್ ಇಂಡಿಕಸ್' ದನಗಳ ರಕ್ತವನ್ನು ಅಲ್ಲಿಯ ದನಗಳ ರಕ್ತದಲ್ಲಿ ಕೇಂದ್ರಿ ಕೃತವಾಗುವಂತೆ ಮಾಡಿಕೊಂಡರು.

1905 ಮತ್ತು 1906ರಲ್ಲಿ ಟೆಕ್ಸಾಸ್‌ನ ಪಿಯರ್ಸ್‌ರಾಚ್ ಆಫ್ ಪೀಯರ್ಸ್ ಸಂಸ್ಥೆಯವರು 30 ಹೋರಿಗಳನ್ನು ಮತ್ತು 3 ಆಕಳುಗಳನ್ನು ಭಾರತದಿಂದ ತರಿಸಿ ಕೊಂಡರು. 1923ರಲ್ಲಿ ಬ್ರೆಜಿಲ್ ದೇಶದಿಂದ ಟೆಕ್ಸಾಸಿಗೆ ಗುಜರಾತ್, ಗೀರ್, ನೆಲ್ಲೂರು, ಜಾತಿಯ ದನಗಳನ್ನು ತರಿಸಿಕೊಂಡರು. ಪುನಃ 1925ರಲ್ಲಿ 120ಹೋರಿ ಮತ್ತು 18 ಆಕಳುಗಳನ್ನು ಆಮದು ಮಾಡಿಕೊಂಡರು. 1910 ರಿಂದ 1920ರಲ್ಲಿ ಈ ಹತ್ತು ವರ್ಷಗಳ ಕಾಲದಲ್ಲಿ ಅಮೇರಿಕಾದ ದಕ್ಷಿಣದ ಭಾಗ ಹಾಗೂ ಮೆಕ್ಸಿಕೋ ಕರಾವಳಿ ಪ್ರದೇಶಗಳಲ್ಲೆಲ್ಲಾ ಈ ಭಾರತದಿಂದ ಬ್ರಾಹ್ಮಣೀ ದನಗಳ ಸಂತತಿಯ ದನಗಳ ಹಿಂಡು ದೊಡ್ಡ ಸಂಖ್ಯೆಯಲ್ಲಿ ಬೆಳೆದು, ಹಬ್ಬಿ, ಹರಡಿಕೊಂಡಿರುವುದು ಕಂಡುಬರುವಂತಾಯಿತು. ಈ ದನಗಳ ಹಿಂಡನ್ನು ದೊಡ್ಡ ಸಂಖ್ಯೆಯಲ್ಲಿ ಬೆಳೆಸಿ ಸಾಕಿಕೊಂಡು ಬಂದ ದೊಡ್ಡ ಪಶುಪಾಲಕರೆಂದರೆ–ಟೆಕ್ಸಾಸ್‌ನ ಸ್ವಾರ್ಟವೆಲಾಬ್ರದರ್ಸ್

ಟೆಕ್ಸಾಸ್‌ದ ಕಾರಿಸಿನಾದ ಬರ್ಕ್‌ಬ್ರದರ್ಸ್; ಪೀಯರ್ಸ್ ರಾಂಚ್ ಪೀಯರ್ಸ್ ಟೆಕ್ಸಾಸ್; ಟೆಕ್ಸಾಸದ ಸಿ.ಕೆ. ಬ್ಯಾಯಟ್ ತೇವರ್ಸ್ ಮೊದಲಾದವರು ಎಂದು ಹೇಳಲಾಗಿದೆ.

ಅಮೇರಿಕಾ ದೇಶದ ಪಶುಪಾಲಕರು ಈ ಮಿಶ್ರತಳಿ ದನಗಳ ಸಂತಾನಾಭಿವೃದ್ಧಿಯಿಂದ ಸಂತೃಪ್ತರಾಗಿ ಅವುಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಹೆಚ್ಚು ಆಸಕ್ತರಾದರು. ಇದಕ್ಕಾಗಿ ಅನೇಕ ದೊಡ್ಡ ದೊಡ್ಡ ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಂಡರು. 1924ರಲ್ಲಿ ಅಮೇರಿಕಾದಲ್ಲಿಯ ಪಶುಪಾಲಕರು 'ಅಮೇರಿಕನ್ ಬ್ರೀಡರ್ಸ್ ಅಸೋಸಿಯೇಷನ್' ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡರು. ಇದು ಜಗತ್ತಿನಲ್ಲಿಯೇ ದೊಡ್ಡದಾದ ಪಶುಪಾಲಕರ ಸಂಘ. ಇದಕ್ಕೆ ಅಮೇರಿಕಾ ದೇಶದ ನಾನಾ ಭಾಗಗಳಿಂದಲೇ ಅಲ್ಲದೆ 17 ಬೇರೆ ಬೇರೆ ದೇಶದವರು ಸದಸ್ಯರಾಗಿರುತ್ತಾರೆ. ಇದು 2,47392 ದನಗಳನ್ನು ದಿನಾಂಕ 31ನೇ ಡಿಸೆಂಬರ್ ತಿಂಗಳು 1956ರಲ್ಲಿ ಮಾಂಸದ ಜಾತಿಯ ದನಗಳಿಗಾಗಿ ನೋಂದಾಯಿಸಲಾದ 4ನೇ ಸಂಸ್ಥೆಯಾಗಿದೆ. ಬ್ರಾಹ್ಮಣೀ ದನಗಳನ್ನು ಅಧಿಕಸಂಖ್ಯೆಯಲ್ಲಿ ಸಾಕಿಕೊಂಡಿರುವ ಪ್ರದೇಶಗಳೆಂದರೆ: ಟೆಕ್ಸಾಸ್, ಫ್ಲೋರಿಡಾ ಲ್ಯೂಸಿನಾ, ಜಾರ್ಜಿಯಾ ಮತ್ತು ಕ್ಯಾಲಿಫೋರ್ನಿಯ. ಇದರಂತೆ ಕ್ಯೂಬಾ, ವೆನಿಝೂಲಾ ಮತ್ತು ಮೆಕ್ಸಿಕೋ ದೇಶಗಳೂ ಸಹ ಇದನ್ನೇ ಅನುಸರಿಸಿವೆ. ಈ ಸಂಘ ಸಂಸ್ಥೆಗಳ ಮುಖ್ಯಕಛೇರಿಯು ಟೆಕ್ಸಾಸ್‌ದಲ್ಲಿಯ 'ಆನಟೋನಿಯೊ' ಎಂಬಲ್ಲಿ ಸ್ಥಾಪಿಸಲ್ಪಟ್ಟಿದೆ. ಅಲ್ಲಿಯ ಪಶುಪಾಲಕರು ಈ ಸಂಘಸಂಸ್ಥೆಗಳ ಮೂಲಕ ಹೆಚ್ಚಿನ ವೈಜ್ಞಾನಿಕ ಪರೀಕ್ಷೆ, ಸಂಶೋಧನೆಯ ಕಾರ್ಯಗಳನ್ನು ಕೈಗೊಂಡು ಪಶು ಸಂಪತ್ತನ್ನು ಹೆಚ್ಚಿಸಿಕೊಂಡು ಇಂದು ಹೈನೋತ್ಪಾದನೆ, ಮಾಂಸೋತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ಒಂದು ವಿಶಿಷ್ಟ ಸ್ಥಾನವನ್ನುಗಳಿಸಿಕೊಂಡಿವೆ.

ಸುಧಾರಿಸಿದ ಬ್ರಾಹ್ಮಣೀ ದನಗಳು ಈ ಸುಧಾರಿಸಿದ ಬ್ರಾಹ್ಮಣೀ ದನಗಳು ಅಮೇರಿಕಾದ ಕರಾವಳಿಯ ಪ್ರದೇಶಗಳಲ್ಲಿಯ ದನಗಳಿಗಿಂತ ಬಹುಬೇಗನೆ ದೊಡ್ಡವಾಗಿ ಬೆಳೆಯುವುವು ಮತ್ತು ಇವುಗಳ ಬೆಳವಣಿಗೆಯು 5 ಅಥವಾ 6 ವರ್ಷಗಳವರೆವಿಗೂ ಮುಂದುವರಿಯುವುದು. ಸಾಮಾನ್ಯವಾಗಿ ಈ ಸುಧಾರಿಸಿದ ಬ್ರಾಹ್ಮಣೀ ಆಕಳುಗಳು 1200 ಪೌಂಡು ಮತ್ತು ಹೋರಿಗಳು 1800 ಪೌಂಡು ತೂಕವಿರುತ್ತವೆ. ಸ್ವಲ್ಪ ಹೆಚ್ಚು ಕಾಳಜಿ ವಹಿಸಿ ಸಾಕಿದಲ್ಲಿ ಇವುಗಳ ತೂಕವನ್ನು 600 ಪೌಂಡುಗಳಷ್ಟು ಮತ್ತೆ ಹೆಚ್ಚಿಸಬಹುದು. ಅಲ್ಲಿಯ ಜನರು ಹೆಚ್ಚಾಗಿ ಉಕ್ಕಿನ ಬಣ್ಣದ ದನಗಳನ್ನು ಹೆಚ್ಚಾಗಿ ಮೆಚ್ಚುತ್ತಾರೆ. ಹೋರಿಗಳಲ್ಲಿ ಸಾಮಾನ್ಯವಾಗಿ ಮುಂದಿನ ಮತ್ತು ಹಿಂದಿನ ಚಪ್ಪೆಯ ಭಾಗಗಳು ಹೆಚ್ಚು ಕಪ್ಪು ಬಣ್ಣದಿಂದ ಕೂಡಿರುತ್ತವೆ, ಕೆಲವರು ಕೆಂಪು

ಬಣ್ಣದ ದನಗಳನ್ನು ಬಯಸುತ್ತಾರೆ. ಈ ಬಣ್ಣದ ದನಗಳು ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿವೆ.

ನಿಲುವಿನಲ್ಲಿ ಅಮೇರಿಕೆಯ ಬ್ರಾಹ್ಮಣೀ ದನಗಳು ಭಾರತದ ಬ್ರಾಹ್ಮಣೀ ದನಗಳಿಗಿಂತ ಸಣ್ಣ ದನಗಳು. ಆದರೆ ಇವು ಹೆಚ್ಚು ಮಾಂಸಖಂಡಗಳಿಂದ, ಕೊಬ್ಬಿನಿಂದ ತುಂಬಿಕೊಂಡಿರುತ್ತವೆ. ಕೊಂಬುಗಳು ಅಲ್ಲಿಯ ದನಗಳಿಗಿಂತ ಸ್ವಲ್ಪ ಉದ್ದ ಮತ್ತು ಅಗಲವಾಗಿ ಹೊರಭಾಗಕ್ಕೆ ತಿರುಗಿಕೊಂಡಿರುತ್ತವೆ. ಇಣಿಯು ಆಕಳು ಮತ್ತು ಹೋರಿಗಳಲ್ಲಿ ಬೆಳೆದುಕೊಂಡು ಬಂದಿರುತ್ತದೆ. ಇವುಗಳ ನಡಿಗೆ ಗಾಂಭೀರ್ಯವಾಗಿ ಸರಳವಾಗಿರುತ್ತದೆ.

ಈ ಬ್ರಾಹ್ಮಣೀ ದನಗಳೊಂದಿಗೆ ನಡೆಸಿದ ಪ್ರಯೋಗದ ಪರಿಣಾಮಗಳು

1920 ರಲ್ಲಿ ಟೆಕ್ಸಾಸ್‌ದಲ್ಲಿಯ ಸೋನಾರದ ಪ್ರಯೋಗಶಾಲೆಯಲ್ಲಿ ಕೃಷಿ ಇಲಾಖೆಯವರು ಈ ಬ್ರಾಹ್ಮಣೀ ದನಗಳು ಅಲ್ಲಿಯ ಉಷ್ಣತೆ ಮತ್ತು ಆರ್ದ್ರತೆಗಳಿಂದ ಕೂಡಿದ ಹವಮಾನಕ್ಕೆ ಎಷ್ಟರ ಮಟ್ಟಿಗೆ ಅನುಕೂಲವಾಗಿ ಹೊಂದಿಕೊಳ್ಳುವುವು ಎಂಬುದನ್ನು ತಿಳಿಯಲು ಒಂದು ಪ್ರಯೋಗವನ್ನು ಮಾಡಿದರು. ಅದೇನೆಂದರೆ ಮೊದಲನೆಯದಾಗಿ ಅಲ್ಲಿಯ ಸ್ಥಳಿಕ ಕೆಲವು ಆಕಳುಗಳನ್ನು ಆರಿಸಿಕೊಂಡು ಅವುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. ಮೊದಲನೆಯ ಗುಂಪಿನ ಆಕಳುಗಳಿಗೆ ಭಾರತದ ಬ್ರಾಹ್ಮಣೀ ಹೋರಿಗಳಿಂದಲೂ, ಎರಡನೆಯ ಗುಂಪಿನ ಆಕಳುಗಳಿಗೆ ಅಲ್ಲಿಯ ಹೆರ್‌ಫೋರ್ಡ್ ಜಾತಿಯ ಹೋರಿಗಳಿಂದಲೂ ಗರ್ಭಧಾರಣೆ ಮಾಡಿಸಲಾಯಿತು. ಈ ಎರಡೂ ಜಾತಿಯ ಹೋರಿಗಳಿಗೆ ಹುಟ್ಟಿದ ಕರುಗಳನ್ನು ಪರೀಕ್ಷಿಸಲಾಗಿ ಭಾರತದ ಬ್ರಾಹ್ಮಣೀ ಹೋರಿಗಳಿಗೆ ಹುಟ್ಟಿದ ಕರುಗಳು ಅಲ್ಲಿಯ ಹೆರ್‌ಫೋರ್ಡ್ ಹೋರಿಗಳಿಗೆ ಹುಟ್ಟಿದ ಕರುಗಳಿಗಿಂತ ಗಾತ್ರ ಮತ್ತು ತೂಕದಲ್ಲಿ ಹೆಚ್ಚಾಗಿ ಕಂಡುಬಂದವು. ಇದರಿಂದ ಈ ಮಿಶ್ರತಳಿಯ ದನಗಳ ಬೆಳವಣಿಗೆಯು ಬೇಗನೆ ಆಗುತ್ತದೆ ಎಂಬುದನ್ನು ಕಂಡುಕೊಂಡರು. ಎರಡನೆಯದಾಗಿ ಟೆಕ್ಸಾಸ್‌ದಲ್ಲಿಯ ಪ್ರಯೋಗಶಾಲೆಯೊಂದಿಗೆ ಸಂಯುಕ್ತ ಅಮೇರಿಕೆಯ ಕೃಷಿ ಇಲಾಖೆಯವರು 1914ರಲ್ಲಿ ಹೆರ್‌ಫೋರ್ಡ್ ಮತ್ತು ಶಾರ್ಟ್ ಹಾರನ ಜಾತಿಯ ಕೆಲವು ಆಕಳುಗಳನ್ನು ಆರಿಸಿಕೊಂಡು ಅವುಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ ಒಂದು ಗುಂಪಿಗೆ ಅಲ್ಲಿಯ ಹೆರ್‌ಫೋರ್ಡ್ ಜಾತಿಯ ಹೋರಿಗಳಿಂದಲೂ ಹಾಗೂ ಎರಡನೆಯ ಗಂಪಿನ ಇದೇ ಜಾತಿಯ ಆಕಳುಗಳಿಗೆ ಬ್ರಾಹ್ಮಣೀ ಹೋರಿಗಳಿಂದಲೂ ಗರ್ಭಧಾರಣೆ ಮಾಡಿಸಲಾಯಿತು. ಈ ಎರಡೂ ಜಾತಿಯ ಹೋರಿಗಳಿಗೆ ಹುಟ್ಟಿದ ಕರು

ಗಳಲ್ಲಿ ಬ್ರಾಹ್ಮಣೀ ಹೋರಿಗಳಿಗೆ ಹುಟ್ಟಿದ ಕರುಗಳು ಹೆಚ್ಚು ಬೇಗ ಬೆಳೆದದ್ದು ಕಂಡುಬಂದಿತು ಮತ್ತು ಇವು ಗಾತ್ರ, ತೂಕದಲ್ಲಿ ಹೆಚ್ಚಾಗಿ ಮಾಂಸಖಂಡಗಳಿಂದ ತುಂಬಿಕೊಂಡಿದ್ದು ಕಂಡುಬಂತು. ಇದರ ಪರಿಣಾಮವಾಗಿ ಅಲ್ಲಿಯ ಜನರು ಬ್ರಾಹ್ಮಣೀ ದನಗಳನ್ನು ಸಾಕಲು ಹೆಚ್ಚು ಆಸಕ್ತಿಯುಳ್ಳವರಾದರು.

ಬ್ರಾಹ್ಮಣೀ ದನಗಳಲ್ಲಿ ಬಿಸಲಿನ ತಾಪವನ್ನು ತಾಳಿಕೊಳ್ಳುವ ಶಕ್ತಿ

ಭಾರತದಲ್ಲಿ ಬ್ರಾಹ್ಮಣೀ ದನಗಳು ನೂರಾರು ವರ್ಷಗಳಿಂದ ಉಷ್ಣವಲಯದಲ್ಲಿಯೇ ಹುಟ್ಟಿ ಬಾಳಿ, ಬೆಳೆದುಕೊಂಡು ಬಂದಿರುವುದರಿಂದ ಇವು ಸ್ವಾಭಾವಿಕವಾಗಿ ಇಲ್ಲಿಯ ಬಿಸಲಿನ ತಾಪವನ್ನು ಮತ್ತು ಆರ್ದ್ರತೆಯನ್ನು ತಡೆದುಕೊಳ್ಳುವ ಒಂದು ವಿಶೇಷ ಶಕ್ತಿಯನ್ನು ಹೊಂದಿರುತ್ತವೆ. ಇದು ಅವುಗಳಿಗೆ ಪರಿಸರದ ಕೊಡುಗೆ. ಈ ಬ್ರಾಹ್ಮಣೀ ದನಗಳ ಮೈ ಮೇಲಿನ ಬೆವರಿನ ಗ್ರಂಥಿಗಳು ಸಮೃದ್ಧಿಯಾಗಿ ಚೆನ್ನಾಗಿ ಬೆಳೆದುಕೊಂಡಿರುವುದರಿಂದ ಅವು ಸಾಕಷ್ಟು ಶಾಖವನ್ನು ಬೆವರಿನ ಮೂಲಕ ಹೊರಗೆ ಹಾಕುತ್ತವೆ. ಈ ಸೌಲಭ್ಯ ಯೂರೋಪ್‌ನ 'ಟೌರಸ್' ಜಾತಿಯ ದನಗಳಲ್ಲಿ ಅಷ್ಟು ಸಮರ್ಪಕವಾಗಿ ಕಂಡುಬರುವುದಿಲ್ಲ. ಇದೂ ಅಲ್ಲದೆ ಈ ಬ್ರಾಹ್ಮಣೀ ದನಗಳ ಚರ್ಮದಲ್ಲಿರುವ ಸಬೇಸಿಯಸ್ ಗ್ರಂಥಿಗಳು ಒಂದು ತರಹದ ವಾಸನೆಯಿಂದ ಕೂಡಿದ ಎಣ್ಣೆಯಂತೆ ಜಿಡ್ಡಾಗಿರುವ ವಸ್ತುವನ್ನು ಸ್ರವಿಸುತ್ತದೆ. ಇದರ ವಾಸನೆಯನ್ನು ನೊಣಗಳು ಸಹಿಸಲಾರದೆ ಓಡಿಹೋಗುತ್ತವೆ. ಈ ಬ್ರಾಹ್ಮಣೀ ದನಗಳಲ್ಲಿ ಕಂಡುಬರುವ ಇನ್ನೊಂದು ವಿಶೇಷ ಗುಣವೇನೆಂದರೆ– ಈ ದನಗಳು ಹುಲ್ಲುಗಾವಲುಗಳಲ್ಲಿ ಮೇಯುವಾಗ ನೊಣಗಳು ಮತ್ತು ಗುಂಗಾಡುಗಳು ಇವುಗಳ ಮೈಮೇಲೆ ಕುಳಿತು ಕಡಿಯಲು ಪ್ರಾರಂಭಿಸಿದ ಕೂಡಲೇ ಈ ಕಾಟವನ್ನು ತಾಳಲಾರದೆ ದನಗಳು ತಮ್ಮ ಚರ್ಮವನ್ನು ಜೋರಾಗಿ ನಡುಗಿಸುತ್ತವೆ. ಹೀಗೆ ನೂರಾರು ವರ್ಷಗಳಿಂದ ಮೈಯನ್ನು ಕಂಪಿಸುವ ಕೆಲಸ ಸಾಗಿ ಬಂದಿದೆ. ಇದರ ಪರಿಣಾಮವಾಗಿ ಈ ದನಗಳ ಶರೀರದ ಚರ್ಮದ ಹೊದಿಕೆ ಮತ್ತು ಕೊಬ್ಬುಗಳ ನಡುವೆ ಒಂದು ತೆಳುವಾದ ಸೂಕ್ಷ್ಮವಾದ ಸ್ನಾಯು ಪೊರೆಯು ಬೆಳೆದುಕೊಂಡು ಬಂದಿದೆ. ಇದನ್ನು 'ಪೆನ್ನಿಕ್ಯೂಲರ್ ಮೆಂಬ್ರೇನ್' ಎಂದು ಕರೆಯುತ್ತಾರೆ. ಈ ಸೌಲಭ್ಯ ಅಮೇರಿಕೆಯ ದನಗಳಲ್ಲಿ ಅಷ್ಟು ಚೆನ್ನಾಗಿ ಬೆಳೆದಿರುವುದು ಕಂಡು ಬಂದಿಲ್ಲವೆಂದು ಹೇಳಲಾಗಿದೆ.

ಬ್ರಾಹ್ಮಣೀ ತಳಿಯ ಧನಗಳ ಮೌಲ್ಯಮಾಪನೆ

ಅಮೇರಿಕ ದೇಶದಲ್ಲಿ ದನಗಳ ಸುಧಾರಣೆಯ ಕಾರ್ಯದಲ್ಲಿ ಭಾರತದ ಬ್ರಾಹ್ಮಣೀ ದನಗಳು ಒಂದು ಅದ್ವಿತೀಯ ಸ್ಥಾನವನ್ನು ಗಳಿಸಿಕೊಂಡಿವೆ. ಈ ಬ್ರಾಹ್ಮಣೀ ದನಗಳು ಮತ್ತು ಈ ಬ್ರಾಹ್ಮಣೀ ರಕ್ತದಿಂದ ಕೂಡಿದ ದನಗಳು

ಅಮೇರಿಕಾ ದೇಶದ ದಕ್ಷಿಣ ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಉಪಯುಕ್ತವೆಂದು ಕಂಡುಬಂದಿವೆ. ಈ ದನಗಳು ಅಲ್ಲಿಯ ಬಿಸಿಲಿನ ತಾಪ ಮತ್ತು ಆರ್ದ್ರತೆಯನ್ನು ಸಹಿಸಬಲ್ಲ ಒಂದು ವಿಶೇಷ ಸಹಿಷ್ಣುತೆಯ ಶಕ್ತಿಯನ್ನು ಹೊಂದಿರುತ್ತವೆ; ಸೊಣ, ಗುಂಗಾಡುಗಳ ಉಪದ್ರವವನ್ನು ತಡೆಯುವ ಶಕ್ತಿಯನ್ನಲ್ಲದೆ ರೋಗ ಪ್ರತಿಬಂಧಕ ಶಕ್ತಿಯನ್ನೂ ಪಡೆದಿರುತ್ತವೆ. ಆಕಳುಗಳು ಉತ್ತಮ ತಾಯಿಗಳಾಗಿ ಕರುಗಳನ್ನು ಅಕ್ಕರೆಯಿಂದ ಕಾಣುತ್ತವೆ. ಅಲ್ಲಿಯ ಹವೆಯು ಅಲ್ಲಿಯ ದನಗಳಿಗೆ ಹಾಲು ಹಿಂಡಲು ಪ್ರತಿಕೂಲವಾಗಿದ್ದರೂ ಸಹ ಈ ದನಗಳಿಗೆ ಅದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಬೇಗನೆ ಪ್ರತಿಕೂಲ ಸನ್ನಿವೇಶಗಳಿಗೆ, ಪರಿಸರಗಳಿಗೆ ಹೊಂದಿಕೊಂಡು ಹೋಗುವುದು ಈ ದನಗಳ ಒಂದು ವೈಶಿಷ್ಟ್ಯ. ಈ ದನಗಳಲ್ಲಿ ಕ್ಯಾನ್ಸರ್ ಕಣ್ಣಿನ ರೋಗವು ಕಂಡುಬಂದಿಲ್ಲ. ಈ ದನಗಳ ಆಕಾರ ಮತ್ತು ತಿಂದ ಹುಲ್ಲನ್ನು ಮಾಂಸವನ್ನಾಗಿ ಪರಿವರ್ತಿಸುವ ಶಕ್ತಿ ಮೆಚ್ಚತಕ್ಕದ್ದಾಗಿದೆ. ಈ ದನಗಳು ಬಿಸಿಲಿನಲ್ಲಿ ಆಯಾಸವಿಲ್ಲದೆ ಬಹಳ ಕಾಲವವರೆವಿಗೂ ಮೇಯಬಲ್ಲವು ಮತ್ತು ನಿರಾಯಾಸವಾಗಿ ಬಹುದೂರ ಮೇಯುತ್ತಾ ತಿರುಗಾಡಬಲ್ಲವು. ಇವು ತಂಪಾದ ನೆರಳಿನಲ್ಲಿ ಮಲಗಿ ಕಳೆಯುವ ಕಾಲ ಕಡಿಮೆ. ಅಮೇರಿಕಾ ದೇಶದಲ್ಲಿ ಈ ದನಗಳ ಮಾಂಸವು ರುಚಿಯಾಗಿರುವುದರಿಂದ ಹೆಚ್ಚು ಜನಪ್ರಿಯತೆಯನ್ನು ಗಳಿಸಿವೆ. ಹೀಗಾಗಿ ಈ ಜಾತಿಯ ದನಗಳನ್ನು ಹೆಚ್ಚಾಗಿ ಕರಾವಳಿ ಪ್ರದೇಶಗಳಾದ ಬಿಸಿಲಿನ ತಾಪ ಆರ್ದ್ರತೆಯಿಂದ ಕೂಡಿದ ಪ್ರದೇಶಗಳಲ್ಲಿ ಸಾಕಿ ಬೆಳೆಸಿಕೊಂಡು ಬಂದಿದ್ದಾರೆ. ಇಂದು ಈ ಜಾತಿಯ ದನಗಳು ಕರಾವಳಿ ಪ್ರದೇಶಗಳಿಂದ ಸಾವಿರಾರು ಮೈಲಿಯೊಳಗಿನ ಪ್ರದೇಶಗಳವರೆಗೂ ಬೆಳೆದು ಹಬ್ಬಿಕೊಂಡಿವೆ. ಈ ದನಗಳನ್ನು ಇಂದು ಪಶ್ಚಿಮ ಭಾಗದ ಎತ್ತರವಾದ ಪ್ರದೇಶಗಳಿಂದ ಸಾವಿರಾರು ಮೈಲಿಯೊಳಗಿನ ಪ್ರದೇಶಗಳಾದ ಕ್ಯಾಲಿಫೋರ್ನಿಯಾ, ನೆವೇಡ, ಮೊಂಟೇನ್, ಕಾನ್ಸಸ್, ಓಕ್‌ಲಾಮ, ಅರ್‌ಕನ್ಸಾಸ್ ಈ ಪ್ರದೇಶಗಳಲ್ಲಿ ಬೆಳೆಸಿ ಅಭಿವೃದ್ಧಿಗೊಳಿಸಲಾಗಿದೆ.

ಈ ದನಗಳು ಶರೀರದ ಅಡ್ಡಳತೆಯಲ್ಲಿ ಕಡಿಮೆ ಇರುತ್ತವೆ. ಮೈ ಆಕಾರ ಒಂದೇ ಮಟ್ಟವಾಗಿಲ್ಲ. ಇವುಗಳ ನಿತಂಬವು ತುಂಬಿ ಕೊಂಡಿರದೆ ಇದ್ದಕ್ಕಿದ್ದಂತೆ ಇಳಿಜಾರಾಗಿರುತ್ತದೆ. ಕಾಲು ಉದ್ದ, ಮೈ ಚರ್ಮ ಸಡಿಲ, ಗಂಗೆದೊಗಲು ಬಹಳ ಉದ್ದವಾಗಿರುತ್ತದೆ. ಬೆದರುವ ಪ್ರವೃತ್ತಿ, ಸ್ವಭಾವ ಒರಟು; ಬಣ್ಣದಲ್ಲಿ ಏಕರೂಪತೆ ಇಲ್ಲ. ಈ ಎಲ್ಲ ಕುಂದುಗಳನ್ನು ಅಲ್ಲಿಯ ಪಶುಪಾಲಕರು ನಿಯಮಿತ ಕ್ರಮಬದ್ಧವಾದ ಸಂಗೋಪನೆಯಿಂದ ಆದಷ್ಟು ಪರಿಹರಿಸಿಕೊಂಡು ಸರಿಪಡಿಸಿಕೊಂಡು ಉತ್ತಮ ಮಾಂಸ ತಳಿಯ ದನಗಳ ಪಶುಪಾಲಕರೆಂದು ಜಗತ್ತಿನಲ್ಲಿಯೇ ಕೀರ್ತಿವಂತರಾಗಿರುತ್ತಾರೆ.

ಆಸ್ಟ್ರೇಲಿಯಾದ ಅಧಿಕ ಹಾಲಿನ ಉತ್ಪಾದನೆಯ ರಹಸ್ಯ

ಆಸ್ಟ್ರೇಲಿಯಾ ದೇಶ ನಮ್ಮ ದೇಶಕ್ಕಿಂತ ವಿಸ್ತೀರ್ಣದಲ್ಲಿ ಸಣ್ಣದಾಗಿದ್ದು ದನಗಳ ಸಂಖ್ಯೆ ಬಹಳ ಕಡಿಮೆಯುಳ್ಳದ್ದಾಗಿದ್ದರೂ ಸಹ ಹಾಲಿನ ಉತ್ಪಾದನೆಯಲ್ಲಿ ಬಹಳ ಮುಂದುವರೆದಿರುತ್ತದೆ. ಪಶುಪಾಲನೆ ಮತ್ತು ಹೈನೋತ್ಪಾದನೆಯ ವ್ಯವಸಾಯದಲ್ಲಿ ಅದ್ಭುತ ಪ್ರಗತಿಯನ್ನು ಅಲ್ಪಾವಧಿಯಲ್ಲಿ ಸಾಧಿಸಿರುವ ದೇಶ ಆಸ್ಟ್ರೇಲಿಯ. ಹಾಲಿನ ಉತ್ಪಾದನೆಗೆ ಜಗತ್ತಿನಲ್ಲಿ ಹೆಸರಾದ ದೇಶಗಳಲ್ಲಿ ಆಸ್ಟ್ರೇಲಿಯಾ ಸಹ ಒಂದು ಹೆಸರಾದ ದೇಶ.

ಮೊಟ್ಟ ಮೊದಲಿಗೆ ಫಿಲಪ್‌ದ ಗೌರ್ನರನು ತನ್ನ ಹಡಗಿನಲ್ಲಿ 4 ಆಕಳುಗಳನ್ನು ತೆಗೆದುಕೊಂಡು ಬಂದನು. ಅವನು ಮುಖ್ಯವಾಗಿ ಈ ಆಕಳುಗಳನ್ನು ತನಗೆ ಹಾಗೂ ತನ್ನ ನೌಕರರಿಗೆ ಹಾಲಿಗಾಗಿ ತಂದನು. ಮುಂದೆ ಇವನ ಕಚೇರಿಯನ್ನು ರೋಸ್ ಹಿಲ್‌ಗೆ ಸ್ಥಳಾಂತರಿಸಿದ್ದರಿಂದ ಮುಂದೆ ಈ ದನಗಳನ್ನು ಜಾಕಸನ್ ಬಂದರದಿಂದ ಪಾರಾಮಟಾ ಜಿಲ್ಲೆಗೆ ಸ್ಥಳಾಂತರಿಸಲಾಯಿತು. ಇವುಗಳಿಂದ ಉತ್ಪನ್ನವಾದ ದನಗಳನ್ನು ನ್ಯೂಸೌತ್ ವೇಲ್ಸ್‌ನಲ್ಲಿಯ ಸರ್ಕಾರಿ ನೌಕರರಿಗೂ ಅವರ ಸಿಬ್ಬಂದಿಗಳಿಗೂ ಹಂಚಲಾಯಿತು.

ಜಾನ್‌ಮ್ಯಾಕ್‌ಆರ್ತರ್ ಎಂಬುವನು ತನ್ನ ಕುರಿಗಳ ಹಿಂಡನ್ನು ಸಾಕುವುದಕ್ಕಿಂತ ಮುಂಚೆ ಹಾಲಿನ ಉತ್ಪಾದನೆಗಾಗಿ ತನ್ನ ಫಾರ್ಮಿನಲ್ಲಿ ಮೊದಲಿಗೆ ಒಂದು ಸಣ್ಣ ದುಗ್ಧಾಲಯವನ್ನು (ಹಾಲಿನ ಡೈರಿ) ತೆಗೆದನು. ಇವನೇ ಆಸ್ಟ್ರೇಲಿಯಾದ ದುಗ್ಧಾಲಯದ (ಹಾಲಿನ ಡೈರಿ) ಜನಕನೆಂದು ಕರೆಯಲಾಗಿದೆ.

ಡಾ। ಜಾನ್‌ಹ್ಯಾರಿಸ್ ಎಂಬುವನು 1805ರಲ್ಲಿ ತಮಗೆ ಕೊಟ್ಟ ಅಲ್ಟಿಮೋ ಎಂಬ ಜಮೀನಿನಲ್ಲಿ 9 ಆಕಳುಗಳನ್ನು ಸಾಕಿಕೊಂಡು ಒಂದು ಸಣ್ಣ ದುಗ್ಧಾಲಯವನ್ನು ತೆರೆದನು. ಮುಂದೆ ಇದೇ ಸ್ಥಳದಲ್ಲಿ ಸಿಡ್ನಿಯ ಹೆಸರಾದ ದೊಡ್ಡ ರೈತರ ಹಾಲಿನ ಸಹಕಾರಿ ಕೇಂದ್ರದ ಮುಖ್ಯ ಕಛೇರಿ ಸ್ಥಾಪಿತವಾಯಿತು.

1820ರಲ್ಲಿ ಇಲಿವಾರ ಜಿಲ್ಲೆಯ ನ್ಯೂಸೌತ್‌ವೇಲ್ಸ್‌ನಲ್ಲಿ ಹೈನೋದ್ಯಮದ ಶಂಕುಸ್ಥಾಪನೆಯಾಯಿತು. ಇಲ್ಲಿಂದ ಬೆಣ್ಣೆ, ಗಿಣ್ಣು ಹಾಗೂ ಹಾಲುಗಳನ್ನು ಕುದುರೆಗಳ ಮೇಲೆ ಮತ್ತು ಸಣ್ಣ ಸಣ್ಣ ಹಡಗುಗಳ ಮೂಲಕ ಹೊರಗೆ ಸಾಗಿಸಲಾಯಿತು. ಇಲ್ಲಿಯ ಮೂಲನಿವಾಸಿಗಳು ಈ ಹೈನ ಉದ್ಯೋಗದ ಕಾರ್ಯದಲ್ಲಿ ಒಂದು ವಿಶಿಷ್ಟತೆಯನ್ನು ಪಡೆದುಕೊಂಡಿರುತ್ತಾರೆ. ಇಲ್ಲಿಂದ ಈ ಹೈನ ಉದ್ಯೋಗವು ಮುಂದೆ ಬೀಗಾ ಎಂಬಲ್ಲಿಯುವರೆವಿಗೆ ಹಬ್ಬಿ ಬೆಳೆಯಿತು.

ಮೊದಲಿಗೆ ರಿಚ್‌ಮಂಡ್ ನದಿಯ ಜಿಲ್ಲೆಯ ಜನರ ಮುಖ್ಯ ಉದ್ಯೋಗ ಒಕ್ಕಲುತನವಾಗಿತ್ತು (ಬೇಸಾಯ). ಅವರು ಹೆಚ್ಚಾಗಿ ಕಬ್ಬು ಬೆಳೆಯುತ್ತಿದ್ದರು. 1890ರಲ್ಲಿ ಸಕ್ಕರೆಯ ಬೆಲೆಯು ಬಹಳ ಕಡಿಮೆಯಾಗಿದ್ದರಿಂದ ಕಬ್ಬನ್ನು ಕೇಳುವವರಿಲ್ಲದಂತಾಯಿತು. ರೈತರ ಆರ್ಥಿಕ ಪರಿಸ್ಥಿತಿ ಬಹಳ ಹೀನಾವಸ್ಥೆಗೆ ಬಂದಿತ್ತು. ಆಗ ಅಲ್ಲಿಯ ರೈತಜನರು ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕಾಗಿ ದನಗಳನ್ನು ಸಾಕಲು ಪ್ರಾರಂಭಿಸಿದರು. ಇದರಿಂದ ಅವರ ಸ್ಥಿತಿ ಉತ್ತಮಗೊಂಡು ಹೈನ ಉದ್ಯೋಗ ಲಾಭದಾಯಕವೆಂದು ಕಂಡುಬಂದಿತು. ಇದರಿಂದ ಅವರು ಹೈನೋತ್ಪಾದನೆಯನ್ನೇ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡರು. ಕೃಷಿ ಉತ್ಪಾದನೆಗೆ ಒಂದು ವರ್ಷ ಕಾಯಬೇಕಾಗಿತ್ತು. ಆದೇ ಹೈನ ಉದ್ಯೋಗದಿಂದ ದಿನ ಬೆಳಿಗ್ಗೆ ಕೈಗೆ ಹಣಸಿಗುವಂತಾಯಿತು. ಇದಕ್ಕಾಗಿ ಹಾಲಿನ ಉತ್ಪಾದನೆಯು ಆಸ್ಟ್ರೇಲಿಯಾದಲ್ಲಿ ನಾನಾ ಕಡೆಗಳಲ್ಲಿ ಪ್ರಾರಂಭವಾಗಿ ದೊಡ್ಡ ದೊಡ್ಡ ದುಗ್ಧಾಲಯಗಳು ಸ್ಥಾಪಿಸಲ್ಪಟ್ಟವು. ಅಲ್ಲಿ ಈ ಹೈನ ಉದ್ದಿಮೆ ಎಷ್ಟು ಭರದಿಂದ ಬೆಳೆಯಿತೆಂದರೆ 1836ರಲ್ಲಿ ಕೇವಲ 155ರಷ್ಟು ಇದ್ದ ದನಗಳು ವಿಕ್ಟೋರಿಯಾದಲ್ಲಿ 1866ರ ಹೊತ್ತಿಗೆ (30 ವರ್ಷಗಳ ಕಾಲದಲ್ಲಿ) 197322ಕ್ಕೆ ಹೆಚ್ಚಿತ್ತು. 1916ರಲ್ಲಿ ಆಸ್ಟ್ರೇಲಿಯಾ ಸರ್ಕಾರವು 'ಅಯರ್ ಶಯರ್' ಜಾತಿಯ ದನಗಳ ಒಂದು ಫಾರ್ಮನ್ನು ಸ್ಥಾಪಿಸಿತು. ಹೀಗೆ ತೀವ್ರಗತಿಯಿಂದ ಅಲ್ಲಿಯ ಹೈನದನಗಳು ಅಭಿವೃದ್ಧಿಯಾದವು.

ಆಸ್ಟ್ರೇಲಿಯಾದ ಪಶುಪಾಲಕರು ಬಹಳ ಶ್ರಮಜೀವಿಗಳು; ಸಾಹಸಿಗಳು; ಕಷ್ಟಸಹಿಷ್ಣುತೆಯುಳ್ಳವರು. ಹಗಲಿರುಳು ಹೈನತಳಿ ದನಗಳ ಅಭಿವೃದ್ಧಿಕಾರ್ಯದಲ್ಲಿ ನಿರತರಾಗಿ ಶ್ರದ್ಧೆಯಿಂದ ದುಡಿಯುತ್ತಿದ್ದಾರೆ. ಅವರ ಈ ಶ್ರಮಕ್ಕೆ ಪ್ರಕೃತಿಯೂ ಸಹಾಯವಾಗಿದೆ. ಇಲ್ಲಿಯ ಪಶ್ಚಿಮ ಭಾಗದ ಪ್ರದೇಶವು 'ಝೂರಾ' ಮತ್ತು 'ಕಾರಿ' ಎಂಬ ಜಾತಿಯ ದೊಡ್ಡ ದೊಡ್ಡ ಹೆಮ್ಮರಗಳಿಂದ ಕೂಡಿದ ದಟ್ಟಅರಣ್ಯ ಪ್ರದೇಶವಾಗಿತ್ತು. ಇದು ಮನುಷ್ಯ ಪ್ರವೇಶಕ್ಕೆ ಬಹಳ ಕಷ್ಟವಾಗಿತ್ತು. ಇದನ್ನು ಅಲ್ಲಿಯ ರೈತಜನರು ಸೇರಿಕೊಂಡು ಬಹಳ ಪ್ರಯಾಸಪಟ್ಟು ಹೇರಳವಾಗಿ ಹಣ ಖರ್ಚುಮಾಡಿ ಈ ಅರಣ್ಯ ಪ್ರದೇಶದಲ್ಲಿಯ ಗಿಡಮರಗಳನ್ನು ಕಡಿದು ಬಯಲುಮಾಡಿ ಇಂದು ವಿಶಾಲವಾದ ರಸವತ್ತಾದ ಹಸಿರುಹುಲ್ಲುಗಳಿಂದ ಕೂಡಿದ ಗೋಮಾಳಗಳ ಪ್ರದೇಶವನ್ನಾಗಿ ಮಾಡಿ ಹೈನದನಗಳ ಅಭಿವೃದ್ಧಿಯನ್ನು ಮಾಡಿಕೊಂಡಿದ್ದಾರೆ. ಇಂದು ಆಸ್ಟ್ರೇಲಿಯಾದಲ್ಲಿ ಎಲ್ಲ ಕಡೆ ದೊಡ್ಡ ದೊಡ್ಡ ಗೋಕ್ಷೇತ್ರಗಳು ಹಾಗೂ ಪ್ರಸಿದ್ಧವಾದ ಭವ್ಯವಾದ ಹಾಲಿನ ಡೈರಿಗಳು ತಲೆಎತ್ತಿಕೊಂಡು ಮೆರೆಯುತ್ತಿವೆ.

ಮುಂಬಯಿಯ 'ಸ್ಟಾರ್ ಆಫ್ ಇಂಡಿಯಾ' ಡೈರಿಯ ಸಂಚಾಲಕರಾದ ಶ್ರೀಯುತ ರಾಮಚಂದ್ರರಾವ್ ಕಾಜರೋಳಕಾರ್ ಅವರು ದಿನಾಂಕ 1–1–1948ರಲ್ಲಿ

ಸಿಡ್ನಿ ನಗರಕ್ಕೆ ಅಲ್ಲಿಯ ಹೈನೋದ್ಯಮವನ್ನು ಕುರಿತು ಅಭ್ಯಸಿಸಲು ಹೋಗಿದ್ದರು. ಅವರು ವಿಮಾನದಿಂದ ಅಲ್ಲಿ ಇಳಿದು ಕೂಡಲೇ ಸಿಡ್ನಿನಗರದಲ್ಲಿ ಕಂಡ ದೃಶ್ಯವನ್ನು ಕುರಿತು ಈ ಮುಂದಿನಂತೆ ಬರೆಯುತ್ತಾರೆ. 'ನಾನು ಸಿಡ್ನಿನಗರ ಕಂಡಕೂಡಲೇ ಹಾಲು ಹೈನಿನ ಆಗರ ದೇಶದಲ್ಲಿ ಬಂದಂತಾಗಿ ನನ್ನ ಮನಸ್ಸು ಆನಂದದಿಂದ ಪುಳಕಿತ ವಾಯಿತು, ಏಕೆಂದರೆ ನಮ್ಮಲ್ಲಿ ಎಲ್ಲಕಡೆ ಚಹಾ, ಕಾಫಿ ಹೋಟೆಲುಗಳು ಅಂಗಡಿಗಳು ಕಾಣುವಂತೆ ಇಲ್ಲಿ ಎಲ್ಲ ಕಡೆ ಹಾಲು ಕೆನೆ ಮತ್ತು ಗಿಣ್ಣು ಮಾರುವ ಮನೆಗಳು ಕಂಡು ಬಂದವು. ಇಲ್ಲಿ ಐಸ್‌ಕ್ರೀಮ್ ಹೇರಳವಾಗಿ ಮಾರಲ್ಪಡುತ್ತದೆ. ಐಸ್‌ಕ್ರೀಮನ್ನು ಜನರು ಬಹಳ ಪ್ರೀತಿಯಿಂದ ತಿನ್ನುತ್ತಿದ್ದನ್ನು ನಾನು ಕಂಡೆ. ಐಸ್‌ಕ್ರೀಮ್ ಇದು ಒಂದು ಆಸ್ಟ್ರೇಲಿಯಾ ಜನರ ರಾಷ್ಟ್ರೀಯ ಖಾದ್ಯವೆಂದು ತಿಳಿಯಲು ಅಡ್ಡಿಯಿಲ್ಲ" ಎಂದು ಬರೆದಿರುತ್ತಾರೆ. ಅವರು ಮೇಲ್‌ಬೋರ್ನ್‌ದಿಂದ ಮುಖ್ಯಹಾಲಿನ ಕೇಂದ್ರ ವನ್ನು ನೋಡಲು ಸುಮಾರು 130ಮೈಲು ಮೋಟಾರಿನಲ್ಲಿ ಹೊರಟಾಗ ರಸ್ತೆಯ ಎರಡು ಬಲಕ್ಕೂ ಮೈಲು ಮೈಲುಗಳಷ್ಟು ದೂರ ರಸಭರಿತವಾದ ಅಚ್ಚ ಹಸಿರು ಹುಲ್ಲು ಬೆಳೆದು ನಿಂತಿರುವುದನ್ನು ಮತ್ತು ಅವುಗಳ ಮಧ್ಯದಲ್ಲಿ ಸುಂದರವಾದ ದಷ್ಟ ಪುಷ್ಟವಾದ ಕೊಡಗೆಚ್ಚಲಾಕಳುಗಳು ನಿಂತಿರುವುದನ್ನು ನೋಡಿದ್ದೇನೆ ಎಂದು ಕೂಡ ಬರೆದಿರುತ್ತಾರೆ. ಜಗತ್ತಿನಲ್ಲಿ ಸರ್ವೋತ್ಕೃಷ್ಟ ಬೆಣ್ಣೆ ನ್ಯೂಜಿಲೆಂಡಿನಲ್ಲಿ ಹುಟ್ಟು ತ್ತದೆ. 'ಹ್ಯಾಮಿಲ್‌ಟನ್' ಇದು ನ್ಯೂಜಿಲೆಂಡಿನೊಳಗಿನ ಜಗತ್‌ಪ್ರಸಿದ್ಧವಾದ ದುಗ್ಧ ಕೇಂದ್ರ; ಹೋಬರ್ಟ್ ಎಂಬಲ್ಲಿ ಚಾಕಲೇಟ್ ಮತ್ತು ಟಾಫಿ ತಯಾರುಮಾಡುವ ಜಗತ್ತಿನಲ್ಲಿ ಪ್ರಸಿದ್ಧವಾದ 'ಕ್ಯಾಡ್‌ಬರಿ' ಫ್ಯಾಕ್ಟರಿ ಇದೆ. ಆಸ್ಟ್ರೇಲಿಯಾದಲ್ಲಿಯ ಎಲ್ಲ ಹಾಲಿನ ವ್ಯಾಪಾರ ಮಾಡುವ ಸಂಸ್ಥೆಗಳು ಈ ವ್ಯಾಪಾರದೊಡನೆ ಒಂದು ಬೇರೆ ಪೂರಕ ಉಪದಂಧೆಯನ್ನು ಇಟ್ಟೇ ಇಟ್ಟುಕೊಂಡಿರುತ್ತಾರೆ, ಹೀಗಾಗಿ ಹಾಲಿನ ಉದ್ಯೋಗ ಇಲ್ಲಿ ಬಹಳ ಯಶಸ್ವಿಯಾಗಿ ಮತ್ತು ಹೆಚ್ಚು ಫಲದಾಯಕವಾಗಿ ಸಾಗಿರುತ್ತದೆ.

ಬೇರೆ ದೇಶಗಳಿಗಿಂತ ನಮ್ಮಲ್ಲಿ ಗೋಸಂಪತ್ತು ವಿಪುಲವಿದ್ದಾಗ್ಯೂ ಸಹ ನಾವು ಪರರಾಷ್ಟ್ರಗಳಿಗಿಂತ ಹಾಲಿನ ಉತ್ಪಾದನೆಯಲ್ಲಿ ಹಿಂದುಳಿದಿರುವುದೇಕೆ ಮತ್ತು ಅವರು ಸಾಧಿಸಿರುವ ಪ್ರಗತಿಯ ರಹಸ್ಯವೇನು ? ಎಂಬುದನ್ನು ತಿಳಿಯಬೇಕಾದರೆ ನಾವು ಅಲ್ಲಿಯ ಪಶುಪಾಲನೆ, ಪೋಷಣೆ ಮತ್ತು ಸಂವರ್ಧನೆ ಹೇಗೆ ಆಧುನಿಕ ವೈಜ್ಞಾನಿಕ ರೀತಿಯಿಂದ ಸಹಕಾರ ತತ್ವದ ತಳಹದಿಯ ಮೇಲೆ ಯಶಸ್ವಿಯಾಗಿ ನಡೆದಿರುತ್ತದೆ ಮತ್ತು ಇದಕ್ಕೆ ಇನ್ನಿತರ ಸಹಾಯಕವಾದ ಸನ್ನಿವೇಶಗಳು ಯಾವುವು ಎಂಬ ವಿಷಯವನ್ನು ಪರಿಶೀಲಿಸಬೇಕಾಗುತ್ತದೆ. ಹೀಗೆ ಪರಿಶೀಲಿಸಿದಲ್ಲಿ ಆಸ್ಟ್ರೇಲಿಯಾದ ಅಧಿಕ ಹಾಲಿನ ಉತ್ಪಾದನೆಯ ಗುಟ್ಟು ರಟ್ಟಾಗುತ್ತದೆ.

ಆಸ್ಟ್ರೇಲಿಯಾದಲ್ಲಿಯ ಹಾಲಿನ ಉತ್ಪಾದನೆಯ ವ್ಯವಸಾಯವನ್ನು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು :

1. ಹಾಲನ್ನು ಉತ್ಪಾದಿಸುವ ಮತ್ತು ಹೆಚ್ಚಳ ಮಾಡುವಂಥ ಗೋಕ್ಷೇತ್ರಗಳು
2. ಹಾಲನ್ನು ಹಂಚುವ ಮತ್ತು ವಿನಿಯೋಗಮಾಡುವ ದುಗ್ಧಾಲಯಗಳು ಮತ್ತು ಸಹಕಾರಿ ಸಂಸ್ಥೆಗಳು.

(1) **ಗೋಕ್ಷೇತ್ರಗಳು** (ಪಶುಪಾಲನೆ) ಹಾಲು ಮತ್ತು ಅದರಿಂದ ಉತ್ಪತ್ತಿಯಾಗುವ ಪದಾರ್ಥಗಳ ವ್ಯಾಪಾರಮಾಡುವ ಆಸ್ಟ್ರೇಲಿಯಾದಲ್ಲಿರುವ ಎಲ್ಲ ದೊಡ್ಡ ದೊಡ್ಡ ಸಂಸ್ಥೆಗಳು ತಮ್ಮ ಸ್ವಂತ ಗೋಕ್ಷೇತ್ರಗಳನ್ನಾಗಲಿ, ಪಶುಗಳನ್ನಾಗಲಿ, ಬಹುಶಃ ಇಟ್ಟಿಲ್ಲವೆಂದು ಹೇಳಬಹುದು. ಅಲ್ಲಿಯ ದನಗಳನ್ನು ಪಾಲಿಸುವುದು, ಕಾಯುವುದೇ ಮೊದಲಾದ ಹಾಲಿನ ಉತ್ಪಾದನೆಯ ಎಲ್ಲ ಕೆಲಸಗಳನ್ನು ಬಹಳವಾಗಿ ಒಕ್ಕಲತನದ ರೈತ ಜನರೇ ಮಾಡುವರು. ಈ ಹಳ್ಳಿಗಳಲ್ಲಿರುವ ರೈತರ ಗೋಕ್ಷೇತ್ರಗಳೇ ಆಸ್ಟ್ರೇಲಿಯಾದ ಹಾಲಿನ ಉತ್ಪಾದನೆಯ ಉಗಮಸ್ಥಾನ. ಆ ದೇಶದಲ್ಲಿ ಬಹಳ ಮಟ್ಟಿಗೆ ಒಕ್ಕಲಿಗರಿಗೆ ಇಂಥ ಒಂದೊಂದು ಗೋಕ್ಷೇತ್ರಗಳು ಇದ್ದೇ ಇರುತ್ತವೆ. ಪ್ರತಿಯೊಂದು ಗೋಕ್ಷೇತ್ರದ ಕ್ಷೇತ್ರಫಲ ಸಾಧಾರಣವಾಗಿ 50 ರಿಂದ 1000 ಎಕರೆವರೆಗೂ ಇರುತ್ತದೆ. ಇದಕ್ಕನುಸಾರವಾಗಿ ಅಲ್ಲಿಯ ಪಶುಪಾಲಕರು ತಮಗೆ ಬೇಕಾದಷ್ಟು ಆಕಳುಗಳನ್ನು ಇಟ್ಟುಕೊಂಡು ಜೋಪಾಸನೆ ಮಾಡುವರು. ಈ ಗೋಕ್ಷೇತ್ರದ ಸಲುವಾಗಿ ಬೇಕಾಗುವ ಭೂಮಿಯು ತನ ಸ್ವಂತದ್ದಲ್ಲದಿದ್ದರೂ, ನಿಯಮಕ್ಕನುಸರಿಸಿ ತೆರಿಗೆಯನ್ನು ತುಂಬಿದೊಡನೆ ಅದು ಸರಕಾರದಿಂದ ದೊರಕುವುದು. ಬೇಸಿಗೆಯ ಕಾಲಕ್ಕೆ ಬೇಕಾಗುವ ಹುಲ್ಲಿನ ಸಲುವಾಗಿ ಮತ್ತು ಸಂಗ್ರಹಕ್ಕಾಗಿ ಈ ಕ್ಷೇತ್ರದೊಳಗಿನ ಕೆಲವು ಭಾಗವನ್ನು ಕಾದಿಟ್ಟು ಉಳಿದ ಕ್ಷೇತ್ರದ ಮೇಲೆ ಪ್ರತಿಯೊಂದು ಎಕರೆಗೆ ಒಂದು ಗೋವಿನಂತೆ ಇಲ್ಲಿಯ ಪಶುಪಾಲಕರು ಗೋವುಗಳನ್ನು ಸಾಕುವರು.

ಆಸ್ಟ್ರೇಲಿಯಾದಲ್ಲಿ ಹೋದಲ್ಲೆಲ್ಲಾ ಹುಲ್ಲು ಬೆಳೆಯುವ ಆಗರವೇ ಕಂಡುಬರುವುದು. ಹಸಿರು ಹುಲ್ಲು ಅಲ್ಲಿಯ ಹೈನೋತ್ಪಾದನೆ ಮಾಡುವ ಉದ್ಯೋಗದ ಸಫಲತೆಯ ಮುಖ್ಯ ಕಾರಣವಾಗಿದೆ. ಆಸ್ಟ್ರೇಲಿಯಾದಲ್ಲಿ ಯಾವ ಪ್ರದೇಶದಲ್ಲಿ ಹೈನದ ಉದ್ಯೋಗವು ಬಹು ದೊಡ್ಡ ಪ್ರಮಾಣದಲ್ಲಿ ಮಾಡಲ್ಪಡುವುದೋ ಆ ಪ್ರಾಂತದಲ್ಲಿಯ ರೈತರು ಸಾಮಾನ್ಯವಾಗಿ ರೊಕ್ಕದ ಬೆಳೆಯನ್ನು ಎಂದೂ ಬೆಳೆಯುವುದಿಲ್ಲ. ದನಗಳಿಗಾಗಿ ಹಸಿರು ಹುಲ್ಲು ಮತ್ತು ಮೇವಿನ ಬೆಳೆಯನ್ನು ಬೆಳೆಯುವರು. ಧಾನ್ಯದ

ಉತ್ಪಾದನೆಗಾಗಿ ನಿಶ್ಚಯಿಸಿದ ಭೂಮಿ ಪ್ರತ್ಯೇಕವಾಗಿರುತ್ತದೆ ಬೇಸಗೆ ಕಾಲದಲ್ಲಿ ಬೇಕಾಗುವ ಹುಲ್ಲಿನ ಬೆಳೆಯು ಸಲುವಾಗಿ ಅವಶ್ಯವಿದ್ದಷ್ಟು ಸ್ಥಳವನ್ನು ಬಿಟ್ಟು ಉಳಿದ ಜಾಗದಲ್ಲಿ ಅರ್ಧಭಾಗದಲ್ಲಿ ಹುಲ್ಲನ್ನು ಬೆಳೆಸುತ್ತಾರೆ ಮತ್ತು ಇದರಲ್ಲಿ ತಮ್ಮ ಹೈನ ದನಗಳನ್ನು ಯಾವಾಗಲೂ ಮೇಯಲು ಬಿಟ್ಟಿರುತ್ತಾರೆ. ಹೀಗೆ ಮೊದಲಿನ ಸ್ಥಳದಲ್ಲಿಯ ಹುಲ್ಲು ಮುಗಿಯುವುದರೊಳಗಾಗಿ ಇನ್ನುಳಿದ ಅರ್ಧಭಾಗದಲ್ಲಿ ಹದವಾಗಿ ಬೆಳೆದು ಬಂದ ಹುಲ್ಲಿನಲ್ಲಿ ದನಗಳನ್ನು ಮೇಯಲು ಬಿಡುತ್ತಾರೆ. ಹೀಗೆ ಕಾಲಕ್ಕೆ ಸರಿಯಾಗಿ ಗೋವುಗಳನ್ನು ಒಂದು ಹುಲ್ಲು ಗದ್ದೆಯಿಂದ ಮತ್ತೊಂದು ಹುಲ್ಲುಗದ್ದೆಗೆ ಮೇಯಲು ಬದಲಾಯಿಸುತ್ತಾರೆ. ಈ ಗದ್ದೆಗಳಲ್ಲಿ ಬೆಳೆದ ಹುಲ್ಲಿನ ಹೊರತು ಮತ್ತೆ ಯಾವ ಧಾನ್ಯವನ್ನು ದನಗಳಿಗೆ ಕೊಡುವ ಪದ್ಧತಿಯಿಲ್ಲ. ಈ ಗದ್ದೆಗಳಲ್ಲಿಯ ಹುಲ್ಲುಗಳು ಬಹಳ ಪುಷ್ಟಿಕರವಾಗಿಯೂ ರಸಭರಿತವಾಗಿಯೂ ಇರುತ್ತವೆ.

ಗೋವುಗಳ ವಾಸಕ್ಕಾಗಿ ಈ ಗದ್ದೆಗಳಲ್ಲಿಯೇ ಏರ್ಪಡಿಸಿರುತ್ತಾರೆ. ಇದರಿಂದ ಅವು ಬೆಳಗಿನಿಂದ ಸಾಯಂಕಾಲದವರೆಗೆ ತಮ್ಮ ಮನ ತೃಪ್ತಿಯಾಗುವವರೆಗೆ ಹೊಟ್ಟೆ ತುಂಬ ಮೇಯಲು ಅನುಕೂಲವಾಗುತ್ತದೆ. ಚಳಿಗಾಲದಲ್ಲಿ ದನಗಳಿಗೆ ಸ್ವಲ್ಪ ಹಿಂಡಿ ಮತ್ತು ಕುಂಬಳಕಾಯಿ ಇತ್ಯಾದಿ ತಿಂಡಿಗಳನ್ನು ಕೊಡುತ್ತಾರೆ. ದನಗಳಿಗೆ ಬೇಸಿಗೆಯಲ್ಲಿ ಬಿಸಿಲಿನ ತಾಪವಾಗಬಾರದೆಂದು ನೆರಳಿನ ಸಲುವಾಗಿ ಗಿಡಗಳನ್ನು ಬೆಳೆಸಿರುತ್ತಾರೆ. ಗದ್ದೆಯೊಳಗಿನ ಹಿತಕರವಾದ ಆಹ್ಲಾದಕರ ಹವೆ, ಅಲ್ಲಲ್ಲಿ ಶುದ್ಧವಾದ ನೀರು ಮತ್ತು ಸಮೃದ್ಧಿಯಾಗಿ ಯಥೇಚ್ಛವಾಗಿ ಬೆಳೆದು ನಿಂತಿರುವ ರಸಭರಿತವಾದ ಹಸಿಹುಲ್ಲು; ಇವುಗಳ ಮಧ್ಯದಲ್ಲಿ ಅಲ್ಲೊಂದು ಇಲ್ಲೊಂದು ನಿಂತಿರುವ ಸುಂದರವಾದ ಆಕಳುಗಳ ದೃಶ್ಯವು ಬಹು ಸುಂದರವಾಗಿ ಕಾಣುವುದರಲ್ಲಿ ಏನಾಶ್ಚರ್ಯ. ಈ ದೃಶ್ಯವನ್ನು ಗೋಕೈಲಾಸ ಎಂದು ಕರೆಯಬಹುದು.

ಈ ಎಲ್ಲ ಕಾರಣಗಳೂ ಅಲ್ಲಿಯ ಪ್ರತಿಯೊಂದು ದನವೂ ಸದೃಢವಾಗಿದ್ದು ಹೆಚ್ಚು ಹಾಲು ಕರೆಯಲು ಮುಖ್ಯ ಸಾಧನವಾಗಿರುತ್ತವೆ. ಅಲ್ಲಿ ಪ್ರತಿಯೊಂದು ಆಕಳು ಕರು ಹಾಕಿದ ನಂತರ 8 ರಿಂದ 10 ತಿಂಗಳವರೆಗೆ ಪ್ರತಿದಿನ 12 ಸೇರು ಹಾಲು ಕರೆಯುವುದು ಸಾಮಾನ್ಯ ದೃಶ್ಯ. ಈ ಎಲ್ಲ ಗೋಕ್ಷೇತ್ರಗಳೂ ಗಿಡಗಳ ಗುಂಪು ಹಾಗೂ ವಿಶಾಲವಾದ ಹಚ್ಚ ಹಸಿರು ಹುಲ್ಲುಗಾವಲುಗಳು ಮತ್ತು ಆರೋಗ್ಯಕರವಾದ ಸಬಲ ದನಗಳನ್ನೊಳಗೊಂಡಿದ್ದು ಗೋಕುಲಗಳು ನಂದನವನದಂತೆ ಕಾಣುತ್ತಾ ಪಶು ಸ್ವರ್ಗವೋ ಎಂಬಂತೆ ರಮಣೀಯವಾಗಿಯೂ ನಯನ ಮನೋಹರವಾಗಿಯೂ ಕಂಗೊಳಿಸುವುವು ಎಂದರೆ ಅತಿಶಯೋಕ್ತಿಯೇನಲ್ಲ.

ಗೋಸಂಗೋಪನೆ: ಆಸ್ಟ್ರೇಲಿಯಾದಲ್ಲಿ ಹಸುಗಳಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾಲಿನ ಉತ್ಪಾದನೆಗೆ ಅವುಗಳಿಗೆ ಸದಾ ಸಮೃದ್ಧಿಯಾಗಿ ಸಿಗುವ ಹಸಿ ಹುಲ್ಲು ಹೇಗೆ ಕಾರಣವೋ ಹಾಗೆಯೇ ಶ್ರೇಷ್ಠ ಕುಲದ ಕರುಗಳ ಹುಟ್ಟುವಳಿಯ ಬಗ್ಗೆ ಈ ಗೋಕ್ಷೇತ್ರಗಳ ಪಾಲಕರು ಹಗಲಿರುಳೂ ಸತತ ಪ್ರಯತ್ನಿಸುತ್ತಿರುವುದೂ ಸಹ ಅತಿ ಮುಖ್ಯವಾದ ಕಾರಣವಾಗಿದೆ. ಶ್ರೇಷ್ಠ ಕುಲಗಳಲ್ಲಿ ಜನಿಸಿದ ಎಲ್ಲ ದನಕರುಗಳ ವಂಶ ಪರಂಪರೆಯ ಹುಟ್ಟುವಳಿ ಟಿಪ್ಪಣಿಯನ್ನು (ವಂಶಾವಳಿ) ಕಾದಿಟ್ಟುಕೊಳ್ಳುವರು. ಇದರ ಸಹಾಯದಿಂದ ಹೊಸದಾಗಿ ದನಗಳನ್ನು ಕೊಂಡುಕೊಳ್ಳುವಾಗ ಪಶುಪಾಲಕರು ಆಯಾ ದನಗಳ ಚರಿತ್ರೆಯನ್ನು ಅರಿತು ಅವುಗಳು ಹೈನಕ್ಕೆ ಮುಂದೆ ಯೋಗ್ಯವಾಗುವುವೋ ಎಂಬುದನ್ನು ತಿಳಿಯಲು ಸಾಧನವಾಗುತ್ತದೆ.

ಮುಂದೆ ಗರ್ಭಾಶ್ರಯ ಹೊಂದುವ ಆಕಳು ಶ್ರೇಷ್ಠ ಹೈನ ಜಾತಿಯ ತಳಿಯ ಗೂಳಿ (ಹೋರಿ)ಯಿಂದಲೇ ಆಗಬೇಕೆಂದು ಪ್ರತಿಯೊಬ್ಬ ಗೋಕ್ಷೇತ್ರದ ಪಾಲಕನು ದಕ್ಷತೆವಹಿಸುವನು. ಒಂದು ವೇಳೆ ಸಕಾಲಕ್ಕೆ ಯೋಗ್ಯವಾದ ಹೋರಿ ಸಿಗದಂತಾದಲ್ಲಿ ಬೆದೆಗೆ ಬಂದ ಹಸುಗಳಿಗೆ ಕೃತಕ ರೀತಿಯ ಗರ್ಭಧಾರಣೆ ಮಾಡಿಸಲು ಸಾಧ್ಯವಿದೆ. ಈ ಕೆಲಸದಲ್ಲಿ ಸರ್ಕಾರ ಮತ್ತು ಸಹಕಾರಿ ದುಗ್ಧಸಂಸ್ಥೆಯಿಂದ ಪಶುಪಾಲಕರಿಗೆ ಎಲ್ಲ ತರಹದ ಸಹಾಯ ದೊರೆಯುತ್ತದೆ. ಹೀಗಾಗಿ ಶ್ರೇಷ್ಠ ಜಾತಿಯ ಹೈನ ದನಗಳ ಹುಟ್ಟುವಳಿಯು ಅಲ್ಲಿ ಹೆಚ್ಚು ಪರಿಶ್ರಮವಿಲ್ಲದೆ ಅಲ್ಪವೆಚ್ಚದಲ್ಲಿ ಆಗುತ್ತದೆ.

ದನಗಳ ಹುಟ್ಟುವಳಿಯು ಉತ್ತಮವಾಗಬೇಕು ಮತ್ತು ಉತ್ಕೃಷ್ಟರೀತಿಯಿಂದ ಪಶುಪಾಲನೆ ಮಾಡಲು ಪಶುಪಾಲಕರಿಗೆ ಇದರ ಉತ್ತೇಜನಾರ್ಥವಾಗಿ ಸಿಡ್ನಿ, ಮೆಲ್‌ಬೋರ್ನ್ ಮೊದಲಾದ ಮುಖ್ಯ ಪಟ್ಟಣಗಳಲ್ಲಿ ಪ್ರತಿವರ್ಷ ದನಗಳ ಪ್ರದರ್ಶನ ಏರ್ಪಡಿಸಿ ಉಚ್ಚಜಾತಿಯ ಮತ್ತು ದೋಷರಹಿತ ದನಗಳಿಗೆ ಬಹುಮಾನ ಕೊಡುತ್ತಾರೆ. ಅಲ್ಲಿಯ ಮುಖ್ಯ ಜಾತಿಯ ದನಗಳು ಯಾವುವೆಂದರೆ; (1) ಜರ್ಸಿ (2) ಹಿರ್‌ಫೋರ್ಡ್ (3) ಶಾರ್ಟ್ ಹಾರನ್ (4) ಆಯರಶಯರ್ (5) ಇಲಿವಾರ. ಈ 5 ಜಾತಿಯ ದನಗಳು ಹೆಚ್ಚಾಗಿ ಕಂಡುಬರುತ್ತವೆ. ಇವುಗಳಲ್ಲಿ ಜರ್ಸಿ ಮತ್ತು ಹೋಲಿಸ್ಟೀನ್–ಫ್ರೀಜಿಯನ್ ಆಕಳುಗಳು ಅಲ್ಲಿ ವಿಪುಲಹಾಲಿಗೆ ಹೆಸರಾದ ದನಗಳು. ಈ ಜಾತಿಯ ದನಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಾಕುವುದು ಕಂಡು ಬಂದಿದೆ.

ಹಸುಗಳು ಕರುಹಾಕಿದ ಕೂಡಲೇ ಅದರ ಕರುವನ್ನು ತಕ್ಷಣವೇ ತಾಯಿಯಿಂದ ಅಗಲಿಸಿ ದೂರ ಇಡುವುದು ಅಲ್ಲಿಯವರ ಪದ್ಧತಿ. ಹೀಗೆ ಅಗಲಿಸಿದ ಕರುವಿನ ವಯಸ್ಸಿಗನುಗುಣವಾಗಿ ಅದಕ್ಕೆ ಹಾಲನ್ನು ಕೈಯಿಂದ ಕುಡಿಸಿ ಸಾಕುತಾರೆ, ಅಲ್ಲದೆ

ಹತ್ತಿರ ಇರುವ ದುಗ್ಧ ಕಾರ್ಖಾನೆಯಿಂದ ಕೆನೆ ತೆಗೆದು ಹಸಿ ಹಾಲನ್ನು ತಂದು ಕೈಯಿಂದ ಕುಡಿಸಿ ಕರುವನ್ನು ಪೋಷಿಸುತ್ತಾರೆ. ಒಟ್ಟಿನ ಮೇಲ ಉಚ್ಚಜಾತಿಯ ಆಕಳಿಂದ ಮತ್ತು ಅದರಂತೆ ಶುದ್ಧಜಾತಿಯ ಉತ್ಕೃಷ್ಟ ಹೋರಿಯಿಂದ ಕೂಡಿ ಹುಟ್ಟಿದ ದನಗಳನ್ನು ಮಾತ್ರ ಪಾಲನೆ ಮಾಡುತ್ತಾರಲ್ಲದೆ ಉಳಿದೆಲ್ಲವನ್ನೂ ಕಸಾಯಿಖಾನೆಗಳಿಗೆ ಕಳಿಸುತ್ತಾರೆ. ಗದ್ದೆಯಲ್ಲಿ ಎಕರೆಗೆ ಒಂದು ದನಕ್ಕಿಂತ ಹೆಚ್ಚಾಗಿ ಸಾಕಿದಲ್ಲಿ ಉತ್ತಮ ಹೈನದನಗಳಿಗೆ ಆಹಾರ ಕೊರತೆ ಬರುತ್ತದೆ. ಆಹಾರ ಕೊರತೆ ಬರದಂತೆ ಹೆಚ್ಚು ದನಗಳನ್ನು ತೆಗೆದು ಬಿಡುವುದು ಅವರಿಗೆ ಯೋಗ್ಯವೆಂದು ಕಂಡು ಬಂದಿದೆ.

ಕರುಹಾಕಿದ 3ತಿಂಗಳಿಗೆ ಪ್ರತಿಯೊಂದು ಆಕಳನ್ನು ಮತ್ತೆ ಹೋರಿಯ ಹತ್ತಿರ ಒಯ್ದುಬಿಡುತ್ತಾರೆ. ಇಲ್ಲವೆ ಕೃತ್ರಿಮರೀತಿಯಿಂದ ಗರ್ಭಧಾರಣೆ ಮಾಡಿಸುತ್ತಾರೆ. ಯಾವ ಆಕಳುಗಳಿಂದ ಗೂಳಿ ಬಿಟ್ಟೊಡನೆ ಹುಟ್ಟುವಳಿಯು ಸರಿಯಾಗಿ ಆಗದಿದ್ದು ಕಂಡುಬಂದಲ್ಲಿ ಆ ಆಕಳು ಬಂಜೆ ಎಂದು ತಿಳಿದು ಅವನ್ನು ತೆಗೆದುಬಿಡುತ್ತಾರೆ. ಹೀಗೆ ಆಸ್ಟ್ರೇಲಿಯಾದಲ್ಲಿಯ ಎಷ್ಟೋ ದುಗ್ಧಕೇಂದ್ರಗಳ ಕಕ್ಷೆಯಲ್ಲಿರುವ ಇಂಥ ನೂರಾರು ಸಣ್ಣ ದೊಡ್ಡ ಗೋಕ್ಷೇತ್ರಗಳೇ ಅಲ್ಲಿಯ ಹಾಲಿನ ಉತ್ಪಾದನೆಯ ಉಗಮಸ್ಥಾನ. ಏಕೆಂದರೆ ಪಶುಪಾಲನೆ, ಪೋಷಣೆ, ಆರೋಗ್ಯ, ವರ್ಗವಾರಿ ಸುಧಾರಣೆ, ಹಾಲಿನ ಉತ್ಪಾದನೆ ಮತ್ತು ಪೂರೈಕೆ ಈ ಎಲ್ಲ ಕಾರ್ಯಗಳಿಗೆ ಈ ಗೋಕ್ಷೇತ್ರಗಳೇ ಮಾತೃಸ್ಥಾನ.

ಹಾಲು ಕರೆಯುವ ವಿಧಾನ ನಮ್ಮಲ್ಲಿಯಂತೆ ಅಲ್ಲಿಯೂ ಸಹ ದಿನಕ್ಕೆ ಎರಡು ಸಾರಿ ಹಾಲು ಹಿಂಡುವ ಪದ್ಧತಿ ಇದೆ. ಹುಲ್ಲು ಗದ್ದೆಯೊಳಗೆ ಮೇಯುವ ಗೋವುಗಳ ಹಿಂಡನ್ನು ಬೆಳಿಗ್ಗೆ ಮತ್ತು ಸಾಯಂಕಾಲಕ್ಕೆ ಒಟ್ಟುಗೂಡಿಸಿ ಯಂತ್ರದ ಸಹಾಯದಿಂದ ಹಾಲುಹಿಂಡುವರು. ಗದ್ದೆಗಳಲ್ಲಿಯ ಹಸುಗಳ ಹಿಂಡನ್ನು ಒಟ್ಟುಗೂಡಿಸಿ ತಿರುವಿಕೊಂಡು ಹಾಲುಹಿಂಡುವ ಸ್ಥಳಕ್ಕೆ ತರುವ ಕೆಲಸವನ್ನು ಕೇವಲ ನಾಯಿಗಳಿಂದಲೇ ಮಾಡಿಸಿಕೊಳ್ಳುತ್ತಾರೆ. ಈ ಕೆಲಸದ ಸಲುವಾಗಿ ನಾಯಿಗಳು ಕಲಿತು ತಮ್ಮ ಜಾಣತನವನ್ನು ತೋರಿಸುತ್ತವೆ. ಇವು 50ರಿಂದ 100 ಆಕಳುಗಳ ಹಿಂಡನ್ನು ಒಟ್ಟುಗೂಡಿಸಿ ತಿರುವಿಕೊಂಡು ಬರುವುವು ಮತ್ತು ರಕ್ಷಣೆ ಮಾಡಿ ಹಿಂಡುವ ಸ್ಥಳಕ್ಕೆ ತಂದು ಬಿಡುವುವು. ಹೀಗೆ ದನಗಳನ್ನು ಕಾಯುವ ಮತ್ತು ಕುರಿ ಹಿಂಡನ್ನು ರಕ್ಷಿಸುವ ಕೆಲಸವಲ್ಲಿ ಕಲಿತ ನಾಯಿಗಳನ್ನು ಉಪಯೋಗಿಸುವುದರಿಂದ ಈ ಕೆಲಸದಲ್ಲಿ ತೊಡಗಿರುವ ಮನುಷ್ಯನು ಹೊಲದ ಇನ್ನುಳಿದ ಕೆಲಸ ಮಾಡುವುದಕ್ಕೆ ಅನುಕೂಲವಾಗಿ ಅದರಿಂದ ಹಣ ಉಳಿತಾಯ ಮಾಡಿಕೊಳ್ಳುವುದು ಸಾಧ್ಯವಿದೆ.

ನಮ್ಮಲ್ಲಿಯಂತೆ ಅಲ್ಲಿ ಕೈಯಿಂದ ಹಾಲು ಕರೆಯುವ ಪದ್ಧತಿ ಇಲ್ಲವೇ ಇಲ್ಲ. ಏಕೆಂದರೆ ಒಬ್ಬೊಬ್ಬ ರೈತನ ಬಳಿಯಲ್ಲಿ ವಿಪುಲ ಗೋವುಗಳಿರುವುದರಿಂದ ಕೇವಲ

ಕೈಯಿಂದ ಹಾಲು ಹಿಂಡುತ್ತಾ ಕಾಲವ್ಯಯ ಮಾಡುವುದು ಸಾಧ್ಯವೇ ಇಲ್ಲ. ಇದಕ್ಕಾಗಿ ಪ್ರತಿಯೊಬ್ಬ ಗೋಕ್ಷೇತ್ರಚಾಲಕನು ತನ್ನ ಬಳಿಯಲ್ಲಿ ಒಂದೊಂದು ಯಂತ್ರವನ್ನು ಇಟ್ಟಿರುತ್ತಾನೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಹಳ್ಳಿಗಳಲ್ಲಿಯೂ ಸಹ ವಿದ್ಯುತ್ತನ್ನು ಪೂರೈಸಿರುವುದರಿಂದ ಹೊಲದ ಕೆಲಸಗಳು ಮತ್ತು ಹಾಲು ಹಿಂಡುವ ಯಂತ್ರಗಳ ಕೆಲಸವು ಈ ವಿದ್ಯುತ್ ಶಕ್ತಿಯಿಂದಲೇ ನಡೆಯುತ್ತದೆ ಮತ್ತು ಪ್ರತಿಯೊಂದು ಆಕಳು ಹಾಲು ಹಿಂಡಿದ ಲೆಕ್ಕವನ್ನು ತಪ್ಪದೇ ಈ ಯಂತ್ರಗಳು ತೋರಿಸುತ್ತವೆ. ಈ ಯಂತ್ರದ ಸಹಾಯದಿಂದ ಒಂದು ತಾಸಿನಲ್ಲಿ ಸುಮಾರು 100 ಆಕಳುಗಳ ಹಾಲು ಹಿಂಡಬಹುದು.

ಹಾಲು ಹಿಂಡಿದ ನಂತರ ಅದನ್ನು ಡಬ್ಬಿಗಳಲ್ಲಿ ತುಂಬಿ ಸೀಲು ಮಾಡಿ ತಮ್ಮ ಗೋಕ್ಷೇತ್ರಗಳ ಹತ್ತಿರದ ರಸ್ತೆಯ ಬದಿಗೆ ತಮ್ಮ ವಿಳಾಸವನ್ನು ಹಾಕಿ ಇಡುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ನಿರ್ದಿಷ್ಟ ಕಾಲಕ್ಕೆ ಹತ್ತಿರ ಇರುವ ಸಹಕಾರಿ ದುಗ್ಧಾಲಯದ ವಾಹನದಿಂದ ಈ ಹಾಲು ಮುಖ್ಯ ದುಗ್ಧಾಲಯ ಕೇಂದ್ರಗಳಿಗೆ ಸಾಗಿಸಲ್ಪಡುತ್ತದೆ.

ದುಗ್ಧಶಾಲೆಗಳು ಮತ್ತು ಸಹಕಾರಿ ಸಂಸ್ಥೆಗಳು

ಈ ಎಲ್ಲ ಗೋಕ್ಷೇತ್ರಪಾಲಕರು ತಮ್ಮ ಹಳ್ಳಿಯ ಹತ್ತಿರ ಇರುವ ಮುಖ್ಯ ಹಾಲಿನ ಕೇಂದ್ರ ದುಗ್ಧಾಗಾರದ ಪಾಲುಗಾರ ಸಭಾಸದಸ್ಯರಿರುತ್ತಾರೆ. ಈ ಕೇಂದ್ರಗಳು ಪರಸ್ಪರ ಸಹಕಾರಿ ತತ್ವದ ಮೇಲೆ ನಡೆಯುತ್ತವೆ. ಅವರಿಂದ ಒಕ್ಕಲಿಗರಿಗೆ ಹೈನದ ಉತ್ಪತ್ತಿ ಸಲುವಾಗಿ ವಿಪುಲ ಲಾಭಸಿಗುತ್ತದೆ. ದುಗ್ಧಕೇಂದ್ರಕ್ಕೆ ಹಾಲು ಪೂರೈಸಿದ ನಂತರ ಅಲ್ಲಿ ಹಾಲಿನ ಪರೀಕ್ಷೆಯಾದೊಡನೆ, ಹಾಲಿನ ಗುಣಕ್ಕನುಗುಣವಾಗಿ ಅದರ ದರವು ನಿಶ್ಚಯಿಸಲ್ಪಡುತ್ತದೆ. ಪ್ರತಿಯೊಬ್ಬ ಹಾಲು ಪೂರೈಸುವವನಿಗೆ ಈ ಕೇಂದ್ರದಿಂದ ವಾರಕ್ಕೊಮ್ಮೆ ಹಾಲಿನ ಬೆಲೆಯನ್ನು ಕೊಡುತ್ತಾರೆ. ಇದಲ್ಲದೆ ಪ್ರತಿ ವರ್ಷ ಕೇಂದ್ರಕ್ಕಾಗುವ ಲಾಭದೊಳಗಿನ ಪ್ರಮಾಣವನ್ನನುಸರಿಸಿ ವರಮಾನ ಆತನಿಗೆ ಸಿಗುತ್ತದೆ. ಹಾಲಿನ ಕೇಂದ್ರದ ಪಾಲುಗಾರನಿರುವುದರಿಂದ ಪಶುಪಾಲನೆ ಮಾಡುವ ಪ್ರತಿಯೊಬ್ಬ ರೈತನಿಗೆ ಅದರ ಸಲುವಾಗಿ ಬೇರೆ ತರಹದ ಸಹಾಯ ಸವಲತ್ತುಗಳು ದೊರೆಯುವುವು.

ಆಸ್ಟ್ರೇಲಿಯಾದ ಹಾಲು ಹೈನದ ಉತ್ಪತ್ತಿಯ ಮೇಲ್ಮೆ ಮುಖ್ಯ ನಿಯಂತ್ರಣವು ಆಸ್ಟ್ರೇಲಿಯನ್ ಹಾಲು ಉತ್ಪಾದಕರ ಸಂಘ—ಈ ಸಂಸ್ಥೆಯ ಕಡೆಗೆ ಇರುತ್ತದೆ. ಈ ಸಂಸ್ಥೆಯಲ್ಲಿ 12 ಸಭಾಸದರಿರುವರು. ಇವರು ಬೇರ ಬೇರೆ ಸಂಸ್ಥೆ ಮತ್ತು ಸಹಕಾರಿ ಸಂಸ್ಥೆ ಮತ್ತು ಇನ್ನುಳಿದ ಸಂಘದ ವತಿಯಿಂದ ನಡೆದ ಚುನಾವಣೆಯಲ್ಲಿ ಆರಿಸಿ

ಬಂದವರಿರುತ್ತಾರೆ. ಹಾಲು, ಬೆಣ್ಣೆ, ಖೋವಾ, ಕೇಸಿನ್, ಕ್ರೀಮ್ ಮತ್ತು ಹಾಲಿನ ಪುಡಿ ಇವುಗಳ ರಫ್ತು ಈ ಬೋರ್ಡಿನ ಅನುಮತಿ ಇಲ್ಲದೆ ಹೊರದೇಶಕ್ಕೆ ಆಗಲಾರದು. ಹಾಲು ಮತ್ತು ಅದರಿಂದ ಉತ್ಪನ್ನವಾಗುವ ಪದಾರ್ಥಗಳ ಬೆಲೆಯನ್ನು ಜಗತ್ತಿನಲ್ಲಿ ನಡೆದ ಪೇಟೆ ದರವನ್ನು ಅರಿತು ಈ ಸಂಘದ ವತಿಯಿಂದ ನಿಶ್ಚಯಿಸಲಾಗುತ್ತದೆ. ತರತರಹದ ಹಾಲಿನ ಪದಾರ್ಥಗಳ ಗುಣಾನುಕ್ರಮವನ್ನು ಇದೇ ಗೊತ್ತುಪಡಿಸುವುದು. ಈ ಬೋರ್ಡಿನವರು ಆಮದು ರಫ್ತುಧೋರಣೆಯನ್ನು ಸರಕಾರದಿಂದ ಬೇಕಾಗುವ ಎಲ್ಲ ಸಹಾಯಗಳನ್ನು ಮತ್ತು ಸವಲತ್ತುಗಳನ್ನು ಈ ಉದ್ಯೋಗದ ಅಭಿವೃದ್ಧಿಯ ಸಲುವಾಗಿ ಎಲ್ಲ ಗೋಕ್ಷೇತ್ರಪಾಲಕರಿಗೆ ದೊರಕಿಸುವುದು.

ಬೇರೆ ಬೇರೆ ಗೋಕ್ಷೇತ್ರಗಳಿಂದ ಹಾಲನ್ನು ಶೇಖರಿಸಿ, ಕೇಂದ್ರಗಳಿಗೆ ಮುಟ್ಟಿಸುವ ಕೆಲಸವನ್ನು ಸಹಕಾರಿ ದುಗ್ಧಾಲಯವು ಮಾಡುತ್ತದೆ. ಈ ಹಾಲಿನ ದರವೇ ಬೇರೆ, ಪಟ್ಟಣಗಳಲ್ಲಿ ಹಂಚುವ ಹಾಲಿನ ಸಂಸ್ಥೆಯ ದರವೇ ಬೇರೆ. ಈ ಎಲ್ಲ ದರಗಳನ್ನು ಸಹ ಮೇಲೆ ಹೇಳಿದ ಹಾಲು ಉತ್ಪಾದಕರ ಸಂಘದ (ಡೈರಿ ಪ್ರೊಡ್ಯೂಸರ್ ಬೋರ್ಡ್) ಒಪ್ಪಿಗೆಯಿಂದಲೇ ನಿಶ್ಚಯಿಸಲಾಗುವುದು. ಪಟ್ಟಣದಲ್ಲಿ ಹಾಲು ಹಂಚುವಿಕೆಯನ್ನು ಮುಂಜಾನೆ ಒಂದು ಸಾರಿ ಮಾತ್ರ ಮಾಡುತ್ತಾರೆ. ಅದರ ಉಪಯೋಗವನ್ನು ಗ್ರಾಹಕರು ಎರಡು ಹೊತ್ತು ಮಾಡಿಕೊಳ್ಳುವರು. ಪಟ್ಟಣದಲ್ಲಿಯ ಹಾಲನ್ನು ಪೂರೈಸುವವರು ಅದನ್ನು ಪಾಶ್ಚರೀಕರಣಗೊಳಿಸಿ ಸೀಸೆಯಲ್ಲಿ ತುಂಬಿ ಹಂಚುತ್ತಾರೆ. ಈ ಉದ್ಯೋಗವು ಇಷ್ಟು ಯಶಸ್ವಿಯಾಗಿ ನಡೆಯಲು ಅಲ್ಲಿಯ ಜನರು ಈ ದುಗ್ಧವ್ಯವಸಾಯವನ್ನು ಒಂದು ರಾಷ್ಟ್ರೀಯ ಉದ್ಯೋಗವೆಂಬ ಉದಾತ್ತ ಭಾವನೆಯಿಂದ ನಡೆಸುತ್ತಿರುವುದೇ ಮುಖ್ಯ ಕಾರಣವೆಂದರೆ ತಪ್ಪಾಗಲಾರದು.

ಹಾಲಿನ ಮಾರಾಟದ ಉದ್ಯೋಗದೊಂದಿಗೆ ಅಲ್ಲಿಯ ಎಲ್ಲ ಹಾಲಿನ ಕೇಂದ್ರಗಳಲ್ಲಿ ಹಾಲಿನಿಂದ ತಯಾರಿಸಿದ ಪದಾರ್ಥಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ಬೇರೆ ಬೇರೆ ದೇಶಗಳಿಗೆ ಕಳುಹಿಸುತ್ತಾರೆ. 'ವಾಯುಟೀ' ವಾದಲ್ಲಿ ಹಾಲಿನ ಪುಡಿ ತಯಾರು ಮಾಡುವ ಒಂದು ದೊಡ್ಡ ಕಾರ್ಖಾನೆ ಇದೆ. ಇಲ್ಲಿ ಏಕಕಾಲಕ್ಕೆ 4 ದೊಡ್ಡ ಯಂತ್ರಗಳು ಕೆಲಸ ಮಾಡುತ್ತವೆ. ಅಲ್ಲಿ ಸಿಂಪರಣೆ ಪದ್ಧತಿಯಿಂದ ಹಾಲಿನ ಪುಡಿ ತಯಾರಾಗುತ್ತದೆ; ಯಂತ್ರದೊಳಗಿನ ಭಾಗವನ್ನು ಅತಿಶಯವಾಗಿ ಕಾಯಿಸಲಾಗುತ್ತದೆ. ಈ ಕಾದಯಂತ್ರದ ಮೇಲೆ ಕೆನೆ ತೆಗೆದ ಹಾಲಿನ ತುಂತುರು ಹನಿಗಳನ್ನು ಹಾರಿಸಲಾಗುತ್ತದೆ. ಹಾಲಿನ ಹನಿಗಳು ಕಾದಯಂತ್ರದ ಭಾಗದ ಮೇಲೆ ಸಿಡಿದೊಡನೆ ಅದು ಆಗಿಂದಾಗ್ಗೆ ಒಣಗಿ ಪುಡಿಯಾಗಿ ಕೆಳಗೆ ಬೀಳುವುದು. ಈ ಕಾರ್ಖಾನೆಯೊಳಗಿನ ಹಾಲಿನ ಪುಡಿಯನ್ನು ಬಹಳವಾಗಿ ಗ್ರೇಟ್ ಬ್ರಿಟನ್ನಿಗೆ ಪೂರೈಸಲಾಗುತ್ತದೆ. ಇದರ

ಹೊರತು ಈ ಕಾರ್ಖಾನೆಯೊಳಗೆ ಶುದ್ಧ ಸಂಪೂರ್ಣ ಹಾಲು ಮತ್ತು ಕೆನೆ ತೆಗೆದ ಹಾಲು ತಯಾರಾಗುತ್ತವೆ. ಇಲ್ಲಿಂದ 10 ಮೈಲಿ ದೂರದಲ್ಲಿ 'ಮಾತುಂಗಿ' ಎಂಬಲ್ಲಿ ಮೇಲೆ ಹೇಳಿದ ಕಂಪನಿಯು ಸ್ನಿಗ್ಧ(ಗಟ್ಟಿ) ಡಬ್ಬಿ ಹಾಲು ಮಾಡುವ ಕಾರ್ಖಾನೆ ಇದೆ. ಇಲ್ಲಿ ಒಂದು ಪೌಂಡಿನ ಡಬ್ಬಿ ತುಂಬುವ ಕೆಲಸವು ನಡೆದಿರುತ್ತದೆ. ಡಬ್ಬಿಗಳನ್ನು ತುಂಬುವುದು, ಅವುಗಳನ್ನು ತಯಾರು ಮಾಡುವ ಯಂತ್ರಗಳೆಲ್ಲ ಈ ಫ್ಯಾಕ್ಟರಿಯಲ್ಲಿರುತ್ತವೆ. ಈ ಯಂತ್ರಗಳಿಗೆ ಪ್ರತಿದಿನ ಬೇಕಾಗುವ ಡಬ್ಬಿಗಳನ್ನು ಮಾಡುವುದಕ್ಕೆ ಆ ಕಾರ್ಖಾನೆಗೆ ಪ್ರತಿದಿನಕ್ಕೆ 26 ಟನ್ ತೆಳುವಾದ ತಗಡು ಬೇಕಾಗುವುದು. ಕಾರ್ಖಾನೆಯು ಬಹಳ ವಿಶಾಲವಾಗಿರುವುದರಿಂದ ಅಲ್ಲಿನ ಒಳಗಿನ ವ್ಯವಹಾರವು ನಡೆಯುವುದಕ್ಕಾಗಿ ರೈಲ್ವೆಹಾದಿ ಹಾಕಿಕೊಂಡಿರುತ್ತಾರೆ. ಈ ಕಾರ್ಖಾನೆಯೊಳಗೆ ಪ್ರತಿದಿನ ನಾಲ್ಕು ಡಬ್ಬಿ ವ್ಯಾಗೀನ್ ಆಸ್ಟ್ರೇಲಿಯಾದೊಳಗಿನ ಮೆಲ್‌ಬೋರ್ನ್, ಕ್ಯಾನ್‌ಬೇರಾ, ಆಡಿಲೆಡ್, ಪರ್ತ್, ಹೋಬರ್ಟ್‌ಗಳಲ್ಲಿ ಮತ್ತು ನ್ಯೂಜಿಲೆಂಡ್‌ದೊಳಗಿನ ಆಡಿಲೆಡ್, ವೆಲಿಂಗ್‌ಟನ್, ಹ್ಯಾಮಿಲ್‌ಟನ್, ರೋಟೋರಿಯೋ ಈ ಪಟ್ಟಣಗಳಲ್ಲಿ ಬೆಣ್ಣೆ, ಖೋವಾ, ಹಾಲಿನಪುಡಿ, ಸ್ನಿಗ್ಧಹಾಲು ಕೇಸಿನ್, ಐಸ್‌ಕ್ರೀಮ್ ಪದಾರ್ಥಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳಿವೆ.

ಜಗತ್ತಿನಲ್ಲಿಯೇ ದೊಡ್ಡದಾದ ಡೈರಿ ಇರುವುದು ನ್ಯೂಜಿಲೆಂಡಿನಲ್ಲಿ. ನ್ಯೂಜಿಲೆಂಡ್‌ನ ಬೆಣ್ಣೆ ಸರ್ವೋತ್ಕೃಷ್ಟವಾದ ಬೆಣ್ಣೆ. ಇಲ್ಲಿಂದ ಬೆಣ್ಣೆಯು ನಾನಾ ದೇಶಗಳಿಗೆ ರಫ್ತಾಗುತ್ತದೆ. ಇಲ್ಲಿ ಒಂದು ಕಾರ್ಖಾನೆಯಲ್ಲಿ ಹಾಲಿನಿಂದ ಕೇಸಿನ್ ತಯಾರಾಗುತ್ತದೆ. ಆಗ ತಾನೇ ಹಿಂಡಿದ ಹಾಲಿನಿಂದ ಕೆನೆ ತೆಗೆದು, ಕೆನೆಯಿಂದ ಬೆಣ್ಣೆ ತೆಗೆಯುತ್ತಾರೆ ಮತ್ತು ಉಳಿದ ಸತ್ವವಿಲ್ಲದ ಹಾಲಿನಿಂದ ಕೇಸಿನ್ ತಯಾರು ಮಾಡುವರು. ಕೇಸಿನ್ ತಯಾರು ಮಾಡುವ ಗ್ರಾಯಿಂಗ್ ಪ್ಲಾಂಟ್ ಬಹಳ ದೊಡ್ಡದಾಗಿರುತ್ತದೆ, ಇಂದಿನ ಉದ್ಯೋಗದ ಜಗತ್ತಿನಲ್ಲಿ ಕೇಸಿನ್‌ಗೆ ಹೆಚ್ಚಿನ ಬೇಡಿಕೆಯಿದೆ. ಕೇಸಿನ್‌ನಿಂದ ಗುಂಡಿಗಳು, ಬಾಚಣಿಗೆ, ಬಾಗಿಲ ಕೈಹಿಡಿಗಳು, ಚಾಕುವಿನ ಹಿಡಿಗಳು, ಕನ್ನಡಿಯ ಕಟ್ಟು, ದೀಪಗಳಿಗೆ ಉಪಯೋಗಿಸುವ ತರತರಹದ ಸಾಮಾನುಗಳು, ಬಿಲಿಯರ್ಡ್ಸ್ ಚೆಂಡುಗಳು ಹಾಗೂ ಇನ್ನೂ ಎಷ್ಟೋ ವಸ್ತುಗಳು ತಯಾರಾಗುತ್ತವೆ. ಈ ಕಾರ್ಖಾನೆಯ ಮಹತ್ವವು ನ್ಯೂಜಿಲೆಂಡ್‌ದ ಜೀವನದಲ್ಲಿ ಬಹು ದೊಡ್ಡದಾಗಿದೆ.

ಹೆಮಿಲ್ಟನ್ನಿನಿಂದ ಸ್ವಲ್ಪ ದೂರದಲ್ಲಿರುವ ಕೇಂಬ್ರಿಜ್ ಎಂಬ ಪಟ್ಟಣದಲ್ಲಿ ಸತ್ತ ದನಗಳ ಚರ್ಮವನ್ನು ಸುಲಿಯುವ ಒಂದು ಫ್ಯಾಕ್ಟರಿಯಿದೆ. ಇಲ್ಲಿಯ ಯಂತ್ರ ಸಹಾಯದಿಂದ ಸತ್ತ ದನಗಳ ಚರ್ಮವನ್ನು ಕೇವಲ 5 ನಿಮಿಷಗಳಲ್ಲಿ ಸುಲಿಯುತ್ತಾರೆ. ಇವರ ಜೊತೆಯಲ್ಲಿ ಇಲ್ಲಿ ತೊಗಲು ಹದ ಮಾಡುವ ಕೆಲಸವೂ ಸಹ ಆಗುತ್ತದೆ.

ದನಗಳ ಎಲುಬುಗಳು ಮತ್ತು ಇನ್ನಿತರ ಗ್ರಂಥಿಗಳಿಂದ ಉಪಯೋಗಕ್ಕೆ ಬರುವ ಪದಾರ್ಥಗಳನ್ನು ಸಿದ್ಧಪಡಿಸುವ ಕೆಲಸವೂ ಸಹ ಇಲ್ಲಿ ನಡೆಯುತ್ತದೆ. ಹೀಗೆ ಅಲ್ಲಿ ದನಗಳಿಂದ ಎಲ್ಲ ತರಹದಲ್ಲಿ ಸಂಪೂರ್ಣ ಲಾಭವನ್ನು ಪಡೆಯುವರು.

ಹೈನದ ಉದ್ಯೋಗವನ್ನು ಮಾಡಿ ಉಳಿದ ಹೊತ್ತಿನಲ್ಲಿ ಕೆಲವು ಗೋಕ್ಷೇತ್ರದ ಪಾಲಕರು ಕೋಳಿ, ಜೇನು, ಕುರಿ ಮತ್ತು ಹಂದಿ ಸಾಕುವ ಉಪದಂಧೆಗಳನ್ನು ಮಾಡುತ್ತಾರೆ. ಹಾಲಿನ ಪುಡಿಯಂತೆ ಕೋಳಿ ತತ್ತಿಯ ಪುಡಿ ಮತ್ತು ಹಂದಿ ಮಾಂಸ, ದನದ ಮಾಂಸ ಇವುಗಳನ್ನು ಜಗತ್ತಿನ ನಾನಾ ಭಾಗಗಳಿಗೆ ರಫ್ತು ಮಾಡುವರು. ದನಗಳು ಮೇಯ್ದುಬಿಟ್ಟ ಹುಲ್ಲುಗದ್ದೆಯೊಳಗಿನ ಉಳಿದ ಹುಲ್ಲನ್ನು ಕುರಿ, ಹಂದಿಗಳಿಗೆ ಮೇಯಿಸಿ ಅದರಿಂದ ವಿಪುಲ ಲಾಭ ಪಡೆಯುವರು. ಅಲ್ಲದೆ ಹೋಬರ್ಟ್ ಎಂಬಲ್ಲಿ ಕೆಲವು ಗೋಕ್ಷೇತ್ರಪಾಲಕರು ಪೂರಕ ಉದ್ಯೋಗವೆಂದು ಹಣ್ಣಿನ ತೋಟಗಳನ್ನು ಮಾಡಿ ಹಣ್ಣುಹಂಪಲು ಬೆಳೆದು ಮಾರಾಟ ಮಾಡುತ್ತಾರೆ. ನಾವು ಇಂದು ಮುಂಬಯಿ ಮೊದಲಾದ ಪೇಟೆಗಳಲ್ಲಿ ನೋಡುವ ಉತ್ಕೃಷ್ಟವಾದ ಹೆಸರುವಾಸಿಯಾದ I×L ಜೇವರ್ಸ್ ಇಲ್ಲಿಯೇ ತಯಾರಾದುದು.

ಈ ಪ್ರಕಾರ ಆಸ್ಟ್ರೇಲಿಯಾದ ರೈತರು ಪಶುಪಾಲನ, ಪೋಷಣೆ, ಸಂವರ್ಧನೆ ಮತ್ತು ಸುಧಾರಣೆಗಳನ್ನು ಅತ್ಯಾಧುನಿಕ ವೈಜ್ಞಾನಿಕ ತಳಹದಿಯ ಮೇಲೆ ಸಹಕಾರಿ ತತ್ವದಿಂದ ಸಾಗಿಸುತ್ತಿರುವುದೇ ಅಲ್ಲಿಯ ಅಧಿಕ ಹಾಲಿನ ಉತ್ಪಾದನೆಯ ರಹಸ್ಯ.

ಹನ್ನೊಂದು ಬಹುಮಾನ ಪಡೆದ ಶ್ರೇಷ್ಠ ತಳಿಯ ಬ್ರಾಹ್ಮಣೀ ಭಾರತೀಯ ಆಕಳೊಂದನ್ನು ಇತ್ತೀಚೆಗೆ 13 ಸಾವಿರ ಆಸ್ಟ್ರೇಲಿಯನ್ ಡಾಲರುಗಳಿಗೆ ಮಾರಲಾಯಿತೆಂದು ಮೆಲ್‌ಬೋರ್ನ್‌ದಿಂದ ಬಂದ ವರದಿಯಿಂದ ತಿಳಿದಿದೆ,

ಆಸ್ಟ್ರೇಲಿಯಾದಲ್ಲಿ ಈವರೆಗೂ ಯಾವ ತಳಿಯ ಆಕಳಿಗೂ ಇಷ್ಟು ಅತ್ಯಧಿಕ ಮೊತ್ತದ ಬೆಲೆ ಲಭಿಸಿಲ್ಲವೆಂದು ಹೇಳಲಾಗುತ್ತಿದೆ. ಇಂಥ ಶ್ರೇಷ್ಠ ಆಕಳ ತಳಿಗಳು ಭಾರತದಲ್ಲಿ ಕಾಣಸಿಗುವುದು ದುರ್ಲಭವಾಗಿದೆಯೆಂಬ ಅಂಶವನ್ನು ಇದು ಎತ್ತಿ ತೋರಿಸುತ್ತದೆ.

ಭಾರತದಲ್ಲಿ ಸಾಮಾನ್ಯ ಹಿಂಡುವ ಆಕಳಿಂದ ಹಾಲಿನ ಉತ್ಪತ್ತಿಯ ಪ್ರಮಾಣವು ತೀರಾ ಕನಿಷ್ಟವಿದೆ. ಅಧಿಕ ಹಾಲು ಹಿಂಡುವ ಉತ್ತರ ಯೂರೋಪ್ ಹಾಗೂ ಅಮೇರಿಕಾದ ಆಕಳುಗಳೊಂದಿಗೆ ಭಾರತೀಯ ಆಕಳುಗಳನ್ನು ಸಂಕರಣಗೊಳಿಸುವುದೊಂದೇ ಭಾರತೀಯ ಆಕಳುಗಳ ಹಾಲಿನ ಉತ್ಪತ್ತಿಯನ್ನು ಮಾತ್ರ ಹೆಚ್ಚಿಸುವುದಕ್ಕಿರುವ

ಮಾರ್ಗವಾಗಿದೆ. ಇದು ಗಣನೀಯ ಪ್ರಮಾಣದಲ್ಲಿ ನಡೆದಿದೆ. ಆದರೆ ಇದು ಪರಿಶುದ್ಧವಾದ ಭಾರತೀಯ ತಳಿಗಳಾದ ಹರಿಯಾನ, ಥರ್ಪಾರಕರ್, ಬ್ರಾಹ್ಮಣ, ಕೆಂಪುಸಾಧಿ ಮತ್ತು ಸಹಿವಾಲ ತಳಿಗಳನ್ನೊಳಗೊಂಡ ಸಾಂಪ್ರದಾಯಿಕ ತಳಿಗಳ ಅಭಿವೃದ್ಧಿ ಕಾರ್ಯವನ್ನು ನಿರ್ಲಕ್ಷಿಸುವಂತಾಗಬಾರದು. ಆಸ್ಟ್ರೇಲಿಯಾದಲ್ಲಿ ಭಾರತೀಯ ಆಕಳುಗಳಿಗೆ ದೊರೆತ ಅತ್ಯಧಿಕ ಬೆಲೆಯು ಭಾರತೀಯ ಆಕಳುಗಳ ಹಾಲಿನ ಉತ್ಪತ್ತಿಯ ಪ್ರಮಾಣ ಕಡಿಮೆಯಾಗಿದ್ದರೂ ಅವುಗಳಲ್ಲಿ ಅಮೂಲ್ಯ ಗುಣಗಳಿವೆ ಎಂಬುದನ್ನು ಎತ್ತಿ ತೋರಿಸುತ್ತದೆ. ಅಧಿಕ ಉಷ್ಣತೆಯನ್ನು ಸಹಿಸುವ ಸಾಮರ್ಥ್ಯ ಅವುಗಳಿಗಿದೆ. ಇಂದು ಲ್ಯಾಟಿನ್ ಅಮೇರಿಕ ಮತ್ತು ದಕ್ಷಿಣ ಅಮೇರಿಕೆಗಳಲ್ಲಿ ಈ ಸಾಮರ್ಥ್ಯವುಳ್ಳ ಆಕಳುಗಳಿಗೆ ಹೆಚ್ಚು ಬೇಡಿಕೆ ಇದೆ,

ಪಶುವಿಜ್ಞಾನದ ಪ್ರಗತಿ

ಪ್ರಾಣಿಗಳ ಶರೀರದ ಅಂಗರಚನೆಯು ತಂದೆ ತಾಯಿಗಳ ಜೀವಕೋಶದ ವಸ್ತುಗಳಿಂದ ಕೂಡಿರುತ್ತದೆ. ಈ ರಚನೆಯು ಬಿಡಿಸಲು ಬಾರದಂತಹ ಅನುವಂಶಿಕ ಚರಿತ್ರೆಯನ್ನು ಒಳಗೊಂಡಿರುತ್ತದೆ. ಇವುಗಳ ಶರೀರ ರಚನೆಯಲ್ಲಿ ಎಣಿಸಲಾಗದಷ್ಟು ಅವುಗಳ ಪೂರ್ವಜರ ಶರೀರದ ಸೂಕ್ಷ್ಮಸಾಮಗ್ರಿಗಳು ಹೆಣೆದುಕೊಂಡಿರುತ್ತವೆ. ಹೀಗಾಗಿ ತಂದೆ ತಾಯಿಗಳ ಗುಣಗಳು ಮತ್ತು ನ್ಯೂನತೆಗಳು ಅವುಗಳ ಮುಂದಿನ ಪೀಳಿಗೆಯಲ್ಲಿ ಬಿಡದೆ ಮುಂದುವರಿಯುತ್ತಾ ಹೋಗುವುವು. ಕಾರಣ ನಾವು ಅವುಗಳ ಹಿಂದಿನ ಅನುವಂಶಿಕ ಚರಿತ್ರೆಯನ್ನು ಅಲ್ಲಗಳೆಯುವಂತಿಲ್ಲ. ಮುಂದಿನ ಪೀಳಿಗೆಯ ಭವಿಷ್ಯವನ್ನು ತಿಳಿಯಲು ಅವುಗಳ ಈ ಹಿಂದಿನ ಅನುವಂಶಿಕ ಚರಿತ್ರೆಯೇ ಅಳತೆಗೋಲು. ಈ ಚರಿತ್ರೆಯ ಆಧಾರದ ಮೇಲೆ ಮುಂದಿನ ಗೊತ್ತುಪಡಿಸಿದ ದನಗಳ ಅಭಿವೃದ್ಧಿಯ ಗುರಿ ಮುಟ್ಟಲು ಸಾಧ್ಯ.

ಆಕಳುಗಳಲ್ಲಿ ಹಾಲು ಹಿಂಡುವ ಗುಣ ಅನುವಂಶಿಕ ಗುಣ. ಹಾಲು ಹಿಂಡುವ ಮತ್ತು ಹಾಲಿನಲ್ಲಿಯ ಬೆಣ್ಣೆಯ ಪ್ರಮಾಣ ದನಗಳಲ್ಲಿ ವಂಶಪರಂಪರೆಯಾಗಿ ಸಾಗಿ ಬಂದ ಗುಣ. ಈ ಅನುವಂಶಿಕ ಗುಣಗಳ ವಿತರಣೆ ಬಹು ಕಾಲದಿಂದ ತಿಳಿಯದ ಒಂದು ನಿಗೂಢ ವಿಷಯವಾಗಿಯೇ ಉಳಿದಿತ್ತು, ಆದರೆ ಇತ್ತೀಚಿಗೆ ಜೀವಿ ವಿಜ್ಞಾನಿಗಳು ಈ ಅನುವಂಶಿಕ ಗುಣಗಳ ಬಗ್ಗೆ ಸಂಶೋಧನೆ ನಡೆಸಿ ಅವು ಪೀಳಿಗೆಯಿಂದ ಪೀಳಿಗೆಗೆ ಹೇಗೆ ಸಾಗುತ್ತವೆ ಎಂಬುದನ್ನು ಕಂಡು ಹಿಡಿದಿದ್ದಾರೆ. ಈ ಅನುವಂಶಿಕ ಗುಣಗಳನ್ನು ಜೀವಕೋಶಗಳಲ್ಲಿಯ ವರ್ಣತಂತುಗಳಲ್ಲಿರುವ ವಂಶವಾಹಿಗಳೇ ಸಂತತಿಯಿಂದ ಸಂತತಿಗೆ ಸಾಗಿಸುವ ವಂಶಗುಣವಾಹಕಗಳು ಎಂದು ಕಂಡು ಹಿಡಿದಿದ್ದಾರೆ.

ಹೀಗೆ ಅನುವಂಶಿಕ ಗುಣಗಳ ವಿತರಣೆಯಾಗಿರುವುದು ಅವುಗಳ ಗುಣಧರ್ಮ. ಯಾವ ಹೋರಿಯು ಇಂಥ ವಂಶವಾಹಿಗಳನ್ನು ಪಡೆದಿರುತ್ತದೋ ಅದು ಸಂತಾನಾಭಿವೃದ್ಧಿಗೆ ಯೋಗ್ಯವಾದ ಹೋರಿ.

ಹೋರಿಯ ವೀರ್ಯದಲ್ಲಿಯ ರೇತ್ರಾಣು ಅಥವಾ ಪುರುಷಾಣುವು ಆಕಳಿನ ತತ್ತಿ ಅಥವಾ ಅಂಡಾಣುವಿನೊಡನೆ ಸಂಯೋಗವಾದಾಗ ಸಂಯುಕ್ತ ಜೀವಕಣ ಅಥವಾ ಪಿಂಡೋತ್ಪತ್ತಿಯ ರಚನೆಯಾಗುವುದು. ಇದಕ್ಕೆ 'ಜೈಗೋಟ್' ಎಂದು ಕರೆಯುತ್ತಾರೆ. ಭ್ರೂಣಶಾಸ್ತ್ರದ ಪ್ರಕಾರ ಪ್ರತಿಯೊಂದು ಜೀವಿಯು ತನ್ನ ಜೀವಿತವನ್ನು ಬೀಜಾಣು ಅಥವ ಭ್ರೂಣ ಅಥವಾ ಸಂಯುಕ್ತ ಜೀವಕಣದಿಂದ ಆರಂಭಿಸುತ್ತದೆ. ಈ ಬೀಜಾಣುವು ವಾಸ್ತವವಾಗಿ ಒಂದು ಜೀವಕಣ. ಇದು ಎರಡು ಜೀವಾಣುಗಳು ಕೂಡಿ ಉಂಟಾದ ಒಂದು ಸಜೀವ ಬೀಜಾಣು. ಈ ಸಂಯುಕ್ತ ಜೀವಕಣದ ವಿಭಾಗದಿಂದ ಜೀವಕಣಗಳ ಸಂಖ್ಯೆ ಹೆಚ್ಚುತ್ತದೆ. ಈ ಜೀವಕಣಗಳು ವಿಭಾಗವಾಗುವಾಗ ಸುರಳಿ ಸುತ್ತಿರುವ ಅನೇಕ ದಾರದಂತಿರುವ ಸೂಕ್ಷ್ಮ ರಚನೆಗಳು ಕಾಣಿಸಿಕೊಳ್ಳುತ್ತವೆ. ಈ ರಚನೆಗಳಿಗೆ ವರ್ಣತಂತುಗಳೆಂದು ಹೆಸರು. ಈ ವರ್ಣತಂತುಗಳ ರಚನೆ ಮಣಿಯು ಸರದಂತಿದೆ. ಈ ಮಣಿಗಳಿಗೆ ವಂಶವಾಹಿಗಳೆಂದು ಹೆಸರು. ಜೀವಿಗಳಲ್ಲಿ ಪ್ರಕಟಗೊಳ್ಳುವ ಗುಣಗಳಿಗೆ ವಂಶವಾಹಿಗಳೇ ಕಾರಣ. ಕರುವಿನ ಜನನಕ್ಕೆ ತಾಯಿ ತಂದೆಯರಿಬ್ಬರೂ ವಸ್ತುವನ್ನು ಒದಗಿಸುತ್ತಾರೆ. ಭ್ರೂಣದ ರಚನೆಯ ಕಾಲಕ್ಕೆ ಈ ವಸ್ತುವಿನ ಮೂಲಕ ತಂದೆ ತಾಯಿಗಳ ಗುಣಧರ್ಮಗಳು ಭಾವೀಕರುವಿನಲ್ಲಿ ಸೇರಿಕೊಂಡಿರುತ್ತವೆ. ಮುಂದೆ ಈ ಅನುವಂಶಿಕ ಗುಣಗಳು ಹೀಗೆ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಹೋಗುವುವು. ಈ ಅನುವಂಶಿಕ ಗುಣಗಳು ತಂದೆ ತಾಯಿಗಳಿಗೆ ಸೀಮಿತವಾದವುಗಳು. ಈ ಗುಣಗಳು ಭ್ರೂಣದ ರಚನೆಯ ಕಾಲಕ್ಕೆ ನಿರ್ದಿಷ್ಟಗೊಳ್ಳಲ್ಪಡುವುವು. ಹೀಗೆ ಕರುವಿನಲ್ಲಿ ನಿರ್ದಿಷ್ಟಗೊಂಡ ಅನುವಂಶಿಕ ಗುಣಗಳು ಮುಂದೆ ಪರಿಸರ ವಾತಾವರಣದ ಪ್ರಭಾವದಿಂದ ಚೇತನಗೊಂಡು ಪ್ರಕಾಶನಗೊಳ್ಳುತ್ತವೆ. ದನಗಳ ತಳಿ ಸುಧಾರಣೆಯಲ್ಲಿ ಬಹು ಮುಖ್ಯವಾದ ಎರಡು ಅಂಶಗಳೆಂದರೆ ಅನುವಂಶಿಕತೆ, ಮತ್ತು ಪರಿಸರ. ಇವುಗಳೆರಡರ ಪರಿಣಾಮದ ಫಲವೇ ಹೈನತಳಿ ಉತ್ಪಾದನೆ. ಸಂತಾನಾಭಿವೃದ್ಧಿಗೆ ದನಗಳನ್ನು ಆರಿಸುವಾಗ ಈ ಅನುವಂಶಿಕ ಗುಣಗಳನ್ನು ಪಡೆದಿರುವ ಮತ್ತು ಸ್ಥಳಿಕ ನೆಲ, ಜಲ ಹಾಗೂ ವಾಯುಗುಣ ಆಹಾರಗಳಿಗೆ ಹೊಂದಿಕೊಳ್ಳುವಂತಹ ದನಗಳನ್ನು ಆರಿಸಿ ಸಾಕಿ ಬೆಳೆಸಿದಲ್ಲಿ ಹೈನೋತ್ಪಾದನೆಯ ಯೋಜನೆಯು ಫಲಪ್ರದವಾಗುವುದರಲ್ಲಿ ಸಂದೇಹವಿಲ್ಲ,

ಒಂದು ಹೋರಿಯು ಒಂದು ಸಲಕ್ಕೆ 4 ರಿಂದ 5 ಸಿ.ಸಿ.ಯಷ್ಟು ವೀರ್ಯವನ್ನು ಕೊಡುತ್ತದೆ. ಒಂದು ಬಿಂದು ಹೋರಿಯ ವೀರ್ಯದಲ್ಲಿ ಲಕ್ಷಾಂತರ ವೀರ್ಯಾಣುಗಳು

ತೇಲಾಡುತ್ತಿರುತ್ತವೆ. ಇದು ಹೈನೋತ್ಪಾದನೆಗೆ ನಿಸರ್ಗದ ಒಂದು ವರದಾನ. ಗರ್ಭಧಾರಣೆಗೆ ಒಂದು ವೀರ್ಯಾಣು ಸಾಕು. ಇಂದು ಪಶುವಿಜ್ಞಾನ ಪ್ರಗತಿ ಪಥದಲ್ಲಿ ಬಹಳ ಮುಂದುವರೆದಿದೆ. ಒಂದು ಸಲ ಕೊಟ್ಟ ಹೋರಿಯ ವೀರ್ಯದಿಂದ ಒಂದು ನೂರು ಆಕಳುಗಳಿಗೆ ಕೃತ್ರಿಮವಾಗಿ ಗರ್ಭಧಾರಣೆ ಮಾಡಬಹುದು. ಹೋರಿಯ ವೀರ್ಯವನ್ನು ಹದಗೊಳಿಸಿ ದೇಶದ ಮೂಲೆಗಳಿಗೆ ಕಳುಹಿಸಬಹುದು. ಪರದೇಶಗಳಿಗೂ ಸಾಗಣೆ ಮಾಡಲು ಸಾಧ್ಯ. ಶೀತಾಗಾರದಲ್ಲಿ ಇವನ್ನು ಕೆಡವಂತೆ 4 ದಿವಸಗಳ ಕಾಲ ಕಾದಿಡಬಹುದು. ಇತ್ತೀಚೆಗೆ ಇದನ್ನು ಮಂಜುಗಡ್ಡೆಯಲ್ಲಿ ವರ್ಷಗಳ ಕಾಲ ಕಾದಿಟ್ಟು ಬೇಕಾದಾಗ ಉಪಯೋಗಿಸುವುದನ್ನು ಕಂಡು ಹಿಡಿದಿದ್ದಾರೆ.

ಮುಂದೆ ಹುಟ್ಟುವ ಕರುವಿನ ಲಿಂಗ ನಿರ್ಣಯವಾಗುವುದು ಹೋರಿಯ ವೀರ್ಯದಿಂದಲೇ ಎಂಬುದನ್ನು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಹೋರಿಯ ವೀರ್ಯದಲ್ಲಿ 'X' ಮತ್ತು 'Y' ಎಂಬ ವರ್ಣತಂತುಗಳಿರುತ್ತವೆ. ಆಕಳ ಅಂಡದಲ್ಲಿ 'X' ವರ್ಣತಂತುಗಳು ಮಾತ್ರ ಇರುತ್ತವೆ. ಇವುಗಳ ಮಿಲನದಿಂದ ನಾಳೆ ಹುಟ್ಟುವ ಕರುವು ಆಕಳ ಕರುವೋ ಅಥವಾ ಹೋರಿ ಕರುವೋ ಎಂಬುದು ನಿರ್ಧಾರವಾಗುವುದು. ಹೋರಿಯ ವೀರ್ಯದಲ್ಲಿರುವ 'X' ವರ್ಣತಂತುವು ಹಸುವಿನ ಅಂಡದಲ್ಲಿರುವ 'X' ವರ್ಣತಂತುವಿನೊಂದಿಗೆ ಸಂಯೋಗವಾದಲ್ಲಿ ಹೆಣ್ಣು ಕರುವು ಹುಟ್ಟುವುದು. ಹೋರಿಯ ವೀರ್ಯದಲ್ಲಿಯ 'Y' ವರ್ಣತಂತುವು ಆಕಳಿನ 'X' ವರ್ಣತಂತುವಿನೊಂದಿಗೆ ಸಂಯೋಗವಾದಲ್ಲಿ ಹೋರಿ ಕರುವು ಹುಟ್ಟುವುದು ಎಂಬುದಾಗಿ ತಿಳಿದು ಬಂದಿದೆ. ಇತ್ತೀಚೆಗೆ ಡಾ। ಲೆಂಡ್ರಮ್ ಶೆಟಲ್ಸ್ ಎಂಬ ಕೊಲಂಬಿಯಾ ವಿಶ್ವವಿದ್ಯಾನಿಲಯದ ವಿಜ್ಞಾನಿಯೊಬ್ಬರು ಹೋರಿಯ ವೀರ್ಯದಲ್ಲಿರುವ X ಮತ್ತು Y ವರ್ಣತಂತುವಿನ ರೇತಸ್ಸುಗಳನ್ನು ಪ್ರತ್ಯೇಕಿಸಬಹುದು ಎಂಬ ಅಭಿಪ್ರಾಯ ಹೊಂದಿರುತ್ತಾರೆ. ಇದು ಸಾಧ್ಯವಾಗುವ ದಿನಗಳು ಕೂಡ ದೂರವಿಲ್ಲ. ಆಗ ನಮಗೆ ಬೇಕಾದ ಕರುವನ್ನು ಪಡೆಯಬಹುದು.

ಆಕಳು ಬೆದೆಗೆ ಬಂದಾಗ ಸಾಮಾನ್ಯವಾಗಿ ಅದರ ಅಂಡಾಶಯದಿಂದ ಒಂದು ಅಥವಾ ಎರಡು ಪರಿಪಕ್ವವಾದ ಅಂಡಾಣುಗಳು ಹೊರ ಬೀಳುವುವು. ಇದು ಹೋರಿಯ ವೀರ್ಯಾಣುವಿನೊಡನೆ ಸಂಯೋಗವಾದಲ್ಲಿ ಗರ್ಭಧಾರಣೆಯಾಗಿ ಮುಂದೆ ಆಕಳು 283 ದಿವಸಗಳ ನಂತರ ಕರುವನ್ನು ಕೊಡುವುದು. ಆದರೆ ಇತ್ತೀಚೆಗೆ ಪಶ್ಚಿಮ ಜರ್ಮನಿಯ ಪಶುವಿಜ್ಞಾನ ಪಂಡಿತರು ಹೆಚ್ಚಿನ ಸಂಶೋಧನೆ ನಡೆಸಿ ಒಂದು ಉತ್ತಮ ದರ್ಜೆಯ ಹೈನ ತಳಿ ಆಕಳಿಗೆ ಚೋದಕಸ್ರಾವವನ್ನು ಚುಚ್ಚಿ ಒಂದೇ ಕಾಲಕ್ಕೆ ಆಕಳ ಅಂಡಾಶಯದಿಂದ ಸುಮಾರು 2ರಿಂದ 30ರವರೆಗೆ ಅಂಡಾಣುಗಳು ಉತ್ಪಾ

ದನೆಯಾಗುವಂತೆ ಮಾಡುವರು, ಮುಂದೆ ಹೋರಿಯ ವೀರ್ಯದಿಂದ ಈ ಎಲ್ಲ ಪರಿಪಕ್ವವಾದ ಅಂಡಾಣುಗಳು ಫಲಪ್ರದವಾಗುವಂತೆ (ಗರ್ಭಧಾರಣೆಯಾಗುವಂತೆ) ಮಾಡುವರು. ಹೀಗೆ ಫಲಪ್ರದವಾದ ಭ್ರೂಣಗಳನ್ನು (ಪಿಂಡಾಂಡಗಳನ್ನು) ತಾಯಿಯ ಗರ್ಭಕೋಶದಿಂದ ಹೊರತೆಗೆದು ಅವುಗಳನ್ನು ಬೆದೆಗೆ ಬಂದ ಬೇರೆ ಆಕಳುಗಳ ಗರ್ಭಕೋಶದಲ್ಲಿ ಸೇರಿಸುವರು. ಹೀಗೆ ವರ್ಗಾಯಿಸಲಾದ ಭ್ರೂಣಗಳು ಈ ಆಕಳುಗಳ ಗರ್ಭಕೋಶದಲ್ಲಿ ಸಂಪೂರ್ಣವಾಗಿ ಬೆಳೆದು 9½ ತಿಂಗಳುಗಳಾದ ಮೇಲೆ ಎಲ್ಲ ಸಾಮಾನ್ಯವಾಗಿ ಗರ್ಭಧರಿಸಿದ ಆಕಳುಗಳು ಕರುಹಾಕುವಂತೆ ಕರುವನ್ನು ಹಾಕುವುವು. ಹೀಗೆ ಒಂದೇ ಕಾಲಕ್ಕೆ 20 ಅಥವಾ 30ರ ವರೆಗೆ ಉತ್ತಮ ತಳಿಯ ಕರುಗಳನ್ನು ಉತ್ಪಾದಿಸಿ ಪಶುವೈದ್ಯಶಾಸ್ತ್ರದಲ್ಲಿ ಒಂದು ಮೈಲುಗಲ್ಲನ್ನು ಮುಟ್ಟಿರುತ್ತಾರೆ.

ಸಾಮಾನ್ಯವಾಗಿ ಹುಟ್ಟಿದ ಕರುಗಳ ಒಟ್ಟು ಸಂಖ್ಯೆಗಳಲ್ಲಿ ಅರ್ಧಹೆಣ್ಣು ಕರುಗಳು ಹುಟ್ಟುವುವು. ಆದರೆ ಇಂದು ಹೈನೋತ್ಪಾದನೆಗೆ ಬೇಕಾದ ಆಕಳ ಕರುಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇದನ್ನು ಸಾಧಿಸುವುದಕ್ಕಾಗಿ ಕೆನಡಾದ ಪಶುವಿಜ್ಞಾನ ಪಂಡಿತರು ಹೊಸದಾಗಿ ಒಂದು ಮಾರ್ಗವನ್ನು ಕಂಡುಹಿಡಿದಿದ್ದಾರೆ. ಅದೇನೆಂದರೆ– ಭ್ರೂಣವು ಇನ್ನು 5 ಅಥವಾ 6 ದಿವಸಗಳದ್ದಾಗಿರುವಾಗ ಅದನ್ನು ತಾಯಿಯ ಗರ್ಭಕೋಶದಿಂದ ಹೊರಗೆ ತೆಗೆಯುವರು. ಅನಂತರ ಈ ಭ್ರೂಣದ ಮೇಲಿರುವ ತೆಳುವಾದ ಸೂಕ್ಷ್ಮವಾದ ಹೊದಿಕೆಯ ಪೊರೆಯ ಒಂದು ಚೂರನ್ನು ಒಳಗೆ ಇರುವ ಭ್ರೂಣಕ್ಕೆ ಯಾವ ತರಹದ ಅಪಾಯವಾಗದಂತೆ ಕತ್ತರಿಸಿಕೊಂಡು ಈ ಪೊರೆಯ ಚೂರನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ಪರೀಕ್ಷಿಸಿ ಮುಂದೆ ಅದು ಹೋರಿ ಕರುವೋ ಅಥವಾ ಆಕಳ ಕರುವೋ ಎಂಬುದನ್ನು ಕಂಡುಹಿಡಿದು ಹೇಳುವರು. ಹೀಗೆ ಅದರ ಲಿಂಗವನ್ನು ಗುರುತಿಸಿದ ಮೇಲೆ ತಮಗೆ ಯಾವ ಕರುವು ಬೇಕೋ ಅದನ್ನು ಮತ್ತೆ ಗರ್ಭಕೋಶದಲ್ಲಿಟ್ಟು ಸಂಪೂರ್ಣವಾಗಿ ಬೆಳೆಸುವರು ನಮಗೆ ಬೇಕಾದ ಕರುಗಳನ್ನು ಪಡೆಯುವ ಕಾಲ ಸನ್ನಿಹಿತವಾಗಿದೆ. ಇದರಿಂದ ಶೀಘ್ರ ಹೈನ ತಳಿ ದನಗಳ ಉತ್ಪಾದನೆಯಾಗಿ ಹೈನೋತ್ಪಾದನೆ ಕಾರ್ಯ ತ್ವರಿತವಾಗಿ ಬೆಳೆದು ಬಿಳಿಯ ಕ್ರಾಂತಿ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ದನಗಳ ಸಂತಾನೋತ್ಪಾದನೆಯಲ್ಲಿ ಹೋರಿಯ ಪಾತ್ರ ಬಹಳ ಮಹತ್ವವಾದದ್ದು ಮತ್ತು ಪ್ರಧಾನವಾದದ್ದು.

ಆಧುನಿಕ ಪಶುವೈದ್ಯ ಶಾಸ್ತ್ರದ ಪ್ರಗತಿ

ಇಂದಿನ ಯುಗ ವೈಜ್ಞಾನಿಕಯುಗ. ಪಶುವೈದ್ಯ ಶಾಸ್ತ್ರ ಬಹಳ ಪ್ರಗತಿಯನ್ನು ಸಾಧಿಸಿರುತ್ತದೆ. ಪಶು ವಿಜ್ಞಾನ ಪರಿಣಿತರು ಅನೇಕ ಹೊಸ ವಿಷಯಗಳನ್ನು ಕಂಡು ಹಿಡಿದು ಬೆಳಕಿಗೆ ತಂದಿದ್ದಾರೆ. ಇತ್ತೀಚಿನ ಹೊಸ ವಿಷಯಗಳೆಂದರೆ, ದನಗಳ ಹೊಟ್ಟೆಯಲ್ಲಿ ಸೂಕ್ಷ್ಮಜೀವಿಗಳಿಂದ ಉಂಟಾಗುವ ಆಶ್ಚರ್ಯಕಾರಕ ಸಂಗತಿಗಳು.

ದನದ ಹೊಟ್ಟೆಯು 'ಮೇಲುಕು ಚೀಲ', ರೆಟಿಕ್ಯೂಲಂ, ಓಮೇಸಂ ಮತ್ತು ಅಬೋಮೇಸಂ ಎಂದು ನಾಲ್ಕು ಭಾಗಗಳಿಂದ ಕೂಡಿರುತ್ತದೆ. ಇದರಲ್ಲಿ ಮೊದಲ

ನೆಯ ಭಾಗ ಮೆಲುಕು ಚೀಲ ಅಥವಾ ಪಾಂಚ್ ಎಂಬುದು ಬಹಳ ದೊಡ್ಡದು. 120 ರಿಂದ 150 ಪೌಂಡು ತೂಕದ ಮೇವನ್ನು ಹಿಡಿಸಬಲ್ಲದು. ವಿಜ್ಞಾನಿಗಳು ಈ ಮೆಲುಕು ಚೀಲಕ್ಕೆ ಹೊರಗಿನಿಂದ ಒಂದು ರಂಧ್ರವನ್ನು ತೆಗೆದು ಅದರಲ್ಲಿ ಒಂದು ನಳಿಕೆಯನ್ನಿಟ್ಟು ಅದರಲ್ಲಿ ನಡೆಯುತ್ತಿರುವ ಕೆಲವು ಸೂಕ್ಷ್ಮವಾದ ವಿಷಯಗಳನ್ನು ಸಂಶೋಧಿಸಿ ಹೊರಗೆಡವಿದ್ದಾರೆ. ಈ ಪದ್ಧತಿಗೆ 'ರೋಮನ್ ಫಿಶ್ಚುಲ ಟೆಕ್‌ನಿಕ್' ಎಂದು ಕರೆಯುತ್ತಾರೆ.

ದನಗಳನ್ನು ನೈಸರ್ಗಿಕವಾಗಿ ಹುಲ್ಲು, ಕೊಯ್ಲು ಮಾಡಿದ ಜೋಳದ ದಂಟು, ಬತ್ತದ ಹುಲ್ಲು, ರಾಗಿ ಹುಲ್ಲು, ಮೇವು, ಸೊಪ್ಪು ಮೊದಲಾದವುಗಳನ್ನು ತಿಂದು ಜೀವಿಸುತ್ತವೆ. ಈ ಸೊಪ್ಪು, ಹುಲ್ಲು, ದಂಟು ಮತ್ತು ಮೇವು ನಾರಿನಿಂದ ಕೂಡಿದ ಸೆಲ್ಯೂಲೋಸ್ ಮತ್ತು ಹೆಮಿ ಸೆಲ್ಯೂಲೋಸ್‌ಗಳು ಹೆಚ್ಚಾಗಿ ಶರ್ಕರಪಿಷ್ಟಾದಿಗಳನ್ನೊಳಗೊಂಡಿರುತ್ತವೆ. ದನಗಳು ಮೇವು ತಿಂದು ನುಂಗಿದೊಡನೆ ಮೊದಲಿಗೆ ಅದು ಮೆಲುಕುಚೀಲದ ಭಾಗಕ್ಕೆ ಬಂದು ಸೇರುತ್ತದೆ. ಇಲ್ಲಿ ಅದು ಲಾಲಾರಸದೊಡನೆ ಬೆರೆಯುತ್ತದೆ. ಒಂದು ಆಕಳು 24 ಗಂಟೆಯ ಕಾಲದಲ್ಲಿ 110 ಪೌಂಡಿನಷ್ಟು ಲಾಲಾರಸವನ್ನು ಉತ್ಪಾದಿಸುತ್ತದೆ. ಇಷ್ಟು ದೊಡ್ಡ ಪ್ರಮಾಣದ ಲಾಲಾರಸವು ಮೇವನ್ನು ಚೆನ್ನಾಗಿ ಹದಮಾಡಿ ಹುದುಗುವಂತೆ ಮಾಡುತ್ತದೆ. ಇದಕ್ಕಾಗಿ ಈ ಮೆಲುಕುಚೀಲ ಭಾಗವನ್ನು ಹುದುಗುಕಡಾಯಿ ಎಂದು ಕರೆಯುತ್ತಾರೆ. ಹೀಗೆ ಮೇವು ಮೆಲುಕುಚೀಲದಲ್ಲಿ ಲಾಲಾರಸದೊಡನೆ ಮಿಶ್ರಿತವಾಗಿ ಹುಳಿಯಾಗಿ ಚೆನ್ನಾಗಿ ನೆನೆದು ಮೆತ್ತಗಾಗಿ ಜೀರ್ಣವಾಗುವ ಅನುಕೂಲ ಪರಿಸ್ಥಿತಿ ಹೊಂದುತ್ತದೆ.

ದನಗಳು ತಿನ್ನುವ ಈ ಮೇವಿನಲ್ಲಿ ಹೆಚ್ಚಾಗಿ ವಿವಿಧ ಆಹಾರಯುಕ್ತವಾದ ನೀರು, ನೆದೆ, ಗುಂಜು ಸೇರಿಕೊಂಡಿರುತ್ತವೆ. ಈ ನೆದೆ ಮಿಶ್ರಿತವಾದ ಮೇವಿನಲ್ಲಿ 'ಸೆಲ್ಯೂಲೋಸ್' ಹೆಮಿಸೆಲ್ಯೂಲೋಸ್ ಪೆಕ್ಟಿನ್ ಲಿಗ್ನಿನ್ ಮೊದಲಾದ ಶರ್ಕರ ಪಿಷ್ಟಾದಿಗಳು ಅಧಿಕ ಪ್ರಮಾಣದಲ್ಲಿರುತ್ತವೆ. ದನಗಳ ಹೊಟ್ಟೆಯ ಈ ಮೆಲುಕುಚೀಲ ಭಾಗದಲ್ಲಿ ವಿವಿಧ ಪ್ರಕಾರದ ಸೂಕ್ಷ್ಮಜೀವಿಗಳು ಇರುತ್ತವೆ. ಈ ಸೂಕ್ಷ್ಮಜೀವಿಗಳು ಶೇಕಡಾ 70 ರಿಂದ 80ರಷ್ಟು ಮೇವಿನಲ್ಲಿರುವ ಶರ್ಕರಪಿಷ್ಟಾದಿಗಳನ್ನು ಜೀರ್ಣಗೊಳಿಸಿ ಮುಂದೆ ಅಲ್ಲಿ ನಡೆಯುವ ರಾಸಾಯನಿಕ ಬದಲಾವಣೆಗಳಿಂದ ಅದನ್ನು ಗ್ಲೂಕೋಸ್ ಸಕ್ಕರೆಯಾಗಿ ಪರಿವರ್ತಿಸುವಂತೆ ಮಾಡುತ್ತವೆ.

ಈ ಗ್ಲೂಕೋಸ್ ಸಕ್ಕರೆಯು ಮೆಲುಕುಚೀಲದಿಂದ ರಕ್ತದೊಡನೆ 'ಪೋರ್ಟಲ್' ರಕ್ತಪರಿಚಲನೆಯಿಂದ ಯಕೃತ್ತಿಗೆ ಬಂದು ಸೇರುತ್ತದೆ. ಇಲ್ಲಿ ಗ್ಲೂಕೋಸನ್ನು ಯಕೃತ್ ಮತ್ತೆ ಗ್ಲೈಕೋಜೆನ್‌ನ್ನಾಗಿ ಪರಿವರ್ತಿಸಿ, ಕೂಡಿಟ್ಟುಕೊಂಡಿದ್ದು ಮುಂದೆ

ಬೇಕಾದಾಗ ಯಕೃತ್ ಈ ಗ್ಲೈಕೋಜೆನ್‌ಅನ್ನು ಪುನಃ ಗ್ಲೂಕೋಸ್‌ಸಕ್ಕರೆಯಾಗಿ ಪರಿವರ್ತಿಸಿ ಪೂರೈಸುತ್ತದೆ. ಈ ಗ್ಲೂಕೋಸ್ ರೂಪದಲ್ಲಿಯೇ ರಕ್ತವು ಯಕೃತ್‌ದಿಂದ ಶರ್ಕರ ಪಿಷ್ಟಾದಿಗಳನ್ನು ದೇಹದ ಎಲ್ಲಾ ಭಾಗಗಳಿಗೆ ಮುಟ್ಟಿಸುತ್ತದೆ. ರಕ್ತದಲ್ಲಿಯ ಈ ಗ್ಲೂಕೋಸ್ ಸಕ್ಕರೆಯು ದನಗಳು ಹೊರಗಿನಿಂದ ಸೇವಿಸುವ ಪ್ರಾಣವಾಯುವಿನೊಡನೆ ಸಂಯೋಗವಾಗುತ್ತದೆ. ಆಗ ಇಂಗಾಲಾಮ್ಲ ಮತ್ತು ನೀರು ಉತ್ಪನ್ನವಾಗುವುದಲ್ಲದೆ ಅಡಿನೋಸಿನ್ ಟ್ರೈಫಾಸ್‌ಫೇಟ್ ಎಂಬ ಸಂಯುಕ್ತಶಕ್ತಿಯುವಸ್ತು ಉತ್ಪನ್ನವಾಗುತ್ತವೆ. ಇದೇ ಶರೀರಕ್ಕೆ ಬೇಕಾದ ಶಕ್ತಿ ಮತ್ತು ಶಾಖವನ್ನು ಪೂರೈಸುತ್ತದೆ. ಈ ಪ್ರಕಾರ ಮೇವು. ಸೊಪ್ಪುಗಳಲ್ಲಿರುವ ಶರ್ಕರ ಪಿಷ್ಟಾದಿಗಳನ್ನು ಜೀರ್ಣಿಸಿ, ರಕ್ತಗತ ಮಾಡುವ ಕಾರ್ಯದಲ್ಲಿ ಮೆಲುಕುಚೀಲದಲ್ಲಿರುವ ಸೂಕ್ಷ್ಮಜೀವಿಗಳು ಆಹಾರವನ್ನು ತಯಾರಿಸುವುದರಲ್ಲಿ ಮಹತ್ಪಾತ್ರವನ್ನು ವಹಿಸುತ್ತವೆ ಮತ್ತು ಪಚನಕ್ರಿಯೆಗೆ ಸಹಾಯ ಮಾಡುತ್ತವೆ.

ಮೆಲುಕು ಚೀಲದಲ್ಲಿರುವ ಕೆಲವು ವಿಶಿಷ್ಟ ಸೂಕ್ಷ್ಮಜೀವಿಗಳು ಸೆಲ್ಯೂಲೋಸನ್ನು ಜೀರ್ಣಿಸಿಕೊಳ್ಳುವುವಲ್ಲದೆ ಸಸಾರಜನಕರಹಿತವಾದ ಸಾರಜನಕವನ್ನು ಸಸಾರಜನಕವನ್ನಾಗಿ ಪರಿವರ್ತಿಸುವುವು ಮತ್ತು ಅಮೈನೋ ಆಮ್ಲವನ್ನು ವಿಶ್ಲೇಷಿಸಿ ಯೂರಿಯಾ ಮತ್ತು ಯೂರಿಕ್ ಆಮ್ಲಗಳನ್ನಾಗಿ ಮಾಡುವುವು. ಈ ಪ್ರಕಾರ ಸೂಕ್ಷ್ಮಜೀವಿಗಳು ಮೇವಿನಲ್ಲಿರುವ ಅಮೈನೋ ಆಮ್ಲಗಳಿಂದ ಅಥವಾ ಯೂರಿಯಾ ಮುಂತಾದ ಸಸಾರಜನಕೇತರ ಸಾರಜನಕದಿಂದ ಹಸುವಿಗೆ ಬೇಕಾದ ಸಸಾರಜನಕಗಳನ್ನು ತಯಾರಿಸುತ್ತಾರೆ.

ಹೀಗೆ ಪರಿಮಿತ ಪ್ರಮಾಣದ ಸಸಾರಜನಕೇತರ ಸಾರಜನಕದ ಪೂರಕ ಆಹಾರದಿಂದ ಅವುಗಳ ಹಾಲೋತ್ಪಾದನೆಯ ಸಾಮರ್ಥ್ಯವು ಹೆಚ್ಚಬಲ್ಲವು. ಈ ರೀತಿ ಪಡಿತರ ಒದಗಿಸಲಾದ ಹೈನ ದನಗಳು ತಮ್ಮ ಹಾಲಿನಲ್ಲಿ ಅವು ನೈಸರ್ಗಿಕವಾಗಿ ಪಡೆದುಕೊಳ್ಳುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕವನ್ನು ಉತ್ಪಾದಿಸಬಲ್ಲವು. ಈ ಸಸಾರಜನಕ ಅಗತ್ಯಗಳನ್ನು ನೈಸರ್ಗಿಕ ಮೇವುಗಳಲ್ಲಿ ಮುಖ್ಯವಾಗಿ ಕಡಿಮೆ ಗುಣದ ಮೇವುಗಳಲ್ಲಿ ಪೌಷ್ಟಿಕಾಂಶವನ್ನು ಹೆಚ್ಚುವಂತೆ ಸಸಾರಜನಕೇತರ ಸಾರಜನಕವನ್ನು ಕೊಡುವ ಮೂಲಕ ಪೂರೈಸಬಹುದು. ಒಟ್ಟಿನಲ್ಲಿ ಹೇಳುವುದಾದರೆ ಸಸಾರಜನಕ ರಹಿತವಾದ ಕಡಿಮೆ ಹುಲ್ಲು, ಮೇವು, ದಂಟು ಮೊದಲಾದವುಗಳನ್ನು ಕೊಟ್ಟು ದನಗಳಲ್ಲಿ ಹಾಲೋತ್ಪಾದನೆಯನ್ನು ಹೆಚ್ಚಿಸಿಕೊಳ್ಳಬಹುದು ಹಾಗೂ ಹೆಚ್ಚು ಬೆಲೆಯ ಸಸಾರಜನಕ ಪದಾರ್ಥಗಳನ್ನೊಳಗೊಂಡಿರುವ ದ್ವಿದಳ ಧಾನ್ಯಗಳ ಕಾಳಿನ ಮಿಶ್ರಣದ ಪ್ರಮಾಣವನ್ನು ಕಡಿಮೆ ಪ್ರಮಾಣದಲ್ಲಿ ಕೊಟ್ಟು ಅರ್ಥಾತ್ ಕಡಿಮೆ ಖರ್ಚಿನಲ್ಲಿ ಹೆಚ್ಚು ಹಾಲನ್ನು ಉತ್ಪಾದಿಸಬಹುದು. ಇದರಿಂದ ವೆಚ್ಚ ಕಡಿಮೆ; ಆದಾಯ ಹೆಚ್ಚು.

ಇನ್ನು ಕೆಲವು ವಿಶಿಷ್ಟ ಸೂಕ್ಷ್ಮಜೀವಿಗಳು 'ಬಿ' ಕಾಂಪ್ಲೆಕ್ಸ್ ಮುಂತಾದ ಅನ್ನಾಂಗಗಳನ್ನು ತಯಾರಿಸುತ್ತವೆ. ಶರ್ಕರ ಪಿಷ್ಟಾದಿಗಳನ್ನು ಅಧಿಕಾಂಶದಲ್ಲಿ ಒಳಗೊಂಡಿರುವ ಕಾಕಂಬಿ ಅಥವಾ ಬೆಲ್ಲದಂಶವನ್ನೊಳಗೊಂಡಿರುವ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ತಿನ್ನಿಸಿದಲ್ಲಿ ಈ ಜೀವಿಗಳ ಪಚನಕ್ರಿಯೆಗೆ ತಡೆಯುಂಟಾಗುತ್ತದೆ. ಆದ್ದರಿಂದ ಅಂಥ ವಸ್ತುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಕೊಡುವುದು ಉತ್ತಮ. ಅಲ್ಲದೆ ಮೇವು ಬಹಳ ಬಲಿತಮೇಲೆ ಅಂದರೆ ಕಾಳು ಬಲಿತ ಮೇಲೆ ಅಂಥ ಮೇವಿನಲ್ಲಿ ಸೆಲ್ಯೂಲೋಸ್ 'ಹೆಮಿಸೆಲ್ಯೂಲೋಸ್'ಗಳಲ್ಲಿ 'ಲಿಗ್ನಿನ್' ಎಂಬ ರಾಸಾಯನಿಕ ವಸ್ತು ಹೆಚ್ಚಾಗಿರುತ್ತದೆ. ಇಂಥ ಕಾಳು ಬಲಿತ ಮೇವನ್ನು ಅಂದರೆ ಸಿಬಿರು ಬಲಿತ ಮೇವನ್ನು ಕೊಯ್ದು ತಿನ್ನಿಸಿದಲ್ಲಿ ಮೆಲುಕು ಚೀಲದಲ್ಲಿರುವ ಅಣುಕ್ರಿಮಿಗಳು ಸಮರ್ಪಕವಾಗಿ ತಮ್ಮ ಪಚನಕ್ರಿಯೆಯನ್ನು ಮಾಡದಂತೆ ಈ 'ಲಿಗ್ನಿನ್' ವಸ್ತುವು ತಡೆಯುಂಟು ಮಾಡುತ್ತದೆ. ಆದ್ದರಿಂದ ದನಗಳಿಗೆ ಬಲಿತ ಮೇವು ಕೊಡುವುದು ಉಚಿತವಲ್ಲ. ಎಳೆಯದಾದ, ರಸಭರಿತವಾದ ಮೇವು ಕೊಟ್ಟಲ್ಲಿ ಜೀವಿಗಳು ಇಂಥಾ ಮೇವನ್ನು ಸಂಪೂರ್ಣವಾಗಿ ಜೀರ್ಣಿಸಿ ರಕ್ತಗತವಾಗುವಂತೆ ಸಹಾಯ ಮಾಡುತ್ತವೆ. ಏಕೆಂದರೆ ಇಂತಹ ಎಳೆಯ ಮೇವಿನಲ್ಲಿ 'ಲಿಗ್ನಿನ್' ಪದಾರ್ಥ ಅತಿ ಕಡಿಮೆ ಪ್ರಮಾಣದಲ್ಲಿರುತ್ತದೆ.

ಯೂರಿಯಾವನ್ನು ಕೊಡುವುದಾದಲ್ಲಿ ಯಾವಾಗಲೂ ಪಿಷ್ಟ ಪದಾರ್ಥಗಳಿಂದ ಕೂಡಿದ ಆಹಾರ ಪದಾರ್ಥಗಳೊಂದಿಗೆ ಸೇರಿಸಿಕೊಡುವುದು ಉತ್ತಮ ಪದ್ಧತಿ. ಹೀಗೆ ಮಾಡುವುದರಿಂದ ಈ ಪಿಷ್ಟಪದಾರ್ಥಗಳಿಂದ ಉತ್ಪನ್ನವಾಗುವ ಸ್ನಿಗ್ಧ ಪದಾರ್ಥವು ತಾತ್ಕಾಲಿಕವಾಗಿ ಅಮೋನಿಯಾವನ್ನು ತಡೆದು ನಿಲ್ಲಿಸುತ್ತದೆ. ಹೀಗಾಗಿ ಸೂಕ್ಷ್ಮಜೀವಿಗಳಿಗೆ ಅಮೋನಿಯಾವನ್ನು ಸಸಾರಜನಕವನ್ನಾಗಿ ಪರಿವರ್ತಿಸಲು ಬಹಳ ಅನುಕೂಲವಾಗುತ್ತದೆ. ಆಹಾರದಲ್ಲಿ ಪಿಷ್ಟ ಪದಾರ್ಥಗಳಿಲ್ಲದೆ ಯೂರಿಯಾ ಕೊಟ್ಟಲ್ಲಿ ಅದು ಬಾಧಕವಾಗಿ ಪರಿಣಮಿಸುತ್ತದೆ ಮತ್ತು ಕಾಳಿನ ಮಿಶ್ರಣದಲ್ಲಿಯ ಯೂರಿಯಾ 3 ಕ್ಕಿಂತ ಹೆಚ್ಚು ಇರಬಾರದು. ಯೂರಿಯಾ ಮತ್ತು ಕಬ್ಬಿನ ಕಾಕಂಬಿಯನ್ನು ದನಗಳಿಗೆ ಮೇವಿನೊಂದಿಗೆ ತಿನ್ನುವುದರಿಂದ ಇಂದಿನ ಸಸಾರಜನಕ ತೀವ್ರ ಕೊರತೆಯನ್ನು ನೀಗಿಸಬಹುದು ಎಂದು ಹೇಳಲಾಗಿದೆ. 6 ತಿಂಗಳಿಗಿಂತ ಕಡಿಮೆ ವಯಸ್ಸಿನ ಕರುಗಳು ಯೂರಿಯಾದ ಬಳಕೆಯನ್ನು ಮಾಡಬಾರದು. ಶಿಫಾರಸು ಮಾಡಲಾದ ಪ್ರಮಾಣಕ್ಕಿಂತ ಹೆಚ್ಚಿನ ಬಲದ ಯೂರಿಯಾದ ದ್ರಾವಣವನ್ನು ಉಪಯೋಗಿಸುವುದು ಅಪಾಯಕಾರಿ. ನೇರವಾಗಿ ಯೂರಿಯಾ ದ್ರಾವಣವನ್ನು ಬಳಸದೆ ಮೇವು ಹಾಗೂ ಹಿಂಡಿಯೊಡನೆ ಮಾತ್ರ ಮಿಶ್ರಮಾಡಿ ಕೊಡಬೇಕು.

ದನಗಳ ಆಹಾರದಲ್ಲಿಯ ಖನಿಜಪದಾರ್ಥಗಳು ಮೆಲುಕು ಚೀಲದಲ್ಲಿರುವ ಸೂಕ್ಷ್ಮಜೀವಿಗಳು ಕಾರ್ಯಪ್ರವೃತ್ತವಾಗುವಂತೆ ಮಾಡಿ ಕಾರ್ಯವನ್ನು ಸಫಲಗೊಳಿಸು

ವಂತೆ ಉತ್ತೇಜನಗೊಳಿಸುತ್ತವೆ. ಆದ್ದರಿಂದ ದನಗಳಿಗೆ ಕೊಡುವ ಆಹಾರಪದಾರ್ಥಗಳಲ್ಲಿ ಖನಿಜಾಂಶಗಳಿರುವುದು ಅವಶ್ಯಕ. ಕೋಬಾಲ್ಟ್ ಖನಿಜಪದಾರ್ಥವು ದನಗಳ ಆಹಾರದಲ್ಲಿ ಇರಬೇಕಾದ ಒಂದು ಮುಖ್ಯವಸ್ತು. ಇದರ ಕೊರತೆಯಿಂದ ಸೂಕ್ಷ್ಮಜೀವಿಗಳು B_{12} ಜೀವನ ವಸ್ತುವನ್ನು ಕಡಿಮೆ ಪ್ರಮಾಣದಲ್ಲಿ ಉತ್ಪಾದಿಸುತ್ತವೆ ಮತ್ತು ಸೂಕ್ಷ್ಮಜೀವಿಗಳ ವೃದ್ಧಿಯೂ ಕಡಿಮೆಯಾಗುತ್ತದೆ. ಇದರಿಂದ ಮೇವು ದಂಟಿನಲ್ಲಿರುವ ಆಹಾರ ಪದಾರ್ಥಗಳು ಸಂಪೂರ್ಣವಾಗಿ ಜೀರ್ಣವಾಗಿ ರಕ್ತಗತವಾಗಲಾರದು.

ಆಹಾರದಲ್ಲಿರುವ ರಂಜಕ ಮತ್ತು ಕಬ್ಬಿಣಾಂಶಗಳು ಯೂರಿಯಾ ಸರಿಯಾಗಿ ಉಪಯೋಗವಾಗುವಂತೆ ಚಾಲನೆ ನೀಡುವುದಲ್ಲದೆ ಮೇವಿನಲ್ಲಿರುವ ಸೆಲ್ಯೂಲೋಸ್ ಭಾಗವನ್ನು ಮೊಲುಕು ಚೀಲದಲ್ಲಿರುವ ಸೂಕ್ಷ್ಮಜೀವಿಗಳು ಜೀರ್ಣಗೊಳಿಸುವಂತೆ ಸಹಾಯ ಮಾಡುತ್ತವೆ. ಹೈನದ ದನಗಳ ಆಹಾರದಲ್ಲಿ ಖನಿಜಾಂಶಗಳು ಬಹಳ ಮುಖ್ಯವಾದ ವಸ್ತುಗಳು. ಈ ಪ್ರಕಾರ ನಾನಾ ವಿಧದಲ್ಲಿ ಮೆಲುಕುಚೀಲದಲ್ಲಿರುವ ವಿವಿಧ ಸೂಕ್ಷ್ಮಜೀವಿಗಳು ದನಗಳ ಆಹಾರವು ಪಚನವಾಗಿ ರಕ್ತಗತವಾಗುವಂತೆ ಸಿದ್ಧಗೊಳಿಸುವುದಲ್ಲದೆ ಅವುಗಳ ಹೈನೋತ್ಪಾದನೆ ಹೆಚ್ಚುವಂತೆ ಸಹಾಯ ಮಾಡುತ್ತವೆ.

ಇದನ್ನೆಲ್ಲಾ ನೋಡಿದರೆ ಕಾಲಗರ್ಭದಲ್ಲಿ ಇನ್ನೂ ಏನೇನು ಆಶ್ಚರ್ಯಕರವಾದ ಸಂಗತಿಗಳು ಅಡಗಿವೆಯೋ ಯಾರು ಬಲ್ಲರು? ಇದೆಲ್ಲವನ್ನೂ ತಿಳಿಯಲು, ನೋಡಲು ವೈಜ್ಞಾನಿಕ ಚಕ್ಷು ಬೇಕು. ಇದುವೇ ಜೀವನ. ಜೀವನದಲ್ಲಿ ಪ್ರಕೃತಿಯ ಕೈವಾಡದ ಮಹಿಮೆಯನ್ನು ಇನ್ನೂ ತಿಳಿಯುವುದಿದೆ.

ಹೈನೋತ್ಪಾದನೆ

ಆಕಳು ಮತ್ತು ಎಮ್ಮೆಗಳನ್ನು ಹಾಲಿಗಾಗಿ ಸಾಕುತ್ತೇವೆ. ದನಗಳಲ್ಲಿ ಹಾಲು ಕೊಡುವ ಗುಣ ಅವುಗಳು ತಿನ್ನುವ ಆಹಾರದ ಪ್ರಮಾಣ ಮತ್ತು ಅನುವಂಶಿಕವಾಗಿ ಪಡೆದ ಹುಟ್ಟುಗುಣಗಳನ್ನು ಅವಲಂಬಿಸಿರುತ್ತದೆ. ದನಗಳು ಮೊದಲು ತಮ್ಮ ಜೀವಧಾರಣೆಗೆ ಬೇಕಾದ ವಸ್ತುಗಳನ್ನು ಆಹಾರದಿಂದ ಪಡೆದುಕೊಂಡು, ಶರೀರ ರಕ್ಷಣೆ ಮಾಡಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತವೆ. ಉಳಿದ ಹೆಚ್ಚಿನ ಆಹಾರವನ್ನು ಹಾಲಾಗಿ ಪರಿವರ್ತನೆ ಮಾಡುತ್ತವೆ. ಆಂದಮೇಲೆ ದನಗಳಿಗೆ ಈ ಪೋಷಕ ಆಹಾರದ ಜೊತೆಗೆ ಕ್ಷೀರೋತ್ಪಾದಕ ಆಹಾರವನ್ನು ಕೊಡಬೇಕಾದುದು ಅಗತ್ಯ. ಈ ಉತ್ಪಾದಕ ಆಹಾರವು ದನಗಳಲ್ಲಿ ವಂಶಪರಂಪರೆಯಾಗಿ ಸಾಗಿಬಂದ ಹಾಲು ಕೊಡುವ ಗುಣವನ್ನು ಚೇತನಗೊಳಿಸಿ ದ್ವಿಗುಣಪಡಿಸಲು ಸಹಾಯಕವಾಗುತ್ತದೆ. ಆದ್ದರಿಂದ ಆಕಳುಗಳು ಮೊದಲು ಅನುವಂಶಿಕವಾಗಿ ಬಂದ ಈ ಹಾಲು

ಹಿಂಡುವ ಗುಣಧರ್ಮವನ್ನು ಪಡೆದಿರಲೇಬೇಕು. ಇಂಥ ಗುಣವುಳ್ಳ ದನಗಳಿಗೆ ಸರಿಯಾದ ಪ್ರಮಾಣದಲ್ಲಿ ಉತ್ಪಾದಕ ಆಹಾರವನ್ನು ಕೊಟ್ಟಲ್ಲಿ ಆಗ ಅವು ಹೆಚ್ಚು ಹಾಲು ಕರೆಯಬಲ್ಲವು.

ದನಗಳಲ್ಲಿಯ ಹಾಲು ಉತ್ಪಾದಿಸುವ ಅನುವಂಶಿಕ ಗುಣ ಮತ್ತು ಅವುಗಳಿಗೆ ಕೊಡುವ ಉತ್ಪಾದಕ ಆಹಾರ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತವೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ. ಹೆಚ್ಚು ಆಹಾರ ಕೊಟ್ಟರೆ ಅವು ಹೆಚ್ಚು ಹಾಲು ಹಿಂಡುತ್ತವೆ. ಕಡಿಮೆ ಆಹಾರ ಕೊಟ್ಟರೆ ಕಡಿಮೆ ಹಾಲು ಹಿಂಡುತ್ತವೆ. ಇದು ಒಂದು ಸಾಮಾನ್ಯ ನಿಯಮ. ಹಾಲು ಹೆಚ್ಚು ಹಿಂಡಲಿ ಎಂದು ದನಗಳಿಗೆ ಅವು ಹಾಲು ಹಿಂಡುವ ಶಕ್ತಿಗಿಂತ ಹೆಚ್ಚು ಆಹಾರವನ್ನು ಕೊಟ್ಟಲ್ಲಿ ಈ ಅಧಿಕಾಂಶ ಆಹಾರ ದನಗಳ ಶರೀರದಲ್ಲಿ ಕೊಬ್ಬಾಗಿ ಪರಿವರ್ತಿತವಾಗಿ ಅವುಗಳು ಬೊಜ್ಜನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಹೀಗೆ ಬೊಜ್ಜು ಬೆಳೆಸಿಕೊಂಡ ದನಗಳು ಹಾಲನ್ನು ಕಡಿಮೆ ಪ್ರಮಾಣದಲ್ಲಿ ಕೊಡುತ್ತವೆ. ಕೆಲವು ಸಮಯ ಹಾಲನ್ನು ಕೊಡುವುದನ್ನು ಸಹ ನಿಲ್ಲಿಸಬಹುದು ಇದೂ ಅಲ್ಲದೆ ಅವುಗಳ ಗರ್ಭಧಾರಣೆಯು ಸಹ ತಡವಾಗಬಹುದು ಅಥವಾ ಬಂಡು ಆಗುವ ಸಂಭವವುಂಟು. ಆದ್ದರಿಂದ ದನಗಳಿಗೆ ಅವುಗಳ ಹಾಲಿನ ಉತ್ಪಾದನಾ ಶಕ್ತಿಯನ್ನು ಅನುಸರಿಸಿ ಅದಕ್ಕೆ ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಕೊಡುವುದೇ ಹೈನು ಉದ್ದಿಮೆಯ ಗುಟ್ಟು.

ದನಗಳ ದಿನಚರಿ

ಒಂದು ದಿವಸಕ್ಕೆ ಒಂದು ಹಸು 24 ಗಂಟೆಗಳ ಕಾಲಾವಧಿಯಲ್ಲಿ 8 ಗಂಟೆಗಳ ಕಾಲ ಮಾತ್ರ ಹುಲ್ಲುಗಾವಲಿನಲ್ಲಿ ಮೇಯುತ್ತದೆ: 12 ಗಂಟೆಗಳ ಕಾಲ ಮಲಗುವುದು, ಮೆಲುಕು ಹಾಕುವುದು ಮತ್ತು ವಿಶ್ರಾಂತಿಗಾಗಿಯೂ, ಉಳಿದ 4 ಗಂಟೆಗಳ ಕಾಲವನ್ನು ಏಳುವುದು, ಮಲಗುವುದು ಮತ್ತು ಅತ್ತಿತ್ತ ತಿರುಗಾಡುವುದರಲ್ಲಿ ಕಳೆಯುವುದು ಎಂದು ಅಮೇರಿಕೆಯಲ್ಲಿಯ ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ ನಡೆಸಿದ ಒಂದು ಪ್ರಯೋಗದಿಂದ ತಿಳಿದುಬಂದಿದೆ. ಆಕಳಿನ ದಿನದ ಕಾರ್ಯಕ್ರಮ ಹೀಗಿರುವಾಗ ಇವರಲ್ಲಿ ಅದಕ್ಕೆ ಹಾಲು ಹಿಂಡಲು ಪ್ರತ್ಯೇಕ ಕಾಲಾವಕಾಶವೇ ಇಲ್ಲದಂತೆ ಆಗುತ್ತದೆ. ಆದ್ದರಿಂದ ಈ ಹಾಲು ಹಿಂಡುವ ಕಾರ್ಯವನ್ನು ಬೇಗನೆ ಸ್ವಲ್ಪ ವೇಳೆಯಲ್ಲಿಯೇ ಸಂಪೂರ್ಣವಾಗಿ ಮುಗಿಸಿಬಿಡಬೇಕು. ಇದು ಬಹಳ ತಡವಾದಲ್ಲಿ ಆಗ ಆಕಳಿಗೆ ಹುಲ್ಲುಗಾವಲಿನಲ್ಲಿ ಮೇಯಲು ಮತ್ತು ವಿಶ್ರಾಂತಿಗಾಗಿ ಕಾಲಾವಕಾಶದಲ್ಲಿ ಕೊರತೆಯಾಗುವುದು.

ಆಕಳು ಸಾಮಾನ್ಯವಾಗಿ ಅರ್ಧದಿಂದ 1 ಅಂಗುಲ ಎತ್ತರ ಬೆಳೆದಿರುವ ಹುಲ್ಲನ್ನು ಮೇಯಬಲ್ಲದು. ನೆಲದಿಂದ 4 ರಿಂದ 5 ಅಂಗುಲ ಎತ್ತರ ಬೆಳೆದಿರುವ ಹುಲ್ಲುಗಾವಲಿನಲ್ಲಿ 24 ಗಂಟೆಗಳಲ್ಲಿ ಒಂದು ಹಸು 150 ಪೌಂಡಿನಷ್ಟು ಹುಲ್ಲು ಮೇಯುವುದು. ಇಷ್ಟು ಪ್ರಮಾಣದ ಆಹಾರವು ಒಂದು ದಿವಸಕ್ಕೆ 4 ಗ್ಯಾಲನ್ ಹಾಲು ಕೊಡುವ ಆಕಳಿಗೆ ಸಾಕಾಗುವುದು. ಆದರೆ ಹುಲ್ಲುಗಾವಲಿನಲ್ಲಿ ಹುಲ್ಲು ಎಲ್ಲ ಕಡೆ ಒಂದೇ ಸಮನಾಗಿ ಬೆಳೆದಿರುವುದಿಲ್ಲ. ಕೆಲವು ಕಡೆ ಹೆಚ್ಚು ಉದ್ದವಾಗಿ ಮತ್ತು ಬಿರುಸಾಗಿ ಒರಟಾಗಿ ಬೆಳೆದಿರುತ್ತದೆ. ಕೆಲವು ಭಾಗದಲ್ಲಿ ಸಣ್ಣದಾಗಿ ಬೆಳೆದಿರುತ್ತದೆ. ಹೀಗಾಗಿ ಹಸು ಹುಲ್ಲನ್ನು ಅಲ್ಲಿ ಇಲ್ಲಿ ಓಡಾಡಿ, ತಿರುಗಾಡಿ, ಆರಿಸಿ, ಹುಡುಕಿ ಮೇಯಬೇಕಾಗುವುದು. ಇದರಿಂದ ಅದು ಕಡಿಮೆ ಹುಲ್ಲನ್ನು ಮೇಯುವುದು. ಏಕೆಂದರೆ ಈ ಮೊದಲೇ ಹೇಳಿದ ಪ್ರಕಾರ ಅದರ ಮೇಯುವ ಕಾಲಮಿತಿ 8 ಗಂಟೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಹೀಗಾಗಿ ಆಕಳು ಹೆಚ್ಚು ಹಾಲು ಕೊಡುವ ದಿವಸಗಳಲ್ಲಿ ಕೇವಲ ಹುಲ್ಲುಗಾವಲಿನಲ್ಲಿ ಮಾತ್ರ ಮೇಯುವುದರಿಂದಲೇ ಈ ಅಧಿಕ ಪ್ರಮಾಣದ ಹಾಲು ಹಿಂಡುವ ಪ್ರಮಾಣವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಪೌಷ್ಟಿಕ ಆಹಾರ

ಒಟ್ಟಿನಲ್ಲಿ ಒಂದು ವರ್ಷದಲ್ಲಿ ಒಂದು ಆಕಳು ಸರಾಸರಿ ದಿನಒಂದಕ್ಕೆ 50 ಪೌಂಡಿನಷ್ಟು ಹುಲ್ಲನ್ನು ಹುಲ್ಲುಗಾವಲಿನಲ್ಲಿ ಮೇಯುವುದು. ಈ ಪ್ರಮಾಣವು ಕೇವಲ ಆಕಳಿನ ಜೀವಧಾರಣೆಗೆ ಮಾತ್ರ ಸಾಕಾಗುತ್ತದೆ. ಆದ್ದರಿಂದ ಹಾಲಿನ ಉತ್ಪಾದನೆಗಾಗಿ ಹೈನು ಆಕಳುಗಳಿಗೆ ಅವುಗಳ ಈ ಶರೀರ ಪೋಷಣೆಯ ಆಹಾರದ ಜೊತೆಗೆ ಹಾಲಿನ ಉತ್ಪಾದನೆಗಾಗಿ ಅದರ ಹಾಲಿನ ಪ್ರಮಾಣಕ್ಕನುಗುಣವಾಗಿ ಕಾಳಿನ ಮಿಶ್ರಣದ ಪೌಷ್ಟಿಕ ಆಹಾರವನ್ನು ಅಂದರೆ ಅಕ್ಕಿ ತೌಡು, ಗೋಧಿ ತೌಡು, ಶೇಂಗಾ ಹಿಂಡಿ ಮೊದಲಾದ ದ್ವಿದಳ ಧಾನ್ಯಗಳ ನುಚ್ಚನ್ನು ಬೆರೆಸಿ ನೀರಿನಲ್ಲಿ ತೋಯಿಸಿ ಇವನ್ನು ಪೂರಕ ಆಹಾರವಾಗಿ ಕೊಡಬೇಕಾದುದು ಅಗತ್ಯ.

ಒಂದು ಆಕಳ ಬಾಯಿ ಸಾಮಾನ್ಯವಾಗಿ ಎರಡೂವರೆ ಅಂಗುಲದಷ್ಟು ಅಗಲವಿರುತ್ತದೆ. ಆಕಳು ಒಂದು ನಿಮಿಷಕ್ಕೆ 50 ರಿಂದ 70 ಅಥವಾ ಬಹಳ ಹೆಚ್ಚೆಂದರೆ 90 ಸಾರಿ ಬಾಯಿಂದ ಹುಲ್ಲನ್ನು ನೆಲದಿಂದ ಕಚ್ಚಿ ಕಿತ್ತು ತಿನ್ನುವುದು. ಅದು ಹೀಗೆ ಒಟ್ಟು ಕಿತ್ತ ಹುಲ್ಲನ್ನು ಒಂದು ಕಡೆ ಒಟ್ಟುಗೂಡಿಸಿ ಮೆದೆಹಾಕಿದಲ್ಲಿ ಅದು ಮಧ್ಯದಲ್ಲಿ 3ಅಡಿ ಎತ್ತರದ ಮತ್ತು 6 ಅಡಿ ಸುತ್ತಳತೆಯುಳ್ಳ ಒಂದು ದೊಡ್ಡ ಗುಡ್ಡೆಯಷ್ಟು

ಆಗುವುದು. ಇಷ್ಟು ದೊಡ್ಡ ಪ್ರಮಾಣದ ಹುಲ್ಲು ಮೆದೆಯನ್ನು ಕತ್ತರಿಸಲು ಎಷ್ಟು ವೇಳೆ ಬೇಕಾಗುವುದು ಎಂಬುದನ್ನು ಎರಡೂವರೆ ಅಂಗುಲವಿರುವ ಒಂದು ಕತ್ತರಿಸುವ ಯಂತ್ರದಿಂದ ಕಂಡುಹಿಡಿಯಲಾಗಿದೆ. ಆದರೆ ಆಕಳು ಈ ಹುಲ್ಲುಕತ್ತರಿಸುವ ಯಂತ್ರದಂತೆ ಒಂದು ಕಡೆಯಿಂದ ಹಿಡಿದು ಒಂದೇ ಸಮನಾಗಿ ಮೇಯದೆ, ತನಗೆ ಬೇಕಾದ ಜಾಗದಲ್ಲಿ ಹುಲ್ಲನ್ನು ಹುಡುಕಿಕೊಂಡು ಹೋಗಿ ಆರಿಸಿಕೊಂಡು ಮೇಯುವುದು. ಆಕಳು ಒಂದು ಔನ್ಸಿನಷ್ಟು ಹುಲ್ಲನ್ನು ಕಿತ್ತು ಬಾಯೊಳಗೆ ತೆಗೆದುಕೊಂಡಾಗ ಅದು ಈ ಹುಲ್ಲಿನ 1/10 ಭಾಗದಷ್ಟನ್ನು ಪ್ರತಿಯೊಂದು ಸಾರಿಗೆ ತಿನ್ನುವುದು. ಹೀಗೆ ಅದು 150 ಪೌಂಡು ಹುಲ್ಲನ್ನು ತಿನ್ನಬೇಕಾದಾಗ 40,000 ಸಾರಿ ನೆಲದಿಂದ ಹುಲ್ಲನ್ನು ಬಾಯಿಂದ ಕಚ್ಚಿ ಕಿತ್ತು ತಿನ್ನಬೇಕಾಗುವುದು. ಈ ಪ್ರಕಾರ ಹೈನು ದನ ತನಗೆ ಬೇಕಾದ ಹುಲ್ಲಿಗಾಗಿ ಹುಲ್ಲುಗಾವಲಿನಲ್ಲಿ ದೈಹಿಕ ಶ್ರಮ ವಹಿಸಬೇಕಾಗುವುದು. ಈ ದೈಹಿಕ ಶ್ರಮಕ್ಕೆ ತಕ್ಕಂತೆ ಶಕ್ತಿವರ್ಧಕ ಆಹಾರ ಪೂರೈಸಬೇಕು.

ತಳಿ ರಕ್ಷಣೆ

ಆಕಳು ಹಾಲು ಕೊಡುವ ಕಾಲದಲ್ಲಿ ಅದು ಹೆಚ್ಚು ಹಾಲು ಕೊಡಲಿ ಎಂಬ ಉದ್ದೇಶದಿಂದ ಅದಕ್ಕೆ ಸಾಕಷ್ಟು ಉತ್ತಮ ಆಹಾರವನ್ನು ಕೊಡುವುದು ಮತ್ತು ಹೆಚ್ಚಿನ ಆರೈಕೆ ಮಾಡುವುದು ಸಾಮಾನ್ಯ ಪದ್ಧತಿ. ಅದೇ ಆಕಳು ತಾತ್ಕಾಲಿಕವಾಗಿ ಬರಡಾದಾಗ ಹಾಲು ಹಿಂಡುವುದಿಲ್ಲವೆಂದು ಅದನ್ನು ಅಲಕ್ಷಿಸಿ, ಸರಿಯಾಗಿ ಆರೈಕೆ ಮಾಡದೆ ಬಿಟ್ಟು ಬಿಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಇಂಥ ಬರಡಾದ ಆಕಳುಗಳನ್ನು ಕೈಗೆ ಬಂದ ಹಾಗೆ ಹಣಕ್ಕೆ ಮಾರುವುದು ಮತ್ತು ಕಟುಕರಿಗೆ ಕೊಡುವುದು ಇಂದು ದೊಡ್ಡ ಪಟ್ಟಣಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ಹೀಗೆ ಮಾಡುವುದರಿಂದ ಬಹು ಹಿಂದಿನಿಂದ ಉಳಿಸಿಕೊಂಡು ಬಂದ ಅನುವಂಶಿಕ ಗುಣಗಳಿಂದ ಕೂಡಿದ ಹೈನು ತಳಿಯ ದನಗಳು ಕಳೆದುಹೋಗಬಹುದು. ಜಾಣನಾದವನು ತನ್ನ ಮುಂದಿನ ಜೀವನ ಸೌಕರ್ಯಕ್ಕಾಗಿ ಆಪತ್ತಿಗಾಗಿ ತನ್ನ ಜೀವವಿಮೆಯನ್ನು ಮಾಡುತ್ತಾನೆ. ಅದೇ ಪ್ರಕಾರ ಗೋಪಾಲಕರು ಆಕಳು ಬರದಿದ್ದಾಗ ಅದಕ್ಕೆ ಸರಿಯಾದ ಪೌಷ್ಟಿಕ ಆಹಾರ ಕೊಟ್ಟು ಪಾಲನೆ ಮಾಡಿದಲ್ಲಿ ಆದರ ಶರೀರದ ಅವಯವಗಳು ಚೆನ್ನಾಗಿ ಬೆಳೆದು ರಕ್ತವೃದ್ಧಿಯಾಗಿ, ಗರ್ಭದಲ್ಲಿರುವ ಕರುವು ಚೆನ್ನಾಗಿ ಬೆಳೆಯುವುದು. ಕರುಹಾಕಿದ ನಂತರ ಆಕಳು ಹೆಚ್ಚು ಹಾಲು ಹಿಂಡಲು ಸಮರ್ಥವಾಗುವುದು. ಕಾರಣ ಇಂದು ಆಕಳು ಬರದಿದ್ದಾಗ ಕೊಟ್ಟ ಆಹಾರ ಮುಂದಿನ ಜೀವನದ ಉಪಯೋಗಕ್ಕಾಗಿ ಕೂಡಿಟ್ಟ ಜೀವವಿಮೆ ಎಂದು ತಿಳಿಯಬೇಕು. ಬರಡಿದ್ದಾಗ ಮಾಡಿದ ಖರ್ಚು ಮುಂದೆ ಕರು ಹಾಕಿದ ನಂತರ ಅದರ ನಾಲ್ಕು ಪಟ್ಟು ಲಾಭವನ್ನು ಕೊಡುವುದು.

ಸ್ವಭಾವಜನ್ಯ ಭೇದ

ಒಂದೇ ಹೋರಿಗೆ ಹುಟ್ಟಿದ ಎರಡು ಜರ್ಸಿ ಆಕಳುಗಳಿಗೆ ಎಲ್ಲ ವಿಧದಲ್ಲಿಯೂ ಒಂದೇ ಸಮನಾದ ಪಾಲನೆ, ಪೋಷಣೆ ಆರೈಕೆ ಮಾಡಿದಾಗಲೂ ಸಹ ಇವುಗಳ ಪೈಕಿ ಒಂದು ಆಕಳು ಒಂದು ವರ್ಷದಲ್ಲಿ 4261 ಕಿಜಿ ಹಾಲು ಮತ್ತು 234.5 ಕಿಜಿ ತುಪ್ಪವನ್ನು ಕೊಟ್ಟಿತು. ಇನ್ನೊಂದು ಆಕಳು ಅದೇ ವರ್ಷದಲ್ಲಿ 1594 ಕಿಜಿ ಹಾಲು ಮತ್ತು 84.5 ಕಿಜಿ ತುಪ್ಪವನ್ನು ಕೊಟ್ಟಿತು. ಒಂದನೆಯ ಆಕಳು ಒಂದು ವರ್ಷದಲ್ಲಿ 9385.5 ಕಿಜಿ ಮತ್ತು 2ನೇ ಆಕಳು 5397.5 ಕಿಜಿ ಆಹಾರವನ್ನು ತಿಂದಿತು. ಈ ಆಹಾರದಲ್ಲಿ ಎರಡೂ ದನಗಳು ತಮ್ಮ ಶರೀರ ಪೋಷಣೆಗಾಗಿ ಸರಿಸಮಾನವಾಗಿ ಆಹಾರವನ್ನು ಉಪಯೋಗಿಸಿಕೊಂಡಿರುತ್ತವೆ. ಒಂದನೆಯ ಆಕಳು ಒಟ್ಟು ಆಹಾರದಲ್ಲಿ 3612 ಕಿಜಿ ಮತ್ತು ಎರಡನೆಯ ಆಕಳು 3212.5 ಕಿಜಿ ಆಹಾರವನ್ನು ಜೀವ ಧಾರಣೆಗಾಗಿ ಉಪಯೋಗಮಾಡಿಕೊಂಡವು. ಆದರೆ ಹಾಲಿನ ಉತ್ಪಾದನೆಗಾಗಿ ಒಂದನೆಯ ಆಕಳು ಎರಡನೆಯ ಆಕಳಿಗಿಂತ ಹೆಚ್ಚು ಆಹಾರವನ್ನು ಉಪಯೋಗಿಸಿಕೊಂಡಿತು. ಎರಡನೆಯ ಆಕಳು ಕಡಿಮೆ ಆಹಾರವನ್ನು ಉಪಯೋಗ ಮಾಡಿಕೊಂಡಿತು.

ಮೊದಲನೆಯ ಆಕಳು ಪೂರ್ಣ ಆಹಾರದಲ್ಲಿ ಶೇಕಡಾ 35ರಷ್ಟು ಆಹಾರವನ್ನು ತನ್ನ ಶರೀರದ ಪೋಷಣೆಗಾಗಿ ಉಪಯೋಗಿಸಿಕೊಂಡು ಉಳಿದ ಶೇಕಡಾ 65ರಷ್ಟು ಆಹಾರವನ್ನು ಹಾಲಿನ ಉತ್ಪಾದನೆಗಾಗಿ ಉಪಯೋಗ ಮಾಡಿಕೊಂಡಿತು. ಅದೇ ಎರಡನೆಯ ಆಕಳು ಶೇಕಡಾ 55ರಷ್ಟು ಆಹಾರವನ್ನು ತನ್ನ ಶರೀರ ರಕ್ಷಣೆಗಾಗಿ ಉಪಯೋಗಿಸಿಕೊಂಡು ಉಳಿದ ಶೇಕಡಾ 45ರಷ್ಟು ಆಹಾರವನ್ನು ಹಾಲಿನ ಉತ್ಪಾದನೆಗಾಗಿ ಉಪಯೋಗಿಸಿಕೊಂಡಿತು. ಒಂದನೆಯ ಆಕಳು ಒಟ್ಟಿನಲ್ಲಿ ಹೆಚ್ಚು ಆಹಾರವನ್ನು ತಿಂದರೂ ಸಹ ಅದು ಎರಡನೆಯ ಆಕಳಿಗಿಂತ ಹೆಚ್ಚು ಹಾಲು ಉತ್ಪಾದಿಸಿರುವುದರಿಂದ ಲಾಭದಾಯಕ. ಆಕಳುಗಳಲ್ಲಿ ಹಾಲು ಹಿಂಡುವ ಗುಣ ನೈಸರ್ಗಿಕವಾಗಿದ್ದರೂ ಒಂದನೆಯ ಆಕಳಿನಲ್ಲಿ ಈ ಗುಣ ಅನುವಂಶಿಕವಾಗಿ ಅಧಿಕವಾಗಿರುತ್ತದೆ.

ಕ್ಷೀರೋತ್ಪಾದಕ ಗ್ರಂಥಿಗಳು

ಆಕಳ ಕೆಚ್ಚಲು ಹಾಲನ್ನು ತಯಾರಿಸುವ ಒಂದು ಕಾರ್ಖಾನೆ. ಅದಕ್ಕೆ ಕೊಡುವ ಆಹಾರವೇ ಅದರ ಕಚ್ಚಾಮೂಲವಸ್ತು. ಈ ಕಚ್ಚಾಮೂಲವಸ್ತುವನ್ನು ಹಾಲಾಗಿ ಪರಿವರ್ತಿಸುವ ಕಾರ್ಮಿಕರು ಕೆಚ್ಚಲಿನಲ್ಲಿರುವ ಕ್ಷೀರಜನಕ ಗ್ರಂಥಿಗಳು. ಇವುಗಳನ್ನು ಹಾಲು ಸ್ರವಿಸುವ ಕೋಶಗಳು ಎಂದು ಕರೆಯುತ್ತಾರೆ. ಯಾವ ಆಕಳ ಕೆಚ್ಚಲಿನಲ್ಲಿ

ಈ ಕ್ಷೀರಜನಕ ಗ್ರಂಥಿಗಳು ಅಧಿಕವಾಗಿರುತ್ತವೆಯೋ ಅಂಥಾ ಹಸುಗಳು ಹೆಚ್ಚು ಹಾಲನ್ನು ಉತ್ಪಾದಿಸುತ್ತವೆ. ಈ ಕ್ಷೀರಜನಕಗ್ರಂಥಿಗಳು ದನಗಳಲ್ಲಿ ಅನುವಂಶಿಕವಾಗಿ ಪಡೆದುಬಂದ ಗುಣ. ದನಗಳಿಗೆ ಸಾಕಷ್ಟು ಪೌಷ್ಟಿಕ ಆಹಾರವನ್ನು ಕೊಟ್ಟಲ್ಲಿ ಈ ಕ್ಷೀರಗ್ರಂಥಿಗಳು ಸಮರ್ಪಕವಾಗಿ ಕೆಲಸ ಮಾಡಬಲ್ಲವೇ ಹೊರತು ಗ್ರಂಥಿಗಳ ಸಂಖ್ಯೆಗಳನ್ನು ದ್ವಿಗುಣಿಸಲಾರವು. ಈ ಕ್ಷೀರಜನಕ ಗ್ರಂಥಿಗಳು ದನದಿಂದ ದನಕ್ಕೆ ವಂಶಪರಂಪರೆಯಾಗಿ ಸಾಗಿಬರುವುದೇ ಅವುಗಳ ಗುಣಧರ್ಮ.

ಹುಟ್ಟು ಗುಣ

ಇದನ್ನು ಕೆಳಗಿನ ಉದಾಹರಣೆಯಿಂದ ತಿಳಿಯಬಹುದು. ವಿವಿಲಾಫ್ರಾನ್ಸ್ ಎಂಬ ಹೆಸರಿನ ಜರ್ಸಿ ಆಕಳು ಮತ್ತು ಡಾಲಾಸ್‌ಬ್ಲಾಕ್‌ಬರ್ಡ್ ಎಂಬ ಹೆಸರಿನ ಅಬರ್ಡೀನ್ ಜಾತಿಯ ಎರಡೂ ಆಕಳುಗಳ ಕೆಚ್ಚಲುಗಳನ್ನು ಅಳತೆ ಮಾಡಿ ಪರೀಕ್ಷಿಸಲಾಯಿತು. ಈ ಎರಡೂ ಆಕಳುಗಳ ಕೆಚ್ಚಲುಗಳು ಉದ್ದ, ಅಗಲ, ಗಾತ್ರ, ಎಲ್ಲ ರೀತಿಯಲ್ಲೂ ಸರಿಸಮಾನವಾಗಿ ಕಂಡುಬಂದವು. ಆದರೆ ಅವುಗಳ ಹಾಲಿನ ಉತ್ಪಾದನೆಯ ಪ್ರಮಾಣದಲ್ಲಿ ಬಹಳ ಅಂತರ ಕಂಡುಬಂದಿತು. ಜರ್ಸಿ ಆಕಳು ಒಂದು ವರ್ಷದಲ್ಲಿ 7500 ಕೆಜಿ ಹಾಲು ಮತ್ತು 525 ಕೆಜಿ ಬೆಣ್ಣೆಯನ್ನು ಕೊಟ್ಟಿರುತ್ತದೆ. ಅದೇ ಮಾಂಸಕ್ಕಾಗಿ ಹೆಸರಾದ ಅಬರ್ಡೀನ್ ಜಾತಿಯ ಆಕಳು ತನ್ನ ಕರುವಿಗೆ ಮಾತ್ರ ಸಾಕಾಗುವಷ್ಟು ಹಾಲನ್ನು ಕರೆದಿರುತ್ತದೆ.

ಮುಂದೆ ಈ ಎರಡೂ ದನಗಳ ಕೆಚ್ಚಲುಗಳನ್ನು ಕೊಯ್ದು ಪರೀಕ್ಷಿಸಲಾಗಿ ಜರ್ಸಿ ಆಕಳಿನ ಕೆಚ್ಚಲು ಪೂರ್ತಿಯಾಗಿ ಹಾಲು ಉತ್ಪಾದಿಸುವ ಕ್ಷೀರಜನಕ ಗ್ರಂಥಿಗಳಿಂದ ತುಂಬಿದ್ದು ಅಬರ್ಡೀನ್ ಜಾತಿಯ ಆಕಳಿನ ಕೆಚ್ಚಲು ಮಾಂಸೋತ್ಪಾದಕ ಗ್ರಂಥಿಗಳಿಂದ ಕೂಡಿರುವುದು ಕಂಡುಬಂದಿತು. ಇದರಿಂದ ತಿಳಿದು ಬರುವುದೇನೆಂದರೆ ಈ ಮೇಲೆ ಹೇಳಿದ ಹಾಲಿನ ಕ್ಷೀರೋತ್ಪಾದಕ ಗ್ರಂಥಿಗಳು ಮತ್ತು ಮಾಂಸೋತ್ಪಾದಕ ಗ್ರಂಥಿಗಳು ಅನುವಂಶಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಹೋಗುವುದೇ ಗುಣಧರ್ಮ.

ಹೈನು ಉದ್ಯೋಗವನ್ನು ಧನಾರ್ಜನೆಗಾಗಿ ಮಾಡುವವರು, ಹೀಗೆ ಕ್ಷೀರೋತ್ಪಾದನೆಯ ಅನುವಂಶಿಕ ಗುಣದಿಂದ ಕೂಡಿದ ದನಗಳನ್ನು ಆರಿಸಿ ಸಂವರ್ಧನೆ ಮಾಡಿ ತಮ್ಮ ಹಿಂಡನ್ನು ಬೆಳಸಿಕೊಂಡಲ್ಲಿ ಅಧಿಕ ಹಾಲನ್ನು ಉತ್ಪಾದಿಸಬಹುದು. ಅಧಿಕ ಹಾಲಿನ ಉತ್ಪಾದನೆಯೇ ಹೈನು ಉದ್ದಿಮೆಯ ಯಶಸ್ಸಿಗೆ ಮೂಲಾಧಾರ.

ಕೃತ್ರಿಮ ಗರ್ಭಧಾರಣೆ

ಇಂದು ನಮ್ಮ ದೇಶದಲ್ಲಿಯ ದನಗಳು ಜಗತ್ತಿನಲ್ಲಿಯೇ ಅತಿ ಕಡಿಮೆ ಹಾಲು

ಹಿಂಡುತ್ತವೆ. ಪ್ರತಿಯೊಬ್ಬರಿಗೂ 3 ರಿಂದ 4 ಔನ್ಸ್‌ನಷ್ಟು ಹಾಲು ಸಿಗುತ್ತದೆ. ಎಂದು ಹೇಳಲಾಗಿದೆ. ಕನಿಷ್ಠಪಕ್ಷ ಪ್ರತಿಯೊಬ್ಬರಿಗೂ ದಿನಕ್ಕೆ ಕಡಿಮೆ ಎಂದರೆ 16 ಔನ್ಸ್ ಹಾಲು ಬೇಕಾಗುತ್ತದೆ. ಇಂದು ನಮ್ಮಲ್ಲಿ ಕ್ಷೀರೋತ್ಪಾದನೆ ಬಹಳ ಕಡಿಮೆ ಪ್ರಮಾಣದಲ್ಲಿ ಆಗುತ್ತದೆ. ಇದು ಒಂದು ಶೋಚನೀಯ ಸಂಗತಿ. ಹೀಗೆ ನಾವು ಇದಕ್ಕಾಗಿ ನಿರಾಶರಾಗಲು ಕಾರಣವಿಲ್ಲ. ನಮ್ಮಲ್ಲಿಯ ದನಗಳನ್ನು ಸರಿಯಾಗಿ ಸುಧಾರಿಸಿದ ವೈಜ್ಞಾನಿಕ ಪದ್ಧತಿಯ ತಳಹದಿಯ ಮೇಲೆ ಸಂವರ್ಧನೆ ಮಾಡಿ ಉತ್ತಮ ಆಹಾರವನ್ನು ಕೊಟ್ಟು ಪೋಷಿಸಿ ಆರೈಕೆ ಮಾಡಿದಲ್ಲಿ ನಮ್ಮಲ್ಲಿಯ ದನಗಳೂ ಸಹ ಹೆಚ್ಚು ಹಾಲು ಹಿಂಡಬಲ್ಲವು.

ಇಂದಿನ ಯುಗ ವಿಜ್ಞಾನಯುಗ. ಪಶುವೈದ್ಯಶಾಸ್ತ್ರ ವಿಜ್ಞಾನಿಗಳು ಈ ದಿಸೆಯಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ ಒಂದು ಮೈಲುಗಲ್ಲನ್ನು ಮುಟ್ಟಿರುತ್ತಾರೆ. ಅದೇ ಕೃತ್ರಿಮ ಗರ್ಭಧಾರಣೆಯ ಪ್ರಯೋಗ. ಈ ಕೃತ್ರಿಮ ಗರ್ಭಧಾರಣೆಯಿಂದ ನಮ್ಮಲ್ಲಿ ತೀವ್ರಗತಿಯಿಂದ ಶೀಘ್ರವಾಗಿ ಉತ್ತಮ ಹೈನತಳಿಯ ದನಗಳನ್ನು ಅಭಿವೃದ್ಧಿಗೊಳಿಸಿ ಕ್ಷೀರೋತ್ಪಾದನೆಯನ್ನು ಅಧಿಕಗೊಳಿಸಲು ಕೃತ್ರಿಮ ಗರ್ಭಧಾರಣೆಯೊಂದೇ ಶ್ರೇಷ್ಠ, ಉತ್ತಮವಾದ ಮತ್ತು ಹತ್ತಿರದ ಒಳದಾರಿ. ಆಕಳುಗಳನ್ನು ನೈಸರ್ಗಿಕ ರೀತಿಯಿಂದ ಕಟ್ಟಿಸಲು (ಗರ್ಭಧಾರಣೆ ಮಾಡಲು) ನಮ್ಮಲ್ಲಿಯ ಅಸಂಖ್ಯ ದನಗಳಿಗೆ ಸಾಕಾಗುವಷ್ಟು ದೊಡ್ಡ ಪ್ರಮಾಣದಲ್ಲಿ ಉತ್ತಮ ಹಾಗೂ ಬೇಕಾದ ಗುಣಲಕ್ಷಣಗಳುಳ್ಳ ಬೀಜದ ಹೋರಿಗಳು ಬೇಕಾಗುತ್ತವೆ. ಆದರೆ ದುರ್ದೈವದಿಂದ ನಮ್ಮ ದೇಶದಲ್ಲಿ ಉತ್ತಮವೆಂದು ಹೆಸರುವಾಸಿಯಾದ ಜಾತಿಯ ಬೀಜದ ಹೋರಿಗಳು ಎಷ್ಟು ಬೇಕೋ ಅಷ್ಟು ಲಭ್ಯವಿಲ್ಲ. ಉದಾಹರಣೆಗೆ ಆಕಳುಗಳ ವಿಷಯವನ್ನು ತೆಗೆದುಕೊಂಡಲ್ಲಿ ನಮ್ಮ ದೇಶದಲ್ಲಿ 500 ಬೀಜದ ಹೋರಿಗಳು ಬೇಕಾಗುವಲ್ಲಿ ನಮಗೆ ಸಿಗುವುದು ಒಂದೇ ಒಂದು. ನಾವು ಇಂಥಾ ದುಃಸ್ಥಿತಿಯಲ್ಲಿದ್ದೇವೆ. ಈ ಕೊರತೆಯನ್ನು ಹೋಗಲಾಡಿಸಿ ನಮ್ಮಲ್ಲಿ ಹೈನಾಭಿವೃದ್ಧಿಯನ್ನು ತ್ವರಿತಗೊಳಿಸಲು ಕೃತ್ರಿಮ ಗರ್ಭಧಾರಣೆಯೊಂದೇ ತಾರಕಮಾರ್ಗ.

ಒಂದು ಹೋರಿಯನ್ನು ನೈಸರ್ಗಿಕವಾಗಿ ಆಕಳುಗಳ ಮೇಲೆ ಹಾರಲು ಉಪಯೋಗಿಸುವುದಾದರೆ ಅದರಿಂದ ವರ್ಷದಲ್ಲಿ 50 ರಿಂದ 60 ಆಕಳುಗಳನ್ನು ಕಟ್ಟಿಸಬಹುದು. ಆದರೆ ಕೃತ್ರಿಮ ಉಪಾಯದಿಂದ ಇಂಥಾ ಒಂದು ಹೋರಿಯಿಂದ ಇದರ ಹತ್ತರಷ್ಟು ಅಂದರೆ ಸುಮಾರು 500 ರಿಂದ 600 ಆಕಳುಗಳನ್ನು ಕಟ್ಟಿಸಬಹುದು. ಇದು ಹೇಗೆಂದರೆ ಕೃತ್ರಿಮ ಗರ್ಭಧಾರಣೆಯ ವಿಧಾನದಲ್ಲಿ ಹೋರಿಯ ಒಂದು ಸಾರಿಯ ಸ್ಖಲನದಿಂದ ದೊರೆಯುವ ವೀರ್ಯದಲ್ಲಿ ಲಕ್ಷಾಂತರ ಸಕ್ರಿಯ ಬೀಜಾಣು

ಗಳಿರುತ್ತವೆ. ಆಕಳುಗಳು ಗರ್ಭಧರಿಸಲು ಇಂಥಾ ಒಂದೇ ಒಂದು ಬೀಜಾಣುವು ಸಾಕು. ನೈಸರ್ಗಿಕವಾಗಿ ದನಗಳನ್ನು ಕಟ್ಟಿಸುವುದರಲ್ಲಿ ಉಳಿದೆಲ್ಲ ಬೀಜಾಣುಗಳು ವ್ಯರ್ಥವಾಗಿ ಹೋಗುತ್ತವೆ. ಕೃತ್ರಿಮ ಗರ್ಭಧಾರಣೆಯ ಉಪಾಯವನ್ನು ಅನುಸರಿಸುವುದರಿಂದ ಈ ಬೀಜಾಣುಗಳನ್ನು ಹಾಳಾಗದಂತೆ ಸಂಗ್ರಹಿಸಿ ಕಾದಿಟ್ಟು ಹಲವಾರು (ಅನೇಕ) ಆಕಳುಗಳ ಗರ್ಭಧಾರಣಾ ಕ್ರಿಯೆಗೆ ಬಳಸಿಕೊಳ್ಳಬಹುದು.

ಈ ಕೃತ್ರಿಮ ಗರ್ಭಧಾರಣೆಯ ಇನ್ನಿತರ ಹೆಚ್ಚಿನ ಲಾಭಗಳೆಂದರೆ ಶ್ರೇಷ್ಠ ಹೈನ ತಳಿಯಿಂದ ಬಂದ ಹೋರಿಯ ವೀರ್ಯವನ್ನು ನಿಯಮಿತವಾಗಿ ಸಂಗ್ರಹಿಸಿ ಅದು ಉತ್ತಮ ತರಗತಿಯ ಸಜೀವ ಬೀಜಾಣುಗಳಿಂದ ಕೂಡಿದೆ ಎಂಬುದನ್ನು ಶಾಸ್ತ್ರೀಯ ರೀತಿಯಲ್ಲಿ ಸೂಕ್ಷ್ಮದರ್ಶಕಯಂತ್ರದಿಂದ ತಪಾಸಣೆಯನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ಕಾದಿಡಲು ಸಾಧ್ಯ. ಹೀಗೆ ವೀರ್ಯವು ಶ್ರೇಷ್ಠದರ್ಜೆಯದೆಂದು ಸಿದ್ಧವಾದ ಬಳಿಕ ಅದರಲ್ಲಿ ಕೆಲವು ರಾಸಾಯನಿಕ ವಸ್ತುಗಳನ್ನು ಸೇರಿಸಿ ಅದನ್ನು ಶೀತಾಗಾರದಲ್ಲಿ ಕಾದಿಟ್ಟಿರುತ್ತಾರೆ. ಬೇಕಾದಾಗ ಅದನ್ನು ಆಕಳುಗಳ ಗರ್ಭಧಾರಣೆಗಾಗಿ ಉಪಯೋಗಿಸಲು ಬರುತ್ತದೆ. ಹೀಗೆ ಕಾದಿಟ್ಟ ವೀರ್ಯವನ್ನು 4 ರಿಂದ 6 ದಿವಸಗಳ ವರೆಗೆ ಬರ್ಫಿನಲ್ಲಿ ಕಾದಿಡಬಹುದು: ಇತ್ತೀಚಿಗೆ ಹೋರಿಯ ವೀರ್ಯವನ್ನು ದ್ರವಸಾರಜನಕದಲ್ಲಿ ಅದರ ಗುಣಮಟ್ಟವು ಯಾವರೀತಿಯಿಂದಲೂ ಕಡಿಮೆಯಾಗದಂತೆ ಮತ್ತು ಕೆಡದಂತೆ ಅನೇಕ ವರ್ಷಗಳವರೆಗೆ ಕಾದಿಡುವ ಉಪಾಯವನ್ನು ಕಂಡು ಹಿಡಿಯಲಾಗಿದೆ. ಇದಕ್ಕೆ ಫ್ರೋಜನ್‌ಸೆಮೆನ್ ಎಂದು ಕರೆಯುತ್ತಾರೆ. ಇದನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಿಮಾನದ ಮೂಲಕ ಕಳುಹಿಸಬಹುದು.

ಬೀಜದ ಹೋರಿಯ ವೀರ್ಯವನ್ನು ಸಂಗ್ರಹಿಸುವಾಗ ಹಾಗೂ ಅದನ್ನು ಆಕಳುಗಳ ಗರ್ಭಧಾರಣೆಗೆ ಉಪಯೋಗಿಸುವಾಗ ದನಗಳಿಗೆ ಯಾವ ತರಹದ ನೋವಾಗಲಿ ಅಥವಾ ಅಪಾಯವಾಗಲಿ ಎಳ್ಳಷ್ಟೂ ಆಗುವುದಿಲ್ಲ.

ಜನನೇಂದ್ರಿಯದ ರೋಗಗಳನ್ನು ನಿರೋಧಿಸಲು ಕೃತ್ರಿಮ ಗರ್ಭಧಾರಣೆಯು ಅತ್ಯಂತ ಉಪಯುಕ್ತ ಉಪಾಯವಾಗಿದೆ. ಜನನೇಂದ್ರಿಯ ರೋಗವಿದ್ದ ಹೋರಿಯು ಆಕಳುಗಳೊಡನೆ ನೈಸರ್ಗಿಕವಾಗಿ ಕೂಡಿದಾಗ ಅದಕ್ಕೂ ಆ ರೋಗವು ತಗಲುವ ಸಂಭವವಿರುತ್ತದೆ. ಒಂದೇ ಹೋರಿಯನ್ನು ಅನೇಕ ಹಿಂಡುಗಳಲ್ಲಿ ಬೀಜಕ್ಕಾಗಿ ನೈಸರ್ಗಿಕವಾಗಿ ಉಪಯೋಗಿಸುವುದರಿಂದ ಜನನೇಂದ್ರಿಯ ರೋಗಗಳು ಹೆಚ್ಚಾಗಿ ಹಬ್ಬುವುದಕ್ಕೂ, ದನಗಳಲ್ಲಿ ಬಂಜೆತನ ಹೆಚ್ಚಾಗುವುದಕ್ಕೂ ಕಾರಣವಾಗಿದೆ. ಆದರೆ ಕೃತ್ರಿಮ ಗರ್ಭಧಾರಣಾ ಕೇಂದ್ರಗಳಲ್ಲಿ ಸಾಕಲಾದ ಬೀಜದ ಹೋರಿಗಳಿಗೆ ಯಾವು

ದಾದರೂ ರೋಗವಿದೆಯೋ ಹೇಗೆ ಎಂಬುದರ ಬಗ್ಗೆ ಮೇಲಿಂದ ಮೇಲೆ ತಜ್ಞರಿಂದ ಪರೀಕ್ಷೆ ಮಾಡಲಾಗುತ್ತದೆ. ಅಲ್ಲದೆ ಗರ್ಭಧಾರಣೆಗಾಗಿ ಕೇವಲ ಸಂಪೂರ್ಣ ನಿರೋಗಿ ಹೋರಿಗಳನ್ನೇ ಉಪಯೋಗಿಸುವಂತೆ ಸರ್ವಜಾಗರೂಕತೆಯನ್ನು ವಹಿಸಲಾಗುತ್ತದೆ.

ನೈಸರ್ಗಿಕವಾದ ರೀತಿಯಿಂದ ಕಟ್ಟಿಸುವುದರಲ್ಲಿ ಒಂದು ಹೋರಿಯಿಂದ ದಿನಕ್ಕೆ ಒಂದು ಆಕಳನ್ನು ಮಾತ್ರ ಕಟ್ಟಿಸಬಹುದು. ಅದಕ್ಕೂ ಹೆಚ್ಚಿಗೆ ಆಕಳುಗಳನ್ನು ಕಟ್ಟಿಸಿದಲ್ಲಿ ಹೋರಿಗೆ ಬಹಳ ಶ್ರಮವಾಗುವುದು. ಆದರೆ ಕೃತ್ರಿಮ ಗರ್ಭಧಾರಣೆಯ ಉಪಾಯದಿಂದ ಅದೇ ಹೋರಿಯ ವೀರ್ಯದಿಂದ ದಿನಕ್ಕೆ ಅನೇಕ ಆಕಳುಗಳಿಗೆ ಗರ್ಭಧಾರಣೆ ಮಾಡಿಸುವುದು ಸಾಧ್ಯವಿದೆ.

ಕೃತ್ರಿಮ ಗರ್ಭಧಾರಣೆ ಕೇಂದ್ರಗಳಲ್ಲಿ ಕೇವಲ ಶ್ರೇಷ್ಠ ಉತ್ತಮ ತಳಿಯ ಹೋರಿಯ ವೀರ್ಯವನ್ನೇ ಉಪಯೋಗಿಸುವುದರಿಂದ ನೂರಕ್ಕೆ 70ರಷ್ಟು ಗರ್ಭಧಾರಣೆ ಯಶಸ್ವಿಯಾಗುತ್ತದೆ. ಅದೇ ನೈಸರ್ಗಿಕ ಸಂಯೋಗದಿಂದ ಕೇವಲ ನೂರಕ್ಕೆ 30 ರಿಂದ 40ರಷ್ಟು ಆಕಳುಗಳಿಗೆ ಮಾತ್ರ ಗರ್ಭನಿಲ್ಲುತ್ತದೆ. ಇದಕ್ಕೆ ಕಾರಣವೇನೆಂದರೆ ಕೃತ್ರಿಮ ರೀತಿಯಲ್ಲಿ ನೇರವಾಗಿ ಆಕಳ ಗರ್ಭಾಶಯದೊಳಗೆ ಪುಂಬೀಜವನ್ನು ಸೇರಿಸಲಾಗುತ್ತದೆ. ಆದರೆ ನೈಸರ್ಗಿಕ ಸಂಯೋಗದಿಂದ ಅನೇಕ ಸಲ ಇದು ಸಾಧ್ಯವಾಗದೆ ತಪ್ಪಿಹೋಗುವ ಸಂಭವವಿರುತ್ತದೆ.

ನೈಸರ್ಗಿಕ ರೀತಿಯಲ್ಲಿ ಕಟ್ಟಿಸುವಿಕೆಯಲ್ಲಿ ತೀರ ಭಿನ್ನ ಆಕಾರದ ಎರಡು ದನಗಳ ಸಂಯೋಗಕ್ಕೆ ತೊಂದರೆಯಾಗುತ್ತದೆ. ಉದಾಹರಣೆಗಾಗಿ ಒಂದು ವರ್ಷದ ಮಣಕವನ್ನು ಕಟ್ಟಿಸುವಾಗ ಹೋರಿಯು ಅತಿ ದೊಡ್ಡದು, ಭಾರವಾದದ್ದಿದ್ದರೆ ತೊಂದರೆಯೇ ಸರಿ. ಆದರೆ ಕೃತ್ರಿಮ ಉಪಾಯದಲ್ಲಿ ಪ್ರತ್ಯಕ್ಷ ಸಂಯೋಗವೇ ಇಲ್ಲದ್ದರಿಂದ ಈ ತೊಂದರೆಯು ಸಹಜವಾಗಿ ದೂರವಾಗುತ್ತದೆ. ಕಾಲುಗಳು ಊನವಿರುವ ದನಗಳನ್ನು ಕಟ್ಟಿಸುವುದು ನೈಸರ್ಗಿಕ ರೀತಿಯಿಂದ ಸಾಮಾನ್ಯವಾಗಿ ಅಸಾಧ್ಯವೆನಿಸಿದರೂ ಕೃತ್ರಿಮ ಉಪಾಯದಿಂದ ಅದನ್ನು ಸಹಜವಾಗಿ ಕಟ್ಟಿಸಬಹುದು. ಆಕಳಿದ್ದ ಗ್ರಾಮಕ್ಕೆ ಹೋರಿಯನ್ನು ಸಾಗಿಸುವ ಇಲ್ಲವೆ ಹೋರಿ ಇದ್ದಲ್ಲಿಗೆ ಆಕಳನ್ನು ತರುವ ತೊಂದರೆಯೇ ಇಲ್ಲ. ಹೋರಿಯ ವೀರ್ಯವನ್ನು ರಸ್ತೆ, ರೈಲು, ಬಸ್, ಹಡಗು, ವಿಮಾನ ಇತ್ಯಾದಿ ಸಾಧನಗಳ ಮೂಲಕ ಬಹುದೂರ ಸ್ಥಳಗಳಿಗೆ ಸುಲಭವಾಗಿ ಸಾಗಿಸಬಹುದು.

ಹೋರಿಯಿಂದ ವೀರ್ಯವನ್ನು ಸಂಗ್ರಹಿಸುವಾಗ ಹಾಗೂ ಅದನ್ನು ಆಕಳ ಗರ್ಭಾಶಯದೊಳಗೆ ಸೇರಿಸುವ ಕಾರ್ಯವನ್ನು ಅತ್ಯಂತ ಜಾಗರೂಕತೆಯಿಂದ ಶರೀರಶಾಸ್ತ್ರದ ತತ್ವಗಳಿಗೆ ಅನುಸಾರವಾಗಿ ಕೈಕೊಳ್ಳುವುದರಿಂದ ಹೋರಿಗಾಗಲಿ

ಹಸುವಿಗಾಗಲಿ ಯಾವ ಬಗೆಯ ತೊಂದರೆಯೂ ಆಗುವುದಿಲ್ಲ. ವೀರ್ಯವನ್ನು ಸಂಗ್ರಹಿಸಲು ಉಪಯೋಗಿಸುವ ಉದ್ದವಾದ ಒರಟು ರಬ್ಬರಿನ ಚೀಲಕ್ಕೆ ಒಳಭಾಗದಲ್ಲಿ ಮೃದುವಾದ ಹಾಗೂ ನಯವಾದ ರಬ್ಬರಿನ ಒಳ ಹೊದಿಕೆಯನ್ನು ಜೋಡಿಸಿರುತ್ತದಲ್ಲದೆ ಇದಕ್ಕೆ ಯೋಗ್ಯ ನುಣುಪುಗೊಳಿಸುವ ಸಾಧನಗಳನ್ನು ಉಪಯೋಗಿಸಲಾಗಿರುತ್ತದೆ. ಆದ್ದರಿಂದ ನಿಯಮಿತವಾಗಿ ವೀರ್ಯವನ್ನು ಸಂಗ್ರಹಿಸುವುದರಿಂದ ಹೋರಿಗೆ ಏನೂ ಅಪಾಯವಾಗುವುದಿಲ್ಲ. ವೀರ್ಯವನ್ನು ಆಕಳಿನ ಜನನೇಂದ್ರಿಯದಲ್ಲಿ ಸೇರಿಸಲು ಉದ್ದ, ಸ್ಥಿತಿಸ್ಥಾಪಕ ಹಾಗೂ ಪ್ಲಾಸ್ಟಿಕ್‌ದಿಂದ ತಯಾರಿಸಿದ ನಳಿಕೆಯನ್ನು ಉಪಯೋಗಿಸುವುದರಿಂದ ಹಾಗೂ ಬಹಳ ಜಾಗರೂಕತೆ ವಹಿಸುವುದರಿಂದ ಆಕಳಿನ ಜನನೇಂದ್ರಿಯಕ್ಕೆ ಯಾವ ಅಪಾಯವೂ ಆಗುವುದಿಲ್ಲ. ಹಾಗೆ ನೋಡಿದರೆ ಆಕಳು ಬೆದೆಗೆ ಬಂದ ಕಾಲದಲ್ಲಿ ಸರಿಯಾದ ಸಮಯವನ್ನು ಅದರ ಗರ್ಭದ್ವಾರದ ಪರೀಕ್ಷೆಯಿಂದ ಕಂಡು ಹಿಡಿದು ವೀರ್ಯವನ್ನು ಸೇರಿಸಲು ಈ ಪದ್ಧತಿಯು ಹೆಚ್ಚು ಸಹಾಯವಾಗುತ್ತದೆ.

ಆಕಳು ಹಾಗೂ ಎಮ್ಮೆಗಳು ಸಾಮಾನ್ಯವಾಗಿ ಮೂರು ವಾರಕ್ಕೊಮ್ಮೆ ಬೆದೆಗೆ ಬರುತ್ತವೆ. ಬೆದೆಯ ಅವಧಿ 24 ಗಂಟೆಗಳಷ್ಟು ಇರುತ್ತದೆ. ಬೆದೆಯ ಮೊದಲಿನ ಹತ್ತು ಗಂಟೆಗಳ ಕಾಲ ಆಕಳಿನ ಜನನೇಂದ್ರಿಯದಿಂದ ಮೊಟ್ಟೆಯೊಳಗಿನ ಬಿಳಿ ರಸದಂತಹ ಒಂದು ಅಂಟಾದ ರಸ ಒಸರುತ್ತಿರುತ್ತದೆ. ಬೆದೆಯ ಕಾಲದ ಮಧ್ಯಕಾಲಕ್ಕೆ ಆಕಳ ಅಂಡಾಶಯದಿಂದ ಸ್ತ್ರೀಬೀಜವು ಅಥವಾ ಡಿಂಬಾಣುವು ಹೊರದೂಡಲ್ಪಡುತ್ತದೆ ಹಾಗೂ ಮುಂದೆ ಕೆಲವು ಕಾಲ ಮಾತ್ರ ಇದು ಸಚೇತನವಿರುತ್ತದೆ. ಈ ಕಾಲಕ್ಕೆ ಹೋರಿಯ ವೀರ್ಯದಲ್ಲಿಯ ಬೀಜಾಣುವು ಡಿಂಭಾಣುವನ್ನು ಸೇರಿದರೆ ಅವು ಕೂಡಿಕೊಂಡು ಫಲಕಾರಿಯಾಗುತ್ತದೆ. ಈ ಕಾಲಕ್ಕೆ ಹೋರಿಯ ಬೀಜಾಣುವು ಸೇರದಿದ್ದರೆ ಸ್ತ್ರೀಬೀಜಾಣುವು ಸತ್ತು ಹೋಗುತ್ತದೆ. ಆದ್ದರಿಂದ ಈ ಕಾಲಕ್ಕೆ ಅಂದರೆ ಬೆದೆಯ ಮಧ್ಯಕಾಲಕ್ಕೆ ಹೋರಿಯ ಬೀಜಾಣುವನ್ನು ಸೇರಿಸಬೇಕು. ಹೀಗೆ ಮಾಡದೆ ಇತರ ಕಾಲಗಳಲ್ಲಿ ಹೋರಿಯ ಪುಂಬೀಜವನ್ನು ಸೇರಿಸಿದಲ್ಲಿ ಅದಕ್ಕೆ ಸ್ತ್ರೀಬೀಜದ ಡಿಂಬಾಣುವು ಸಿಗದೆ ಶುಕ್ರ ಜಂತುಗಳೆಲ್ಲ ಸತ್ತು ಹೋಗುತ್ತವೆ.

ಕೃತ್ರಿಮ ರೀತಿಯಿಂದ ಕಟ್ಟಿಸಲಾದ ಆಕಳು ಹೆಚ್ಚು ಹಾಲು ಕೊಡುವುದಿಲ್ಲ. ಆದರೆ ಹಾಲಿನ ಉತ್ಪಾದನೆಯು ಅನುವಂಶಿಕಗುಣವಾಗಿದ್ದು ತಂದೆ – ತಾಯಿಗಳಿಂದ ಕರುವಿಗೆ ಪ್ರಾಪ್ತವಾಗುತ್ತದಾದ್ದರಿಂದ ಕೃತ್ರಿಮ ಗರ್ಭಧಾರಣೆಯಿಂದ ಹುಟ್ಟಿಸಿದ ಸಂತತಿ ಮಾತ್ರ ಖಂಡಿತವಾಗಿ ಹೆಚ್ಚು ಹಾಲನ್ನು ಉತ್ಪಾದಿಸುವಂತಾಗುತ್ತದೆ.

ವೀರ್ಯದಲ್ಲಿ ಕೆಲವು ರಾಸಾಯನಿಕ ವಸ್ತುಗಳನ್ನು ಬೆರೆಸಿದ್ದನ್ನು ಬಿಟ್ಟರೆ ವೀರ್ಯದಲ್ಲಿಯ ಬೀಜಾಣುಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಾಗಿರುವುದಿಲ್ಲ ವಾದ್ದರಿಂದ ಹಾಗೂ ಕೃತ್ರಿಮ ಗರ್ಭಧಾರಣೆಯಲ್ಲಿ ದೋಷಪೂರ್ಣ ಹೋರಿಗಳನ್ನು ಎಂದಿಗೂ ಉಪಯೋಗಿಸುವುದಿಲ್ಲವಾದ್ದರಿಂದ ಹುಟ್ಟುವ ಕರುಗಳು ಯಾವಾಗಲೂ ಸರ್ವದೃಷ್ಟಿಯಿಂದ ನಿರೋಗಿ ಹಾಗೂ ಸಾಮಾನ್ಯವಾಗಿರುತ್ತವೆ.

ಕೃತ್ರಿಮ ಗರ್ಭಧಾರಣೆಯ ಕಾರ್ಯದಲ್ಲಿ ತಿಳಿಯಬೇಕಾದ ಮುಖ್ಯ ವಿಷಯಗಳು

ಹಸುಗಳು ಪ್ರಾಯಕ್ಕೆ ಬರುವ ವಯಸ್ಸು	– 14 ರಿಂದ 20 ತಿಂಗಳುಗಳು
ಪ್ರಾಯಕ್ಕೆ ಬಂದ ಮಣಕಗಳ ತೂಕ	– 350 ರಿಂದ 600 ಪೌಂಡುಗಳು
ಬೆದೆಯ ಕಾಲಾವಧಿ (ನಶೆಯಲ್ಲಿರುವ ಕಾಲ)	– 10 ರಿಂದ 26 ಗಂಟೆಗಳ ಕಾಲ (ಸರಾಸರಿಬೆದೆಯಲ್ಲಿರುವ ಕಾಲ 18 ಗಂಟೆಗಳು)
ಬೆದೆಗೆ ಪುನಃ ಬರುವ ಕಾಲದ ಅಂತರ	– 18 – 24 ದಿವಸಗಳು (ಸರಾಸರಿ 21 ದಿವಸಗಳು)
ಸ್ತ್ರೀ ಅಂಡಾಶಯದಿಂದ(ತತ್ತಿಯಿಂದ) ಅಂಡಾಣು ಹೊರಬೀಳಲು ಬೇಕಾಗುವ ಕಾಲ	– ಬೆದೆಗೆ ಬಂದ ನಂತರ 4ರಿಂದ 16 ತಾಸುಗಳು.
ಗರ್ಭಧಾರಣೆಗೆ ಸೂಕ್ತಕಾಲ	– ಬೆದೆಯ ಮಧ್ಯಕಾಲಾವಧಿ

ಆಕಳಿನ ಜನನೇಂದ್ರಿಯದಲ್ಲಿ ರೇತಸ್ಸು 28ರಿಂದ 50 ಗಂಟೆಗಳ ಕಾಲ ಫಲ ಪ್ರದಾಯಕವಾಗಿ ಉಳಿಯುವುದು. ದಿನಕ್ಕೊಂದಾವರ್ತಿಯಂತೆ ಒಂದು ವಾರದಲ್ಲಿ 6 ದಿನಗಳಲ್ಲಿ ಶೇಖರಿಸಿದ ಹೋರಿಯ ವೀರ್ಯದಲ್ಲಿಯ ವಿಶೇಷ ಗುಣಗಳು ಈ ಕೆಳಕಂಡಂತಿವೆ:

ಒಂದು ಸಾರಿಗೆ 5ರಿಂದ 6 ಮಿ. ಲಿ. ನಷ್ಟು ವೀರ್ಯವನ್ನು ಕೊಟ್ಟಿರುತ್ತದೆ. ಇದರಲ್ಲಿ ಕೇಂದ್ರೀಕೃತವಾದ ರೇತಸ್ಸುಗಳ ಸಂಖ್ಯೆ ಒಂದು ಸಾವಿರ ದಶಲಕ್ಷದಿಂದ ಒಂದು ಸಾವಿರ ಎಂಟುನೂರು ದಶಲಕ್ಷದವರೆಗೆ ಇರುತ್ತದೆ. ಒಟ್ಟು ರೇತಸ್ಸುಗಳ

ಸಂಖ್ಯೆ 5 ರಿಂದ 15 ಶತಕೋಟಿಗಳಷ್ಟು. ರೇತಸ್ಸುಗಳ ಸಂಖ್ಯೆ 15ರಿಂದ 30 ಶತ ಕೋಟಿ. ಇವುಗಳಲ್ಲಿ ನೂರಕ್ಕೆ 65ರಷ್ಟು ರೇತಸ್ಸುಗಳು ಚಲನವಲನಗಳಿಂದ ಕೂಡಿರುತ್ತವೆ.

ಆಕಳಿನ ಗರ್ಭಕಾಲ – 279 ದಿವಸಗಳು.

ನಮ್ಮ ದೇಶದ ಪ್ರತಿಭಾವಂತ ಗೋಮಾತೆಯರು

ಒಂದು ಕಾಲಕ್ಕೆ ನಮ್ಮಲ್ಲಿಯ ಪಶುಪಾಲನಾ ಪದ್ಧತಿ ಜಗತ್ತಿನಲ್ಲಿಯ ಉಳಿದೆಲ್ಲ ದೇಶಗಳಿಗಿಂತ ಮೊದಲೇ ಪ್ರಬುದ್ಧಮಟ್ಟವನ್ನು ಮುಟ್ಟಿತ್ತು. ಎರಡು ಸಾವಿರವರ್ಷ ಗಳಿಗಿಂತ ಹಿಂದೆಯೇ ಅದು ಒಂದು ಸುಸಂಬದ್ಧವಾದ ಶಾಸ್ತ್ರವೆನ್ನಿಸಿತು. ಎಂಥ ಸುವ್ಯವಸ್ಥೆಯೂ ಕಾಲಕ್ರಮದಲ್ಲಿ ಶಿಥಿಲವಾಗುವುದು ಪ್ರಕೃತಿಯ ನಿಯಮವೆಂದು ತೋರುತ್ತದೆ. ಇದಕ್ಕೆ ನಮ್ಮಲ್ಲಿಯ ಪಶುಪಾಲನಾ ಪದ್ಧತಿಯೇನೂ ಅಪವಾದವಲ್ಲ ಎಂದು ಹೇಳಬಹುದು.

ಇಂದು ನಮ್ಮಲ್ಲಿಯ ಆಕಳುಗಳು ಪಾಶ್ಚಿಮಾತ್ಯದೇಶದ ಆಕಳುಗಳಿಗಿಂತ ಬಹಳ ಕಡಿಮೆ ಹಾಲು ಹಿಂಡುತ್ತವೆ. ಇದು ನಿಜ. ಇದರಿಂದ ನಾವು ಹೀಗೆ ನಿರಾಶರಾಗಲು ಕಾರಣವಿಲ್ಲ. ಏಕೆಂದರೆ ನಮ್ಮಲ್ಲಿಯ ದನಗಳು ಸಹ ಅಧಿಕ ಹಾಲು ಹಿಂಡುವ ಅನುವಂಶಿಕ ಗುಣಗಳನ್ನು ಪಡೆದು ಕೊಂಡಿವೆ. ಆದರೆ ಇಂದು ಈ ಹೈನೋತ್ಪಾದನೆಯ ಅನುವಂಶಿಕ ಗುಣಗಳು ಅವುಗಳಲ್ಲಿ ಸುಪ್ತಾವಸ್ಥೆಯಲ್ಲಿದ್ದು ಬೂದಿ ಮುಚ್ಚಿದ ಕೆಂಡದಂತೆ ಅಡಗಿಕೊಂಡಿವೆ. ಅನುಕೂಲವಾತಾವರಣ, ಪರಿಸರ, ಆರೈಕೆ, ಸಂವರ್ಧನೆ ಸರಿಯಾ ಗಿದ್ದಲ್ಲಿ ಈ ಗುಣಗಳು ಚೇತನಗೊಂಡು ಪ್ರಕಾಶಗೊಳ್ಳುವುವು ಎಂಬುದಕ್ಕೆ ಈ ಕೆಳಗಿನ ದೃಷ್ಟಾಂತಗಳೇ ಸಾಕ್ಷಿ.

ಜಿಲ್ ಆಕಳು ಜೀವನ ಚರಿತ್ರೆ

'ಜಿಲ್' ಎಂಬ ಹೆಸರಿನ ಆಕಳು ಬೆಂಗಳೂರಿನ ಇಂಪೀರಿಯಲ್ ಡೈರಿ ಸಂಶೋಧನಾ ಕೇಂದ್ರದಲ್ಲಿ (ಈಗ ಇದು ರಾಷ್ಟ್ರೀಯ ಡೈರಿ ಸಂಶೋಧನಾ ಕೇಂದ್ರದ ದಕ್ಷಿಣ ಪ್ರಾಂತೀಯ ಕೇಂದ್ರವಾಗಿದೆ) ದಿನಾಂಕ 18–10–1907 ನೇ ದಿವಸ ಜನ್ಮ ತಾಳಿತು ಮತ್ತು 14–4–1929 ನೇ ದಿವಸ ಕೈಲಾಸವಾಸಿಯಾಯಿತು. ಇದು ಒಟ್ಟು 19½ ವರ್ಷಕಾಲ ಬದುಕಿ ಬಾಳಿತು.

ಈ 'ಜಿಲ್' ಆಕಳು ತನ್ನ ಜೀವಾವಧಿಕಾಲದಲ್ಲಿ ಒಟ್ಟು 77389.5 ಕೆಜಿ ಹಾಲು ಕೊಟ್ಟಿರುತ್ತದೆ. 10 ಹೆಣ್ಣು ಕರುಗಳನ್ನು ಮತ್ತು 7 ಹೋರಿಕರುಗಳನ್ನು

ಕೊಟ್ಟಿರುತ್ತದೆ. ಇದರ ತಂದೆ ಪಾಶ್ಚಿಮಾತ್ಯ ದೇಶದಲ್ಲಿ ಹಾಲಿಗೆ ಹೆಸರಾದ 'ಆಯುಶ ಯರ್' ಜಾತಿಯ ಹೋರಿ, ಇದರ ತಾಯಿ ನಮ್ಮಲ್ಲಿಯ ಹರಿಯಾನ ಜಾತಿಗೆ ಸೇರಿದ ಆಕಳು.

16 ವರ್ಷಕಾಲ, ವರ್ಷಕ್ಕೆ 4772 ಕೆಜಿ ಹಾಲನ್ನು ಕರೆದಿರುತ್ತದೆ. 360 ದಿವಸಗಳಲ್ಲಿ ಇದು 295 ದಿವಸ ಹಾಲು ಹಿಂಡಿರುತ್ತದೆ. ಅಂದರೆ ನೂರಕ್ಕೆ 83 ದಿವಸ ಹಾಲು ಕರೆದಿರುತ್ತದೆ. ಅತಿ ಹೆಚ್ಚು ಹಿಂಡುವ ಕಾಲದಲ್ಲಿ ಅದು 6001 ಕೆಜಿ ಹಾಲು ಕೊಟ್ಟಿರುತ್ತದೆ. ಅಂದರೆ ಪ್ರತಿದಿನ 20.5 ಕೆಜಿ ಹಾಲು ಹಿಂಡಿರುತ್ತದೆ.

ಈ 'ಜಿಲ್' ಆಕಳು ಕೊಟ್ಟ ಹಾಲಿನ ಒಟ್ಟು ಬೆಲೆ ಅಂದಿನ ಅತಿ ಅಗ್ಗದ ಪೇಟೆಯ ಧಾರಣೆಯ ಪ್ರಕಾರ (ಒಂದು ಆಣೆಗೆ ಅರ್ಧ ಕೆಜಿ ಹಾಲು ಇದರ ಪ್ರಕಾರ) ಕೆಳಗಿನಂತಿದೆ :

ಅಂದಿನ ಪ್ರಕಾರ	ಇಂದಿನ ಧಾರಣೆಯ ಪ್ರಕಾರ
ಹಾಲಿನ ಬೆಲೆ – ರೂ. 9376–00	ಹಾಲಿನ ಬೆಲೆ ರೂ. 40000–00
ಗೊಬ್ಬರದ ಬೆಲೆ – ರೂ. 1365–00	ಗೊಬ್ಬರದ ಬೆಲೆ ರೂ. 3500-00
ಕರುಗಳ ಬೆಲೆ – ರೂ. 2700–00	ಕರುಗಳ ಬೆಲೆ ರೂ. 15000–00
ಒಟ್ಟು ಬೆಲೆ – ರೂ. 13441–00	ಒಟ್ಟು ಬೆಲೆ ರೂ. 58000–00

ಈ 'ಜಿಲ್' ಆಕಳು ತನ್ನ ಜೀವಮಾನದ ಕಾಲದಲ್ಲಿ ಕೊಟ್ಟ ಒಟ್ಟು ಹಾಲನ್ನು 56 ಕೆಜಿ ಹಿಡಿಯುವ ಕ್ಯಾನಿನೊಳಗೆ ತುಂಬಿದರೆ 1328 ಕ್ಯಾನುಗಳು ಬೇಕಾಗುತ್ತವೆ. ಹಾಲು ತುಂಬಿದ ಕ್ಯಾನುಗಳನ್ನು ಒಂದರ ಮೇಲೊಂದನ್ನು ಇಟ್ಟು ನಿಲ್ಲಿಸಿದಲ್ಲಿ ಅದು 4146 ಅಡಿ ಎತ್ತರವಾದ ಒಂದು ಭವ್ಯಸ್ತಂಭವಾಗಿ ನಿಲ್ಲುತ್ತದೆ. ಈ ಹಾಲಿನ ಬೃಹದಾಕಾರದ ಎತ್ತರವಾದ ಉನ್ನತ ಸ್ತಂಭವನ್ನು ಜಿಲ್ ಆಕಳಿನ ಪ್ರಖ್ಯಾತ 'ಧೂದ್‌ಮಿನಾರ್' ಎಂದು ಕರೆಯಬಹುದು.

ಪ್ರಸಿದ್ಧವಾದ ದಿಲ್ಲಿಯಲ್ಲಿರುವ 'ಕುತುಬ್ ಮಿನಾರ್' ದ ಎತ್ತರ 250 ಅಡಿ ದೌಲತಾಬಾದ್‌ನಲ್ಲಿರುವ 'ಚಾಂದ್‌ಮಿನಾರ್' ದ ಎತ್ತರ 210 ಅಡಿ; ಆದರೆ ನಮ್ಮ ಈ 'ಜಿಲ್' ಆಕಳ ಧೂದ್ ಮಿನಾರ್ ದ ಎತ್ತರ 4146 ಅಡಿ ಎತ್ತರದಿಂದ ತನ್ನ ಕೀರ್ತಿಸ್ತಂಭವನ್ನು ನಿಲ್ಲಿಸಿರುತ್ತದೆ.

ಈ ಆಕಳು ಕೊಟ್ಟ ಹಾಲು 30 ಅಡಿ ಆಳವಾದ ಮತ್ತು 10 ಅಡಿ ವ್ಯಾಸವಿರುವ ಭಾವಿಯನ್ನು ತುಂಬುತ್ತದೆ, ಈ 'ಜಿಲ್' ಆಕಳ ಜೀವನ ಚರಿತ್ರೆ ಭವ್ಯವಾಗಿದೆ,

ಇವರ 'ಧೂದ್‌ಮಿನಾರ್' ಸ್ತಂಭ ಅದರ ಕೀರ್ತಿಸ್ತಂಭ 'ಕುತುಬ್ ಮಿನಾರ'ನ್ನು ಮೀರಿಸಿದೆ.

1960ರಲ್ಲಿ ನಡೆದ ಅಖಿಲ ಭಾರತ ದನಗಳ ಪ್ರದರ್ಶನದಲ್ಲಿ ಪೋಲಾವ ರೂಪ ಹನುಮಯ್ಯ ಎಂಬುವರ ಓಂಗೋಲ ಜಾತಿಯ ಹೋರಿ ಅತಿ ಉತ್ತಮಹೋರಿ ಎಂದು ಸಾರಲ್ಪಟ್ಟು ಅದು ಮೊದಲನೆಯ ಬಹುಮಾನವನ್ನು ಪಡೆಯಿತು. ಈ ಹೋರಿಯನ್ನು ಅದರ ಮಾಲೀಕನು ಅದು ಕೇವಲ ಒಂದು ವರ್ಷದ್ದಿದ್ದಾಗ 1,300 ರೂಪಾಯಿಗಳಿಗೆ ಕೊಂಡಿದ್ದನು. ಪ್ರದರ್ಶನ ಕಾಲಕ್ಕೆ ಇದನ್ನು 33,000 ರೂಪಾಯಿಗಳಿಗೆ ಒಬ್ಬ ಬ್ರೆಜಿಲ್ ದೇಶದವನು ಖರೀದಿಗೆ ಕೇಳಿದನು. ಆದರೆ ಇದನ್ನು ಪೋಲಾವ ರೂಪ ಹನುಮಯ್ಯ ಕೊಡಲಿಲ್ಲ. ಈ ಹೋರಿಯು ಸುಮಾರು 7000 ಆಕಳುಗಳ ಮೇಲೆ ಹಾರಿರುತ್ತದೆ.[16]

ಕೇಂದ್ರ ಗೋಸಂವರ್ಧನ ಪರಿಷತ್ತು 1963-64ನೇ ಸಾಲಿನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಅತ್ಯಧಿಕ ಪ್ರಮಾಣದಲ್ಲಿ ಹಾಲು ಕೊಡುವ ಆಕಳಸ್ಪರ್ಧೆಯಲ್ಲಿ ಈ ಕೆಳಗೆ ಕಾಣಿಸಿದ ಹೈನ ಜಾತಿಯ ಆಕಳುಗಳು ವಿಕ್ರಮವನ್ನು ಸ್ಥಾಪಿಸಿ ಕೀರ್ತಿಗೊಂಡಿವೆ.

(ಅ) ಹರಿಯಾನ ಈ ಜಾತಿಯ 'ಪುತಲಿ' ಎಂಬ ಹೆಸರಿನ ಆಕಳು ದಿನಕ್ಕೆ 32 ಕೆಜಿ ಗಳಷ್ಟು ಹಾಲು ಕರೆದು ವಿಜಯ ಸಂಪಾದಿಸಿರುತ್ತದೆ. ಈ ಹಾಲಿನ ಪ್ರಮಾಣ ಮುರ್ರಾಜಾತಿಯ ಎಮ್ಮೆ ಕೊಡುವ ಹಾಲಿನ ಪ್ರಮಾಣಕ್ಕಿಂತ 1 ಕೆಜಿ ಹೆಚ್ಚುಇರುತ್ತದೆ. ಪಂಜಾಬಿನ ಹಿಸ್ಸಾರ ಜಿಲ್ಲೆಯ ಜೀವನ ನಗರದ ಸತ್‌ಗುರೂಜೀ ಫಾರ್ಮಿನ ಶ್ರೀಸತ್‌ಗುರುಹರಿಸಿಂಗ್ ಇವರಿಗೆ ಈ ಆಕಳು ತನ್ನ ಮಾಲೀಕನಿಗೆ 2000 ರೂಪಾಯಿಗಳ ಬಹುಮಾನವನ್ನು ತಂದು ಕೊಟ್ಟಿರುತ್ತದೆ.

(ಆ) ಗೀರ್ ಈ ಜಾತಿಯ ಹಸುಗಳ ಸ್ಪರ್ಧೆಯಲ್ಲಿ ಪುಣೆಯಲ್ಲಿರುವ ಉರ್ಲಿಕಂಚಿನಲ್ಲಿರುವ ಸಂಚಾಲ ಆಶ್ರಮದ ಗೋಶಾಲಾದ 'ನಾನಿ' ಎಂಬ ಹೆಸರಿನ ಆಕಳು ದಿನಕ್ಕೆ 22.43 ಕೆಜಿ ಹಾಲು ಕರೆದು ಪ್ರಥಮ ಬಹುಮಾನ ರೂ. 2000 ರೂಪಾಯಿಗಳನ್ನು ಗಳಿಸಿರುತ್ತದೆ.

(ಇ) ಕಾಂಕ್ರೇಜ್ ಈ ಜಾತಿಯ ದನಗಳ ಹಾಲು ಹಿಂಡುವ ಸ್ಪರ್ಧೆಯಲ್ಲಿ ಅಹಮದಾಬಾದಿನ ಶ್ರೀ ಮೋಹನ್‌ಭಾಯಿ ಜಯಸಿಂಗ್‌ಭಾಯ್‌ಪಾಟೀಲ ಎಂಬುವರ 'ಶಾಮಲ'ಎಂಬ ಹೆಸರಿನ ಆಕಳು 20.2ಕೆಜಿ ಹಾಲು ಕರೆದು ಮೊದಲನೆಯ ಬಹುಮಾನ 2000 ರೂಪಾಯಿಗಳನ್ನು ಪಡೆದಿರುತ್ತದೆ.

(ಈ) ಓಂಗೋಲ ಈ ಜಾತಿಯ ಆಕಳುಗಳ ಹಾಲು ಹಿಂಡುವ ಸ್ಪರ್ಧೆಯಲ್ಲಿ ಆಂಧ್ರಪ್ರದೇಶದ ಕೃಷ್ಣಾಜಿಲ್ಲೆಯ ಗೂಡೆವೇಲೂರಿನ ಶ್ರೀವಲ್ಲಭನಾನೀವೆಂಕಟಚೌಧರಿ ಎಂಬುವರ 'ಭಾರತಿ' ಎಂಬ ಹೆಸರಿನ ಆಕಳು 20.61 ಕೆಜಿ ಹಾಲು ಕರೆದು ಪ್ರಥಮ ಬಹುಮಾನ ರೂ. 2000 ಪಡೆದಿರುತ್ತದೆ.

(ಉ) ಸಾಹಿವಾಲ್ ಈ ಜಾತಿಯ ಆಕಳುಗಳ ಹಾಲು ಹಿಂಡುವ ಸ್ಪರ್ಧೆಯಲ್ಲಿ ಹಿಸ್ಸಾರ ಜಿಲ್ಲೆಯ ಜೀವನ ನಗರದಲ್ಲಿಯ ಶ್ರೀ ಸತ್‌ಗುರುಜಿಹರಿಸಿಂಗ್ ಫಾರ್ಮಿನ 'ಮಿರಾನ್' ಎಂಬ ಹೆಸರಿನ ಆಕಳು 34 ಕೆಜಿ ಹಾಲು ಕರೆದು ಮೊದಲನೆಯ ಬಹುಮಾನ ರೂ. 2000 ಪಡೆದಿರುತ್ತದೆ.

ಈ ಆಕಳ ಹಾಲಿನ ವಿವರಣೆ ಈ ಕೆಳಕಂಡಂತಿದೆ:

ದಿನಗಳು	ಹಾಲು ಕರೆದ ಪ್ರಮಾಣ ಕೆಜಿಗಳಲ್ಲಿ
300	3,427 ಮೊದಲನೆಯ ಸೂಲದ ಕಾಲಕ್ಕೆ ಈ ಆಕಳನ್ನು 'ಹಾಲಿನ ರಾಣಿ' ಎಂದು ಕರೆಯಲಾಗಿದೆ.
300	4,199.25 2ನೇ ಸೂಲದ ಕಾಲಕ್ಕೆ
300	3718.25 3ನೇ ಸೂಲದ ಕಾಲಕ್ಕೆ

ಭಾರತದ ಆಕಳಿಗೆ ಆಸ್ಟ್ರೇಲಿಯಾದಲ್ಲಿ 13,000 ಡಾಲರ್ ಬೆಲೆ ಬಹುಮಾನ ಪಡೆದ ಶ್ರೇಷ್ಠ ತಳಿಯ ಬ್ರಾಹ್ಮಣೇಯ ಜಾತಿಯ ಭಾರತೀಯ ಆಕಳೊಂದಕ್ಕೆ ಇತ್ತೀಚೆಗೆ 13 ಸಾವಿರ ಆಸ್ಟ್ರೇಲಿಯನ್ ಡಾಲರುಗಳಿಗೆ ಮಾರಲಾಯಿತು ಎಂದು ಮೆಲ್‌ಬೋರ್ನ್‌ದಿಂದ ಬಂದ ವರದಿಯಿಂದ ತಿಳಿದಿದೆ. ಆಸ್ಟ್ರೇಲಿಯಾದಲ್ಲಿ ಈವರೆವಿಗೂ ಯಾವ ತಳಿಯ ಆಕಳಿಗೂ ಇಷ್ಟು ಅಧಿಕ ಮೊತ್ತದ ಬೆಲೆ ಲಭಿಸಿಲ್ಲವೆಂದು ಹೇಳಲಾಗುತ್ತಿದೆ.

ಇಂಥ ಶ್ರೇಷ್ಠ ಆಕಳ ತಳಿಗಳು ಭಾರತದಲ್ಲಿ ಕಾಣಿಸುವುದು ಅತಿ ದುರ್ಲಭವಾಗಿದೆ ಎಂಬ ಅಂಶವನ್ನು ಇದು ಎತ್ತಿ ತೋರಿಸುತ್ತದೆ.

ಭಾರತದಲ್ಲಿ ಸಾಮಾನ್ಯವಾಗಿ ಹಿಂಡುವ ಆಕಳ ಹಾಲಿನ ಉತ್ಪತ್ತಿಯ ಪ್ರಮಾಣ ತೀರ ಕನಿಷ್ಟ ಇದೆ. ಅಧಿಕ ಹಾಲು ಹಿಂಡುವ ಉತ್ತರ ಯೂರೋಪ್‌ದ ಹಾಗೂ ಅಮೇರಿಕಾದ ದನಗಳೊಂದಿಗೆ ಭಾರತೀಯ ಆಕಳುಗಳನ್ನು ಸಂಕರಣಗೊಳಿಸುವು

ದೊಂದೇ ಭಾರತೀಯ ಆಕಳು ಹಾಲಿನ ಉತ್ಪತ್ತಿಯನ್ನು ತೀವ್ರ ಹೆಚ್ಚಿಸುವುದಕ್ಕಿರುವ ಮಾರ್ಗವಾಗಿದೆ. ಇದು ಈಗ ಗಣನೀಯ ಪ್ರಮಾಣದಲ್ಲಿ ನಡೆದಿದೆ.

ಆದರೆ ಇದು ಪರಿಶುದ್ಧವಾದ ಭಾರತೀಯ ತಳಿಗಳಾದ ಸಾಹಿವಾಲ್, ಹರಿಯಾನ, ಸಿಂಧಿ, ಗೀರ್ ಮೊದಲಾದ ತಳಿಗಳನ್ನೊಳಗೊಂಡ ಸಾಂಪ್ರದಾಯಕವಾದ ತಳಿಗಳ ಅಭಿವೃದ್ಧಿಯ ಕಾರ್ಯವನ್ನು ನಿರ್ಲಕ್ಷಿಸುವುದಕ್ಕೆಡೆಗೊಟ್ಟರೆ ದುರ್ದೈವದ ಮಾತಾಗುವುದು.

ಆಸ್ಟ್ರೇಲಿಯಾದಲ್ಲಿ ಭಾರತೀಯ ಆಕಳಿಗೆ ದೊರೆತ ಅತ್ಯಧಿಕ ಬೆಲೆಯು ಭಾರತೀಯ ಆಕಳುಗಳ ಹಾಲಿನ ಉತ್ಪತ್ತಿಯ ಪ್ರಮಾಣ ಕಡಿಮೆಯಾಗಿದ್ದರೂ, ಅವುಗಳಲ್ಲಿ ಕಂಡುಬರುವ ಇನ್ನೂ ಬೇರೆ ಅಮೂಲ್ಯವಾದ ಗುಣಗಳಿವೆ ಎಂಬುದನ್ನು ಇದು ತೋರಿಸುತ್ತದೆ. ಅವು ಯಾವುವೆಂದರೆ: ಅತ್ಯಧಿಕ ಉಷ್ಣತೆಯನ್ನು ಸಹಿಸುವ ಸಾಮರ್ಥ್ಯ, ದುಡಿಯುವ ಶಕ್ತಿ, ಕಷ್ಟಸಹಿಸುವ ಸಹಿಷ್ಣುತೆ ಮತ್ತು ರೋಗಪ್ರತಿಬಂಧಕ ಶಕ್ತಿ ಆಹಾರ ಅಭಾವವಿದ್ದಾಗ ಮತ್ತು ಪ್ರತಿಕೂಲ ಸನ್ನಿವೇಶಗಳಿಗೆ ಅಳವಡಿಸಿಕೊಳ್ಳುವ ಒಂದು ವಿಶಿಷ್ಟತೆಯನ್ನು ಹೊಂದಿರುತ್ತವೆ: ಇವೇ ಅವುಗಳ ಅಮೂಲ್ಯ ಗುಣಗಳು. ಇದಕ್ಕಾಗಿ ಇಂದು ಲ್ಯಾಟಿನ್ ಅಮೇರಿಕ ಹಾಗೂ ದಕ್ಷಿಣ ಅಮೇರಿಕಗಳಲ್ಲಿ ಈ ಸಾಮರ್ಥ್ಯವುಳ್ಳ ಆಕಳುಗಳಿಗೆ ಹೆಚ್ಚು ಬೇಡಿಕೆ ಇರುವುದು ಕಂಡು ಬಂದಿದೆ.

ಪಾರಿಭಾಷಿಕ ಶಬ್ದಕೋಶ

ಅಂಡಾಣು	Ovum
ಅಕ್ಕಡಿಕಾಳು	Pulses
ಆಘ್ರಾಣ	Tosmell
ಅಧ್ಯಾತ್ಮಿಕ	Spiritualistic
ಆರ್ದ್ರತೆ	Humidity
ಅನುವಂಶಿಕ	Heredity
ಆಹುತಿ	Sacrifice
ಇಣಿ	Hump
ಏಕರೂಪತೆ	Uniform
ಕಂದರ	Valley
ಕಡಸು	Heifer
ಕರಡ(ಒಣಹುಲ್ಲು)	Hay
ಕರಲುಭೂಮಿ	Saline soil
ಕೆಂಪು ಹಳದಿಮಿಶ್ರ ಬಣ್ಣ	Brindle
ಕೆಚ್ಚಲುಬಾವು	Mastities
ಕೆನೆ	Cream
ಕೈಹೆಣಿಕೆ	Hand Knitted
ಕೊಲ್ಲಿ	Gulf
ಕ್ಷೀರಜನಕ ಗ್ರಂಥಿ	Milk Secretary gland
ಖೊಟ್ಟಿಸ್ವಭಾವ	Vicious habit
ಖೋತಾ	Cheese
ಗಂಗೆದೊಗಲು	Dew-lap
ಗಮನ	Gail of walking
ಗುಹೆ	Cave
ಗೋಕ್ಷೇತ್ರ	Cattle farm
ಗೋಗಾಯಿ	Cattle attendant
ಗೋಗೃಹ	Byre
ಗೋತ್ರ	Genalogy
ಗೋಪತಿ	Cattle owner
ಗೋಮಾಳ	Grazing land
ಚಪ್ಪೆ	Quarter
ಚರ್ಮಗ್ರಂಥಿ	Skin gland
ಚರಾಯಿತಶುಲ್ಕ	Grazing fees
ಚಹರೆಪಟ್ಟಿ	Physiognomy
ಚಿಟ್ಟುಕೊಳಗ	Dew claws
ತತ್ವಜ್ಞಾನ	Philosophy
ತಳಪಾಯ	Foundation
ತೋಬರಿ	Sheath
ದಡ್ಡಿ	Cattleshed
ದುಗ್ಧಾಲಯ	Dairy
ಧರ್ಮ	Religion
ನರಕ	Hell
ಪಕ್ಕೆಲುಬು	Ribs
ಪುಂಗವ	Breeding bull
ಪುಂಬೀಜ	Male Sperm
ಪುರುಷಾಣು	Spermatozoa
ಬೊಜ್ಜು	Fat
ಮಾಂಡಳಿಕ	Ambassdor
ಮಣಕ	Heifer
ಮಸಾರೆಭೂಮಿ	Laterite soil
ಮಾಸ	Placenta
ಮುರಗಿ ಮುರಗಿಯಾಗಿ	Spiral
ಮೂಗಿನ ಸಿಂಬೆ	Muzzle
ಮೋಕ್ಷ	Salvation
ಮೌಲ್ಯಮಾಪಕ	Evaluation
ಯೂಥಪತಿ	Leader
ವಂಶಗುಣವಾಹಕ	Genes

ವಂಶಾವಳಿ	Generalogy
ವಂಶಾವಳಿಪುಸ್ತಕ	Genealogical record
ವರ್ಣತಂತು	Chromosome
ವೀರ್ಯ	Semen
ವೃಷಭ	Bull
ಸಂಪ್ರದಾಯ	Tradition
ಸಂಸ್ಕೃತಿ	Culture
ಸವಳು	Alkaline soil
ಸಹಿಷ್ಣುತೆ	Endurance
ಸ್ಥಳೀಕ	Indigenous
ಸ್ವರ್ಗ	Heaven
ಸ್ನಾಯು	Tendon
ಸ್ನಿಗ್ಧಹಾಲು	*Condensed-milk*
ಸೆಡವು	Hardiness
ಹಸ್ತಸಾಮುದ್ರಿಕ ಶಾಸ್ತ್ರ	Pamisty
ಹಾಲಿನ ನರಗಳು	Milk viens
ಹುಲ್ಲುಕೊಯ್ಯುವ ಯಂತ್ರ	Lawn mower
ಕ್ಷೀರಜನಕಗ್ರಂಥಿ	Milk secretary glands

ಆಧಾರ ಗ್ರಂಥಗಳು

1. Hilton Briggs **Modern Breeds of Live stock,** New york: The macmilan company, (Revised edition : 1958)
2. Jani, D. H. **Romance of the Cow,** Bombay: The Bombay Humanitarian League, Jan, 1938.
3. Mollison, J. **A Text Book on, Agriculture,** Vol. II, Bombay: Printed at the Advocate of India, Stean Press, 1901.
4. Potdár, H. Kalyan (Special issue), Gorakpur: Geetha Press, 1945.
5. William C. Miller, and Geofem P. West **Black's Veterinary Dictionary,** London: Adam and Charles Black, 3rd edition, 1955.
6. Anonymous. State Department of Agriculture, with Contributionas from the authors. **Dairy Farming in Australia.** Melbourne: Victorian Depertment of Agriculture, 1934.
7. .... ಕಲ್ಯಾಣ, ಗೋಅಂಕ, ಪುಟ 255
8. .... ಸ್ಕಾಂದ ಪುರಾಣ, ಪ್ರಭಾಸ ಖಂಡ, ಗೋಅಂಕ ಪುಟ 54–58
9. .... ಪದ್ಮಕಾಕಾಲಂ ಅಧ್ಯಾಯ 18–19
10. .... ಗಾರ್ಗಿಸಂಹಿತೆ, ಲೋಕಖಂಡ, ಅಧ್ಯಾಯ 4
11. .... ಮಹಾಭಾರತ, ವಿರಾಟಪರ್ವ, ಅಧ್ಯಾಯ-9
12. .... ಮಹಾಭಾರತ, ವಿರಾಟಪರ್ವ, ಅಧ್ಯಾಯ-28
13. .... ಶಿವಾಜಿನಿ ಬಂಧಾವಳಿ, 1ನೇ ಪತ್ರ ತಾ. 22-3–1623
14. .... ಶಿವಾಜಿನಿ ಬಂಧಾವಳಿ, 2ನೇ ಪತ್ರ ತಾ. 30-10–1623
15. .... ಕಲ್ಯಾಣ, ಗೋಅಂಕ ಪುಟ 528–29–30
16. .... ಗೋಸಂವರ್ಧನೆ, ನವೆಂಬರ್, 1964, ನಂ. 8ರ ಸಂಚಿಕೆ
17. .... ಗೋಸಂವರ್ಧನೆ, ಸಂಪುಟ–10 ಜುಲೈ 1964, ಸೆಂಟ್ರಲ್ ಕೌನ್ಸಿಲ್ ಆಫ್ ಗೋಸಂವರ್ಧನೆ, ಹೊಸದೆಹಲಿ.

7–17 ಸಂಖ್ಯೆಗಳು ಪಠ್ಯದಲ್ಲಿನ ಅಡಿಟಿಪ್ಪಣಿ ಸಂಖ್ಯೆಗೆ ಸಂಬಂಧಿಸಿವೆ

ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

		ಸಾದಾ	ಕ್ಯಾಲಿಕೊ
1.	ಸುಭಿಕ್ಷತೆಗೆ ತೆರೆದ ಬಾಗಿಲು(ದ್ವಿತೀಯ ಮುದ್ರಣ)	2–50	
2.	ಪೀಡೆ ನಿರ್ವಹಣೆ (ದ್ವಿತೀಯ ಮುದ್ರಣ)	7–00	
3.	ಕೀಟ ವಿಂಗಡಣೆ	15–00*	
4.	ಕೀಟ ಹತೋಟಿ (ದ್ವಿತೀಯ ಮುದ್ರಣ)	12–50	
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-1	6–25	
6.	ತರಕಾರಿ ಬೇಸಾಯ	12–50*	
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	5-00	6–25*
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	15-00	19–00
9.	ರೈತರ ನೆಚ್ಚು ಮೆಚ್ಚಿನ ಮರಗಳು	15–00	19–00*
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-2	11–25	15–00
11.	ಬೀಜಗಣಿತ ಪರಿಚಯ	15–00	20-00
12.	ಮಣ್ಣು ಮತ್ತು ನೀರು ನಿರ್ವಹಣೆ	15–00	19–00*
13.	ಮಣ್ಣು	11–25	15–00*
14.	ಕೃಷಿ ಸಹಕಾರ	6–25	10–00*
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	15–00	19–00
16.	ಗೋಸಂಪತ್ತು	6–25	10–00*
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	7–50	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	17–50	21–25*
19.	ಪಶುವೈದ್ಯಕೀಯ ವಿಜ್ಞಾನ(ದ್ವಿತೀಯ ಮುದ್ರಣ)	6–00	16–00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	8–25	12–00*
21.	ಟ್ರ್ಯಾಕ್ಟರು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	7–50*	12-50*
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ, ಭಾಗ-3	10-00	15–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	11–25	16–25
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	15-00	19–00

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
25. ಸಸ್ಯ ವರ್ಗೀಕರಣಶಾಸ್ತ್ರ	15–00	20–00
26. ಪೌಷ್ಟಿಕ ಆಹಾರ (ದ್ವಿತೀಯ ಮುದ್ರಣ)	6–00	16-00
27. ಕಡಲ ಮೀನುಗಾರಿಕೆ	5–00	10–00
28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10–75*	
29. ಕಬ್ಬಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4–50*	
30. ಶಿಶುವಿಹಾರ (ದ್ವಿತೀಯ ಮುದ್ರಣ)	6-00	
31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	7–50*	
32. ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ	9–50	14–00
33. ಇಲಿಗಳು ಹಾಗೂ ಅವುಗಳ ನಿಯಂತ್ರಣ	9–50	13–25
34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	21–50*	
35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	16–25*	
36. ಕ್ಯಾನಿಂಗ್-ಆಹಾರಜೋಪಾಸನೆಯ ಒಂದು ಆಧುನಿಕ ವಿಧಾನ	16-25	21–25
37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-75	
38. ಜೀವಕೋಶಕ್ರಿಯಾಶಾಸ್ತ್ರ ಮತ್ತು ಜೀವರಸಾಯನ ಶಾಸ್ತ್ರ	20-00	25-00
39. ಎಲುಬುಶಾಸ್ತ್ರ	11-25	16–25
40. ಕಡಲೆಕಾಯಿ	10–00*	15–00*
41. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-1	25-00	30–00
42. ತೆಂಗು, ಅಡಿಕೆ, ಇತರ ಗರಿಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	9–00*	

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	12.00*	
44. ಭಾರತದಲ್ಲಿ ಕೋಳಿ ಸಾಕಣೆ	22-50*	27-50*
45. ಕಲ್ಲುನಾರು (ಭೂತಾಳೆ) ಗಿಡಗಳು	5-00	
46. ಎಣ್ಣೆಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟ ಹಾಗೂ ಅವುಗಳ ಹತೋಟಿ	7-50	
47. ಹತ್ತಿ(ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
48. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಿಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	5-00*	
49. ಮಾದಕ(ಹೊಗೆಸೊಪ್ಪು, ಗಾಂಜಾ) ಮತ್ತು ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	3-75	
50. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	4-50	
51. ಸಸ್ಯ ಸಾಮ್ರಾಜ್ಯ	25-00	30-00
52. ಮೀನುಗಾರಿಕೆ	10-00	15-00
53. ಭಾರತೀಯ ಗ್ರಾಮೀಣ ಯುವಕ ರೈತಸಂಘಗಳ ಸಂಘಟಣೆ	8-25	13-25
54. ಗಣಿತಶಾಸ್ತ್ರ ಪ್ರವೇಶಿಕೆ, ಭಾಗ-2	20-00	25-00
55. ಸಾವಯವ ರಸಾಯನಶಾಸ್ತ್ರ ಪ್ರವೇಶಿಕೆ	14-00	19-00
56. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	12-50	17-50
57. ಭಾರತದಲ್ಲಿ ಜೇನು ಸಾಕಣೆ	20-00	25-00
58. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	7-50	12-00
59. ದೊಡ್ಡರೋಗ	5-00	
60. ಮೂಲ ಅರ್ಥಶಾಸ್ತ್ರ	19-00	24-00
61. ಜೇನುಸಾಕಣೆ	17-50	22-50

* ಪ್ರತಿಗಳು ತೀರಿವೆ

		ಸಾದಾ	ಕ್ಯಾಲಿಕೊ
62.	ಕೃಷಿರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–25	
63.	ಮಣ್ಣುನಿರ್ವಹಣೆ, ಸಂರಕ್ಷಣೆ ಹಾಗೂ ಬೆಳೆ ಉತ್ಪಾದನೆ	20-00	25–00
64.	ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರುಗಳು		60–00
65.	ಸಹಕಾರಿ ಬೇಸಾಯ	18–00	23–00
66.	ಕೋಶ	20–00	25–00
67.	ತರಕಾರಿ ಬೆಳೆಗಳ ಕೀಟ ನಿಯಂತ್ರಣ	12–50	19–00
68.	ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	20–00	25–00
69.	ಸಂಸ್ಕೃತಿಯ ರೂಪಿಕೆಗಳು	17–00	22-00
70.	ರೇಖಾತ್ಮಕ ಬೀಜಗಣಿತ	30-00	35–00
71.	ಹುಲಿ- ಭಾರತದ ರಾಷ್ಟ್ರೀಯ ಮೃಗ	20–00	24–00
72.	ನೀರಾವರಿ ತತ್ವ ಹಾಗೂ ಪದ್ಧತಿಗಳು	45–00	50–00
73.	ಮಣ್ಣು ಶಿಲೀಂಧ್ರ ಕೈಪಿಡಿ	45-00	50–00
74.	ಪ್ರಾಣಿಗಳ ವರ್ತನೆ	17–00	22–00
75.	ಬೆಳೆ ಕೀಟಗಳು ಮತ್ತು ಅವುಗಳ ಹತೋಟಿ		125–00*
76.	ಸಸ್ಯತಳಿ ಅಭಿವೃದ್ಧಿ ವಿಧಾನಗಳು		60–00
77.	ಪ್ರಾಣಿಗಳ ಶರೀರಕ್ರಿಯಾಶಾಸ್ತ್ರ	17–00	22–00
78.	ಆಹಾರ ಸೂಕ್ಷ್ಮಜೀವಿ ವಿಜ್ಞಾನದಲ್ಲಿ ಪ್ರಾಮುಖ್ಯತೆಗಳಿರುವ ಸೂಕ್ಷ್ಮಜೀವಿಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ-1)	8–50	
79.	ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಇಂಗ್ಲೀಷ್ ಹಾಗೂ ಕನ್ನಡ ಹೆಸರು	15–00	20–00
80.	ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ	20–00	25–00
81.	ಸಾಕುಪ್ರಾಣಿಗಳ ಕೀಲು ಮತ್ತು ಸ್ನಾಯುಶಾಸ್ತ್ರ	20–00	25–00
82.	ಕುರಿಸಾಕಣೆ	8-00	13–00
83.	ಜೋಳ	10–00	15–00
84.	ಹಂದಿಯ ಭ್ರೂಣಶಾಸ್ತ್ರ	35–00	40–00
85.	ಆಧುನಿಕ ಹೈನಾಗಾರ ದನಗಳ ನಿರ್ವಹಣೆ	25–00	30–00
86.	ದಾಸ್ತಾನು ಕೀಟಗಳು ಹಾಗೂ ಅವುಗಳ ಹತೋಟಿ	8–00	

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
87. ಮನೆ ಕೀಟಗಳು ಇತರ ಪೀಡೆಗಳು ಹಾಗೂ ಅವುಗಳ ಹತೋಟಿ	10–00	
88. ಜಾನುವಾರು ಮತ್ತು ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	10-00	
89. ತೆಂಗಿನ ಬೇಸಾಯ	9–00*	14–00*
90. ಆಹಾರ ರಕ್ಷಣೆ ಮತ್ತು ಕೆಡುವಿಕೆಯ ತತ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-2)	11-00	
91. ಸೂಕ್ಷ್ಮಜೀವಿಶಾಸ್ತ್ರದ ಬೆಳವಣಿಗೆ ಹಾಗೂ ವಿಧಾನಗಳು (ಸೂಕ್ಷ್ಮಜೀವ ಜಗತ್ತು, ಭಾಗ-1)	17–00	
92. ಕೃಷಿ ಸಸ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2–00	
93. ಹಸುರು ಸಸ್ಯದ ಜೀವನ	12–00	17–00
94. ಸೂಕ್ಷ್ಮಜೀವಿಗಳ ಚಯಾಪಚಯ(ಜೀವದ್ರವ್ಯ ಪರಿಣಾಮ) ಕ್ರಿಯೆಗಳು, ರಚನೆ ಮತ್ತು ಕಾರ್ಯಸಂಬಂಧ (ಸೂಕ್ಷ್ಮಜೀವಿ ಜಗತ್ತು, ಭಾಗ-2)	18–00	
95. ವಿವಿಧ ಆಹಾರಗಳು ಕಲುಷಿತವಾಗುವಿಕೆ, ಕೆಡುವಿಕೆ ಮತ್ತು ರಕ್ಷಣೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-3)	15–00	
96. ಸೂಕ್ಷ್ಮಜೀವಿಗಳು ಉತ್ಪತ್ತಿಮಾಡುವ ಆಹಾರಗಳು ಮತ್ತು ರಾಸಾಯನಿಕ ಕಿಣ್ವಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-4)	7-00	
97. ರೋಗಗಳಿಗೆ ಸಂಬಂಧಿಸಿದ ಆಹಾರಗಳು (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-5)	5–00	
98 ಆಹಾರದ ನೈರ್ಮಲ್ಯ ನಿಯಂತ್ರಣ ಮತ್ತು ತನಿಖೆ (ಆಹಾರ ಸೂಕ್ಷ್ಮಜೀವಿ ವಿಜ್ಞಾನ, ಭಾಗ-6)	7–00	
99. ಕೃಷಿ ಕರ್ನಾಟಕ	12–50	17–50
100. ದಾಸ್ತಾನು, ಮನೆ, ಜಾನುವಾರು ಹಾಗೂ ಮನುಷ್ಯರಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		35–00
101. ಮತ್ಸ್ಯಶಾಸ್ತ್ರ		50–00

* ಪ್ರತಿಗಳು ತೀರಿವೆ

	ಸಾದಾ	ಕ್ಯಾಲಿಕೊ
102. ಹಣ್ಣು ಮತ್ತು ತರಕಾರಿ ಸಂರಕ್ಷಣೆ	35–00	40–00
103. ಫಾರ್ಮ್ ನಿರ್ವಹಣೆ ಅರ್ಥಶಾಸ್ತ್ರ		60-00
104. ಆಹಾರ ಸೂಕ್ಷ್ಮಜೀವಿ ವಿಜ್ಞಾನ		62–50
105. ಭಾರತದಲ್ಲಿ ಸಾಮಾಜಿಕ ಅರಣ್ಯಶಾಸ್ತ್ರ	25–00	35–00
106. ಬತ್ತದ ಬೇಸಾಯ	15–00	25–00
107. ಧಾನ್ಯದ ಬೆಳೆಗಳ ರೋಗಗಳು ಹಾಗೂ ಅವುಗಳ ಹತೋಟಿ	12–00	17–00
108. ವ್ಯವಸಾಯ ಮುನ್ನಡೆ	18–00	28–00
109. ಕೀಟಶಾಸ್ತ್ರ ಪಾರಿಭಾಷಿಕ ಶಬ್ದಕೋಶ	3–50	
110. ಸಚಿತ್ರ ಬತ್ತದ ಬೆಳೆ	12–50	22–50
111. ಕೋಳಿಸಾಕಣೆ ಕೈಪಿಡಿ	9-00	19-00
112. ಮಣ್ಣು ಸೂಕ್ಷ್ಮಜೀವಿಶಾಸ್ತ್ರ	10–00	20–00
113. ಭೂಸಾರ ಸಂರಕ್ಷಣೆ	7–50	17–50
114. ಬಿಳಿಕಸ	9-00	19-00
115. ವೈರಸ್‌ಗಳು(ಸೂಕ್ಷ್ಮಜೀವಿಜಗತ್ತು ಭಾಗ-3)	7–50	
116. ಸಂತಾನೋತ್ಪತ್ತಿ ಶರೀರಕ್ರಿಯಾಶಾಸ್ತ್ರ	20–00	30–00
117. ಲವಂಗ	3–50	
118. ಸೂಕ್ಷ್ಮಜೀವಿಗಳ ಉತ್ಪರಿವರ್ತನೆ ಹಾಗೂ ಅನುವಂಶೀಯ ಗುಣಗಳ ಪುನರ್ ಸಂಯೋಜನೆ (ಸೂಕ್ಷ್ಮಜೀವಿ ಜಗತ್ತು, ಭಾಗ-4)	15–00	
119. ಬ್ಯಾಕ್ಟೀರಿಯಾಗಳ ವರ್ಗೀಕರಣ ಮತ್ತು ವಿವರಣೆ (ಸೂಕ್ಷ್ಮಜೀವಿ ಜಗತ್ತು, ಭಾಗ-5)	25–00	
120. ಎಣ್ಣೆ ಕೊಡುವ ಕೆಲವು ಹೊಸ ಸಸ್ಯಗಳು	12–00	22–00
121. ಸೂಕ್ಷ್ಮಜೀವಿಗಳ ಪರಿಸರಶಾಸ್ತ್ರ ಮತ್ತು ಸೋಂಕು ರಕ್ಷಣಾಶಾಸ್ತ್ರ (ಸೂಕ್ಷ್ಮಜೀವಿ ಜಗತ್ತು, ಭಾಗ-6)	20–00	
122. ಕೃಷಿ ಯಂತ್ರಗಳು ಹಾಗೂ ಉಪಕರಣಗಳು		80–00
123. ಸಸ್ಯಪೋಷಕಗಳು ಮತ್ತು ಅವುಗಳ ಪಾತ್ರ	10–00	20–00
124. ಮೆಣಸು– ಕಪ್ಪುಹೊನ್ನು	9–00	19–00

	ಸಾದಾ	ಕ್ಯಾಲಿಕೊ
125. ಮಾನವ ಕಲ್ಯಾಣಕ್ಕೆ ಸೂಕ್ಷ್ಮಜೀವಿಗಳ ಬಳಕೆ (ಸೂಕ್ಷ್ಮಜೀವಿ ಜಗತ್ತು ಭಾಗ-7)	5-00	
126. ಕೃಷಿ ಆರ್ಥಿಕ ವಿಶ್ಲೇಷಣೆ ಪ್ರವೇಶಿಕೆ	25-00	35-00
127. ರೇಷ್ಮೆ ವ್ಯವಸಾಯ	20-00	30-00
128. ಕೃಷಿ ಪ್ರಸರಣೆ	25-00	35-00
129. ಹಣ್ಣಿನ ಬೆಳೆಗಳ ಕೀಟ ನಿಯಂತ್ರಣ	12-00	22-00
130. ತ್ರಿಕೋನಮಿತಿ	15-00	25-00
131. ಬಿದಿರು ಮತ್ತು ಬೆತ್ತ	10-00	20-00
132. ಬತ್ತದ ಬೆಳೆ ಕೀಟ ನಿಯಂತ್ರಣ	6-00	
133. ಇಪ್ಪತ್ತೊಂಬತ್ತನೆಯ ದಿನ	30-00	40-00
134. ಮಣ್ಣಿನ ಭೌತಿಕ ಗುಣಧರ್ಮಗಳು	20-00	30-00
135. ಆಧುನಿಕ ಆಹಾರ ಸೂಕ್ಷ್ಮಜೀವಿ ವಿಜ್ಞಾನ		70-00
136. ಸುಗಂಧದ್ರವ್ಯ ಸಸ್ಯಗಳು	12-50	22-50
137. ಸೂಕ್ಷ್ಮಜೀವಿ ಜಗತ್ತು		130-00
138. ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ	2-50	
139. ಪ್ಲಾಂಟೇಶನ್ ಬೆಳೆಗಳ ಕೀಟಹತೋಟಿ	14-00	24-00
140. ಪ್ರಾಚೀನ ಭಾರತದಲ್ಲಿ ಬೇಸಾಯ	ಅಚ್ಚಿನಲ್ಲಿದೆ	
141. ಪ್ರಾಚೀನ ಮತ್ತು ಅರ್ವಾಚೀನ ದನಗಳ ಇತಿಹಾಸ	24-00	34-00
142. ಬೀಜಗಣಿತ ಪರಿಚಯ (ಭಾಗ-2)	20-00	30-00
143. ಸಾಗುವಳಿ ಉಪಕರಣಗಳು	15-00	25-00
144. ಮಾವು	40-00	50-00
145. ಬತ್ತ	40-00	50-00
146. ಬತ್ತದ ಬೇಸಾಯ ಸಮಸ್ಯೆ-ಹಾಗೂ ಪರಿಹಾರಗಳು	18-00	28-00
147. ಬೆಳೆಗಳ ಪ್ರಾಣಿ ಪೀಡೆಗಳು	50-00	60-00
148. ಭಾರತದ ಸಂಬಾರದ ಬೆಳೆಗಳು	18-00	28-00
149. ಸಜೀವ ಸಸ್ಯ		ಅಚ್ಚಿನಲ್ಲಿದೆ
150. ಕೃಷಿ ಸಮಾನ ಪದಗಳ ಸಮೀಕ್ಷೆ		,,
151. ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ	5-00	
152. ವನ್ಯಪ್ರಾಣಿಗಳ ವಿಕಸನೆ ಹಾಗೂ ವಿತರಣೆ	ಅಚ್ಚಿನಲ್ಲಿದೆ	